**ವಿಶೇಷ ಸಂಚಿಕೆ**


**ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ**
**ಶತೋತ್ತರ ದಶಮಾನೋತ್ಸವ (110ನೇ ಜಯಂತಿ)**

# ಪ್ರಸಾದ

ಮಾಸಿಕ

ಆಗಸ್ಟ್ 2025

ಸಂಪುಟ 40 ಸಂಚಿಕೆ 8



**ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು**







# ಪ್ರಸಾದ

**ಸಂಪುಟ 40 : ಸಂಚಿಕೆ 8** **ಆಗಸ್ಟ್ 2025**

**ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ**
**110ನೇ ಜಯಂತಿ ಮಹೋತ್ಸವದ ವಿಶೇಷ ಸಂಚಿಕೆ**

## ರಾಜೇಂದ್ರ ವಾಚಿಕೆ

**ಡಾ. ಎಂ.ಎನ್. ನಂದೀಶ್ ಹಂಚೆ**
ಸಂಪಾದಕರು

**ಜೆಎಸ್ಎಸ್ ಮಹಾವಿದ್ಯಾಪೀಠ**
ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ
ಮೈಸೂರು 570 004







**ಸಂಸ್ಥಾಪಕರು**
ಶ್ರೀಮನ್ಮಹಾರಾಜ ರಾಜಗುರುತಿಲಕ
**ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು**

**ಅಧ್ಯಕ್ಷರು**
**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು**

**ಸಂಪಾದಕ ಸಲಹಾ ಸಮಿತಿ**
ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು
ಡಾ. ಸಿ.ಜಿ. ಬೆಟಸೂರಮಠ
ಶ್ರೀ ಎಸ್.ಪಿ. ಮಂಜುನಾಥ್
ಡಾ. ಎನ್.ಎಸ್. ತಾರಾನಾಥ
ಡಾ. ಬಿ.ವಿ. ವಸಂತಕುಮಾರ್
ಡಾ. ವೈ.ಸಿ. ಭಾನುಮತಿ
ಪ್ರೊ. ಮೊರಬದ ಮಲ್ಲಿಕಾರ್ಜುನ

**ಸಂಪಾದಕ ಸಮಿತಿ**
ಡಾ. ಎಂ.ಎನ್. ನಂದೀಶ್ ಹಂಚೆ (ಸಂಪಾದಕರು)
ಶ್ರೀ ಆರ್.ಎಸ್. ಪೂರ್ಣಾನಂದ
ಶ್ರೀ ಕುಮಾರಸ್ವಾಮಿ ವಿರಕ್ತಮಠ

---

ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ, ವಿಜ್ಞಾನ, ಶಿಕ್ಷಣ, ಆರೋಗ್ಯ ಮುಂತಾದ ವಿಷಯಗಳ ಬಗ್ಗೆ ವಿಚಾರಪೂರ್ಣ ಲೇಖನಗಳಿಗೆ ಸ್ವಾಗತವಿದೆ. ಬರಹಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರವು

---

**ದಶವಾರ್ಷಿಕ ಚಂದಾ : 500/- * ಬಿಡಿ ಪ್ರತಿ : 10/-**





# ಪರಿವಿಡಿ


ಗುರುವಾಣಿ 5

ಸಂಪಾದಕೀಯ 8

ನನ್ನ ಗುರುತಂದೆಯನ್ನು ಕುರಿತು 10
ಡಾ. ಎಲ್. ಬಸವರಾಜು

ಕರುಣೆ ಕಣ್ತೆರೆದಂತೆ 12
ಡಾ. ಸಾ.ಶಿ. ಮರುಳಯ್ಯ

ಕವಿತೆಯಾಗಿದೆ ಕೈತುತ್ತು 13
ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯ

ಊರುಗೋಲು 14
ಸಿ.ಪಿ.ಕೆ.

ಪರುಷಮಣಿ 15
ಕೆ.ಸಿ. ಶಿವಪ್ಪ

ನೀನು ತಾಯಿಹೃದಯದ ತಂದೆ 16
ಕೆ. ವೀರಭದ್ರ

ಅಲ್ಲ...! ಅಲ್ಲ...! 17
ಪ್ರೊ. ಮ.ಗಂ. ರೇಣುಕ ಪ್ರಸನ್ನ

ಮುಂಗಾರ ಸಿರಿ 18
ಪ್ರೊ. ಎ.ಎಸ್. ಜಯರಾಂ

ಧನ್ಯ ಧನ್ಯ ವಿಶ್ವಾತ್ಮ 19
ಡಾ. ಬಿ.ನಂ. ಚಂದ್ರಯ್ಯ






ಶ್ರೀ ನಗು 20
ಜೀಮಾರಹಳ್ಳಿ ಗುರುಸಿದ್ದಪ್ಪ

ಉರಿಯುಂಡ ಕರ್ಪೂರ 21
ಡಾ. ಎಚ್. ತಿಪ್ಪೇರುದ್ರಸ್ವಾಮಿ

ನೀನೊಲಿಯದವರಿಲ್ಲ.... 29
ವೀರಭದ್ರ

ದಿವ್ಯ ಚೇತನ 46
ಪ್ರೊ. ಬಿ. ಸೋಮಶೇಖರಪ್ಪ

ದರಿದ್ರದೇವೋ ಭವ 67
ದೇಜಗೌ

ಮುಚ್ಚಿಡಲು ಹೋಗದಿರಿ ಬದುಕಕಹಿವಿಷವ 81
ಡಾ. ಪ್ರದೀಪಕುಮಾರ ಹೆಬ್ರಿ

ರಸಋಷಿಯ ನುಡಿ ನೈವೇದ್ಯ 89
ಕುವೆಂಪು

ಆಶ್ರಯ ನೀಡಿದ ಶ್ರೀಮಠ 92
ಡಾ. ಜಿ.ಎಸ್. ಶಿವರುದ್ರಪ್ಪ

ನಿತ್ಯಸ್ಮರಣಿ 96
ತ.ಸು. ಶಾಮರಾವ್

ಮಾನವಮುಖಿಯಾದ ದೈವತ್ವ 102
ಡಾ. ಪ್ರಭುಶಂಕರ

ಗುಣಗ್ರಾಹಿ 107
ಡಾ. ಪಾಟೀಲ ಪುಟ್ಟಪ್ಪ

ನಮ್ಮೊಡನಿದ್ದ ದೈವ: ಪೂಜ್ಯ ರಾಜೇಂದ್ರ ಶ್ರೀ 110
ಡಾ. ಡಿ. ಎಸ್. ಗುರು, ದೇವನೂರು

ವಾರ್ತಾವಿಹಾರ 118
ಕುಮಾರಸ್ವಾಮಿ ವಿರಕ್ತಮಠ





# ಗುರುವಾಣಿ

ಶಾಸ್ತ್ರಾಣ್ಯಧೀತ್ಯಾಪಿ ಭವಂತಿ ಮೂರ್ಖಾಃ
ಯಸ್ತು ಕ್ರಿಯಾವಾನ್ ಪುರುಷಃ ಸ ವಿದ್ವಾನ್ ।
ಸುಚಿಂತಿತಂ ಔಷಧಮಾತುರಾಣಾಂ
ನ ನಾಮಮಾತ್ರೇಣ ಕರೋತ್ಯರೋಗಮ್ ॥

ಸಂಸ್ಕೃತದ ಈ ಸುಭಾಷಿತದ ಪ್ರಕಾರ, ಶಾಸ್ತ್ರಗಳನ್ನೆಲ್ಲ ಓದಿಯೂ ಅನೇಕರು ಮೂರ್ಖರಾಗಿಯೇ ಇರುತ್ತಾರೆ, ಯಾವನು ನಿಜವಾದ ಶಾಸ್ತ್ರಾದಿಗಳ ಅಂಶವನ್ನು ಅನುಷ್ಠಾನಗೊಳಿಸುತ್ತಾನೆಯೋ ಅವನೇ ವಿದ್ವಾಂಸ. ಚೆನ್ನಾಗಿ ಯೋಚಿಸಿ ನೀಡಿದ್ದರೂ ಔಷಧದ ಹೆಸರು ಹೇಳಿದ ಮಾತ್ರಕ್ಕೆ ರೋಗ ವಾಸಿಯಾಗುವುದಿಲ್ಲ ಎನ್ನುತ್ತದೆ. ಪರಮಪೂಜ್ಯ ಜಗದ್ಗುರು ರಾಜೇಂದ್ರ ಶ್ರೀಗಳವರು, ಪಂಡಿತರೋ, ಬಹುಜ್ಞಾನವಿಶಾರದರೋ ಆಗಿರಲಿಲ್ಲ. ಪಾಂಡಿತ್ಯ ಮತ್ತು ಜ್ಞಾನವಿಸ್ತಾರಗಳು ಯಾವುದನ್ನು ಲೋಕಕಲ್ಯಾಣವೆಂದು ಹೇಳುತ್ತದೋ ಅದನ್ನು ಅವರು ನಿಜಾರ್ಥದಲ್ಲಿ ಅನುಷ್ಠಾನಗೊಳಿಸಿದರು. ಪಂಡಿತಜ್ಞಾನಕ್ಕಿಂತಲೂ ಆತ್ಮಜ್ಞಾನ ಮಿಗಿಲು, ಆತ್ಮಜ್ಞಾನಕ್ಕಿಂತಲೂ ಲೋಕಸೌಖ್ಯ ಮಿಗಿಲೆಂದು ಭಾವಿಸಿದ್ದ ಮಾತೃಹೃದಯಿಗಳು. ಲೋಕಸೇವೆಯೇ ಈಶಸೇವೆ ಎಂದು ಭಾವಿಸಿದವರಷ್ಟೇ ಅಲ್ಲ, ಅದನ್ನು ಕ್ರಿಯಾರೂಪಕ್ಕೆ ತಂದವರು ಕೂಡ.

ಪರಮಪೂಜ್ಯರಿಗೆ ಪರಂಪರೆಯಿಂದ ಬಂದ ಸಕಲ ಸಂಪತ್ತು, ಸೌಲಭ್ಯಗಳಿದ್ದಾಗಲೂ ಅದನ್ನು ಸ್ವಂತಕ್ಕಾಗಿ ಬಳಸದೇ ಬದಲಾಗಿ ತಮಗೆ ಒದಗಿದ ಎಲ್ಲ ಸೌಲಭ್ಯಗಳನ್ನೂ ಪ್ರೀತಿಯಿಂದ ಸಮಾಜಕ್ಕೆ ಸಮರ್ಪಿಸಿದವರು. "ಚಿತ್ತಾಯತ್ತಂ ಧಾತುಬದ್ಧಂ ಶರೀರಂ ನಷ್ಟೇ ಚಿತ್ತೇ ಧಾತವೋ ಯಾಂತಿ ನಾಶಂ" – ಅಂದರೆ ಮನುಷ್ಯನು ತನ್ನ ಮನಸ್ಸನ್ನು ಸರಿಯಾಗಿ ಇಟ್ಟುಕೊಂಡಿದ್ದಾಗ ಮಾತ್ರ ಧಾತುಗಳು ಸಮನಾಗಿರುತ್ತವೆ. ಮನಸ್ಸು ನಷ್ಟವಾದರೆ ಧಾತುಗಳೂ ನಾಶಹೊಂದುತ್ತವೆ. ಪರಮಪೂಜ್ಯರು ತಮ್ಮ ಕಾಯಕವಿಶೇಷದಿಂದ ಹೊರಜಗತ್ತಿಗೆ ಶ್ರೇಷ್ಠರಾಗಿ ಕಂಡರೂ ಅವರ ಕಾಯಕದ ಹಿಂದಿನ ಕ್ರಿಯಾಶಕ್ತಿಯನ್ನು ಪ್ರೇರೇಪಿಸಿದ ಅವರ ಚಿತ್ತದ ಚೈತನ್ಯಧಾತು ಸರ್ವಶ್ರೇಷ್ಠವಾದುದಾಗಿತ್ತು. ಆದುದರಿಂದಲೇ ಅವರ ಮನಸ್ಸನ್ನು ಹತ್ತಿರದಿಂದ ಕಂಡವರಿಗೆಲ್ಲ ಅವರು ಸ್ವತಃ ತಂದೆಯಾಗಿ, ತಾಯಿಯಾಗಿ, ಭಗವಂತನಾಗಿ ತೋರಿದ್ದರಲ್ಲಿ ಅಚ್ಚರಿಯಿಲ್ಲ. ಅವರು ಎಂದೂ "ಮೌನಂ ಕಾಲವಿಲಂಬಶ್ಚ





ಪ್ರಯಾಣಂ ಭೂಮಿದರ್ಶನಮ್ । ಭ್ರುಕುಟ್ಯನ್ನಮುಖೀ ವಾರ್ತಾ ನಕಾರಃ ಷಡ್ವಿಧಃ ಸ್ಮೃತಿಃ॥" ಎಂಬಂತೆ ಮೌನ, ಕಾಲವಿಳಂಬ. ಓಡಾಟ, ನೆಲವನ್ನು ನೋಡುತ್ತಿರುವುದು, ಹುಬ್ಬು ಗಂಟಿಕ್ಕುವುದು, ಮುಖ ಕೊಡದೆ ಮಾತನಾಡುವುದು – ಈ ಆರು ನಕಾರಾತ್ಮಕ ಗುಣಗಳು ಎಂದೂ ಅವರ ಬಳಿ ಸುಳಿಯಲಿಲ್ಲ. ಸುಳಿಯಲು ಅವಕಾಶವನ್ನೂ ಅವರು ನೀಡಲಿಲ್ಲ.

ಪರಮಪೂಜ್ಯರ ನಡೆ ನುಡಿಗಳಿಂದ ವೇದ್ಯವಾಗುವುದೇನೆಂದರೆ, ಸಮಾಜದ ಪ್ರತಿಯೊಬ್ಬ ವ್ಯಕ್ತಿಯೂ ಸಂತೋಷ, ಶಾಂತಿ, ಸಮಾಧಾನ, ಸಮೃದ್ಧಿಯಿಂದ ಬಾಳಬೇಕೆಂಬುದು. ಭಗವಂತನ ಈ ಸುಂದರ ಸೃಷ್ಟಿಯಲ್ಲಿ ಇವೆಲ್ಲವನ್ನೂ ಹೊಂದಲು ಅಗತ್ಯವಾದ ಎಲ್ಲ ಪರಿಕರಗಳು, ಪರಿಸರ ಎಲ್ಲವೂ ಇವೆ. ಆದರೆ ಪ್ರತಿಯೊಬ್ಬನೂ ತನ್ನೊಬ್ಬನ ಕಲ್ಯಾಣವೇ ಪರಮಗುರಿಯೆಂದು ಭಾವಿಸಿ ಅದನ್ನು ಸಾಧಿಸಲು ತೊಡಗುತ್ತಾನೆ. ಎಲ್ಲ ಲೌಕಿಕಗಳ ಮೇಲೂ ಅಧಿಪತ್ಯವನ್ನು ಸ್ಥಾಪಿಸಲು ವ್ಯರ್ಥವಾಗಿ ಹೆಣಗುತ್ತಾನೆ. ಅಂಥ ಆಧಿಪತ್ಯ ಸಾಧ್ಯವಾಗದೆ ಹೋದರೆ ಕನಿಷ್ಠಪಕ್ಷ ತಾನೊಬ್ಬನೇ ಅದನ್ನು ಅನುಭವಿಸಬೇಕೆಂದು ಬಯಸುತ್ತಾನೆ. ಇಂಥ ಕಡೆ ಆತ್ಮಕಲ್ಯಾಣವೂ ಆಗುವುದಿಲ್ಲ, ಲೋಕಕಲ್ಯಾಣವೂ ಆಗುವುದಿಲ್ಲ. ಬದಲಾಗಿ ಇಂಥ ಲೋಕ ದುಃಖಕ್ಕೆ ಭಾಜನವಾಗುವುದು. ಇಂಥ ಸ್ವಾರ್ಥದಿಂದಲೇ ಎಲ್ಲ ಸಮಸ್ಯೆಗಳು, ಸಂಘರ್ಷಗಳು ಆರಂಭವಾಗುತ್ತವೆ.

ಈ ಲೋಕಕಲ್ಯಾಣದ ಕಲ್ಪನೆ ಹೊಸದೇನೂ ಅಲ್ಲ. ಭಾರತೀಯ ಪರಂಪರೆಯಲ್ಲಿ ಇದು ಹಾಸುಹೊಕ್ಕಾಗಿದೆ. ಭಾರತ ಅಷ್ಟೇ ಅಲ್ಲ, ಗ್ರೀಕ್ ಮುಂತಾದ ಜಗತ್ತಿನ ಎಲ್ಲ ತತ್ವಚಿಂತನೆಗಳ ಮೂಲ ಆಶಯವೂ ಇದೇ ಆಗಿದೆ. ಆದರೆ ಈ ಲೋಕಹಿತಚಿಂತನೆಯ ಕನ್ನಡಿಯ ಮೇಲೆ ಆಗಿಂದಾಗ್ಗೆ ಧೂಳು ಆವರಿಸುತ್ತಿರುತ್ತದೆ. ಹೀಗೆ ಆದಾಗಲೆಲ್ಲ ಅದನ್ನು ತೊಡೆದುಹಾಕಿ ಶುದ್ಧ ಸ್ಫಟಿಕದಂತೆ ಸ್ವಚ್ಛಗೊಳಿಸಲು, ಅಂದರೆ ತಮಂಧವನ್ನು ಹೋಗಲಾಡಿಸಿ ಬೆಳಕನ್ನು ಉಜ್ವಲಿಸುವಂತೆ ಮಾಡಲು ಗುರುಸ್ವರೂಪಿಗಳಾದ ಮಹನೀಯರು ಅವತರಿಸುತ್ತಾರೆ. ಅವರೇ ಸ್ವಯಂಜ್ಯೋತಿಯಾಗಿರುವುದರಿಂದ ಅವರಿಗೆ ತಮಂಧದ ಯಾವುದೇ ಸೋಂಕು ಇರುವುದಿಲ್ಲ. ಬೆಳಕಿನ ಬಳಿಗೆ ಹೋದರೆ ತಮಂಧ ಕಳೆದುಹೋಗುವ ಭಯದಿಂದ ಬಹಳ ಜನ ಬೆಳಕಿನ ಹತ್ತಿರಕ್ಕೆ ಸುಳಿಯುವುದಿಲ್ಲ. ಹೀಗಾಗಿ ಎಷ್ಟೇ ಮಹನೀಯರು ಹುಟ್ಟಿ ಬಂದರೂ ಈ ಲೋಕವೆಲ್ಲ ಇನ್ನೂ ತಮಂಧದಲ್ಲಿಯೇ ಮುಳುಗಿರುತ್ತದೆ. ಖ್ಯಾತ ಕವಿ ಜಿ.ಎಸ್. ಶಿವರುದ್ರಪ್ಪನವರು ಹೇಳುವಂತೆ, "ಕತ್ತಲೆಗೆ ತೀರದ ಬಯಕೆ"; ಅಜ್ಞಾನದ ಕತ್ತಲೆಗೆ ಅಪಾರವಾದ ಶಕ್ತಿಯಿರುತ್ತದೆ. ಆದರೆ ಬೆಳಕಿಗೆ ಅಗಾಧವಾದ ಚೈತನ್ಯ ಇರುತ್ತದೆ. ಬಹಳಷ್ಟು ಜನರ ಚಿತ್ತ ಬರಿಯ ಅಜ್ಞಾನದ (ಬಯಕೆಯ) ಕಡೆಗೆ ಮಾತ್ರ ಇರುತ್ತದೆ. ಬೆಳಕು ಅನಂತ. ಕಾಲಕಾಲಕ್ಕೆ ರಾಮ, ಕೃಷ್ಣ, ಬುದ್ಧ, ಮಹಾವೀರ,





ಬಸವಣ್ಣನವರಂಥ ಬೆಳಕಿನ ಪುಂಜಗಳು ಉದಿಸಿ ಅಜ್ಞಾನತಿಮಿರವನ್ನು ಹೋಗಲಾಡಿಸಲು ಪ್ರಯತ್ನಿಸಿದ್ದರು. ಅಂತಹ ಪ್ರಯತ್ನದ ಪ್ರಕ್ರಿಯೆ ಕಾಲಕಾಲಕ್ಕೆ ಸಂಭವಿಸುತ್ತಲೇ ಇರುತ್ತದೆ. ಅಂತಹ ದಿವ್ಯ ಸಂಭವಿಸುವಿಕೆಯಾದ ರಾಜೇಂದ್ರ ಶ್ರೀಗಳವರ ಜನನ ಒಂದು ಸಾಧಾರಣವಾದ ಘಟನೆಯಲ್ಲ. ಅದು ಇಡೀ ಜಗತ್ತಿನ ಬೆಳಕಿನ ಪ್ರಕ್ರಿಯೆಯು. ನಿರಂತರವಾಗಿ ಸಂಭವಿಸುವ ಸಾಧ್ಯತೆ ಇರುತ್ತದೆ. ಇದನ್ನು ಶ್ರದ್ಧೆಯಿಂದ ಅಳವಡಿಸಿಕೊಳ್ಳುವುದಾಗಬೇಕು ಅಷ್ಟೆ.

ಪರಮಪೂಜ್ಯ ಜಗದ್ಗುರು ರಾಜೇಂದ್ರ ಶ್ರೀಗಳವರ 110ನೇ ಜಯಂತಿ ಮಹೋತ್ಸವದ ಅಂಗವಾಗಿ ಈ ಸಂಚಿಕೆಯಲ್ಲಿ "ವಾಚಿಕೆ"ಗಳು ಪ್ರಕಟವಾಗುತ್ತಿರುವುದು ಲೋಕಹಿತವೂ ಆತ್ಮೋದ್ಧಾರಕವೂ ಆದ ಅವರ ಚಿಂತನೆಗಳಿಗೆ ಹಿಡಿದ ಕನ್ನಡಿಯಾಗಿವೆ. ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಅರ್ಜುನನಿಗೆ ಹೇಳಿದಂತೆ–

> ಯದ್ಯದಾಚರತಿ ಶ್ರೇಷ್ಠಃ ತತ್ತದೇವೇತರೋ ಜನಾಃ ।
> ಸ ಯತ್ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ ॥

ಅಂದರೆ, ಶ್ರೇಷ್ಠನಾದ ವ್ಯಕ್ತಿಯು ಮಾಡಿದ್ದನ್ನೇ ಇತರರೂ ಅನುಸರಿಸುತ್ತಾರೆ. ಆದುದರಿಂದ ಶ್ರೇಷ್ಠರಾದವರು ಸದಾ ಲೋಕಹಿತಕ್ಕಾಗಿ ಕೆಲಸ ಮಾಡಬೇಕು. ಬುದ್ಧ ಇದನ್ನೇ "ಬಹುಜನಹಿತಾಯ, ಬಹುಜನಸುಖಾಯ" ಎಂದು ಕರೆದದ್ದು. ಮನುಷ್ಯರು ತಮ್ಮಲ್ಲಿರುವ ಎಲ್ಲ ಶಕ್ತಿವಿಶೇಷಗಳನ್ನು ಕೇವಲ ವೈಯಕ್ತಿಕ ಉಪಯೋಗಕ್ಕೆ, ಮೋಕ್ಷಕ್ಕೆ ಉಪಯೋಗಿಸದೆ, ಇಡೀ ಸಮಾಜದ ಕಲ್ಯಾಣಕ್ಕಾಗಿ ಬಳಸಬೇಕು. ಪೂಜ್ಯರ ಎಲ್ಲ ಕಾರ್ಯಗಳು ಪರಂಪರೆಯ ತತ್ತ್ವ ಪ್ರದೀಪಿಕೆಗಳೇ ಆಗಿವೆ. ಅವರ ನಡೆ ಎಲ್ಲರಿಗೂ ಆದರ್ಶಪ್ರಾಯವಾಗಿದೆ; ಅನುಸರಣೀಯವಾಗಿದೆ. ನಿತ್ಯವೂ ಅವರ ಸ್ಮರಣೆಯನ್ನು ಮಾಡುವ ಸಹಸ್ರಾರು ಜನರಿಗೂ ಅದೇ ಇಂದಿಗೂ ಬೆಳಕಿನ ದಾರಿಯಾಗಿದೆ. ಅವರ ಈ ಲೋಕಕಲ್ಯಾಣಸಂಕಲ್ಪವೇ ಶ್ರೀಮಠವನ್ನು, ಸಂಸ್ಥೆಯನ್ನು ಅವಿಚ್ಛಿನ್ನವಾಗಿ ಯಶಃಪಥದಲ್ಲಿ ಮುನ್ನಡೆಸುತ್ತಿದೆ. ಅವರನ್ನು ಒಮ್ಮೆ ನೆನೆಸಿಕೊಂಡರೆ ಸಾಕು, ಸಕಲ ಅಭೀಷ್ಟಗಳೂ ಸಿದ್ಧಿಸುತ್ತವೆ. "ಕರಿ ಘನ, ಅಂಕುಶ ಕಿರಿದೆನ್ನಬಹುದೇ, ಬಾರದು, ತಮಂಧ ಘನ, ಜ್ಯೋತಿ ಕಿರಿದೆನ್ನಬಹುದೇ, ಬಾರದು, ಮರಹು ಘನ, ನಿಮ್ಮ ನೆನೆವ ಮನ ಕಿರಿದೆನ್ನಬಹುದೇ, ಬಾರದು" ಎಂಬ ಬಸವಣ್ಣನವರ ವಚನದಂತೆ ಶ್ರೀಗಳನ್ನು ನಿತ್ಯವೂ ನೆನೆವ ಮನ ಎಂದೂ ಕಿರಿದಾಗದು, ಅದು ಹಿರಿದಾಗುತ್ತ ಆಗುತ್ತಾ ಸದಾ ಶಿವಪಥದಲ್ಲಿ ಸಾಗುತ್ತದೆ.

**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**





# ಸಂಪಾದಕೀಯ

ವರಕವಿ ಬೇಂದ್ರೆಯವರ "ಯುಗಯುಗಾದಿ ಕಳೆದರೂ" ಎಂಬ ಪ್ರಸಿದ್ಧ ಕವಿತೆಯಲ್ಲಿ ಮಹತ್ವಪೂರ್ಣವಾದ ಎರಡು ಸಾಲುಗಳಿವೆ. "ವರುಷಕ್ಕೊಂದು ಹೊಸತು ಜನುಮ, ಹರುಷಕೊಂದು ಹೊಸತು ನೆಲೆಯು, ಅಖಿಲ ಜೀವಜಾಲಕೆ, ಒಂದೆ ಒಂದು ಜನುಮದಲ್ಲಿ ಒಂದೆ ಬಾಲ್ಯ ಒಂದೆ ಹರೆಯ ನಮಗದಷ್ಟೆ ಏತಕೋ. ನಿದ್ದೆಗೊಮ್ಮೆ ನಿತ್ಯಮರಣ ಎದ್ದ ಸಲ ನವೀನ ಜನನ, ನಮಗೆ ಏಕೆ ಬಾರದೋ". ಇಡೀ ಕವಿತೆಯ ಆಶಯವೆಂದರೆ, ಜಗತ್ತಿನ ಸೃಷ್ಟಿಯಲ್ಲಿ ಮನುಷ್ಯನನ್ನು ಹೊರತುಪಡಿಸಿ ಪ್ರಕೃತಿಯ ಎಲ್ಲ ಸಂಗತಿಗಳೂ ಪ್ರತಿವರ್ಷವೂ ಯುಗಾದಿಯಲ್ಲಿ ನವಚೈತನ್ಯವನ್ನು ಹೊಂದುತ್ತವೆ, ಉಲ್ಲಾಸವನ್ನು ಅನುಭವಿಸುತ್ತವೆ. ಆದರೆ ಮನುಷ್ಯನಿಗೆ ಮಾತ್ರ ಈ ಅವಕಾಶವಿಲ್ಲ. ನಮ್ಮ ಹಳತರದಲ್ಲಿಯೇ ನಾವು ಹುದುಗಿಹೋಗಿರುತ್ತೇವೆ. ನಿತ್ಯಯೌವನದ ನಿಸರ್ಗದೊಡನಿದ್ದರೂ ಅದರ ಯಾವ ಗಂಧಲೇಪವೂ ಇಲ್ಲದೆ ಏಕಾಂಗಿಯಾಗಿರುತ್ತೇವೆ. ವಾಸ್ತವದಲ್ಲಿ ಜೀವನದ ನಶ್ವರತೆ ಹಾಗೂ ನಿಸರ್ಗದ ನಿತ್ಯನೂತನತೆಯ ಮುಖಾಮುಖಿ ಈ ಕವಿತೆಯ ಅಂತರಾರ್ಥ. ಆದರೆ ಮನುಷ್ಯನು ತಾನು ಪ್ರಕೃತಿಗಿಂತಲೂ ಭಿನ್ನನೆಂಬ ಭ್ರಮೆಯಲ್ಲಿ ಸದಾ ಇರುತ್ತಾನೆ.

ಪ್ರಕೃತಿಯ ಈ ನಿತ್ಯನೂತನತೆಯ ಜೊತೆಗೆ ತಾದಾತ್ಮ್ಯವನ್ನು ಸಾಧಿಸುವ ಕೆಲವೇ ಜನರು ಅದರ ಅನಂತತೆಯನ್ನು ಅರಿತು ಮುನ್ನಡೆಯುತ್ತಾರೆ. ಅವರಿಗೆ ಈ ನಿಸರ್ಗದಲ್ಲಿ ತರತಮಗಳ ಭೇದವಿಲ್ಲ. ಮೇಲುಕೀಳಿನ ಗೋಳುಗಳಿಲ್ಲ. ಅಂತಹ ವಿರಳರಲ್ಲಿ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಪ್ರಾತಃಸ್ಮರಣೀಯರು. ಇಂತಹವರು ಭೌತಿಕ ಶರೀರವನ್ನು ತೊರೆದರೂ ಚಿರಂಜೀವಿಗಳಾಗಿಯೇ ಉಳಿಯುತ್ತಾರೆ. ಪ್ರಕೃತಿತತ್ತ್ವಕ್ಕೆ ವಿರುದ್ಧವಾಗಿ ಸೆಣಸುವುದು ತನ್ನ ಅಸ್ತಿತ್ವವನ್ನು ಕಳೆದುಕೊಂಡು ಇಲ್ಲವಾಗುತ್ತದೆ; ಇದನ್ನು ಅರಿತವರ ಪಾಲಿಗೆ ಜೀವನ ಲೀಲೆಯಾಗುತ್ತದೆ. ರಾಜೇಂದ್ರ ಶ್ರೀಗಳು ಅಂತಹ ಲೀಲಾಪುರುಷರು. ಸಾಧಾರಣವಾಗಿ ಲೀಲೆ ಎನ್ನುವಾಗ ಅಕ್ಕಮಹಾದೇವಿ ಹೇಳುವ "ತನ್ನ ವಿನೋದಕ್ಕೆ ತಾನೇ ಸೃಜಿಸಿದ ಸಕಲ ಜಗತ್ತ. ತನ್ನ ವಿನೋದಕ್ಕೆ ತಾನೇ ಸುತ್ತಿದನದಕ್ಕೆ ಸಕಲ ಪ್ರಪಂಚನು. ತನ್ನ ವಿನೋದಕ್ಕೆ ತಾನೆ ತಿರುಗಿಸಿದನನಂತ ಭವದುಃಖಗಳಲ್ಲಿ. ಇಂತೆನ್ನ





ಚೆನ್ನಮಲ್ಲಿಕಾರ್ಜುನನೆಂಬ ಪರಶಿವನು ತನ್ನ ಜಗದ್ವಿಲಾಸ ಸಾಕಾದ ಮತ್ತೆ ತಾನೆ ಪರಿವನದರ ಮಾಯಾಪಾಶವನು". ಈ ವಚನದಲ್ಲಿ "ತನ್ನ ಜಗದ್ವಿಲಾಸ" ಎಂಬ ಮಾತು "ಇಡೀ ಜಗತ್ತೇ ಭಗವಂತನ ವಿಲಾಸ" ಎಂಬ ವಿಶೇಷಾರ್ಥವನ್ನೂ ಹೊಂದಿದೆ.

ಪ್ರಕೃತಿಯು ದೇವರ ಅನಂತ ಲೀಲೆಯೆಂದು ಯಾರು ತಿಳಿದಿರುತ್ತಾರೋ ಅವರಿಗೆ ಪ್ರಕೃತಿ ಅರ್ಥವಾಗುತ್ತದೆ. ಅಂಥವರಿಗೆ ಈ ಲೋಕದ ಮಣಿಹ ಒಂದು ಜಗದ್ವಿಲಾಸ. ಪೂಜ್ಯ ರಾಜೇಂದ್ರ ಶ್ರೀಗಳವರ ಬದುಕೂ ಹೀಗೆಯೇ ಒಂದು ಜಗದ್ವಿಲಾಸ. ಅವರನ್ನು ಹತ್ತಿರದಿಂದ ಕಂಡವರೆಲ್ಲ ಈ ಸೋಜಿಗವನ್ನು ಅನುಭವಿಸಿದ್ದಾರೆ. ಕೆಲವರಿಗೆ ತಂದೆಯಾಗಿ, ತಾಯಿಯಾಗಿ, ಗುರುವಾಗಿ, ದೈವವಾಗಿ, ದಾರಿದೀಪವಾಗಿ ಅವರು ಕಂಡಿದ್ದಾರೆ. ವೇದಮಂತ್ರಗಳನ್ನು ಸೃಷ್ಟಿಸಿದ ನಮ್ಮ ಪ್ರಾಚೀನರೂ ಕೂಡ ಪ್ರಕೃತಿಯ ಈ ವಿಲಾಸವನ್ನು ಅಲ್ಲಗಳೆಯಲಾರದು. ಹಾಗೆ ಪರಿಭಾವಿಸಿದ್ದರಿಂದ ರಚಿತವಾದ ಅನಂತ ಋಕ್ಕುಗಳೂ ಪ್ರಕೃತಿಯನ್ನು ಕುರಿತೇ ಹಾಡಿವೆ. ಇದಕ್ಕೆ ಅವರ ದೃಷ್ಟಿ, ಜ್ಞಾನಗಳ ವಿಸ್ತಾರ ಕಾರಣವಾದಂತೆ ನಿಸರ್ಗದ ವಿಲಾಸವೂ ಕಾರಣವಾಗಿದೆ. ಪರಮಪೂಜ್ಯರ ರಾಜೇಂದ್ರ ಶ್ರೀಗಳವರನ್ನು ವಿವಿಧ ಜನರು ಭಿನ್ನಭಿನ್ನ ಭಾವಗಳಿಂದ ಕಂಡಿದ್ದಾರೆ. "ಬೆಲ್ಲದ ಪುತ್ಥಳಿಯನ್ನು ಇರುವೆ ಮುತ್ತಿದಂತೆ" ಶ್ರೀಗಳ ಘನಾಕೃತಿ ಅವರೆಲ್ಲರಿಗೂ ಒಂದೇ ರೀತಿ ಕಂಡಿದೆ.

ರಾಜೇಂದ್ರ ಶ್ರೀಗಳನ್ನು ಕುರಿತು ಯಾರು ಎಷ್ಟೇ ವರ್ಣಿಸಿದರೂ ಆ ಅನಂತ ವ್ಯಕ್ತಿತ್ವವನ್ನು ಸಂಪೂರ್ಣವಾಗಿ ಕಂಡರಿಸಲಾಗದು. "ಕರಿಯ ಕನ್ನಡಿಯಲ್ಲಿ ಕಂಡಂತೆ" ಆ ಪ್ರಯತ್ನ ಅಷ್ಟೆ. ನಮ್ಮ ಮನಸ್ಸೆಂಬ ಕನ್ನಡಿಯಲ್ಲಿ ಅವರ ವ್ಯಕ್ತಿತ್ವದ ಘನತೆಯನ್ನು ಹಿಡಿದಿಟ್ಟುಕೊಂಡು ಸಂಭ್ರಮಿಸುತ್ತೇವೆ. ಆದರೆ ಆ ದೃಶ್ಯ ಮರೆಯಾದ ನಂತರ ಆ ಕನ್ನಡಿಯಲ್ಲಿ ಬೇರೊಂದು ಲೌಕಿಕದ ವಸ್ತು ಮೂಡುತ್ತದೆ. ಆದುದರಿಂದಲೇ "ಘನತರ ಚಿತ್ರಕ್ಕೆ ರೂಹು ಬರೆಯಬಹುದಲ್ಲದೆ ಪ್ರಾಣವ ತುಂಬಬಹುದೇ, ಅಯ್ಯಾ" ಎಂಬ ಅಲ್ಲಮಪ್ರಭುದೇವರ ಮಾತು ಮನನೀಯ. ಪೂಜ್ಯ ರಾಜೇಂದ್ರ ಶ್ರೀಗಳವರ "ಘನತರ ಚಿತ್ರಕ್ಕೆ" ರೂಹು ಬರೆಯುವ ಅನೇಕ ಮಹತ್ವದ ಪ್ರಯತ್ನಗಳನ್ನು ಈ "ರಾಜೇಂದ್ರ ವಾಚಿಕೆ"ಯಲ್ಲಿ ಸಂಕಲಿಸಿ ಸಂಪಾದಿಸಲಾಗಿದೆ. ಈ ರೂಹು ಬರೆಯುವ ಕಾರ್ಯ ನಮ್ಮ ಪಾಲಿಗೆ ಸಾರ್ಥಕವಾದುದೇ ಆದರೂ ಈ ಕೆಲಸ ಸಂಪೂರ್ಣವಾಗಿಲ್ಲ. ಶ್ರೀಗಳವರ ಅನಂತತೆಯನ್ನು ನಿತ್ಯವೂ ಸ್ಮರಿಸುವ ಮೂಲಕ ನಮ್ಮ ಮನಸ್ಸು ಬರಿಗನ್ನಡಿಯಾಗದೆ ರನ್ನಗನ್ನಡಿಯಾಗುವಂತೆ ನೋಡಿಕೊಳ್ಳುವ ಜವಾಬ್ದಾರಿ ನಮ್ಮದಾಗಬೇಕು.

**ಡಾ. ಎಂ.ಎನ್. ನಂದೀಶ್ ಹಂಚೆ**





# ನನ್ನ ಗುರುತಂದೆಯನ್ನು ಕುರಿತು

**ಡಾ. ಎಲ್. ಬಸವರಾಜು**

ಶ್ರೀ ಗುರು ರಾಜೇಂದ್ರರು
ಮೇಲಿನವರನ್ನು ಉದ್ಧಾರಮಾಡಿಯೇ
ಊರ್ಧ್ವಲೋಕದಿಂದ
ಈ ಅಧೋಲೋಕಕ್ಕೆ ಬಂದರು
ಇದು ಅಧಃಪಾತವಲ್ಲ –
ಭೂಲೋಕದವರ ಮೇಲಣ
ಅವರ ಕಟಾಕ್ಷ ಪಕ್ಷಪಾತ !

ಶ್ರೀ ರಾಜೇಂದ್ರರು
ಗುರುಗಳಾಗಿ
ಶಿಷ್ಯರನ್ನೆಲ್ಲಾ
ತನ್ನ ಶಿಶುಮಕ್ಕಳೆಂದೇ ತಿಳಿದರು !
ದೊಡ್ಡವರಿಗೆ
ದೊಡ್ಡವರ ಮಕ್ಕಳಿಗೆ –
ತಂತಮ್ಮ ಹೃದಯವನ್ನು
ಶೋಧಿಸಿಕೊಳ್ಳಲು ಹೇಳಿದರು.
ಚಿಕ್ಕವರಿಗೆ
ಚಿಕ್ಕವರ ಮಕ್ಕಳಿಗೆ
ಅಕ್ಷರ ತಿದ್ದಿಹಾಕಿದರು –
ಪ್ರಥಮ ತೀರ್ಥಂಕರ ಸ್ವಾಮಿ ವೃಷಭನಾಥನು
ಹೆಣ್ಣುಮಕ್ಕಳಿಗೆ





ಆತ್ಮೋದ್ಧಾರದ ವಿದ್ಯೆಯನ್ನೂ,
ಗಂಡುಮಕ್ಕಳಿಗೆ
ಲೋಕೋಪಕಾರದ ಶಾಸ್ತ್ರಗಳನ್ನೂ
ಉಪದೇಶ ಮಾಡಿದಂತೆ –
ಎಲ್ಲರಿಗೆ
ಸಲ್ಲುವ ವಿದ್ಯೆ ಕಲಿಸಿದರು !
ಕೂಡಬೇಕಾದ್ದನ್ನು ಕೂಡಲು
ಕಳೆಯಬೇಕಾದ್ದನ್ನು ಕಳೆಯಲು
ಕಲಿಸಿದರು !

ಹೀಗೆ –
ಜೀವಮಾನವನ್ನೆಲ್ಲಾ
ಪರಾರ್ಥ ಪರಮಾರ್ಥದಲ್ಲಿ ಸವೆಸಿ –
ಇನ್ನೂ ಹಿಂದುಳಿದ ಭೂಮಂಡಲವನ್ನೆಲ್ಲ ಮೇಲೆತ್ತಲೆಂದೇ
ಸಮಾಧಿಯೋಗ ಮಾರ್ಗವಾಗಿ
ಜನಮನಸ್ಸಾಗರಾಂತರ ಪ್ರಯಾಣ ಹೊರಟಿದ್ದಾರೆ !
ಸ್ವಾಮಿ ರಾಜೇಂದ್ರರು
ಕಾಲವಶರಾದರೆನ್ನಬೇಡಿ –
ಕಾಲನಿಗೆ ಕಾಲ ಅವರು
ಕಾಲಾತೀತವಾಗಿದ್ದಾರವರು
ಕಂಡು ಏಳುನೂರು – ಕಾಣದೆ ಏಳುನೂರು ವರ್ಷದವರ
ಅಂಶದವರು !

□





# ಕರುಣೆ ಕಣ್ತೆರೆದಂತೆ

**ಡಾ. ಸಾ.ಶಿ. ಮರುಳಯ್ಯ**

ಬೆಳ್ಳಿ ಬೆಟ್ಟದ ಬೆಳಕೆ ಹೊಳೆಯಾಗಿ ಹರಿದಿಲ್ಲ
ಮಡುಗಟ್ಟಿ ನಿಂದಿಹುದು ತೀರ್ಥವಾಗಿ
ಕಾಮಧೇನುವೆ ಒಲಿದು ಸೊರೆಬಿಟ್ಟು ಸುರಿದಾಗ
ಹಾಲು ಹೊಳೆಯಾಗಿಹುದು ಕಪಿಲೆಯಾಗಿ !

ಗಗನದಲಿ ತೆಂಗುಗಳು ಜಾಗರವನಾಡುವುವು
ಬೆಳುದಿಂಗಳಿರುಕಿನಲಿ ಬೆಳಕ ತೂರಿ
ನೆಲದಲ್ಲಿ ಹೊಂಬಾಳೆ ಹುಡಿತುಂಬಿ ಬರೆದಿಹುದು
ರಂಗವಲ್ಲಿಯನಿಲ್ಲಿ ಬೀಸಿ ಚವರಿ !

ಸುತ್ತೂರ ಸುತ್ತೆಲ್ಲ ಮುತ್ತು ಮಣಿಗಳ ಮಾಲೆ
ಬತ್ತ ಬಂಗಾರಕ್ಕೆ ಕುಣಿವ ಇಚ್ಛೆ !
ಕತ್ತೆತ್ತಿ ಕೇಳಿದರೆ ಮುಗಿಲು ಮಾತಾಡುವುದು
ಎತ್ತೆತ್ತಲೂ ಹಚ್ಚ ಹಸಿರು ಪಚ್ಚೆ !

ವೀರಸಿಂಹಾಸನದ ಕರುಣೆ ಕಣ್ತೆರೆದಂತೆ
ಮಲ್ಲಿಗೆಯ ಚೆಲ್ಲಿಹುದು ಬಯಲಿನಲ್ಲಿ
ಶಿವರಾತ್ರಿ ಗುರುವರನ ತಪವೆ ಹಣ್ಣಾದಂತೆ
ತೃಪ್ತಿ ಮಲಗಿದೆ ಇಲ್ಲಿ ಗದ್ದುಗೆಯಲಿ !

ಇದುವೆ ಪುಣ್ಯದ ಪುಂಜ ಅನುಭಾವಿಗಳ ಬೆಳಸು
ಶಿವರಾತ್ರಿ ರಾಜೇಂದ್ರನಿರುವ ನಾಡು
ಸಾಸಲಿನ ಶಿವ-ಮರುಳಗೊಳಿದ ಶ್ರೀ ಪ್ರಭುರಾಜ
ಯೋಗಿವರ್ಯನ ನಿಜದ ನಿಲುಮೆ ಬೀಡು.

□





# ಕವಿತೆಯಾಗಿದೆ ಕೈತುತ್ತು

ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯ

ಉದುರಿಸಿದವರಿದ್ದಾರೆ
ಮಂತ್ರಕ್ಕೆ ಮಾವಿನಕಾಯಿ.
ತೋರಿ ತಾರೆಗಳನ್ನು
ಭ್ರಮೆಗೊಳಿಸಿದವರಿದ್ದಾರೆ
ಆಕಾಶವೇ ನಿಮ್ಮದು ಎಂದು
ಕುಳಿತು ಪಲ್ಲಕ್ಕಿಯಲಿ
ಅದನು ಹೊತ್ತವರನ್ನೆ
ಮೆಟ್ಟಿ ತುಳಿದವರು ಇದ್ದಾರೆ.
ಇದ್ದಾರೇನು ನಿಮ್ಮಂತೆ
ಅಡವಿಟ್ಟವರು
ದೈವವನ್ನೆ ದಾಸೋಹಕ್ಕೆ?

ಬೀಜದೊಳಗಣ ಹೇರಾಲಗಳ
ಅಂಡದೊಳಗಣ ಜಾಗರದ ನವಿಲುಗಳ
ಕುರುಹಿಡಿಯಬಲ್ಲವರು?

ನೀವಿತ್ತ ಕೈ ತುತ್ತೆ
ಕವಿತೆಯಾಗಿದೆಯಲ್ಲ!

□





# ಊರುಗೋಲು

ಸಿ.ಪಿ.ಕೆ.

ಕೃಶಕಾಯ; ಕಾಯಕಕ್ಕೆ ಬರೆದ ಮಹಾಭಾಷ್ಯ!
ಆಯುಷ್ಯದ ಬಗೆಗೆ ಚಿಂತಿಸದೆ, ಸಮಾಜದುತ್ಥಾನ
ಚಿಂತೆಯನೆ ಹಗಲಿರುಳು ಹಾಸು, ಹೊದಿಕೆಯ ಮಾಡಿ,
ದಾಸೋಹಧನ್ಯರಾದವರು ಶ್ರೀ ಶಿವರಾತ್ರಿ
ರಾಜೇಂದ್ರ ಪೂಜನೀಯರು! ದಿವ್ಯದ ಬೀಜ
ಬಿತ್ತಿ ಭೂಜವ ಬೆಳೆದವರು, ಹೊಳೆಗೆ ಚಿನ್ಮೂಲ-
ವಾದವರು, ಭವಕ್ಕೆ ಶಿವದೂರುಗೋಲಾಗಿ,
ಶಿಶುವಾಗಿ, ಅಂತೆ ತಾಯೂ ಆಗಿ, ಸುತ್ತೂರ-
ನೆತ್ತರಕೆ ಒಯ್ದವರು! ನೆತ್ತರಿನ ಕಣಕಣವೂ
ಕಿರಣವಾಗಿತ್ತು ಲಿಂಗದ! ಅಂಗ ಕರಗಿತ್ತು
ಕಪ್ಪಿರದ ಕಪ್ಪುರವಾಗಿ ಹರಡಿ ನರುಬೆಳಕ!
ಅವತಾರ, ಅಂಶಾವತಾರಗಳು ಕಾಲಾತೀತ;
ವಿಭೂತಿಪುರುಷರಿಂಥವರು ದೇವರ ನೆರಳು;
ಜೀವಾವಳಿಯ ಲೇಸಿಗೆಳಸಿ ತುಡಿಯುವ ಕರುಳು!

□





# ಪರುಷಮಣಿ

**ಕೆ.ಸಿ. ಶಿವಪ್ಪ**

ಎತ್ತ ನೋಡಿದರತ್ತ ನಿನ್ನದೇ ಸಿರಿಬೆಳಕು
ನಾ ನಡೆವ ಈ ದಾರಿ ನಿನ್ನ ದಯೆ, ತಂದೆ !

ನೊಂದವರ ಕಣ್ಣೀರ ಒರಸಲಿಕೆ ಕೆಲ ಮಂದಿ
ಬರುವರೀ ಇಳೆಯತ್ತ ಆಗೊಮ್ಮೆ ಈಗೊಮ್ಮೆ
ನೀ ಅಂಥ ಮಹನೀಯ, ಸಂತಸದ ಹರಿಕಾರ
ನಿನ್ನಿಂದ ಈ ಜೀವ ಹೊನ್ನಾಯಿತು !

ಅನ್ನವಸತಿಯನಿತ್ತು ಕಲಿವ ಮಕ್ಕಳಿಗಂದು
ಅರಿವಿನರವಟ್ಟಿಗೆಯ ತೆರೆದ ಗುರು ನೀನು.
ನೀ ನೆಟ್ಟ ಸಸಿ ಅಂದು ಬೆಳೆದು ಹೆಮ್ಮರ ಇಂದು
ಇದರ ನೆರಳಲಿ ಎನಿತು ಕೋಗಿಲೆಯ ಗಾನ !

ಬಡಜನರ ಕರಪಿಡಿದೆ, ಪರಹಿತಕೆ ಜೇನಾದೆ
ಆ ನಗೆಯ ನಲಿವಿನಲಿ ನೀ ಶಾಂತನಾದೆ.
ಬಯಲಿನಲಿ ಬಯಲಾದೆ, ನೀನೆ ಅಂಬರವಾದೆ
ಕಾರುಣ್ಯಮೂರ್ತಿ ನೀ ಓ ದೀನಬಂಧು !

ಮನವಚನ ಒಂದಾದ ನಗೆಮೊಗದ ನೀ ಧೀರ
ನಿನ್ನ ಯೋಗದ ತೇಜ ಬದುಕಿಗಾಧಾರ
ಯಾರ ಮನ ನಿರ್ಮಲವೊ, ಅವರಿಂದ ಚೈತನ್ಯ ;
ಎಂತು ಮರೆಯುವೆ ನಿನ್ನ ರಾಜೇಂದ್ರಪ್ರಭುವೆ !





# ನೀನು ತಾಯಿಹೃದಯದ ತಂದೆ

**ಕೆ. ವೀರಭದ್ರ**

ನಾನಂತೂ ಹುಡುಗ
ಆದರೂ ತೊಟ್ಟಿರುವೆ ದೊಡ್ಡವರ ಅಂಗಿ,
ರುಮಾಲು, ಹೊದ್ದಿರುವೆ ಶಾಲು,
ಹಿಡಿದಿರುವೆ ಕೋಲು
ನುಡಿಯುತಿಹೆ
ನಟಿಸುತಿಹೆ
ಅಂಥವರ ಭಾವಭಂಗಿ
ಆದರೂ ಅಲ್ಲಲ್ಲಿ ತಲೆದೋರಿಹುದು ನನ್ನ ತೊದಲು
ಇದು ನನ್ನ ಭಾವ ಭಣತಿ
ಅರ್ಪಿಸುವೆ ನಿನಗಿದೋ ಭಕ್ತಿ ಪ್ರಣತಿ.

**ನೀನು ತಾಯಿಹೃದಯದ ತಂದೆ**

ನೀನನೇಕರಿಗೆ ಜಗದ್ಗುರು
ಆದರೆ ನನಗಲ್ಲ!
ಕೆಲರಿಗಂತೂ ನೀನು ಶಿವರಾತ್ರೀಶ್ವರ ಅಪರ ಪರಮೇಶ್ವರ
ಆದರೆ ನನಗಲ್ಲ!
ನನಗಾದರೋ ನೀನು ಅರ್ಧನಾರೀಶ್ವರ!
ಏಕೆಂಬೆಯೋ–
ನೀನು ತಾಯಿಹೃದಯದ ತಂದೆ!





# ಅಲ್ಲ...! ಅಲ್ಲ...!

ಪ್ರೊ. ಮ.ಗಂ. ರೇಣುಕ ಪ್ರಸನ್ನ

ಅವರು ಪಂಡಿತರಲ್ಲ
ಜ್ಞಾನಿ.
ಅವರು ವೈದ್ಯರಲ್ಲ
ಭವರೋಗ್ಯವೈದ್ಯ.
ಅವರು ಇಂಜಿನಿಯರಲ್ಲ
ಹೃದಯಶಿಲ್ಪಿ.
ಅವರು –
ಅದು-ಇದು-ಉದು
ಈ ಏನೇನೂ ಏನೇನೋ ಆಗಲಿಲ್ಲ
ಅಲ್ಲವಾಗಿಯೇ –
ಎಲ್ಲವೂ ಆಗಿಹೋದರಲ್ಲ!
ಆಗಿಹೋದರೂ
ಜನಮನದಿ
ಅಚ್ಚಳಿಯದೆ
ಉಳಿದುಬಿಟ್ಟರಲ್ಲ! ಉಳಿದುಬಿಟ್ಟರಲ್ಲ.





# ಮುಂಗಾರ ಸಿರಿ

**ಪ್ರೊ. ಎ.ಎಸ್. ಜಯರಾಂ**

ಹರಿದಿದೆ ಕಾಲ ತಣ್ಣಗೆ
ರಾಜಮಹಾರಾಜರು ಮರೆಯಾದರು ಮೆಲ್ಲಗೆ
ಸಿಂಹಾಸನಗಳುರುಳಿದವು ಧರೆಗೆ !

ಶ್ರೀ ರಾಜೇಂದ್ರಗುರುವರ
ಹಗಲಲ್ಲೂ, ಇರುಳಲ್ಲೂ
ಪಕ್ಷಾತೀತವಾಗಿ ಬೆಳಗಿದೆ
ನಿನ್ನ ರಾಜತೇಜ ಅಂಬರಂಬರ!

ಎಪ್ಪತ್ತರ ಎತ್ತರದಲಿ, ಬಿತ್ತರದಲಿ
ಎಷ್ಟೊಂದು ಸಾಧನಾ ಶಿಖರ ಶ್ರೇಣಿ!
ಅಕ್ಷರವಂಚಿತರ, ಹಸಿದವರ, ಬಿದ್ದವರ
ದಲಿತರ, ಅತ್ತು ಕರೆದವರ, ಬೆನ್ನುಬಿದ್ದವರ
ಬೆನ್ನಲ್ಲೆ ಇರಿದವರ, ಬಳಿಗೆ ಹರಿತಂದ
ಸುರಧುನೀ !

ಹಬ್ಬುತ್ತಿದೆ ನಿನ್ನ ಕನಸು ನನಸಾಗಿ!
ನಿನ್ನ 'ಕರಕಮಲಸಂಜಾತ' ಸುಗಂಧ
ಪಸರಿಸಿದೆ ಎಣ್ದೆಸೆ
ಏನೀ ಬಿಸವಂದ, ಅನುಬಂಧ?

ನಿನ್ನ ನೆನಪೆ ನಮಗೆ
ಹಾಸ, ಪ್ರಭಾಸ, ತೋಷ
ಅಂಧಕಾಸುರನೆದುರು
ರಣಘೋಷ!





# ಧನ್ಯ ಧನ್ಯ ವಿಶ್ವಾತ್ಮ

**ಡಾ. ಬಿ.ನಂ. ಚಂದ್ರಯ್ಯ**

ತುಟಿಯೆಸಳು ಸೂಸುತಿರೆ ಮುಗುಳುನಗೆ
ಫಳಫಳನೆ ಹೊಳೆವ ದುಂಡುಮುಖವೆಲ್ಲ ನಕ್ಕಂತೆ
ಹಸುಗೂಸ ಮುಗ್ಧ ಮೊಗ ಸೂಸುವುದು ಶಶಿಕಿರಣ ಕಾಂತಿ
ಪಾಷಾಣ ಹೃದಯವನು ಸೂರೆಗೊಳುವುದು ಹೃದಯ ಉಕ್ಕುವುದು
ಮೌನವಾಗಿಯೆ ನಮಿಸುವುದು ತಲೆಬಾಗಿ
ಹಗಲ ನೊಸಲಲಿ ಶೋಭಿಪುದು ಮೂಡೆಸಳ ಭಸ್ಮೋದ್ಧೂಳನ
ಸಕಲ ದುರಿತಗಳ ತೊಳೆದಮಲ ಭಸ್ಮೋದ್ಧೂಳನೆ.
ಶರಣರ ಸಂಕಲ್ಪ ವೃಥಾ ಸವೆಯದು ಕಾಣಾ
ಫಲಬಿಟ್ಟ ಮರನಂತೆ ಹೂ ಬಿರಿದ ಗಿಡದಂತೆ
ಕೂಸ ಹಡೆದ ತಾಯಂತೆ ಫಲಿಸುವುದು ಕಾಣಾ ಶರಣರ ಬಯಕೆ
ರೂಹು ಪುರುಷಾದರೂ ಹೆಣ್ಣಿನ ಕೋಮಲ ಹೃದಯ
ಅಂತಃಕರಣ ದೀಪ್ತಿ ಬೆಳಗುತಿದೆ ಜಗದಗಲ
ದಾಂಗುಡಿಯಿಡುತಿಹುದು ಕೀರ್ತಿಲತೆ ಬುವಿ ಬಾನುಗಳ ತಬ್ಬಿ
ಆ ನಿನ್ನ ಹಂಬಲದ ಕಾಯಕವೆಲ್ಲ ಪರಿಮಳಿಸುತಿದೆ
ಜಗದಗಲ ಮುಗಿಲಗಲ ಹಬ್ಬುತಿದೆ ಕೀರ್ತಿಲತೆ ದಾಂಗುಡಿಯಿಡುತ
ಸಾಗುತಿದೆ ಮನುಜಪಥ ಕಲ್ಯಾಣಪಥದೊಳಗೆ ಅವಿರತವಾಗಿ
ವಿಶ್ವಮಾನವನಾಗಿ ಮುಂದೆ ಸಾಗುತಿದೆ ನೀ ತೋರಿದಾ ಬೆಳಕಿನಲಿ
ಧನ್ಯ ಧನ್ಯ ವಿಶ್ವಾತ್ಮಾ
ನಮಾಮಿ ಭೋ ವಿಶ್ವಾತ್ಮಾ, ಚಿರಮಭಿವರ್ಧತಾಂ ತವ ವಿಶ್ವಾತ್ಮಾ.

□





# ಶ್ರೀ ನಗು

**ಜೀಮಾರಹಳ್ಳಿ ಗುರುಸಿದ್ದಪ್ಪ**

ನಗು ಎಂದರೆ
ಸಂತೋಷವೆಂದೇ
ತಿಳಿದಿದ್ದೆ
ಈರ್ಷೆಗೂ ಕುಹಕಕ್ಕೂ
ನಕ್ಕವರ ಕಂಡೆ
ಸಣ್ಣ ಸಣ್ಣದಕ್ಕೂ ಮುಸಿ ಮುಸಿ
ಎಂದವರ ಕಂಡೆ
ಪರರ ಬೀಳಿನಲಿ ವಿಕಟಾಟ್ಟಹಾಸ
ಗೈದವರನೂ ಕಂಡೆ

ಈ ಬಗೆಯ ನಗು
ಬಲು ಅನಿಷ್ಟ - ನಷ್ಟವೆಂದುಕೊಂಡೆ

ಮಿಂಚಿನಾ ಹೊಳಪು
ಶುದ್ಧ ಸ್ಫಟಿಕ, ಶುಭ್ರ ಧವಳ
ಮುತ್ತು ಮಾಣಿಕ್ಯದಮಲತ್ವದ
ಬಲು ಲಾಭದಂತಿದ್ದ ನಿಮ್ಮಾ
ಶ್ರೀ ನಗುವ ನೆನೆದೊಮ್ಮೊಮ್ಮೆ
ನಾನಳುವೆ

ನಿಮ್ಮ ಹಾಗೆ ನಾ ನಗಲಾರೆ
ಬದಲು ಅಳುವೆ ಬೇಕಾದರೆ
ನಿಮ್ಮಾ ನಗುವಲ್ಲಿದ್ದ ಅಪಾರ
ಅಳವ ನೆನೆನೆನೆದುನ್ಮಾದದಲಿ □





# ಉರಿಯುಂಡ ಕರ್ಪೂರ

**ಡಾ. ಎಚ್. ತಿಪ್ಪೇರುದ್ರಸ್ವಾಮಿ**

ವಿದೇಶದಿಂದ ಹಿಂದಿರುಗಿದ ಜಗದ್ಗುರುಗಳವರ ಆರೋಗ್ಯ ದಿನದಿನಕ್ಕೆ ಕ್ಷೀಣಿಸತೊಡಗಿತ್ತು. ಆದರೆ ಹೊರಗೆ ನೋಡುವವರಿಗೆ ಅದರ ಸುಳಿವೂ ಸಿಕ್ಕುವಂತಿರಲಿಲ್ಲ. ನೋವನ್ನೆಲ್ಲಾ ತಾವೇ ನುಂಗಿಕೊಂಡು ಕಾರ್ಯದಲ್ಲಿ ಮಗ್ನರಾಗುತ್ತಿದ್ದರು. ನೋಡಲು ಬರುವವರನ್ನು ಎಂದಿನಂತೆ ಅದೇ ನಗು ಮುಖದಿಂದ ಸ್ವಾಗತಿಸುತ್ತಿದ್ದರು. ಅವರು ತಂದ ಸಮಸ್ಯೆಗಳನ್ನು ಚರ್ಚಿಸುತ್ತಿದ್ದರು. ಆ ಸಮಸ್ಯೆಗಳೋ ನೂರಾರು ಬಗೆಯವು. ವಿದ್ಯಾರ್ಥಿ ನಿಲಯಗಳಿಗೆ, ಕಾಲೇಜುಗಳಿಗೆ ಸೀಟು ಬೇಕೆನ್ನುವವರಿಂದ ಹಿಡಿದು, ಕಾಲೇಜು ಮತ್ತು ಇತರ ಸಂಸ್ಥೆಗಳಲ್ಲಿ ಕೆಲಸ ಬಯಸುವವರು, ಕೆಲಸದಲ್ಲಿದ್ದು ಇತರ ಸೌಲಭ್ಯಗಳನ್ನು ಕೇಳುವವರು, ತಮ್ಮ ಹಲವಾರು ಸಂಸ್ಥೆಗಳಲ್ಲಿ ತಲೆಯೆತ್ತುವ ನೂರಾರು ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಬರುವವರು ನಿರಂತರವಾಗಿ ಅವರ ಸಂದರ್ಶನಕ್ಕಾಗಿ ಕಾಯ್ದು ನಿಂತಿರುತ್ತಿದ್ದರು. ನಗುನಗುತ್ತಲೇ ಅವರ ಎಲ್ಲ ಸಮಸ್ಯೆಗಳನ್ನೂ ಸ್ವಾಮೀಜಿ ಬಗೆಹರಿಸುತ್ತಿದ್ದ ರೀತಿ, ಅಪಾರವಾದ ಅವರ ಶಾಂತಿ, ಸಹನೆ, ತಾಳ್ಮೆ, ಜಾಣ್ಮೆಗಳು ಅಚ್ಚರಿಯನ್ನುಂಟುಮಾಡುತ್ತಿದ್ದುವು.

ಈಚೀಚೆಗೆ ಅವರು ಆಡಳಿತದ ಹೊಣೆಯನ್ನು ನಿಯೋಜಿತ ಉತ್ತರಾಧಿಕಾರಿಗಳಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರಿಗೆ ಹೆಚ್ಚುಹೆಚ್ಚಾಗಿ ವಹಿಸಿಕೊಡುತ್ತಿದ್ದರು. ತಮ್ಮ ಕರ್ತವ್ಯದ ಬೃಹತ್ ವ್ಯಾಪ್ತಿಯನ್ನು ಅವರಿಗೆ ಮನದಟ್ಟು ಮಾಡಿಕೊಡುವಂತೆ ಎಲ್ಲದಕ್ಕೂ ಅವರನ್ನೇ ಮುಂದೆ ಬಿಡುತ್ತಿದ್ದರು. ಒಂದಲ್ಲ ಎರಡಲ್ಲ ನೂರಾರು ಸಂಸ್ಥೆಗಳನ್ನು ನಡೆಸುವ ಜವಾಬ್ದಾರಿ ಜೆಎಸ್ಎಸ್ ಮಹಾವಿದ್ಯಾಪೀಠದ ಮುಂದಿತ್ತು. ಈಗ ಮೆಡಿಕಲ್ ಕಾಲೇಜು ಬಂದ ಮೇಲಂತೂ ಆ ಸಮಸ್ಯೆಗಳು ಇನ್ನಷ್ಟು ಅಧಿಕವಾಗುತ್ತಿದ್ದವು. ಅವನ್ನೆಲ್ಲಾ ತಮ್ಮ ಉತ್ತರಾಧಿಕಾರಿಗಳಿಗೆ ವಹಿಸಿ ಆಡಳಿತದಲ್ಲಿ ಅವರನ್ನು ಪಳಗಿಸುತ್ತಿದ್ದರು. ಅವರನ್ನು ಪ್ರಧಾನ ಆಡಳಿತಾಧಿಕಾರಿಗಳನ್ನಾಗಿ ಮಾಡಿ ಎಲ್ಲವನ್ನೂ ಅವರಿಗೇ ವಹಿಸುತ್ತಿದ್ದರು. ಯಾರು ಬಂದು ಏನನ್ನು ಕೇಳಿದರೂ "ಜೆ.ಜೆ. ಅವರನ್ನು ಕೇಳಿ" (ಅದು ಶ್ರೀ ದೇಶಿಕೇಂದ್ರ ಸ್ವಾಮಿಗಳನ್ನು ಜೂನಿಯರ್ ಜಗದ್ಗುರುಗಳೆಂದು ಅವರು ನಿರ್ದೇಶಿಸುತ್ತಿದ್ದ ರೀತಿ) ಎಂದು ಹೇಳಿ ಕಳಿಸಿಕೊಡುತ್ತಿದ್ದರು. ತಾವೇ ಬಗೆಹರಿಸಬೇಕಾದರೂ ಅವರ ಮೂಲಕ ಅದನ್ನು ಚರ್ಚಿಸಿ





ಇತ್ಯರ್ಥ ಪಡಿಸುತ್ತಿದ್ದರು. ತಮ್ಮ ಕೊನೆಯ ದಿನಗಳ ಮುನ್ಸೂಚನೆಯ ಅಂತರ್ದೃಷ್ಟಿ ಅವರನ್ನು ಇದಕ್ಕೆ ಪ್ರೇರೇಪಿಸಿರಬೇಕೆಂದು ತೋರುತ್ತದೆ.

ಈ ಸಂದರ್ಭದಲ್ಲಿ ನಾನೇ ಸ್ಪಷ್ಟವಾಗಿ ನೋಡಿದ ಒಂದು ಘಟನೆ ಇದು. ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳನ್ನು ಧಾರವಾಡಕ್ಕೆ ಕಳಿಸಿ ಅಲ್ಲಿನ ಶ್ರೀ ಮೃತ್ಯುಂಜಯ ಸ್ವಾಮಿಗಳು ಬೆಳೆಸಿದ ಮುರುಘಾಮಠದಲ್ಲಿ ಶ್ರೀ ಮಹಾಂತ ಅಪ್ಪಗಳ ಸನ್ನಿಧಿಯಲ್ಲಿ ಅವರನ್ನು ಬಿಟ್ಟು ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಎಂ.ಎ. ಪದವಿ ಪಡೆಯುವಂತೆ ಮಾಡಿದ್ದರು. ಅಲ್ಲಿಂದ ಅವರು ಬಂದ ಮೇಲೆ ಇಲ್ಲಿ ಪಿಎಚ್.ಡಿ. ಪದವಿಗೂ ಕೆಲಸ ಮಾಡಬೇಕೆಂಬುದು ಪೂಜ್ಯ ಜಗದ್ಗುರು ಗಳವರ ಬಯಕೆಯಾಗಿತ್ತು. ಅದರಂತೆ ಕನ್ನಡ ಅಧ್ಯಯನ ಸಂಸ್ಥೆಯ ಮೂಲಕ 'ಭೀಮಕವಿಯ ಬಸವ ಪುರಾಣ' ಎಂಬ ವಿಷಯದ ಮೇಲೆ ಕೆಲಸ ಮಾಡುವಂತೆ ರಿಜಿಸ್ಟರ್ ಕೂಡ ಮಾಡಿಸಲಾಯಿತು. ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳು ಕೂಡಾ ಬಹಳ ಉತ್ಸಾಹದಿಂದ ಕೆಲಸವನ್ನು ಪ್ರಾರಂಭಿಸಿದರು. ಅಷ್ಟರಲ್ಲಿ ಇಡೀ ಆಡಳಿತದ ಹೊಣೆಯೆಲ್ಲಾ ಅವರ ಮೇಲೆ ಬೀಳತೊಡಗಿತು. ಅವರ ಅಧ್ಯಯನಕ್ಕೆ ಮಾರ್ಗದರ್ಶಕನಾದ ನಾನು ಒಮ್ಮೆ ಜಗದ್ಗುರುಗಳಲ್ಲಿ ಈ ವಿಷಯ ಪ್ರಸ್ತಾಪಿಸಿ ಅವರಿಗೆ ಪಿಎಚ್.ಡಿ.ಗೆ ಕೆಲಸ ಮಾಡುವುದಕ್ಕೆ ಸಮಯವಿಲ್ಲದಂತಾಗಿದೆ ಎಂಬ ಅಂಶವನ್ನು ಗಮನಕ್ಕೆ ತಂದೆ. ಕ್ಷಣಕಾಲ ಆಲೋಚಿಸಿ ಜಗದ್ಗುರುಗಳು ಹೇಳಿದರು: "ಬೆಳಗ್ಗೆ ಎಲ್ಲಾ ಇಲ್ಲಿ ಕೆಲಸ ಮಾಡಲಿ; ಮಧ್ಯಾಹ್ನದ ಮೇಲೆ ಥೀಸೀಸ್ ಕೆಲಸಕ್ಕೆ ಹೋಗಲಿ. ಯೂನಿವರ್ಸಿಟಿ ಲೈಬ್ರರಿಗೆ ಹೋಗಿ ಅಧ್ಯಯನ ಮಾಡಲಿ" ಎಂದು ಹೇಳಿದರು. ಅದರಂತೆ ಕೆಲವು ದಿನ ನಡೆಯಿತೆಂದು ತೋರುತ್ತದೆ. ಮುಂದೆ ಅದೂ ನುಡಿಯಲಿಲ್ಲ. ಥೀಸಿಸ್ ಕೆಲಸ ಮುಂದುವರಿಯಲಿಲ್ಲ. ಹಲವು ತಿಂಗಳುಗಳೇ ಕಳೆದವು. ಮತ್ತೊಮ್ಮೆ ಜಗದ್ಗುರುಗಳ ಗಮನಕ್ಕೆ ತಂದೆ. ಆಗ ಅವರು ಹೇಳಿದರು: "ನಿಜ, ಆದಷ್ಟು ಜಾಗ್ರತೆ ಪಿಎಚ್.ಡಿ. ಮಾಡಿಕೊಂಡು, ಅವರು ಆನಂತರ ಇದರ ಪೂರ್ಣ ಭಾರವನ್ನು ಹೊರಲಿ ಎಂಬ ಆಸೆ ನನಗಿತ್ತು. ಆದರೆ ಈಗ ನನಗೇಕೋ ಅನ್ನಿಸುತ್ತಿದೆ; ಮೊದಲು ಈ ಜವಾಬ್ದಾರಿಯನ್ನು ನಿರ್ವಹಿಸಲಿ, ಆಮೇಲೆ ಬೇಕಾದರೆ ಪಿಎಚ್.ಡಿ. ಮಾಡಿಕೊಳ್ಳಲಿ. ನಾನಿರುವಾಗಲೇ ಇದರಲ್ಲಿ ಅವರು ಪರಿಣತರಾಗಬೇಕು" ಎಂದವರೇ ಮಾತನ್ನು ಬೇರೆಕಡೆ ತಿರುಗಿಸಿದರು. ನಾನು ಆ ಮಾತನ್ನು ಮುಂದುವರಿಸದೆ ಮೌನವನ್ನು ತಳೆದೆ. ಮುಂದೆ ಜೆ.ಜೆ. ಅವರು ಥಟ್ಟನೆ ಹೊರಬೇಕಾದ ಕಾರ್ಯನಿರ್ವಹಣೆಯ ಭಾರ ಅವರ ಮನಸ್ಸಿನ ಮುಂದೆ ಮೂಡಿನಿಂತಿತ್ತು. ಅದಕ್ಕಾಗಿ ಅವರನ್ನು ಸಜ್ಜುಗೊಳಿಸುತ್ತಿದ್ದರು.

ಒಂದೆರಡು ಬಾರಿ ಶ್ರೀಗಳವರ ಆರೋಗ್ಯ ವಿಷಮಿಸಿ ವೈದ್ಯಕೀಯ ಚಿಕಿತ್ಸೆಯಿಂದ ಸ್ವಲ್ಪಮಟ್ಟಿಗೆ ಚೇತರಿಕೆಯಾಗಿತ್ತು. ಆದರೆ ವೈದ್ಯರು ಹೇಳುವ ಸಂಪೂರ್ಣ ವಿಶ್ರಾಂತಿಯ





ಕಡೆಗೆ ಅವರು ಗಮನವನ್ನೇ ಕೊಡುತ್ತಿರಲಿಲ್ಲ. ಸ್ವಲ್ಪ ಗುಣ ವಾದೊಡನೆ ಮತ್ತೆ ಎಂದಿನಂತೆ ಕಾರ್ಯನಿರ್ವಹಣೆಯಲ್ಲಿ ತೊಡಗುತ್ತಿದ್ದರು. ನೋಡಲು ಬಂದವರನ್ನು ನಿರಾಶೆಗೊಳಿಸಲಾರದೆ ಒಂದೇ ಸಮನೆ ಕುಳಿತು ಅವರ ಸಮಸ್ಯೆಗಳನ್ನು ಕೇಳುತ್ತಿದ್ದರು. ಸಂಜೆ ಸ್ವಲ್ಪ ಹೊತ್ತಾದರೂ ಈ ಸಂದರ್ಶನ ಕಾರ್ಯಕ್ಕೆ ವಿಶ್ರಾಂತಿ ಕೊಟ್ಟು ಊರ ಹೊರಗೆ ಶುದ್ಧ ಗಾಳಿಯ ಪ್ರಶಾಂತ ಪರಿಸರದಲ್ಲಿ ವಾಯುವಿಹಾರ ಮಾಡಬೇಕೆಂಬುದು ವೈದ್ಯರ ಸಲಹೆ ಯಾಗಿತ್ತು. ಆದರೆ ಜನರು ಸಂದರ್ಶನಕ್ಕಾಗಿ ಕಾಯ್ದು ನಿಂತಿರುವಾಗ ಹೊರಗೆ ಹೋಗುವುದು ಹೇಗೆಂದು ಆಲೋಚಿಸುವಂತಹ ಸೌಜನ್ಯ ಜಗದ್ಗುರುಗಳವರದು. ಈ ಸಂದರ್ಭದಲ್ಲಿ ಕುಂದೂರು ಮತ್ತು ಹೊಸ ಮಠದ ಸ್ವಾಮಿಗಳು ಕ್ಯಾತನಹಳ್ಳಿ ಸ್ವಾಮಿಗಳವರೊಡನೆ ಆಲೋಚಿಸಿ ಒಂದು ನಿರ್ಣಯವನ್ನು ಕೈಗೊಂಡುದೂ ಉಂಟು. ಸಂಜೆ ನಿಗದಿತ ವೇಳೆಗೆ ಸರಿಯಾಗಿ ಬಂದು ಎಷ್ಟೋ ಜನ ಅವರನ್ನು ನೋಡಲು ಕಾಯ್ದು ನಿಂತಿದ್ದರೂ ಅವರ ಸಂದರ್ಶನವನ್ನು ಮುಂದೂಡಿ ಕಾರಿನಲ್ಲಿ ಜಗದ್ಗುರುಗಳನ್ನು ಊರ ಹೊರಗೆ ಎಂಜಿನಿಯರಿಂಗ್ ಕಾಲೇಜಿನ ಕಡೆಗೆ ವಿಶಾಲವಾದ ಬಯಲಿಗೆ ಸಂಚಾರಕ್ಕಾಗಿ ಕರೆದುಕೊಂಡು ಹೋಗಬೇಕೆಂಬುದೇ ಆ ನಿರ್ಣಯ. ಕೆಲಕಾಲ ಅದು ನಡೆಯಿತು. ತಪ್ಪದೆ ಸಂಜೆ ಅವರನ್ನು ಸಂಚಾರಕ್ಕಾಗಿ ಹೊರಗೆ ಕರೆದುಕೊಂಡು ಹೋಗುತ್ತಿದ್ದರು. ಆದರೂ ಒಮ್ಮೊಮ್ಮೆ ಜಗದ್ಗುರುಗಳ ಕರ್ತವ್ಯನಿಷ್ಠೆ ಅವರ ಸಂಕಲ್ಪವನ್ನು ಮೀರಿ ನಿಲ್ಲುತ್ತಿತ್ತು; ದುಡಿಮೆಯಲ್ಲಿಯೇ ಮತ್ತೆ ಮತ್ತೆ ತೊಡಗುತ್ತಿತ್ತು.

ಈಗೀಗ ಸ್ವಾಮಿಗಳಿಗೆ ತಾವು ಮಾಡಬೇಕಾದುದನ್ನು ಆದಷ್ಟು ಜಾಗ್ರತೆ ಮಾಡಿ ಮುಗಿಸಬೇಕೆಂಬ ಬಯಕೆ ಬಲವತ್ತರವಾಗಿ ಬೆಳೆಯುತ್ತಿರುವಂತೆ ತೋರುತ್ತಿತ್ತು. ವಿದ್ಯಾರ್ಥಿನಿಲಯಗಳು, ವಿದ್ಯಾಸಂಸ್ಥೆಗಳು ಊಹೆಗೂ ಮೀರಿದ ಪ್ರಮಾಣದಲ್ಲಿ ಬೆಳೆದು ನಿಂತಿದ್ದವು. ಮೆಡಿಕಲ್ ಕಾಲೇಜೂ ಬಂದ ಮೇಲೆ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಸಂಸ್ಥೆಗಳನ್ನು ಪ್ರಾರಂಭಿಸುವು ದಕ್ಕಿಂತ ಆಸ್ಪತ್ರೆಯನ್ನು ಬೃಹತ್ ಪ್ರಮಾಣದಲ್ಲಿ ಬೆಳೆಸುವುದರ ಕಡೆಗೆ ಅವರ ಗಮನ ವಿಶೇಷವಾಗಿ ಹರಿದಿತ್ತು. ಇದರ ಜೊತೆಗೆ ಇನ್ನೊಂದು ಆಲೋಚನೆ ಅವರ ಅಂತರಂಗವನ್ನು ಆವರಿಸಿ ಬೆಳೆಯುತ್ತಿತ್ತು. ಅದನ್ನು ಎಲ್ಲರ ಬಳಿಯಲ್ಲೂ ಹೇಳುವಂತಿರಲಿಲ್ಲ. ಅದನ್ನು ಗ್ರಹಿಸಬಲ್ಲ ಕೆಲವೇ ಜನರೊಡನೆ ಅದನ್ನು ಪ್ರಸ್ತಾಪಿಸುತ್ತಿದ್ದರು. ಸಾಕಷ್ಟು ವಿದ್ಯಾಸಂಸ್ಥೆಗಳನ್ನೂ, ವಿದ್ಯಾರ್ಥಿನಿಲಯಗಳನ್ನೂ ಸ್ಥಾಪಿಸಿದ ತೃಪ್ತಿ ಅವರಿಗಿತ್ತು. ಅಲ್ಲದೆ ಧರ್ಮಗುರುಗಳಾಗಿ ಧಾರ್ಮಿಕ ವಲಯದಲ್ಲಿಯೂ ಕೆಲಸ ಮಾಡಿದ್ದರು. ನಾಡಿನ ನಾನಾ ಕಡೆಗಳಲ್ಲಿ ಧಾರ್ಮಿಕ ಸಮಾರಂಭಗಳಲ್ಲಿ ಭಾಗವಹಿಸಿ ಪ್ರವಚನಗಳನ್ನು ನೀಡಿದ್ದರು. ಮೈಸೂರಿನಲ್ಲಿ ಶ್ರೀ ಶಿವರಾತ್ರೀಶ್ವರ ಜಯಂತಿಯನ್ನೂ, ಸುತ್ತೂರಿನಲ್ಲಿ ಜಾತ್ರೆಯನ್ನೂ





ವ್ಯವಸ್ಥೆಗೊಳಿಸಿ ಧರ್ಮಜಾಗೃತಿಗೆ ಕಾರಣರಾಗಿದ್ದರು. ಇದಲ್ಲದೆ ಇನ್ನೂ ಹೆಚ್ಚು ಕೆಲಸ ತಮ್ಮಿಂದ ನಡೆಯಬೇಕಾಗಿದೆ ಎಂಬ ಬಯಕೆ ಅವರಿಗಿತ್ತು. ಅದಕ್ಕಾಗಿ ಎರಡು ಯೋಜನೆಗಳನ್ನು ಅವರು ಉದ್ದೇಶಿಸಿದ್ದರು. ಒಂದು 'ಶಿವರಾತ್ರೀಶ್ವರ ಧಾರ್ಮಿಕ ದತ್ತಿ'. ಹಿಂದಾಗಲೇ ಪ್ರಸ್ತಾಪಿಸಿದಂತೆ ಅದರಲ್ಲಿ ಹತ್ತು ಲಕ್ಷ ರೂಪಾಯಿಗಳ ಪುದುವಣ್ಣಿಟ್ಟರು. ಅದರಿಂದ ಬರುವ ಬಡ್ಡಿಯಿಂದ ಧಾರ್ಮಿಕ ಕಾರ್ಯಗಳು ಸಾರೋದ್ಧಾರವಾಗಿ ನಡೆಯಬೇಕೆಂಬುದು ಅವರ ಆಶಯ. ಹಳ್ಳಿಗಳಲ್ಲಿ ಧರ್ಮ ಪ್ರಸಾರವಾಗಿ ಧಾರ್ಮಿಕ ಮೌಲ್ಯಗಳ ಅನುಷ್ಠಾನದಿಂದ ಗ್ರಾಮಾಂತರ ಜನಗಳ ಬದುಕು ಹಸನಾಗಬೇಕೆಂಬುದು ಅದರ ಒಂದು ಮುಖ್ಯ ಉದ್ದೇಶ. ಅದರ ಜೊತೆಗೆ ಧಾರ್ಮಿಕ ಗ್ರಂಥ ಪ್ರಕಟನೆ, ಸುಲಭ ಬೆಲೆಗೆ ಅವುಗಳ ಮಾರಾಟ ಮೊದಲಾದ ಅನೇಕ ಕಾರ್ಯಕ್ರಮಗಳನ್ನು ಕುರಿತು ಅವರು ಆಗಾಗ ಚರ್ಚಿಸುತ್ತಿದ್ದರು. ಅದನ್ನು ನಿರ್ವಹಿಸುವುದಕ್ಕೆ ಒಂದು ವಿಶ್ವಸ್ತ ಸಮಿತಿಯನ್ನು ರಚಿಸಿದರು. ಈಗಾಗಲೇ 'ಶಿವರಾತ್ರೀಶ್ವರ ಗ್ರಂಥಮಾಲೆ'ಯಿಂದ ಅನೇಕ ಗ್ರಂಥಗಳು ಪ್ರಕಟವಾಗಿದ್ದು ಅದಕ್ಕೆ ಇನ್ನೂ ಹೆಚ್ಚು ವ್ಯಾಪ್ತಿ ಇದರಿಂದ ಲಭಿಸಿದಂತಾಯಿತು.

ಇನ್ನೊಂದು ಇದಕ್ಕಿಂತ ವ್ಯಾಪಕವಾದ ಆಶಯವನ್ನುಳ್ಳ, ಅಖಿಲ ಕರ್ನಾಟಕ ಮಾತ್ರವಲ್ಲ ಅಖಿಲ ಭಾರತ ವ್ಯಾಪ್ತಿಯನ್ನುಳ್ಳ, ಒಂದು ಸಂಸ್ಥೆಯ ನಿರ್ಮಾಣದ ಕನಸು. ೧೨ನೇ ಶತಮಾನದಲ್ಲಿ ಬಸವಣ್ಣನವರ ನೇತೃತ್ವದಲ್ಲಿ ನಡೆದ ಮಾನವ ಧರ್ಮದ ಮಹತ್ತರವಾದ ಆಂದೋಳನದ ಬಗೆಗೆ ಅವರಿಗೆ ಅತೀವವಾದ ಆಸಕ್ತಿ ಮತ್ತು ಅಭಿಮಾನ. ಅದನ್ನು ಪ್ರತಿಬಿಂಬಿಸುವ ವಚನ ಸಾಹಿತ್ಯ ಈ ಆಧುನಿಕ ಯುಗದಲ್ಲಿ ಅಂದಿಗಿಂತ ಹೆಚ್ಚು ಪ್ರಸ್ತುತವೆಂಬ ದೃಢ ನಂಬಿಕೆ ಅವರದು. ಅಂತಹ ಶಾಶ್ವತ ಮೌಲ್ಯಗಳನ್ನು ಒಳಗೊಂಡ ಶರಣ ಸಾಹಿತ್ಯದ ಪ್ರಸಾರ ಸರ್ವತೋಮುಖವಾಗಿ ಸಾರ್ವತ್ರಿಕವಾಗಿ ನಡೆಯಬೇಕೆಂಬ ಮಹೋದ್ದೇಶ ದಿಂದ 'ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು' ಎಂಬ ಸಂಸ್ಥೆಯನ್ನು ಸ್ಥಾಪಿಸಲು ಮುಂದಾದರು. ಅನೇಕರೊಡನೆ ಅದರ ರೂಪ ಸ್ವರೂಪ, ಆಶಯ ಆಶೋತ್ತರ ಗಳನ್ನು ಚರ್ಚಿಸಿದರು. ಕೊನೆಗೆ ಅದಕ್ಕೊಂದು ಖಚಿತವಾದ ರೂಪವನ್ನು ಕೊಟ್ಟು ಅದನ್ನು ರಿಜಿಸ್ಟರ್ ಮಾಡಿಸಿದರು. ನಾಡಿನ ನಾನಾ ಭಾಗಗಳಲ್ಲಿ ಶರಣ ಸಾಹಿತ್ಯ ಸಮ್ಮೇಳನಗಳನ್ನು ನಡೆಸುವುದರ ಮೂಲಕ ಜನಸಾಮಾನ್ಯರ ದೃಷ್ಟಿಯನ್ನು ಶರಣ ಸಾಹಿತ್ಯದ ಕಡೆಗೆ ತಿರುಗಿಸುವುದು ಆ ಯೋಜನೆಯ ಒಂದು ಕಾರ್ಯಕ್ರಮ. ಇದರ ಜೊತೆಗೆ ಶರಣರನ್ನು ಕುರಿತ ವಿಚಾರ ಸಂಕಿರಣಗಳು, ಶರಣ ಸಾಹಿತ್ಯದ ಚಿಂತನ-ಮಂಥನಗಳು, ಗ್ರಂಥ ಪ್ರಕಟಣೆ, ಪರಿಷತ್ ಪತ್ರಿಕೆಯ ಪ್ರಕಟಣೆ ಮತ್ತು ಇತರ ರಚನಾತ್ಮ ಕ ಕಾರ್ಯ ಗಳೂ ಅದರಲ್ಲಿ ಸೇರಿದ್ದವು. ಮೈಸೂರಿನಲ್ಲಿ ಅದರ ಕೇಂದ್ರವಿದ್ದು ಪ್ರತಿ ಜಿಲ್ಲೆಯಲ್ಲೂ ಅದರ ಘಟಕಗಳು ಕೆಲಸ ಮಾಡುವಂತಾಗ ಬೇಕೆಂಬುದೂ ಈ





ಕೇಂದ್ರದಲ್ಲಿ ಸರ್ವಾಂಗಪರಿಪೂರ್ಣವಾದ ಒಂದು ಶರಣ ಸಾಹಿತ್ಯ ಗ್ರಂಥಾಲಯವಿದ್ದು ಅದೊಂದು ಸಂಶೋಧನಾ ಕೇಂದ್ರವಾಗ ಬೇಕೆಂಬುದೂ ಅವರ ಆಶಯವಾಗಿತ್ತು. ವಿಧ್ಯುಕ್ತವಾಗಿ ಅದರ ಸ್ಥಾಪನೆಯೂ ಆಯಿತು. ಅವರ ಪಟ್ಟಾಧಿಕಾರದ ಸುವರ್ಣ ಮಹೋತ್ಸವ ಬಹಳ ವಿಜೃಂಭಣೆಯಿಂದ ಬಹು ದೊಡ್ಡ ಪ್ರಮಾಣದಲ್ಲಿ ನಡೆಯಿತು. 'ಅರ್ಚನಾ' ಎಂಬ ಬೃಹತ್ ಅಭಿನಂದನ ಗ್ರಂಥವನ್ನೂ ಆ ಸಂದರ್ಭದಲ್ಲಿ ಅವರಿಗೆ ಸಮರ್ಪಿಸಲಾಯಿತು. ಮಹಾಕವಿ ಕುವೆಂಪು ಅವರೂ ಭಾಗವಹಿಸಿದ್ದ ಆ ಸಮಾರಂಭ ಚಿರಸ್ಮರಣೀಯವಾದುದು. ಆ ಸಮಾರಂಭದಲ್ಲಿ ಶ್ರೀ ಜಗದ್ಗುರುಗಳು ಶರಣ ಸಾಹಿತ್ಯ ಪರಿಷತ್ತನ್ನು ಉದ್ಘಾಟಿಸಿದರು. ಅದರ ಆಶ್ರಯದಲ್ಲಿ ಮೈಸೂರಿನಲ್ಲಿ  ಪ್ರಥಮ ಶರಣ ಸಾಹಿತ್ಯ ಸಮ್ಮೇಳನ ನಡೆಯಬೇಕೆಂಬುದು ಅವರ ಆಶಯವಾಗಿದ್ದು ಅದರ ಸಿದ್ಧತೆಗಳು ನಡೆಯತೊಡಗಿದುವು. ಅವರ ವಿಶ್ವಾಸದ ಅಪ್ಪಣೆಯಂತೆ ನಾನು ಪರಿಷತ್ತಿನ ತಾತ್ಕಾಲಿಕ ಅಧ್ಯಕ್ಷನಾಗ ಬೇಕಾಯಿತು. ಮತ್ತು ಹಲವಾರು ಜನ ಸಮರ್ಥನ್ನು ಒಳಗೊಂಡ ಒಂದು ಕಾರ್ಯ ಸಮಿತಿಯನ್ನು ನೇಮಿಸಿದರು. ಅದರ ನೇತೃತ್ವದಲ್ಲಿ ಪರಿಷತ್ತು ತನ್ನ ಕಾರ್ಯದಲ್ಲಿ ಪ್ರವೃತ್ತವಾಯಿತು. ಅದಕ್ಕೆ ಮೂಲಸ್ಥಾಪಕ-ಮಹಾಪೋಷಕರಾಗಿ ಮಹಾಸ್ವಾಮಿ ಗಳು ಮಾರ್ಗದರ್ಶಕರಾದರು. ಆದರೆ ಅದು ಹೆಚ್ಚು ಕಾಲ ನಡೆಯದೆ ಒಂದು ಅನಿರೀಕ್ಷಿತ ಆಘಾತಕ್ಕೆ ಎಲ್ಲರೂ ಒಳಗಾಗಬೇಕಾಯಿತು.

ಈಚೀಚೆಗೆ ಜಗದ್ಗುರುಗಳವರ ಆರೋಗ್ಯ ಅಷ್ಟು ಸಮರ್ಪಕವಾಗಿರಲಿಲ್ಲ. ಅನೇಕ ತಜ್ಞವೈದ್ಯರು ಅವರನ್ನು ಎಚ್ಚರಿಕೆಯಿಂದ ನೋಡಿಕೊಳ್ಳುತ್ತಿದ್ದರು. ಆದರೆ ಅವರ ಮಾತನ್ನು ಮೀರಿ ತಮ್ಮ ದೈನಂದಿನ ಸ್ನಾನ ಪೂಜೆಗಳಿಲ್ಲದೆ ಏನನ್ನೂ ಶ್ರೀಗಳವರು ಸ್ವೀಕರಿಸುತ್ತಿರಲಿಲ್ಲ; ಅಲ್ಲದೆ ಯಾರಿಂದಲೂ ಸೇವೆಯನ್ನು ಮಾಡಿಸಿಕೊಳ್ಳದೆ ತಮ್ಮ ಕಾರ್ಯವನ್ನು ತಾವೇ ಮಾಡಿಕೊಳ್ಳಬೇಕೆಂದು ಹಟ ಹಿಡಿಯುತ್ತಿದ್ದರು. ಆದರೂ ಕ್ಯಾತನಹಳ್ಳಿ ಸ್ವಾಮಿಗಳು ನಿರಂತರ ಜಾಗೃತಿ ಯಿಂದ ಬಹಳ ಗಮನವಿತ್ತು ಅವರ ಆರೋಗ್ಯದ ಬಗೆಗೆ  ಕಾಳಜಿ ವಹಿಸುತ್ತಿದ್ದರು. ಆತ್ಮೀಯತೆಯ ವಾತ್ಸಲ್ಯದಿಂದ ತುಸು ಸ್ವಾತಂತ್ರ್ಯವನ್ನು ವಹಿಸಿ ಅವರ ಮೇಲೆ ಒತ್ತಡವನ್ನು ತಂದು ಅವರನ್ನು ವಿಶ್ರಾಂತಿಯ ಚಿಕಿತ್ಸೆಗೂ ಒಪ್ಪಿಸುತ್ತಿದ್ದರು. ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳಾದಿಯಾಗಿ ಎಲ್ಲರೂ ಅವರ ಉಪಚಾರಕ್ಕಾಗಿ ಕಾಯ್ದಿರುತ್ತಿದ್ದರು. ಆದರೆ ಅವರು ಇದಾವುದನ್ನೂ ಲೆಕ್ಕಿಸದೆ ಎಂದಿನಂತೆ ತಮ್ಮ ಕಾರ್ಯದಲ್ಲಿ ತೊಡಗಿರುತ್ತಿದ್ದರು. ಅವರ ಪಾಲಿನ ಮಾನಸಿಕ ಸ್ಥೈರ್ಯ ಪೂಜಾನಿಷ್ಠೆ ಆತ್ಮವಿಶ್ವಾಸಗಳೇ ಅವರ ಪಾಲಿನ ಸಂಜೀವಿನಿ ಯಾಗಿದ್ದುವು. ವಿದೇಶ ಪ್ರವಾಸದಿಂದ ಹಿಂದಿರುಗಿದಾಗಿ ನಿಂದಲೂ ಸ್ವಲ್ಪ ಹೆಚ್ಚು ಕಡಿಮೆ ಇದೇ ಸ್ಥಿತಿ ಮುಂದುವರಿದಿತ್ತು.





ಶರಣ ಸಾಹಿತ್ಯ ಸಮ್ಮೇಳನದ ಪೂರ್ವಭಾವಿ ಸಿದ್ಧತೆಯಲ್ಲಿ ತೊಡಗಿದ್ದ ನಾವು ಕೆಲವರು ಅಂದು ಸಂಜೆ ಪೂಜ್ಯ ಸ್ವಾಮೀಜಿಯವರನ್ನು ನೋಡಲು ಹೋದೆವು. ಆದರೆ ಸ್ವಾಮೀಜಿ ಅಂದು ಬೆಳಗಿನಿಂದಲೇ ಅಸ್ವಸ್ಥರಾಗಿ ಮಲಗಿರುವ ವಿಷಯ ತಿಳಿಯಿತು. ಮೌನವಾಗಿ ಒಳಗೆ ನಡೆದೆವು. ನಿತ್ಯ ಕುಳಿತುಕೊಳ್ಳುವ ಸ್ಥಳದಲ್ಲಿ ಅವರಲಿಲ್ಲ. ಪಕ್ಕದ ಕೋಣೆಯಲ್ಲಿ ಮಂಚದ ಮೇಲೆ ಮಲಗಿದ್ದರು. ಮುಖದಲ್ಲಿ ತುಂಬಾ ಆಯಾಸ ಕಾಣುತ್ತಿತ್ತು. ನಮ್ಮನ್ನು ಕಂಡು ಎದ್ದು ಕುಳಿತುಕೊಳ್ಳಲು ಪ್ರಯತ್ನಿಸಿದರು. ಅದನ್ನು ತಡೆದು ಹಾಗೇ ಅವರಿಗೆ ವಂದಿಸಿದೆವು. ಸಮ್ಮೇಳನದ ಬಗೆಗೆ ಇದುವರೆಗೆ ಆಗಿರುವ ಪ್ರಗತಿಯನ್ನು ಮಿತ್ರರೊಬ್ಬರು ಸಂಕ್ಷೇಪವಾಗಿ ಅವರಿಗೆ ಹೇಳಿದರು. ಈಗ ಸ್ವಾಗತ ಸಮಿತಿಯ ಸದಸ್ಯರನ್ನು ಮಾಡಿಸುವುದಕ್ಕಾಗಿ ಸಂತೇಪೇಟೆಯ ಪ್ರಮುಖರ ಬಳಿಗೆ ಹೋಗುತ್ತಿರುವುದಾಗಿಯೂ ತಿಳಿಸಿದರು. ಅದಕ್ಕೆ ಅವರಿಂದ ಒಪ್ಪಿಗೆಯ ಸೂಚನೆ ದೊರೆಯಿತು. ಇನ್ನು ಹೆಚ್ಚು ಕಾಲ ಅಲ್ಲಿರುವುದು ಬೇಡವೆಂದು ಮತ್ತೊಮ್ಮೆ ವಂದಿಸಿ ಹಾಗೇ ಹಿಂದಕ್ಕೆ ಸರಿದು ಹೊರಗೆ ಬಂದೆವು. ಆ ವೇಳೆಗೆ ವೈದ್ಯರು ಒಳಗೆ ಹೋಗುತ್ತಿರುವುದು ಕಾಣಿಸಿತು. ಶೀಘ್ರವಾಗಿ ಮತ್ತೆ ಚೇತರಿಸಿಕೊಳ್ಳುತ್ತಾರೆಂಬ ಧೈರ್ಯದಿಂದ ನಮ್ಮ ಕೆಲಸವನ್ನು ಮುಂದುವರಿಸುವುದಕ್ಕಾಗಿ ಸಂತೆಪೇಟೆಯ ಕಡೆಗೆ ನಡೆದೆವು. ಸಾಕಷ್ಟು ಜನ ಸದಸ್ಯರನ್ನು ಮಾಡಿಸಿದ ತೃಪ್ತಿಯಿಂದ ರಾತ್ರಿ ಮನೆಯನ್ನು ತಲುಪಿದೆವು.

ಆದರೆ ೬-೧೨-೧೯೮೬ರ ಮುಂಜಾನೆ ನಮ್ಮ ತೃಪ್ತಿಯೆಲ್ಲಾ ಸಿಡಿದೊಡೆಯು ವಂತಹ ಸಿಡಿಲಿನ ವಾರ್ತೆ ನಮ್ಮನ್ನು ಅಪ್ಪಳಿಸಿತು. 'ಜಗದ್ಗುರುಗಳು ಲಿಂಗೈಕ್ಯರಾದರು' ಎಂಬ ದುಃಖಜ್ವಾಲೆ ಕ್ಷಣಕ್ಷಣಕ್ಕೂ ವ್ಯಾಪಿಸುತ್ತಾ ಎಲ್ಲರನ್ನೂ ತಲ್ಲಣಗೊಳಿಸಿತು. ದುಃಖದ ಭಾವದಿಂದ ಕುಗ್ಗಿದ ಜನ ಮಠದ ಕಡೆಗೆ ನಡೆಯತೊಡಗಿತು. ಆಗಲೇ ಸಾವಿರಾರು ಜನ ಸಾಲುಗಟ್ಟಿ ತಮ್ಮ ಅಂತಿಮ ಪ್ರಣಾಮವನ್ನು ಸಲ್ಲಿಸುತ್ತಿದ್ದರು. ಕೆಲವರು ದುಃಖವನ್ನು ತಡೆಯಲಾರದೆ ಬಿಕ್ಕಳಿಸುತ್ತಿದ್ದರೆ ಇನ್ನು ಕೆಲವರು ಅದನ್ನೂ ಮಾಡಲಾಗದೆ ಅಲ್ಲಲ್ಲೇ ಕುಸಿದು ಕುಳಿತಿದ್ದರು. ಕ್ಷಣಕ್ಷಣಕ್ಕೂ ಜನಪ್ರವಾಹ ಹೆಚ್ಚುತ್ತಿತ್ತು. ಹೂವಿನ ಹಾರಗಳಿಂದ ದೇಹ ಮುಚ್ಚಿಹೋಗುತ್ತಿತ್ತು. ಭಕ್ತರ ಕಂಬನಿಗಳಿಂದ ಮೌನ ಅಭಿಷೇಕ ನಡೆಯುತ್ತಿತ್ತು.

ಇದಾವುದರ ಪರಿವೆಯಿಲ್ಲದೆ ಅತೀತ ನಿಲುವಿನಲ್ಲಿರುವ ಯೌಗಿಕ ಕಾಂತಿಯ ಪ್ರಶಾಂತ ಮುಖಮುದ್ರೆಯಿಂದ ಧ್ಯಾನಲೀನರಾದವರಂತೆ ಕಾಣುತ್ತಿದ್ದರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು. ಬಾಲ್ಯದಿಂದಲೂ ಅವರ ಒಡನಾಡಿ ಗಳಾಗಿ ನೆರಳಿನಂತೆ ಅವರನ್ನು ಅನುಸರಿಸುತ್ತ ಅವರ ಎಲ್ಲ ಕಾರ್ಯಗಳಲ್ಲಿಯೂ ಸಹಭಾಗಿಯಾಗಿದ್ದ ಕ್ಯಾತನಹಳ್ಳಿ ಮಠದ ಸ್ವಾಮಿಗಳು ದುಃಖವನ್ನು ಭರಿಸಲಾಗದೆ ಕಂಗೆಟ್ಟು ಕುಳಿತಿದ್ದರು. ಕುಂದೂರು ಮಠದ ಶ್ರೀಗಳು,





ಹೊಸಮಠದ ಶ್ರೀಗಳು, ಪಡಗೂರು ಶ್ರೀಗಳು ಮತ್ತು ಇತರ ಸ್ವಾಮಿಗಳು ಉಕ್ಕಿ ಬರುತ್ತಿದ್ದ ತಮ್ಮ ದುಃಖವನ್ನು ಹೇಗೋ ಅಡಗಿಸಿಕೊಂಡು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿ ಗಳನ್ನು ಸಂತೈಸುತ್ತಿದ್ದರು. ಕಣ್ಣೀರುಗರೆಯುತ್ತಲೇ ಮುಂದಿನ ಕಾರ್ಯಗಳ ಸಿದ್ಧತೆಯಲ್ಲಿ ತೊಡಗಿದ್ದರು. ಯಾವುದೂ ನಿಲ್ಲುವಂತಿರಲಿಲ್ಲ. ಲಾರಿಯ ಮೇಲೆ ವಿಶೇಷವಾಗಿ ನಿರ್ಮಿಸಿದ ಎತ್ತರದ ವಿಶಾಲ ವೇದಿಕೆಯ ಮೇಲಿಟ್ಟ ಅಡ್ಡಪಲ್ಲಕ್ಕಿ ಯಲ್ಲಿ ಪರಿಮಳ ಭರಿತ ಪುಷ್ಪಗಳಿಂದ ತುಂಬಿ ಹೋಗಿದ್ದ ಪೂಜ್ಯ ಸ್ವಾಮಿಗಳ ಪಾರ್ಥಿವ ಶರೀರದ ಮೆರವಣಿಗೆ ಮಧ್ಯಾಹ್ನದ ವೇಳೆಗೆ ಪ್ರಾರಂಭವಾಯಿತು. ದುಃಖತಪ್ತರಾದ ಅಸಂಖ್ಯಾತ ಭಕ್ತ ಸಮುದಾಯದ ನಡುವೆ ಮೈಸೂರು ನಗರದ ಪ್ರಮುಖ ಬೀದಿಗಳಲ್ಲಿ ನಡೆದ ಆ ಮೆರವಣಿಗೆಯಲ್ಲಿ ಮೈಸೂರಿನ ನಾಗರಿಕರು ಭಾಗಿಗಳಾಗಿ ತಮ್ಮ ಶ್ರದ್ಧಾಂಜಲಿಯನ್ನರ್ಪಿಸಿದರು.

ಮೈಸೂರಿನ ಕಿಕ್ಕಿರಿದ ಬೀದಿಗಳನ್ನು ದಾಟಿ ಮೆರವಣಿಗೆ ಊರ ಹೊರಗೆ ಬಂದಾಗ ಆಗಲೇ ರಾತ್ರಿಯಾಗಿತ್ತು. ಅಲ್ಲಿಂದ ಸುತ್ತೂರಿಗೆ ಕೊಂಡೊಯ್ಯ ಲಾಯಿತು. ಮರುದಿನ ಮುಂಜಾನೆಯ ಹೊತ್ತಿಗೆ ಸುತ್ತೂರು, ಜನಸಾಗರದ ದುಃಖದ ಅಲೆಗಳಿಂದ ಮುಚ್ಚಿಹೋಗಿತ್ತು. ಸುದ್ದಿ ಮಾಧ್ಯಮಗಳು ಬಿತ್ತರಿಸಿದ ವಾರ್ತೆ ನಾಡಿನ ನಾನಾ ಭಾಗಗಳಿಂದ ಜನಪ್ರವಾಹವನ್ನು ಸುತ್ತೂರಿನ ಕಡೆಗೆ ಹರಿಸುತ್ತಿತ್ತು. ಮೈಸೂರು ಜಿಲ್ಲೆಯ ನೂರಾರು ಮಠದ ಸ್ವಾಮಿಗಳಲ್ಲದೆ ಕರ್ನಾಟಕದ ಪ್ರಮುಖ ಮಠದ ಮಹಾಸ್ವಾಮಿಗಳೂ, ಜಗದ್ಗುರುಗಳೂ ಆಗಮಿಸಿದ್ದರು. ಸುತ್ತೂರು ಶ್ರೀಮಠದಿಂದ ಮುಂಜಾನೆ ಹೊರಟ ಮೆರವಣಿಗೆ ಕಾಡುಮಠವನ್ನು ಸೇರುವ ವೇಳೆಗೆ ಮಧ್ಯಾಹ್ನವೇ ಆಯಿತು. ಹಿರಿಯ ಮಂತ್ರಮಹರ್ಷಿ ಶ್ರೀ ಶ್ರೀ ಶ್ರೀ ಶಿವರಾತ್ರೀಶ್ವರ ಸ್ವಾಮಿಗಳ ಗದ್ದುಗೆಯ ಪಕ್ಕದಲ್ಲಿಯೇ ಮಂತ್ರಮಹರ್ಷಿಗಳಿಂದ ಇವರ ಸಮಾಧಿ ಮೊದಲೇ ಸಿದ್ಧವಾಗಿತ್ತು. ನೂರಾರು ಸ್ವಾಮಿಗಳ, ಜಗದ್ಗುರುಗಳ, ಹರಗುರು ಚರಮೂರ್ತಿಗಳ ಸಮ್ಮುಖ ದಲ್ಲಿ ವಿಧ್ಯುಕ್ತವಾಗಿ ಸಮಾಧಿಕ್ರಿಯೆ ಮುಕ್ತಾಯಗೊಂಡು ಮಹಾಜಗದ್ಗುರು ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳವರ ಭೌತದೇಹ ಕಣ್ಮರೆಯಾಗಿ ಪ್ರಕೃತಿಗರ್ಭದಲ್ಲಿ ಐಕ್ಯವಾದಾಗ ಆಗಲೇ ಸಂಜೆ ಸಮೀಪಿಸುತ್ತಿತ್ತು. ಅಪಾರವಾದ ಜನಸಂದಣಿಯಿಂದಾಗಿ ಭಕ್ತರೆಲ್ಲರಿಗೂ ಸಮಾಧಿಸಂಕಲ್ಪದ ಆ ಕೊನೆಯ ದೃಶ್ಯ ಲಭ್ಯವಾಗದಿದ್ದರೂ ನೆರೆದವರೆಲ್ಲರ ಮನಸ್ಸಿನಲ್ಲಿಯೂ ಆ ಘಟನೆ ಚಿರಸ್ಮರಣೀಯವಾಗಿ ಉಳಿದಂತಾಯಿತು.

ಬಯಲೇ ಮೂರ್ತಿಗೊಂಡು ಆಲಯವಾದಂತೆ, ಬಯಲಿನಿಂದ ಭವ್ಯವಾದ ಶೈಕ್ಷಣಿಕ ಜಗತ್ತನ್ನು ನಿರ್ಮಿಸಿದ ಆಧ್ಯಾತ್ಮಿಕ ಮಹಾಶಿಲ್ಪಿ ಥಟ್ಟನೆ ಮರೆಯಾದಂತಾಯಿತು. ಅದು ತನ್ನನ್ನು ತಾನೇ ತೇಯ್ದುಕೊಂಡು ಸುಗಂಧದ ಕಂಪನ್ನೂ, ತಂಪನ್ನೂ ಹರಡಿದ ಮಹಾಶಕ್ತಿ.





ಅದು ತನ್ನನ್ನು ಸುಟ್ಟುಕೊಂಡು ಬೆಳಕನ್ನು ಬೀರಿದ ಜ್ಞಾನಶಕ್ತಿ. ಅದು ತನ್ನನ್ನು ಅಳಿದುಕೊಂಡು ಸುತ್ತಲೂ ಸಿಹಿಯನ್ನು ಹರಿಸಿದ ಮಂಗಳಶಕ್ತಿ. ಸಮಷ್ಟಿಹಿತಕ್ಕಾಗಿ, ಸಾಮಾಜಿಕ ಒಳಿತಿಗಾಗಿ ಲೌಕಿಕವನ್ನು ಕಟ್ಟಿಕೊಂಡು ಅದರಲ್ಲೇ ಮುಳುಗಿದಂತೆ ತೋರುತ್ತಿದ್ದರೂ ಅಂತರಂಗದಲ್ಲಿ ಅದರಾಚೆಗೆ ನಿಂತು ಗುಪ್ತಸಾಧಕರಾಗಿ ಬೆಳೆದ ಅವರ ಕಾಯಕಯೋಗದ ರಹಸ್ಯವನ್ನು ಹತ್ತಿರದಿಂದ ಬಲ್ಲವರಷ್ಟೇ ಅರಿಯಬಲ್ಲರು. ಹೊರಜಗತ್ತಿನ ಗದ್ದಲದ ಮಧ್ಯದಲ್ಲಿದ್ದರೂ ಅದನ್ನು ಒಳಗೆ ಬಿಟ್ಟುಕೊಳ್ಳದ ಪ್ರಶಾಂತ ಪೂಜಾಮಂದಿರವನ್ನು ಅಂತರಂಗದಲ್ಲಿ ನಿರ್ಮಿಸಿಕೊಂಡ ವಿಶಿಷ್ಟ ರೀತಿಯ ನಿಲುವು ಅವರದು. ಅದರ ಬಲದಿಂದಲೇ ಅವರು ತಮ್ಮ ಸ್ಥೂಲ ತನುವಿನ ಮೇಲೆ ಸೂಕ್ಷ್ಮತನು ಕಾರಣತನುಗಳ ಸಂಕಲ್ಪ ಸಂಭೂತಿಯನ್ನು ಸ್ಥಾಪಿಸಿಕೊಳ್ಳಬಲ್ಲವರಾಗಿದ್ದರು. ಇದೇ ಶರಣರ ಸಾಧನೆಯಲ್ಲಿ ಸರ್ವಾಂಗ ಲಿಂಗದ ಪರಿವರ್ತನೆಯ ಪರಿಕಲ್ಪನೆ. ಈ ಸ್ಥೂಲದೇಹ ಬಿದ್ದುಹೋಗಲೇ ಬೇಕು, ಆದರೆ ಅದರ ಒಳಗಿರುವ ನಿರ್ಭಾವದ ನಿಜನಿಲುವನ್ನು ಪಡೆಯುವ ಲಿಂಗದೇಹ ಅದೃಶ್ಯವಾದಂತೆ ತೋರಿದರೂ ಅದು ಅಳಿಯುವುದಿಲ್ಲ. ಈ ದೇಹದ ಪರಿಮಿತಿಯನ್ನು ಕಳೆದುಕೊಂಡು ಸರ್ವಚೈತನ್ಯಾತ್ಮಕವಾಗಿ ಬೆಳೆಯುತ್ತದೆ. ಇದೇ ಅನುಭಾವದ ಪರಿಭಾಷೆಯಲ್ಲಿ 'ಲಿಂಗೈಕ್ಯ' ಎನಿಸಿಕೊಳ್ಳುತ್ತದೆ. ಎಲ್ಲರಂತೆ ಅವರು ಈ ಸ್ಥೂಲದೇಹವನ್ನು ಬಿಟ್ಟರೂ ಅವರ ಸತ್ಸಂಕಲ್ಪದ ಲಿಂಗದೇಹ ಅಳಿಯುವುದಿಲ್ಲ. ಶರಣರಿಗೆ ಬಹಳ ಪ್ರಿಯವಾದ ಪರಿಭಾಷೆಯಲ್ಲಿ ಹೇಳುವುದಾದರೆ ಅದು ಮರೆಯಾದರೂ 'ಉರಿಯುಂಡ ಕರ್ಪೂರದಂತೆ' ಸರ್ವವ್ಯಾಪಿಯಾಗುತ್ತದೆ. ಜಗದ್ಗುರು ಪೂಜ್ಯ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಆ ನಿಲವನ್ನು ಸಾಧಿಸಿದವರು. ಉರಿಯುಂಡ ಕರ್ಪೂರದಂತೆ ತಮ್ಮ ಇರವಿನ ಪರಿಮಳವನ್ನು ಸುತ್ತಲೂ ಉಳಿಸಿ ಹೋದವರು. ಅವರನ್ನು ತುಂಬ ಹತ್ತಿರದಿಂದ ಕಂಡವರಿಗೆ ಮಾತ್ರ ಅವರ ಈ ಮೂರ್ತಿಸ್ವರೂಪದ ಮಹತ್ವ ಮನವರಿಕೆ ಯಾಗಬಲ್ಲದು. ಅದರ ಒಂದು ಕಿರುನೋಟವನ್ನು 'ಕರಿಯು ಕನ್ನಡಿಯಲ್ಲಡಗಿದಂತೆ' ಅವರ ಸಾಧನೆಯ ಕೆಲವು ಸೂಕ್ಷ್ಮ ಎಳೆಗಳಿಂದ ಈಗ ಕಂಡುಕೊಳ್ಳ ಬಹುದು.

**ಕೃಪೆ : ಕಾಯಕ ತಪಸ್ವಿ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳು**

□





# ನೀನೊಲಿಯದವರಿಲ್ಲ....

**ವೀರಭದ್ರ**

ಬೆಲ್ಲದ ಅಚ್ಚನ್ನು ಮುತ್ತಿ ಮುತ್ತಿಕ್ಕಿದ ಇರುವೆಗಳಲ್ಲಿ ಯಾವ ಒಂದು ಇರುವೆಯನ್ನಾದರೂ –"ಬೆಲ್ಲ ಹೇಗಿತ್ತು?"– ಎಂದು ಕೇಳಿದರೆ, ಏನು ಹೇಳುತ್ತದೆ ?–

"ಸಿಹಿ, ಸಿಹಿಯೋ ಸಿಹಿ."

ಎಲ್ಲರೂ ಹೇಳುವ ಮಾತುಗಳ ಒಟ್ಟಾರೆ ಭಾವ–

"ಶ್ರೀಗಳವರ ನೋಟ ಸಿಹಿ, ಶ್ರೀಗಳವರ ನಗು ಸಿಹಿ, ಶ್ರೀಗಳವರ ನುಡಿ ಸಿಹಿ, ನಡೆ ಸಿಹಿ, ಹೃದಯ ಅಮೃತಭಾಂಡ.

ಅವರ ಕೋಪ – ತುಸು, ನಸು, ಹುಸಿಕೋಪ !

ಅವರ ನಿಜವಾದ ಕೋಪ–

–ಸುಖೋಷ್ಣ ಸೋಂಕಿಸಿ, ಅತ್ಯಂತ ಸಿಹಿ ಸ್ರವಿಸುವ ಆಲೆಮನೆಯ ಬೆಲ್ಲದಂತೆ ಸಿಹಿಯೋ ಸಿಹಿ ! ಸಿಹಿಯೋ ಸಿಹಿ !

ಬಲ್ಲವನೇ ಬಲ್ಲ ಬೆಲ್ಲದ ಸವಿಯ !

ಬಿಸಿ ಬೆಲ್ಲದ ಸವಿ ಸಿಹಿಯೋ ಸಿಹಿ !

ಜಗದ್ಗುರು ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಕರುಣಾಕ್ಷೀರ ಸಾಗರದಲ್ಲಿ ಈಜಾಡಿದವರು, ಮಾತೃವಾತ್ಸಲ್ಯವಾರಿಧಿಯಲ್ಲಿ ತೇಲಾಡಿದವರು, ಪಿತೃರಕ್ಷಣಾ ನಾವೆಯಲ್ಲಿ ಪಯಣಿಸಿದವರು ಹೇಳುತ್ತಾರೆ –

ಪ್ರೊ|| ತ.ಸು. ಶಾಮರಾಯರು –

ಬಹಳ ಹಿಂದಿನ ಸಂಗತಿ. ಅಂದು ಗುರುವಾರ. ತರಗತಿಯಿಂದ ಹೊರಗೆ ಕಾಲಿಟ್ಟಿದ್ದೆ. ಆ ವೇಳೆಗೆ ಸರಿಯಾಗಿ ಬಂದ ವಿಶ್ವವಿದ್ಯಾನಿಲಯದ ಕಾರಕೂನನೊಬ್ಬ ನನ್ನನ್ನು ಸಂಧಿಸಿ –

"ಪ್ರೊಫೆಸರ್ ಸಾಹೇಬರೇ, ನಿಮ್ಮೊಡನೆ ಅತ್ಯಂತ ಗುಟ್ಟಾದ ಒಂದು ಸಂಗತಿಯನ್ನು ತಿಳಿಸಬೇಕಾಗಿದೆ. ಬನ್ನಿ, ಆ ಆಲದಮರದ ಬಳಿಗೆ ಹೋಗೋಣ" –ಎಂದು ಹೇಳಿ ನನ್ನನ್ನು





ಪ್ರಾಚ್ಯವಸ್ತು ಸಂಶೋಧನಾಲಯದ ಮುಂದಿದ್ದ ಒಂದು ಮರದ ನೆರಳಿಗೆ ಕರೆದುಕೊಂಡು ಹೋದ. ಅಲ್ಲಿ ಇಬ್ಬರೂ ಕುಳಿತೆವು. ಅನಂತರ ಆತ ನನ್ನನ್ನು ಕುರಿತು–

"ನಿಮಗೆ ಒಂದು ಕೆಟ್ಟ ವಿಷಯವನ್ನು ತಿಳಿಸಬೇಕಾಗಿದೆ. ದಯವಿಟ್ಟು ಕ್ಷಮಿಸಿ. ಅಂದರೆ ನಿಮ್ಮ ಕೆಲಸವಿನ್ನೂ ಖಾಯಂ ಆಗಿಲ್ಲ. ನೀವು ಬರೀ ಬಿ.ಎ. ಆನರ್ಸ್ ಪಾಸು ಮಾಡಿರುವವರು. ವಿಶ್ವವಿದ್ಯಾನಿಲಯದಲ್ಲಿ ಎಂ.ಎ. ಆಗಿರಬೇಕೆಂಬ ನಿಯಮವಿದೆ. ಈ ವಿಷಯವನ್ನೇ ಮುಂದೆಮಾಡಿಕೊಂಡು ಎಂ.ಎ., ಆದವರೊಬ್ಬರು ಕುಲಪತಿಗಳಿಗೆ ಅರ್ಜಿ ಸಲ್ಲಿಸಿದ್ದಾರೆ. ಅದಕ್ಕೆ ಕುಲಪತಿಗಳು ಆ ಅರ್ಜಿಯ ಮೇಲೆ ಎಂ.ಎ., ಆದವರನ್ನು ನೇಮಿಸಿಕೊಂಡು ನಿಮ್ಮನ್ನು ಮನೆಗೆ ಕಳಿಸಬಹುದೆಂದು ಬರೆದಿಟ್ಟಿದ್ದಾರೆ. ನಾಳೆ ಬೆಳಿಗ್ಗೆ ವಿಶ್ವವಿದ್ಯಾನಿಲಯದಿಂದ ನಿಮ್ಮ ಕಾಲೇಜಿಗೆ ಪತ್ರ ಬರಬಹುದು. ನೀವು ಮನೆಗೆ ಹೋಗಬೇಕಾಗುತ್ತದೆ." – ಎಂದು ತಿಳಿಸಿದ.

ಇದನ್ನು ಕೇಳಿ ನನಗೆ ಸಿಡಿಲು ಬಡಿದಂತಾಯಿತು. ನಾನು ದಿಗ್ಭ್ರಾಂತನಾಗಿ ದೇವರ ಸ್ಮರಣೆ ಮಾಡುತ್ತ ಕಾಲೇಜಿಗೆ ಹಿಂತಿರುಗಿದೆ.

ಬಸವಣ್ಣ ಎನ್ನುವವರು ನಮ್ಮ ಕಾಲೇಜಿನ ಮುಖ್ಯ ಗುಮಾಸ್ತರು. ಅವರಿಗೆ ನನ್ನಲ್ಲಿ ಅತೀವವಾದ ಅಭಿಮಾನ. ಅವರ ಬಳಿಗೆ ಹೋಗಿ ಮನೆಗೆ ಹೊರಡಲು ಸಿದ್ಧರಾಗುತ್ತಿದ್ದ ಅವರೊಡನೆ ನನಗೆ ಪ್ರಾಪ್ತವಾಗಿದ್ದ ಭಯಂಕರ ಸ್ಥಿತಿಯನ್ನು ನಿವೇದಿಸಿದೆ. ಅವರು ಅತ್ಯಂತ ವಿಷಾದದಿಂದ "ಇನ್ನೇನು ಗತಿ?"–ಎಂದು ಹಲುಬಿದರು. ಬೇಲಿ ಎದ್ದು ಹೊಲ ಮೇಯುವಾಗ ಅದನ್ನು ತಪ್ಪಿಸುವುದು ಹೇಗೆ ! ಸ್ವಲ್ಪ ಹೊತ್ತು ಅವರು ಕಿಂಕರ್ತವ್ಯತಾಮೂಢರಾಗಿ ಕುಳಿತರು. ಆಮೇಲೆ ನನ್ನೊಡನೆ–

"ರಾಯರೇ, ಈ ಅಪಾಯದಿಂದ ಪಾರಾಗಲು ನನಗೊಂದು ಉಪಾಯ ತಲೆಗೆ ಹೊಳೆಯುತ್ತಿದೆ. ಸುತ್ತೂರು ಮಠದ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳ ಮೇಲೆ ಈ ಕುಲಪತಿಗಳಿಗೆ ಅತ್ಯಂತ ಭಕ್ತಿ ಮತ್ತು ವಿಶ್ವಾಸ. ನೀವು ಅವರನ್ನು ಕಂಡು ನಿಮ್ಮ ತೊಂದರೆಯನ್ನು ಹೇಳಿಕೊಂಡರೆ, ದಯಾಮಯರಾದ ಅವರು ನಿಮ್ಮ ರಕ್ಷಣೆಗೆ ಒದಗಬಹುದು" – ಎಂದರು.

ನನ್ನ ಮನಸ್ಸು ಇದಕ್ಕೆ ಒಪ್ಪಲಿಲ್ಲ. ನನಗೆ ಶ್ರೀಗಳವರ ಪರಿಚಯವಿರಲಿಲ್ಲ. ನನ್ನ ಯೋಗ್ಯತೆಯೊಂದನ್ನಲ್ಲದೆ ಮತ್ತೊಂದನ್ನು ಆಶ್ರಯಿಸಿ ಉಳಿದುಕೊಳ್ಳುವ ಆಸೆಯೂ ಇರಲಿಲ್ಲ (ಪ್ರೊ || ತ. ಸು. ಶಾಮರಾಯರ ಅಣ್ಣಂದಿರು ಪ್ರೊ || ಟಿ. ಎಸ್. ವೆಂಕಣ್ಣಯ್ಯನವರು. ಮಹಾಕವಿ ಕುವೆಂಪು ಅವರ ಗುರುಗಳು. ಆದರೂ–)

"ನಾನು ಯಾರನ್ನೂ ನೋಡುವುದಿಲ್ಲ. ಭಗವಂತ ಮಾಡಿದಂತಾಗಲಿ" –ಎಂದೆ. ಆದರೆ





ಅವರು ಇನ್ನಿಲ್ಲದ ಹಾಗೆ ತಿಳಿಹೇಳಿ, ಆ ದಿನ ಆ ಬಸವಣ್ಣನವರೇ ಶ್ರೀ ಸ್ವಾಮಿಗಳವರ ಬಳಿಗೆ ಕರೆದೊಯ್ದರು.

ಸಂಜೆ ಆರು ಘಂಟೆಯ ವೇಳೆಗೆ ಬಸವಣ್ಣನವರೊಡನೆ ನಾನು ಸುತ್ತೂರು ಸ್ವಾಮಿಗಳ ಬಳಿಗೆ ಹೋದೆ. ಸದಾ ಜನರ ಗುಂಪೇ ನೆರೆದಿರುವ ಆ ಸ್ವಾಮಿಗಳ ಮಠದಲ್ಲಿ ನನ್ನ ಪುಣ್ಯದಿಂದಲೋ ಏನೋ, ಅಂದು ಯಾರೂ ಇರಲಿಲ್ಲ. ಸ್ವಾಮಿಗಳೊಬ್ಬರೇ ಯಾವುದೋ ಗ್ರಂಥ'ದಲ್ಲಿ ಮಗ್ನರಾಗಿ ಕುಳಿತಿದ್ದರು. ಬಾಗಿಲಲ್ಲಿ ಕುಳಿತಿದ್ದ ಸೇವಕನಿಗೆ– 'ಬಸವಣ್ಣನವರೊಡನೆ ನಾನು ಬಂದಿರುವುದಾಗಿ' ಹೇಳಿಕಳಿಸಿದೆ. ಒಡನೆಯೇ ಒಳಹೋಗಲು ಅಪ್ಪಣೆ ದೊರೆಯಿತು. ಇಬ್ಬರೂ ಸ್ವಾಮಿಗಳಿಗೆ ದೀರ್ಘದಂಡ ನಮಸ್ಕಾರ ಮಾಡಿ ಎದುರಿಗೆ ಕುಳಿತೆವು. ಸದಾ ಹಸನ್ಮುಖಿಗಳಾದ ಆ ಸ್ವಾಮಿಗಳು ಬಸವಣ್ಣನವರನ್ನು ಕುರಿತು, "ಏನು ವಿಚಾರ ?" –ಎಂದು ಕೇಳಿದರು.

ಬಸವಣ್ಣನವರು ಅತ್ಯಂತ ನಮ್ರರಾಗಿ–

"ಇವರು ತ.ಸು. ಶಾಮರಾಯರು. ನಮ್ಮ ಕಾಲೇಜಿನ ಕನ್ನಡ ಅಧ್ಯಾಪಕರು, ನಿಮ್ಮನ್ನು ಕಾಣಲು ಬಂದಿದ್ದಾರೆ" – ಎಂದು ನನ್ನ ಪರಿಚಯಮಾಡಿಕೊಟ್ಟರು.

ನನ್ನ ಹೆಸರು ಹೇಳುತ್ತಲೇ ಸ್ವಾಮಿಗಳವರು–

"ಓಹೋ, ಇವರೇನಾ ಶಾಮರಾಯರು ? ಇವರ ಹೆಸರನ್ನು ಕೇಳಿದ್ದೇವೆ. ಅತ್ಯಂತ ಕುಶಲರಾದ ಉಪಾಧ್ಯಾಯರೆಂದು ವಿದ್ಯಾರ್ಥಿಗಳು ಹೇಳುತ್ತಿರುತ್ತಾರೆ. ನಮಗೆ ಇವರನ್ನು ಕಾಣಬೇಕೆಂಬ ಅಪೇಕ್ಷೆಯಿತ್ತು. ಪರಶಿವನು ತಾನಾಗಿಯೇ ಇವರನ್ನು ನಮ್ಮ ಬಳಿಗೆ ಕರೆದು ತಂದಿದ್ದಾನೆ. ತುಂಬಾ ಸಂತೋಷ. ನೀವು ಎಲ್ಲಿ ವಾಸವಾಗಿದ್ದೀರಿ?" ಎಂದು ಕೇಳಿದರು. ನಾನು "ಕೃಷ್ಣಮೂರ್ತಿಪುರಂ"ನಲ್ಲಿ ಎಂದು ಮಾತ್ರ ಉತ್ತರಿಸಿದೆ. ಆಗ ಬಸವಣ್ಣನವರು ಮಾತನ್ನು ಮುಂದುವರಿಸಿ –

"ಬುದ್ದೀ ಈಗ ಇವರು ಒಂದು ಅಪಾಯಕ್ಕೆ ಸಿಕ್ಕಿದ್ದಾರೆ. ಇವರನ್ನು ಕೆಲಸದಿಂದ ಕಿತ್ತುಹಾಕಬೇಕೆಂದು ಕುಲಪತಿಗಳು ಆಜ್ಞೆಮಾಡಿದ್ದಾರೆ. ನಾಳೆ ಬೆಳಿಗ್ಗೆ ಇವರು ಮನೆಗೆ ಹೋಗಬೇಕಾಗುತ್ತದೆ" –ಎಂದರು. ಇದನ್ನು ಕೇಳುತ್ತಲೇ ಸ್ವಾಮಿಗಳು ತಮಗೆ ಏನೋ ನಷ್ಟವಾದಂತೆ ನಿಟ್ಟುಸಿರುಬಿಟ್ಟು–

"ಹ್ಞಾ ! ಹಾಗೆ ಯಾಕಂತೆ ?!"–ಎಂದು ಪ್ರಶ್ನಿಸಿದರು. ಆಗ ನಾನು–

"ನಾನಿನ್ನೂ ಎಂ.ಎ. ಪಾಸುಮಾಡಿಲ್ಲ. ಆದರೆ ನನಗೆ ಬಿ.ಎ. ಆನರ್ಸ್‌ನಲ್ಲಿ ಉಪಕುಲಪತಿಗಳ ಬಂಗಾರದ ಪದಕ ಬಹುಮಾನವಾಗಿ ಬಂದಿದೆ. ಇಡೀ ವಿಶ್ವವಿದ್ಯಾನಿಲಯದ





ಎಲ್ಲಾ ಆನರ್ಸ್ ವಿದ್ಯಾರ್ಥಿಗಳಲ್ಲಿ ಪ್ರಪ್ರಥಮನಾದವನಿಗೆ ಆ ಬಂಗಾರದ ಪದಕ ಬರುತ್ತದೆ. ನಾನು ಅದನ್ನು ಪಡೆದಿದ್ದೇನೆ. ಅದಕ್ಕಾಗಿಯೇ ನಾನು ಕೇಳದೆಯೇ ನನಗೆ ಈ ಉದ್ಯೋಗ ದೊರೆತಿದೆ"–ಎಂದೆ. ಒಡನೆಯೇ ಶ್ರೀಗಳು–

"ಸರಿ, ಹಾಗಾದರೆ ನಿಮ್ಮನ್ನು ಕಿತ್ತುಹಾಕುವುದು ಸರಿಯಲ್ಲ. ಈದಿನ ರಾತ್ರಿ ಹತ್ತು ಘಂಟೆಗೆ ಉಪಕುಲಪತಿಗಳ ಬಂಗಲೆ ಬಳಿ ಬನ್ನಿ. ನಾವೇ ಖುದ್ದಾಗಿ ಅವರನ್ನು ಭೇಟಿಮಾಡಿ ಮಾತನಾಡುತ್ತೇವೆ. ನೀವೇನೂ ಹೆದರಬೇಡಿ. ನಾವು ಎಲ್ಲವನ್ನೂ ನೋಡಿಕೊಳ್ಳುತ್ತೇವೆ"–ಎಂದರು.

ಅವರ ಮಾತನ್ನು ಕೇಳಿ ನನ್ನ ಕಣ್ಣಲ್ಲಿ ನೀರು ಉಕ್ಕಿತು.

ಅವರಿಗೆ ಮತ್ತೊಮ್ಮೆ ದೀರ್ಘದಂಡ ನಮಸ್ಕಾರ ಮಾಡಿ ಮನೆಗೆ ಹಿಂತಿರುಗಿದೆ.

ಸ್ವಾಮೀಜಿಯವರ ಅಪ್ಪಣೆಯಂತೆ ನಾನು ಬಸವಣ್ಣನವರೊಡನೆ ಅಂದು ರಾತ್ರಿ ಹತ್ತು ಘಂಟೆಯ ವೇಳೆಗೆ ಕುಲಪತಿಗಳ ಮನೆಯ ಬಳಿಗೆ ಹೋದೆ. ಆ ವೇಳೆಗೆ ಸರಿಯಾಗಿ ಸ್ವಾಮಿಯವರು ತಮ್ಮ ಕಾರಿನಲ್ಲಿ ಅಲ್ಲಿಗೆ ಬಂದರು. ನೌಕರನೊಬ್ಬ ಸ್ವಾಮೀಜಿಯವರನ್ನು ಕಾಣುತ್ತಲೇ ಅತ್ಯಂತ ಭಕ್ತಿಗೌರವಗಳಿಂದ ನಮಸ್ಕರಿಸಿ ಅವರು ಬಂದಿರುವ ವಿಚಾರವನ್ನು ಕುಲಪತಿಯವರಿಗೆ ತಿಳಿಸಿದ. ಸ್ವಾಮೀಜಿಯವರ ಆಗಮನದ ಸುದ್ದಿ ಕೇಳುತ್ತಲೇ ಹೊರಬಂದ ಕುಲಪತಿಗಳು ಅವರಿಗೆ ನಮಸ್ಕರಿಸುತ್ತ ಸ್ವಾಗತಿಸಿ, ಒಳಗೆ ಕರೆದೊಯ್ದು ಕೂರಿಸುತ್ತ–

"ಸ್ವಾಮೀಜಿ ತಾವು ಈ ಸಮಯದಲ್ಲಿ ಇಲ್ಲಿಗೆ ದಯಮಾಡಿಸಿರುವುದನ್ನು ನೋಡಿದರೆ ಯಾವುದೋ ಮಹತ್ಕಾರ್ಯವೇ ನಿಮ್ಮನ್ನು ಇಲ್ಲಿಗೆ ಕರೆತಂದಿರುವುದೆಂದು ನನಗನಿಸುತ್ತದೆ. ಏನು ವಿಚಾರವೆಂದು ಅಪ್ಪಣೆ ಕೊಡಬೇಕು" – ಎಂದು ಕೇಳಿದರು.

ಸ್ವಾಮೀಜಿ ಮುಗುಳು ನಗುತ್ತ–

"ಹೌದು, ಬಹು ಮುಖ್ಯವಾದ ಒಂದು ವಿಷಯವನ್ನು ಮಾತನಾಡಿ ವಿಶ್ವವಿದ್ಯಾಲಯಕ್ಕೆ ಆಗಬಹುದಾದ ಒಂದು ನಷ್ಟವನ್ನು ತಪ್ಪಿಸಬೇಕೆಂದು ಬಂದಿದ್ದೇವೆ"–ಎಂದರು.

ಅದೇನೆಂದು ಕುಲಪತಿಗಳು ಆಶ್ಚರ್ಯದಿಂದ ಕೇಳಿದಾಗ, ಸ್ವಾಮೀಜಿಯವರು–

"ನಷ್ಟವಿನ್ನೂ ಆಗಿಲ್ಲ. ಆದರೆ ಹಾಗೆ ಆಗಬಹುದಾದುದನ್ನು ತಪ್ಪಿಸಲೆಂದೇ ಬಂದಿದ್ದೇವೆ"– ಎಂದು ಅವರು ಮುಂದುವರಿದು–

"ತ.ಸು. ಶ್ಯಾಮರಾಯರೆಂಬುವವರು ಅತ್ಯಂತ ದೊಡ್ಡ ವಿದ್ವಾಂಸರು. ಪ್ರತಿಭಾಶಾಲಿಗಳು. ಎಲ್ಲಕ್ಕೂ ಹೆಚ್ಚಾಗಿ ವಿದ್ಯಾರ್ಥಿಗಳ ಪ್ರೇಮಾದರಕ್ಕೆ ಪಾತ್ರರಾದವರು. ಅವರನ್ನು ಕೆಲಸದಿಂದ ವಜಾಮಾಡಿ ಬೇರೊಬ್ಬರನ್ನು ಆ ಸ್ಥಾನದಲ್ಲಿ ನೇಮಿಸುವಿರೆಂದು





ಕೇಳಿದೆ. ಇದು ಬಹಳ ಅನ್ಯಾಯವೆಂದು ಅನಿಸುತ್ತದೆ. ಆದ್ದರಿಂದ ನಿಮ್ಮೊಡನೆ ಅದನ್ನು ತಿಳಿಸಲೆಂದೇ ಬಂದೆವು" – ಎಂದರು. ಆಗ ಕುಲಪತಿಗಳು –

'ಸ್ವಾಮೀಜಿ, ಆತ ಬರೀ ಬಿ.ಎ. ಆನರ್ಸ್, ಎಂ.ಎ., ಅಲ್ಲ. ಪ್ರಥಮ ದರ್ಜೆಯಲ್ಲಿ ಎಂ.ಎ., ಪಾಸುಮಾಡಿದ ವ್ಯಕ್ತಿಯೊಬ್ಬರು ಆ ಸ್ಥಾನಕ್ಕೆ ಅರ್ಜಿ ಹಾಕಿಕೊಂಡಿದ್ದಾರೆ. ನಾನು ಅವರಿಗೆ ಆ ಸ್ಥಾನವನ್ನು ಕೊಡಲು ನಿಶ್ಚಯಿಸಿದ್ದೇನೆ. ಇದರಲ್ಲಿ ಅನ್ಯಾಯವೇನು ಬಂತು?" – ಎಂದು ಕೇಳಿದರು. ಆಗ ಸ್ವಾಮೀಜಿಯವರು–

"ಎಂ.ಎ., ಮಾಡಿಲ್ಲದಿದ್ದರೂ ಎಂ.ಎ., ತರಗತಿಗೆ ಪಾಠ ಹೇಳುತ್ತಿದ್ದಾನೆ. ಆತನ ಕೆಲಸ ಮೆಚ್ಚತಕ್ಕದೆಂದು ಕನ್ನಡ ಪ್ರಾಧ್ಯಾಪಕರು ಹೇಳುವುದನ್ನು ಕೇಳಿದ್ದೇವೆ. ಪ್ರತಿಭಾಶಾಲಿ, ಪಂಡಿತ, ವಿದ್ವಾಂಸ, ಗೌರವಾನ್ವಿತ, ಶಿಷ್ಯರ ಗೌರವಕ್ಕೆ ಪಾತ್ರ" ಎಂದರು. ಆಗ ಕುಲಪತಿಗಳು –

"ಇದೇಕೆ ಆತನನ್ನು ಇಷ್ಟು ವಹಿಸಿಕೊಂಡು ಮಾತಾಡುತ್ತಿರುವಿರಿ ?" –ಎಂದಾಗ, ಸ್ವಾಮೀಜಿಯವರು–

"ಹಾಗೇನಿಲ್ಲ. ಇಂತಹ ಅಧ್ಯಾಪಕನನ್ನು ಕಳೆದುಕೊಂಡರೆ ವಿಶ್ವವಿದ್ಯಾನಿಲಯಕ್ಕೇ ನಷ್ಟವೆಂದು ನಮ್ಮ ಭಾವನೆ. ಇದರ ಮೇಲೆ ನಿಮ್ಮ ಇಷ್ಟ"–ಎಂದರು.

ಒಡನೆಯೇ ಕುಲಪತಿಗಳು–

"ಸ್ವಾಮೀಜಿ, ನನ್ನನ್ನು ಕ್ಷಮಿಸಿ, ನಿಮ್ಮ ಅಪ್ಪಣೆಯನ್ನು ಅಗತ್ಯವಾಗಿ ಪಾಲಿಸುತ್ತೇನೆ. ಶ್ಯಾಮರಾಯರನ್ನು ಕೆಲಸದಿಂದ ತೆಗೆದುಹಾಕುವುದಿಲ್ಲ"–ಎಂದರು. ಅದಕ್ಕೆ ಸ್ವಾಮೀಜಿಯವರು ಮೃದುವಾಗಿ–

"ಅದು ನ್ಯಾಯವಾಗುತ್ತದೆ. ಧರ್ಮಸಮ್ಮತ. ಹಾಗೆ ಮಾಡಿದರೆ ದೇವರು ಮೆಚ್ಚುತ್ತಾನೆ" –ಎಂದು ಹೇಳಿ ಅಲ್ಲಿಂದ ಬೀಳ್ಕೊಂಡರು.

ಒಳಗೆ ನಡೆದ ಸಂಭಾಷಣೆಯನ್ನು ನಾವು ಕೇಳಿದೆವಾದರೂ ಸ್ವಾಮೀಜಿಯವರು ನನ್ನನ್ನು ಕುರಿತು–

"ಎಲ್ಲವೂ ಸರಿಹೋಗಿದೆ. ನಾಳೆ ನಿಮಗೆ ಕರೆ ಬರಬಹುದು – ವಿಶ್ವವಿದ್ಯಾನಿಲಯದಿಂದ. ಧೈರ್ಯವಾಗಿ ನೀವು ಇರುವ ವಿಚಾರವನ್ನು ತಿಳಿಸಿರಿ"–ಎಂದು ಹೇಳಿ ತಮ್ಮ ಆಶ್ರಮಕ್ಕೆ ಹಿಂದಿರುಗಿದರು.

ನಾನು, ಬಸವಣ್ಣನವರು ಸಮಾಧಾನಚಿತ್ತದಿಂದ ನಮ್ಮ ನಮ್ಮ ಮನೆಗಳಿಗೆ ಹಿಂದಿರುಗಿದೆವು.





ಸ್ವಾಮೀಜಿ ತಿಳಿಸಿದಂತೆ ಮರುದಿನ ಹನ್ನೊಂದು ಘಂಟೆಗೆ ವಿಶ್ವವಿದ್ಯಾನಿಲಯದಿಂದ ಕುಲಪತಿಗಳಿಂದ ಕರೆಬಂತು. ಅವರು ಕೇಳಿದರು–

"ನೀನೇಕೆ ಇನ್ನೂ ಎಂ.ಎ., ಮಾಡಿಲ್ಲ ? ನೀನು ಹೀಗೇ ಇದ್ದರೆ ಒಂದಲ್ಲ ಒಂದು ದಿನ ಮನೆಗೆ ಹೋಗಬೇಕಾಗುತ್ತದೆ"–ಎಂದು ಅಬ್ಬರಿಸಿದರು !

ನಾನು ನಮ್ರನಾಗಿ ಆದಷ್ಟೂ ಬೇಗ ಎಂ.ಎ., ಡಿಗ್ರಿ ತೆಗೆದುಕೊಳ್ಳುತ್ತೇನೆ–ಎಂದು ಅವರಿಗೆ ಭರವಸೆ ಹೇಳಿ ಹಿಂತಿರುಗಿದೆ.

ಹೀಗೆ ನನ್ನ ಉದ್ಯೋಗಕ್ಕೆ ಬಂದಿದ್ದ ಒಂದು ಅಪಮೃತ್ಯು ಶ್ರೀ ಸ್ವಾಮೀಜಿಯವರ ಕೃಪೆಯಿಂದ ತಪ್ಪಿದಂತಾಯಿತು. ಆದರೆ, ಸಾಕ್ಷಾತ್ ಶಿವನಂತೆಯೇ ಬಂದು ಆ ಅಪಮೃತ್ಯುವನ್ನು ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳವರು ದೂರ ತಳ್ಳದೇ ಹೋಗಿದ್ದರೆ ಆ ಅಪಮೃತ್ಯು ನನ್ನ ಕೆಲಸವನ್ನು ಕಸಿದುಕೊಂಡುಹೋಗದೇ ಬಿಡುತ್ತಿರಲಿಲ್ಲ !....

ಶ್ರೀ ಶ್ರೀಗಳವರನ್ನು ಆಮೇಲೆ ವೈಯಕ್ತಿಕ ಕಾರಣಗಳಿಗಾಗಿ ನಾನೆಂದೂ ಭೇಟಿ ಮಾಡಲಿಲ್ಲ. ಒಮ್ಮೆ ಮಾತ್ರ ಅವರನ್ನು ಕೃಪಾಯಾಚನೆ ಮಾಡಬೇಕಾದ ಒಂದು ಸಂದರ್ಭ ವೊದಗಿತು. ಬಡ ಹುಡುಗನೊಬ್ಬನು ನನ್ನ ಶಿಷ್ಯನಾಗಿದ್ದ. ಒಮ್ಮೆ ತರಗತಿಯಲ್ಲಿ ಬಾಡಿದ ಮುಖದಿಂದ ಕುಳಿತಿದ್ದ ಆತನನ್ನು ಕಂಡು ನನ್ನ ಮನಸ್ಸು ಚುರುಗುಟ್ಟಿತು. ಪಾಠವಾಗುತ್ತಲೆ ಆತನನ್ನು ಕರೆದು, "ನಿನ್ನ ಊಟವಾಯಿತೆ ?"–ಎಂದು ಪ್ರಶ್ನಿಸಿದೆ. ಕಡುಬಡವನಾದರೂ ತುಂಬ ಆತ್ಮಗೌರವವುಳ್ಳ ಹುಡುಗ ಆತ. "ಆಗಿದೆ" ಎಂದ. ನಾನು ನಂಬಲಿಲ್ಲ. ಮಾತನಾಡುತ್ತಾ ಆಡುತ್ತಾ ಆತನನ್ನು ನನ್ನ ಮನೆಯ ಬಳಿಗೆ ಕರೆದೊಯ್ದೆ. ಗೃಹಿಣಿಯನ್ನು ಕರೆದು ಅವನಿಗೆ ಊಟಕ್ಕೆ ಬಡಿಸುವಂತೆ ತಿಳಿಸಿದೆ. ಬೇಗ ಮಣಿಯದ ಆತನನ್ನು ಗದರಿಸಿ ಬೈದು ಊಟಕ್ಕೆ ಕೂರಿಸಿದೆ. ಊಟವಾದ ಮೇಲೆ ಆತನ ಇತಿಹಾಸವನ್ನೆಲ್ಲ ತಿಳಿದುಕೊಂಡೆ. ಪ್ರೈಮರಿ ಶಾಲೆಯ ಉಪಾಧ್ಯಾಯರೊಬ್ಬರ ಮಗನಾಗಿದ್ದ ಆತ ಓದಿನ ಆಶೆಯಿಂದ ಬರಿಗೈಯಲ್ಲಿ ಮೈಸೂರನ್ನು ಸೇರಿದ್ದ. ವಸತಿಗಾಗಲೀ, ಊಟಕ್ಕಾಗಲೀ ಯಾವ ಅನುಕೂಲವೂ ಇರಲಿಲ್ಲ. ಒಂದೆರಡು ದಿನ ಆತನನ್ನು ನನ್ನ ಬಳಿಯಲ್ಲಿಯೇ ಇರಿಸಿಕೊಂಡಿದ್ದೆ. ಆದರೆ ಆತನ ಸಂಕೋಚಪ್ರವೃತ್ತಿಯನ್ನು ಕಂಡು ನನ್ನ ತಲೆ ಬಿಸಿಯಾಯಿತು. ಒಂದು ದಿನ ಆ ಹುಡುಗನನ್ನು ಕರೆದುಕೊಂಡು ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳ ಬಳಿಗೆ ಹೋದೆ. ಅವರಿಗೆ ಹುಡುಗನ ಪರಿಚಯವನ್ನು ಮಾಡಿಸಿ ಅಶನ-ವಸತಿಗಳನ್ನು ನೀಡುವಂತೆ ಪ್ರಾರ್ಥಿಸಿದೆ. ಅವರೊಮ್ಮೆ ನಕ್ಕರು–"ಇವನು ಲಿಂಗಾಯಿತ ಹುಡುಗ. ನೀವು ಬ್ರಾಹ್ಮಣರು. ಇವನಲ್ಲಿ ನಿಮಗೇಕೆ ಇಷ್ಟು ಆಸಕ್ತಿ ?"– ಎಂದರು. ನಾನು ಸ್ವಲ್ಪ ಕಟುವಾಗಿಯೇ ಹೇಳಿದೆ–"ನನ್ನ ವಿದ್ಯಾರ್ಥಿಗಳು ನನ್ನ ಮಕ್ಕಳು. ಅವರೆಲ್ಲ ಜಾತ್ಯತೀತರು. ನಾನು ಅವರ ಗುರು"–ಎಂದೆ.





ಸ್ವಾಮೀಜಿಯವರ ನಗುಮುಖ ಮತ್ತಷ್ಟು ಅರಳಿತು–

"ನಾನು ಅದನ್ನು ಬಲ್ಲೆ. ಕೇವಲ ಹಾಸ್ಯಕ್ಕಾಗಿ ಹಾಗೆ ಹೇಳಿದೆ"–ಎಂದು ಹೇಳಿ ಆಗಿಂದಾಗಲೇ ಆ ಹುಡುಗನನ್ನು ಮಠದ ವಿದ್ಯಾರ್ಥಿಮಂದಿರಕ್ಕೆ ಸೇರಿಸಿಕೊಂಡರು ! ಆತನೇ ಇಂದು ಸುಪ್ರಸಿದ್ಧ ಕನ್ನಡ ಕವಿಯೆಂದು ಪ್ರಖ್ಯಾತನಾಗಿರುವ ಡಾ. ಜಿ. ಎಸ್. ಶಿವರುದ್ರಪ್ಪ.

ಶ್ರೀಗಳವರು ಒಬ್ಬ ಸಾಮಾನ್ಯ ವಿದ್ವಾಂಸನಾದ ನನಗೆ ತೋರುತ್ತಿದ್ದ ಪ್ರೀತ್ಯಾದರಗಳನ್ನು ನೆನೆದರೆ ಅವರ ವಿದ್ವತ್‌ಪ್ರೇಮ ಅಸೀಮವಾದುದು ಎಂದೆನಿಸುತ್ತದೆ. ಒಮ್ಮೊಮ್ಮೆ ಸಂಧಿಸಿದಾಗಲೂ ಅವರ ನನ್ನ ಭಕ್ತಿಬಾಂಧವ್ಯ ಹೆಚ್ಚು ಹೆಚ್ಚು ನಿಕಟವಾಗುತ್ತಾಹೋಯಿತು.

* * *

ನಿವೃತ್ತ ಸೆಷನ್ಸ್ ಜಡ್ಜ್ ಶ್ರೀ ಕೋ. ಚೆನ್ನಬಸಪ್ಪನವರು ಬಹಳ ಹಿಂದಿನದನ್ನು ನೆನೆಸಿ ಕೊಳ್ಳುತ್ತಾರೆ–

–ನಮ್ಮೂರಿನ ಒಬ್ಬ ಮುಸ್ಲಿಂ ವಿದ್ಯಾರ್ಥಿಗೆ ಕಾಲೇಜ್ ವಿದ್ಯಾಭ್ಯಾಸ ಮಾಡಬೇಕೆಂಬ ಹಂಬಲ. ಆದರೆ, ಬಳ್ಳಾರಿಯಂಥಾ ನಗರದಲ್ಲಿದ್ದು ಕಾಲೇಜು ಓದುವಷ್ಟು ತ್ರಾಣ ಅವನಿಗಿರ ಲಿಲ್ಲ. ಆ ಕೋಮಿನವರನ್ನು ಸೇರಿಸಿಕೊಳ್ಳುವ ಉಚಿತ ಪ್ರಸಾದನಿಲಯ ಬಳ್ಳಾರಿಯಲ್ಲಿರಲಿಲ್ಲ.

"ಹ್ಯಾಗೆ ಮಾಡ್ಲಿ ಸಾರ್ ?"–ಎಂದು ದೈನ್ಯದಿಂದ ಕೇಳಿದ.

"ಮೈಸೂರಿಗೆ ಹೋಗ್ತೀಯಾ ?"–ಎಂದು ಕೇಳಿದೆ.

"ಅಲ್ಲಿ ನನಗೆ ಊಟ-ವಸತಿ ಯಾರು ಕೊಡ್ತಾರೆ ಸಾರ್ ?"

"ಹೋಗೋದಾದ್ರೆ ಹೇಳು, ಸುತ್ತೂರು ಜಗದ್ಗುರುಗಳಿಗೆ ಒಂದು ಕಾಗದ ಕೊಡ್ತೀನಿ. ತಗೊಂಡು ಹೋಗಿ ಕೊಡು."

"ಅವರು ನಮ್ಮ ಜಾತಿಯವರಿಗೆ ಸೇರಿಸಿಕೊಳ್ತಾರೆಯೇ ಸಾರ್ ?!"

"ನಿನಗೆ ಯಾಕೆ ? ಬೇಕಾದ್ರೆ ಹೇಳು. ಒಂದು ಕಾಗದ ಕೊಡ್ತೀನಿ. ಅದನ್ನು ಕೊಟ್ಟು ಬುದ್ಧಿಗಳವರಿಗೆ ನಮಸ್ಕಾರ ಮಾಡಿ, ಕೈಕಟ್ಟಿಕೊಂಡು ನಿಂತುಕೋ, ಅಷ್ಟೇ ಸಾಕು."

ಅವನು ಒಪ್ಪಿಕೊಂಡ. ಕಾಗದ ಕೊಟ್ಟೆ. ಮೈಸೂರಿಗೆ ಹೋಗಿ ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮೀಜಿಗಳಿಗೆ ಅದನ್ನು ಮುಟ್ಟಿಸಿ ನಾನು ಹೇಳಿದಂತೆ ಮಾಡಿದ. ಅವನಿಗೆ ಉಚಿತ ಊಟ-ವಸತಿಯ ಏರ್ಪಾಟನ್ನು ಶ್ರೀಗಳವರು ತಮ್ಮ ಪ್ರಸಾದನಿಲಯದಲ್ಲಿ ಮಾಡಿಕೊಟ್ಟರು. ಅವನು ಬಿ.ಎ., ತನಕ ಅಲ್ಲಿದ್ದು ಡಿಗ್ರಿ ಪಡೆದುಕೊಂಡ. ಕನ್ನಡದಲ್ಲಿ ಒಳ್ಳೆಯ ಬರಹಗಾರನಾದ. ಯಾವಾಗಲೂ ಸ್ವಾಮೀಜಿಯವರನ್ನು ನೆನಸಿಕೊಳ್ಳುತ್ತಲೇ ಇದ್ದ ....

* * *





ನಿವೃತ್ತ ಪ್ರಾಂಶುಪಾಲ ಡಾ. ಎಂ. ನಂಜುಂಡಪ್ಪ ಪ್ರಾಧ್ಯಾಪಕರಾಗಿದ್ದಾಗ ನಡೆದುದನ್ನು ಹೇಳುತ್ತಾರೆ –

"ನಾನು ಪೋಸ್ಟ್ ಡಾಕ್ಟರಲ್ ಅಧ್ಯಯನಕ್ಕೋಸ್ಕರ ೫-೫-೧೯೮೦ರಿಂದ ಒಂದು ತಿಂಗಳ ಕಾಲ ಹೈದರಾಬಾದಿನ A.S.R.C.ಗೆ ಹೋಗಿದ್ದೆ. ನನ್ನ ಕೆಲಸ ಮುಗಿದ ಮೇಲೆ ಮೈಸೂರಿಗೆ ರೈಲಿನಲ್ಲಿ ಹಿಂತಿರುಗುವಾಗ, ಸಿಕಂದರಾಬಾದ್ ನಿಲ್ದಾಣದಲ್ಲಿ ನಾನು ಕುಳಿತಿದ್ದ ಡಬ್ಬಿಗೆ ಒಬ್ಬರು ಒಳಬಂದರಲ್ಲದೆ, ನನ್ನ ಪಕ್ಕದಲ್ಲಿಯೇ ಕುಳಿತುಕೊಂಡರು. ಅದೂ ಇದೂ ಮಾತಿಗೆ ಪ್ರಾರಂಭವಾಯಿತು. ನಾನು ನನ್ನ ಬಗ್ಗೆ ಹೇಳಿದಾಗ – 'ಸ್ವಾಮೀ, ನಾನೂ ಕೂಡ ನಿಮ್ಮ ಸ್ವಾಮೀಜಿಯವರ ಕೃಪಾಕಟಾಕ್ಷದಲ್ಲಿ ಮೈಸೂರಿನಲ್ಲಿ ಓದಿ ಪದವಿ ಪಡೆದು ಇಂದು ಹೈದರಾಬಾದಿನಲ್ಲಿ ಕ್ಲಾಸ್ ಒನ್ ಆಫೀಸರ್ ಹುದ್ದೆಯಲ್ಲಿದ್ದೇನೆ. ಅಂದು ಸ್ವಾಮೀಜಿಯವರು ನನಗೆ ಸಹಾಯ ಮಾಡದೇ ಇದ್ದಿದ್ದರೆ ನಾನು ಇಂತಹ ಸೌಲಭ್ಯವನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಶ್ರೀಗಳವರು ನನಗೆ ವಿಶೇಷ ರೀತಿಯಲ್ಲಿ ಅಶನ ಸೌಲಭ್ಯ ಒದಗಿಸಿದ್ದರು. ನಾನು ಬ್ರಾಹ್ಮಣ. ನಮ್ಮ ತಾಯಿಯವರಿಗೆ ನಾನೊಬ್ಬನೇ ಮಗ. ಚಿಕ್ಕ ವಯಸ್ಸಿನಲ್ಲಿ ತಂದೆ ಯನ್ನು ಕಳೆದುಕೊಂಡೆ. ಹೇಗೋ ಕಷ್ಟದಿಂದ ವಿದ್ಯಾಭ್ಯಾಸ ಮುಂದುವರಿಸಿದೆ. ಮೈಸೂರಿನಲ್ಲಿ ಕಾಲೇಜಿನಲ್ಲಿ ಓದುತ್ತಿದ್ದೆ. ವಾರಾನ್ನದಲ್ಲಿ ಕಾಲ ನೂಕುತ್ತಿದ್ದೆ. ಒಂದೊಂದು ದಿನ ಉಪವಾಸವೂ ಇರಬೇಕಿತ್ತು. ಇಂತಹ ಪರಿಸ್ಥಿತಿಯಲ್ಲಿ ಸ್ವಾಮೀಜಿಯವರ ಪ್ರಖ್ಯಾತಿ ಕೇಳಿದ್ದೆ. ನನ್ನ ಕಷ್ಟವನ್ನು ಅವರಲ್ಲಿ ಹೇಳಿಕೊಳ್ಳಬಾರದೇಕೆ ? ಪುಣ್ಯಕ್ಕೆ ಅವರು ಅನುಕೂಲಮಾಡಿಕೊಟ್ಟರೆ, ಓದಿನ ಕಡೆಗೆ ಹೆಚ್ಚಿನ ಗಮನ ಕೊಡಬಹುದೆಂದು ತೀರ್ಮಾನಿಸಿ, ಒಂದು ದಿನ ಅವರನ್ನು ಕಂಡು ನನ್ನ ತೊಂದರೆಗಳನ್ನು ನಿವೇದಿಸಿಕೊಂಡೆ –

"ನಾನು ತಮ್ಮ ಪ್ರಸಾದನಿಲಯದಲ್ಲಿ ಇರಲು ಸಾಧ್ಯವಿಲ್ಲ ! ನಮ್ಮ ತಾಯಿಯವರು ಇದಕ್ಕೆ ಒಪ್ಪುವುದಿಲ್ಲ ! ಒಂದು ರೀತಿಯ ಸಂಪ್ರದಾಯದಲ್ಲಿ ಬೆಳೆದವರು. ಅವರ ಮನಸ್ಸನ್ನು ನಾನು ನೋಯಿಸಲಾರೆ. ನೀವು ನನಗೆ ಪಡಿಯನ್ನು ಕೊಟ್ಟರೆ ಸಾಕು"–ಎಂದು ಬಿನ್ನವಿಸಿಕೊಂಡೆ.

ನನಗೆ ಪಡಿಯನ್ನು ಮಾಡಿಸಿಕೊಟ್ಟರು.... ನನ್ನ ಕಷ್ಟ ನೀಗಿದರು.

ದಯೆಯಿಟ್ಟು ಶ್ರೀಗಳಲ್ಲಿ ಕೃಷ್ಣಮೂರ್ತಿ ಸಿಕ್ಕಿದ್ದರು ಎಂದು ಹೇಳಿ, ನನ್ನ ಸಾಷ್ಟಾಂಗ ನಮಸ್ಕಾರಗಳನ್ನು ಅವರ ಶ್ರೀಪಾದಂಗಳಿಗೆ ಅರ್ಪಿಸಿರೆಂದು ಹೇಳುವಷ್ಟರಲ್ಲಿಯೇ ಅವರು ಇಳಿಯುವ ಸ್ಟೇಷನ್ ಬಂದಿತು. ತಟ್ಟನೆ ಇಳಿದು ಹೋದರು...

* * *

ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಒಲಿಯದವರಿಲ್ಲ. ಅವರ





ಒಲುಮೆಯಲಿ ನಲಿಯದವರಿಲ್ಲ. ಆದರೆ ಶ್ರೀಗಳವರು ಒಲುಮೆ ವರ್ಷಿಸುವ ಮುನ್ನ ಒಂದು ಪದ್ಧತಿಯನ್ನು—ಒಂದು ಸಣ್ಣ ಪರೀಕ್ಷಾ ಪದ್ಧತಿಯನ್ನು ಅನುಸರಿಸುತ್ತಿದ್ದರು. ಅದನ್ನು ಅರಿಯದವರು—

'ಸುತ್ತೂರು ಸ್ವಾಮಿಗಳು ಎಂಬ ಹೆಸರಿಗೆ ತಕ್ಕಂತೆ ಸುಮ್ಮನೆ ಸುತ್ತಿಸುತ್ತಾರೆ! — ಎನ್ನುತ್ತಿದ್ದರು.

ಅಶನಾರ್ಥಿ ವಿದ್ಯಾರ್ಥಿಗಳು ಬಂದು ಕಂಡಾಗಲೆಲ್ಲಾ 'ನಾಳೆ ಬಾ' ಎಂದು ಹತ್ತಾರು ಸಾರಿ ಅಲೆದಾಡಿಸುತ್ತಿದ್ದರೂ ಕೊನೆಯಲ್ಲಿ ಎಲ್ಲರಿಗೂ ಸೀಟು ಕೊಟ್ಟೇ ಕೊಡುತ್ತಿದ್ದರು. ಮುಂದೆ ಅವರು ವಿದ್ಯಾಭ್ಯಾಸವನ್ನು ಮುಗಿಸುವಷ್ಟು ಕಾಲ ಅದು ಅವರ ಮನೆಯಂತಾಗುತ್ತಿತ್ತು !

"ಹಾಗೆ 'ನಾಳೆ ಬಾ' ಎನಿಸಿಕೊಳ್ಳುತ್ತಾ ಅನೇಕ ಸಾರಿ ಬೇಸರವಿಲ್ಲದೆ ಸುತ್ತಾಡಿ ಅಲ್ಲಿ ಸೀಟನ್ನು ಪಡೆದಿದ್ದ ನಾನು (ಡಾ. ಎಚ್. ತಿಪ್ಪೇರುದ್ರಸ್ವಾಮಿಯವರು) ಮುಂದೆ ಕೆಲಸಕ್ಕೆ ಸೇರಿ ಅನೇಕ ವರ್ಷಗಳಾದ ಮೇಲೆ, ಅವರೊಡನೆ ಸ್ವಲ್ಪ ಹತ್ತಿರದಿಂದ ಮಾತನಾಡುವ ಧೈರ್ಯ ಪಡೆದ ಮೇಲೆ, ಒಮ್ಮೆ ಅವರನ್ನು ಕೇಳಿದೆ—

"ತಾವು ಕೊನೆಯಲ್ಲಿ ಎಲ್ಲರಿಗೂ ಸೀಟನ್ನಂತೂ ಕೊಟ್ಟೇ ಕೊಡುತ್ತೀರಿ. ಆದರೆ ಅವರನ್ನು 'ನಾಳೆ ಬಾ', 'ನಾಳೆ ಬಾ' ಎಂದು ಹತ್ತಾರು ಸಾರಿ ಅಲೆದಾಡಿಸುವುದೇಕೆ ?"

ಅದಕ್ಕೆ ಅವರು ತಮ್ಮ ಎಂದಿನ ಮಂದಹಾಸವನ್ನು ಬೀರುತ್ತಾ ಕೊಟ್ಟ ಉತ್ತರ ಮಾರ್ಮಿಕವಾಗಿತ್ತು—

"ನೋಡು, ಅನೇಕರು ದೊಡ್ಡವರಿಂದ ಶಿಫಾರಸು ಪತ್ರ ತರುತ್ತಾರೆ. ಸಮಷ್ಟಿಯಿಂದ ಸಹಾಯವನ್ನು ಪಡೆಯುತ್ತಿರುವ ಈ ಸಂಸ್ಥೆ ಪ್ರತಿಷ್ಠಿತರ ಶಿಫಾರಸನ್ನು ತಿರಸ್ಕರಿಸುವುದು ಒಳಿತಲ್ಲ. ಅವರಿಗೆ ಸೀಟು ಕೊಟ್ಟುಬಿಡುತ್ತೇನೆ. ಅವರಲ್ಲಿ ಕೆಲವರು ಶ್ರೀಮಂತರೂ ಇರಬಹುದು. ಆದರೂ ಕೊಡಬೇಕಾಗುತ್ತದೆ. ಯಾವ ಶಿಫಾರಸನ್ನೂ ತರಲಾರದಿರುವ ಅನೇಕ ಬಡ ವಿದ್ಯಾರ್ಥಿಗಳೂ ಇರುತ್ತಾರೆ. ಅವರನ್ನು ಕಂಡುಕೊಳ್ಳುವುದು ಹೇಗೆ ? ಹೀಗೆ 'ನಾಳೆ ಬಾ' ಎಂದು ಕೆಲವು ಸಾರಿ ಸುತ್ತಿಸಿದಾಗ ಅನುಕೂಲಸ್ಥರಾದ ಕೆಲವು ವಿದ್ಯಾರ್ಥಿಗಳು ಬೇಸರಗೊಂಡು ಬೇರೆ ಏರ್ಪಾಡನ್ನು ಮಾಡಿಕೊಳ್ಳುತ್ತಾರೆ. ಇನ್ನಾವ ಅನುಕೂಲವೂ ಇಲ್ಲದೆ ನಿಜವಾಗಿಯೂ ಬಡವರಾದವರು ಬೇಸರಗೊಳ್ಳದೆ ಮತ್ತೆ ಮತ್ತೆ ಬರುತ್ತಾರೆ. ಅಂತಹವರಿಗೆ ತಪ್ಪದೆ ಅವಕಾಶ ಲಭಿಸುತ್ತದೆ" —ಎಂದು ಈ ಪರೀಕ್ಷಾ ವಿಧಾನದ ರಹಸ್ಯವನ್ನು ಹೇಳಿದರು.

"ಹೀಗೆ ಅರ್ಹ ವಿದ್ಯಾರ್ಥಿಗಳಿಗೆಲ್ಲಾ ಸೀಟನ್ನು ಕೊಡುತ್ತಾಹೋದುದರಿಂದ ವರ್ಷ ವರ್ಷಕ್ಕೂ ವಿದ್ಯಾರ್ಥಿಗಳ ಸಂಖ್ಯೆ ಬೆಳೆಯುತ್ತಿತ್ತು. ಬೇರೆ ಬೇರೆ ಕಡೆಗಳಲ್ಲಿ ವಿದ್ಯಾರ್ಥಿನಿಲಯ





ಗಳನ್ನು ಪ್ರಾರಂಭಿಸಬೇಕಾಗುತ್ತಿತ್ತು. ಇದನ್ನು ಅನೇಕರು ಒಪ್ಪದೆ ಆ ಬಗೆಗೆ ಸ್ವಾಮೀಜಿಯವರನ್ನು ಎಚ್ಚರಿಸುತ್ತಿದ್ದುದೂ ಉಂಟು–

"ಹೀಗೆ ಬೆಳೆಸಿಕೊಂಡು ಹೋದರೆ ಅದನ್ನು ನಡೆಸುವುದು ಹೇಗೆ ? ಇಂದು ಪ್ರಾರಂಭಿಸಿ ನಾಳೆ ನಡೆಸಲು ಆಗದೇಹೋದರೆ ಏನು ಮಾಡುವುದು ?"–ಎಂದು ಆತಂಕ ವ್ಯಕ್ತಪಡಿಸುತ್ತಿದ್ದರು. ಅದಕ್ಕೂ ಸ್ವಾಮಿಗಳು ಅಂಜುತ್ತಿರಲಿಲ್ಲ–

"ಒಳ್ಳೇ ಉದ್ದೇಶದಿಂದ ಪ್ರಾರಂಭಿಸಿದ್ದೇವೆ. ಸಮಾಜ ಕೈಬಿಡಲಾರದೆಂಬ ಭರವಸೆಯಿದೆ. ಇಷ್ಟರಮೇಲೂ ಒಂದು ವೇಳೆ ನಡೆಸಲು ಆಗದೆಹೋದರೆ ಅದು ಶಿವನಿಚ್ಛೆ. ಪ್ರಪಂಚ ಇರುವವರೆಗೂ ನಡೆಸಬೇಕೆಂಬ ಅಹಂಕಾರವೂ ನಮಗಿಲ್ಲ. ಒಳ್ಳೆಯ ಕೆಲಸ ಎಷ್ಟು ದಿನ ನಡೆಯಬೇಕೆಂದು ಶಿವಸಂಕಲ್ಪವಿದೆಯೋ ಅಷ್ಟು ದಿನ ನಡೆಯಲಿ. ತೀರಾ ಅನಿವಾರ್ಯವಾದರೆ ನಿಲ್ಲಿಸೋಣ !"

ಆದರೆ ಸತ್ಯಸಂಕಲ್ಪದಿಂದ ಕೂಡಿದ ಅದಕ್ಕೆಂದೂ ಕುಂದು ಬರಲಿಲ್ಲ. ಯಾವುದನ್ನೂ ನಿಲ್ಲಿಸುವ ಸ್ಥಿತಿ ಬರಲಿಲ್ಲ. ದಿನದಿಂದ ದಿನಕ್ಕೆ ಅದು ಬೆಳೆಯುತ್ತಲೇ ಹೋಯಿತು..."

ಶ್ರೀಗಳವರ ಒಲುಮೆ ಹರಿಯುತ್ತಲೇ ಹೋಯಿತು–

* * *

ಪ್ರತಿ ಹಾಸ್ಟಲಿನ ವಾರ್ಷಿಕೋತ್ಸವ ತಪ್ಪದೆ ನಡೆಯುತ್ತಿತ್ತು. ನಿಲಯದ ವಿದ್ಯಾರ್ಥಿಗಳು ಅಂದು ತಮ್ಮ ಪ್ರತಿಭೆಯನ್ನು ಪ್ರದರ್ಶಿಸುತ್ತಿದ್ದರು–ಹಲವು ಬಗೆಯಲ್ಲಿ. ಅದನ್ನೆಲ್ಲಾ ಶ್ರೀಗಳವರು ಮುಗಿಯುವ ತನಕ ಮಕ್ಕಳೊಂದಿಗೆ ಮಗುವಾಗಿ ಆನಂದಿಸುತ್ತಿದ್ದರು. ಮರುದಿನ ಯಥಾರೀತಿ ಹಾಸ್ಟೆಲ್‌ಗೆ ಭೇಟಿನೀಡಿ ವಿದ್ಯಾರ್ಥಿಗಳ ಯೋಗಕ್ಷೇಮ ವಿಚಾರಿಸುತ್ತಿದ್ದರು. ಆಗ ಹಿಂದಿನ ದಿನ ಪ್ರತಿಭಾ ಪ್ರದರ್ಶನದಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳು ತಮ್ಮ ಪ್ರದರ್ಶನ ಹೇಗಿತ್ತು ಬುದ್ಧೀ–ಎಂದು ಕುತೂಹಲದಿಂದ ಕೇಳಿ, ಶ್ರೀಗಳವರು 'ತುಂಬ ಚೆನ್ನಾಗಿತ್ತು' ಎಂದಾಗ ಕೇಕೆಹಾಕಿ ಕುಣಿದಾಡುತ್ತಿದ್ದರು. ಒಮ್ಮೆ ಅಂಥ ಸಂದರ್ಭದಲ್ಲಿ ಕ್ಯಾತನಹಳ್ಳಿ ಪಾಠಶಾಲೆಯ ಮುಂದೆ ಕಿತ್ತಲೆಹಣ್ಣು ! ಕಿತ್ತಲೆಹಣ್ಣು ! ಕೊಡಗಿನ ಕಿತ್ತಲೆಹಣ್ಣು !–ಎಂದು ತಳ್ಳುಗಾಡಿಯವನೊಬ್ಬ ಕೂಗಿಕೊಂಡು ಹೋಗುತ್ತಿದ್ದುದನ್ನು ಕಂಡ ಕೆಲವು ವಿದ್ಯಾರ್ಥಿಗಳು 'ಬುದ್ಧೀ ಕಿತ್ತಲೆ ಹಣ್ಣು ! ಕಿತ್ತಲೆ ಹಣ್ಣು !'– ಎಂದು ಗಮನ ಸೆಳೆದರು. ಕೂಡಲೇ ಶ್ರೀಗಳವರು ಗಾಡಿಯವನನ್ನು ಕರೆದರು. ಎಲ್ಲಾ ಹಣ್ಣುಗಳ ಬೆಲೆ ಎಷ್ಟೆಂದು ಕೇಳಿ, ಕೊಂಡುದೇ ತಡ ಅಲ್ಲಿದ್ದ ಕಿತ್ತಲೆಹಣ್ಣುಗಳೆಲ್ಲ ಮಕ್ಕಳ ಕೈಸೇರಿದುವು. ಆದರೆ ಕೆಲವು ಮಕ್ಕಳ ಕೈಗಳು ಖಾಲಿ. ಅದನ್ನು ಕಂಡು ಶ್ರೀಗಳವರು ಹಣ್ಣು ಮಾರುವವನಿಗೆ ಮತ್ತೆ ಹಣ್ಣು ತರಲು ಹೇಳಿದರು.





ಅವನು ಸರ್ರನೆ ಹಳೇ ಅಗ್ರಹಾರಕ್ಕೆ ಹೋಗಿ ಹಣ್ಣುಗಳನ್ನು ತಂದ. ಎಲ್ಲರಿಗೂ ಹಣ್ಣು ಲಭಿಸಿದುವು. ಆ ಹಣ್ಣುಗಳಿಗೆ ಶ್ರೀಗಳವರು ಹಣ ಕೊಡಲು ಹೋದರು. ಆದರೆ ಗಾಡಿಯವನು ಹಣ ತೆಗೆದುಕೊಳ್ಳಲಿಲ್ಲ. 'ಪರವಾಗಿಲ್ಲ ಬುದ್ಧೀ... ನನಗೂ ಮಕ್ಕಳಿವೆ...' ಎಂದು ಸಾಷ್ಟಾಂಗ ನಮಸ್ಕರಿಸಿ, ಸಂತೋಷದಿಂದ ಹೊರಟುಹೋದ !

* * *

"ಜಗದ್ಗುರು ಮಹಾಸ್ವಾಮಿಯವರು ನನ್ನಂತಹ ಪಾಮರನಿಗೆ ಒಂದು ಕೆಲಸವನ್ನು ಕೊಟ್ಟು ಉದ್ಧಾರ ಮಾಡಿದುದನ್ನು ನಾನು ಯಾವೊತ್ತಿಗೂ ಮರೆಯುವುದಿಲ್ಲ. ನನ್ನಂತಹ ನೂರಾರು ಜನಕ್ಕೆ ಅವರು ಜೀವನಕ್ಕೆ ಮಾರ್ಗ ಕಲ್ಪಿಸಿಕೊಟ್ಟರು. ನನಗಂತೂ ಅವರೇ ದೇವರು. ನಾನು ಅವರನ್ನೇ ದೇವರೆಂದು ಪೂಜೆ ಮಾಡುತ್ತಿದ್ದೇನೆ.

"ನಾನು ವೃತ್ತಿಯಿಂದ ಹಡಪದವರ ವಂಶದವನು. ಕ್ಷೌರ ಮಾಡುವ ಕಾಯಕವನ್ನು ಚಿಕ್ಕಂದಿನಿಂದಲೇ ನಡೆಸಿಕೊಂಡು ಬಂದೆ. ಚಿಕ್ಕವನಿದ್ದಾಗ ಒಂದೆರಡು ವರ್ಷ ಶಾಲೆಗೆ ಹೋದೆನಾದರೂ ಈಗ ನನಗೇನೂ ಓದು ಬರಹ ಬರುವುದಿಲ್ಲ. (ತನ್ನ ಅನುಭವವನ್ನು ಹೇಳಿದ. ಅದನ್ನು ಬರೆದವರ ಒಕ್ಕಣೆಯಿದು–) ಆದರೆ ನನ್ನ ಪೂರ್ವಜನ್ಮದ ಪುಣ್ಯದಿಂದಲೋ ಏನೋ ಮೈಸೂರಿಗೆ ಬಂದಮೇಲೆ ಜಗದ್ಗುರು ರಾಜೇಂದ್ರ ಮಹಾಸ್ವಾಮಿಯವರಿಗೆ ನನ್ನ ವೃತ್ತಿಯ ಸೇವೆಯನ್ನು ಸಲ್ಲಿಸುವ ಭಾಗ್ಯ ದೊರಕಿತು. ವಾರಕ್ಕೆ ಒಂದು ಸರತಿ, ಅಥವಾ ಹದಿನೈದು ದಿನಕ್ಕೆ ಒಂದು ಸರತಿ ಶ್ರೀಮಠಕ್ಕೆ ಹೋಗಿ ನನ್ನ ಸೇವೆಯನ್ನು ನಡೆಸುತ್ತಿದ್ದೆ. ಈ ವೃತ್ತಿಯಿಂದಾಗಿ ಆ ಮಹನೀಯರನ್ನು ಮುಟ್ಟುವ ಮತ್ತು ಅಷ್ಟು ಹತ್ತಿರದಿಂದ ನೋಡುವ ಭಾಗ್ಯ ನನ್ನದು ! ಅವರು ಅಂತಹ ಶಾಂತ ಮತ್ತು ನಗುಮುಖದ ದೇವರು. ಹೀಗೆ ನಾನು ನಾಲ್ಕೈದು ವರ್ಷ ಅವರಿಗೆ ನನ್ನ ಹಡಪದ ಸೇವೆಯನ್ನು ಸಲ್ಲಿಸುತ್ತಾ ಬಂದಿದ್ದೆ. ಆದರೆ ನಮ್ಮ ಮನೆಯಲ್ಲಿ ನನ್ನ ಪರಿಸ್ಥಿತಿ ಸರಿಯಿರಲಿಲ್ಲ. ನನಗೆ ಮದುವೆಯನ್ನೂ ಮಾಡಿಬಿಟ್ಟರು. ಸರಿಯಾದ ದುಡಿಮೆ ನನಗೆ ಇರಲಿಲ್ಲ. ನನ್ನ ಅಣ್ಣನವರು ನನಗೆ ಮದುವೆಯಾದ ತಕ್ಷಣವೇ ಮನೆಯನ್ನು ಬಿಡಲು ಹೇಳಿದರು. ನನ್ನ ಕಷ್ಟ ಅವರಿಗೆ ಗೊತ್ತಿದ್ದರೂ ಅವರು ಏಕೆ ಮನೆ ಬಿಡುವಂತೆ ಹೇಳಿದರೊ ಗೊತ್ತಿಲ್ಲ. ನನ್ನ ಮದುವೆಗಿಂತ ಮುಂಚಿನಿಂದಲೂ ನನ್ನ ಆರೋಗ್ಯ ಸರಿಯಿರಲಿಲ್ಲ. ಇದಕ್ಕೆ ಕಾರಣ ಮನೆಯಲ್ಲಿ ನನಗೆ ಊಟ, ತಿಂಡಿ ಸರಿಯಾಗಿ ದೊರೆಯುತ್ತಿರಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ನನಗೆ ಮದುವೆ ಮಾಡಿ ಮನೆ ಬಿಡಿಸಿದರು. ಮುಂದೆ ಜೀವನವನ್ನು ಹೇಗೆ ಸಾಗಿಸಬೇಕೆಂಬುದು ತೋಚದೆ ನನಗೆ ಕತ್ತಲೆಯೇ ಕವುಚಿಕೊಂಡಿತು. ಹೀಗೆಲ್ಲಾ ಆದುದರಿಂದ ನನಗೆ ಆರೋಗ್ಯ ಇನ್ನೂ ಕೆಟ್ಟಿತು. ಜೀವನ ಎಷ್ಟು ಬೇಸರವಾಗಿತ್ತೆಂದರೆ ಬದುಕುವುದೇ ಬೇಡವೆನ್ನಿಸಿಬಿಟ್ಟಿತ್ತು. ಅದಕ್ಕೆ ಶ್ರೀ ಸ್ವಾಮಿಗಳವರನ್ನು ಕಂಡು





ಇಪ್ಪತ್ತೈದು ರೂಪಾಯಿಗಳನ್ನು ಇಸಿದುಕೊಂಡು ಎಲ್ಲಿಗಾದರೂ ದೇಶಾಂತರ ಹೋಗುವುದೆಂದು ತೀರ್ಮಾನ ಮಾಡಿಕೊಂಡೆ. ನನ್ನ ಕಷ್ಟವನ್ನೆಲ್ಲಾ ಅವರಿಗೆ ಹೇಗೆ ಹೇಳಿಕೊಳ್ಳುವುದೆಂದು ನನ್ನ ಮನಸ್ಸು ಹಿಂಜರಿಯುತ್ತಿತ್ತು. ಆದರೂ ನನ್ನ ಕಷ್ಟ ಅಷ್ಟೊಂದು ಕ್ರೂರವಾಗಿತ್ತು. ಆಗ ಅವರನ್ನು ಕಂಡು ನಮಸ್ಕರಿಸಿ ತುಂಬ ಅಳುಕಿನಿಂದಲೇ ಹೇಳಿಕೊಂಡೆ. ಮಧ್ಯೆ ಯಾರೋ ಬಂದರು. ಅದಕ್ಕೆ ಶ್ರೀಗಳವರು ಅಲ್ಲಿಯೇ ಇದ್ದ ತಮ್ಮ ಸೇವಕ ಶಿವರಾಮು ಅವರಿಗೆ ನನ್ನ ಕಷ್ಟವನ್ನೆಲ್ಲಾ ಕೇಳಿ ತಿಳಿದುಕೊಳ್ಳಲು ಹೇಳಿ ಒಳಕ್ಕೆ ಹೋದರು.

ನಾನು ಶಿವರಾಮು ಅವರಿಗೆ ಎಲ್ಲವನ್ನು ಮುಚ್ಚುಮರೆಯಿಲ್ಲದೆ ಹೇಳಿದೆ. ಅದಕ್ಕೆ ಶಿವರಾಮು–

"ಬುದ್ದಿಯವರು, ಈಗ ಹೊಸದಾಗಿ ಕಾಲೇಜು ನಡೆಸುತ್ತಿರುವರು. ಏನಾದರೂ ಚಾಕರಿ ಕೇಳು, ಕೊಡಬಹುದು"–ಎಂದು ಸಲಹೆ ಮಾಡಿದರು.

ಅಷ್ಟರಲ್ಲಿ ಶ್ರೀಗಳವರನ್ನು ನೋಡಲು ಬಂದಿದ್ದವರು ಹೋದರು. ಮತ್ತೆ ಶ್ರೀಗಳವರೇ ಹೊರಗೆ ಬಂದು, ಇವನು ಏನು ಹೇಳಿದ ಎಂದು ಶಿವರಾಮು ಅವರನ್ನು ಕೇಳಿದರು. ಅದಕ್ಕೆ ಶಿವರಾಮು ನಾನು ಹೇಳಿದುದನ್ನೆಲ್ಲಾ ಹೇಳಿದರು. ಆಗ ಶ್ರೀಗಳವರು ನನ್ನ ಕಡೆ ನೋಡುತ್ತ–

"ಈಗೇನು ಮಾಡಬೇಕೂಂತ ಇದ್ದೀಯಾ?"–ಎಂದು ಕೇಳಿದರು.

ಅದಕ್ಕೆ ನಾನು ಮುಂಚೆ ಯೋಚಿಸಿಕೊಂಡು ಬಂದಿದ್ದಂತೆ –

"ತಮಗೆ ನಾನು ಇಲ್ಲಿಯ ತನಕ ಸೇವೆ ಮಾಡಿದುದಕ್ಕೆ ಇಪ್ಪತ್ತೈದು ರೂಪಾಯಿ ಕೊಡಿ. ನಾನು ಎಲ್ಲಿಯಾದರೂ ದೇಶಾಂತರ ಹೋಗುತ್ತೇನೆ."–ಎಂದು ಧೈರ್ಯಮಾಡಿ ಹೇಳಿಯೇಬಿಟ್ಟೆ ! ಅದಕ್ಕೆ ಶ್ರೀಗಳವರು ನಗುತ್ತ–

"ಅಯ್ಯೋ ಪೆದ್ದ. ಅದಕ್ಕೇಕೆ ಹಂಗೆ ಮಾಡ್ತೀಯಾ? ಹೆದರಿಕೋಬಾರ್ದು. ಧೈರ್ಯವಾಗಿರು. ಎಲ್ಲಿಗೆ ಹೋಗೋದು ನೀನು ?"–ಎಂದರು. ನಾನು ಮತ್ತೆ –

"ಅದನ್ನು ಬಿಟ್ಟರೆ ನನಗೆ ಜೀವನ ಸಾಗಿಸಲು ಬೇರೆ ದಾರೀನೇ ಇಲ್ಲ ಬುದ್ದೀ ..... ತಾವೇನಾದರೂ ಚಾಕರಿ ಕೊಟ್ಟರೆ ಜೀವನ ಸಾಗಿಸಬಹುದು...."

–ಎಂದು ಹೇಳಿಯೇಬಿಟ್ಟೆ ! ನನಗೆ ಹೀಗೆಂದು ಹೇಳಲು ಶಿವರಾಮು ಅವರೇ ಸೂಚನೆ ಕೊಟ್ಟಿದ್ದರು. ಅದರಂತೆ ನಾನು ಮಾಡಿದ್ದೆ. ಅದಕ್ಕೆ ಶ್ರೀಗಳವರು–

"ಬಸವರಾಜು ನೀನು ಏನು ಓದಿದ್ದೀಯಾ ?"–ಎಂದು ಕೇಳಿದರು.

"ನಾನು ಒಂದನೇ ಕ್ಲಾಸು ಅಷ್ಟೇ ಬುದ್ದೀ ಓದಿರೋದು"– ಎಂದು ಹೇಳಿದೆ.





ನನ್ನ ಉತ್ತರವನ್ನು ಕೇಳಿದ ಶ್ರೀಗಳವರು –

"ಶಿವರಾಮು ಒಳ್ಳೆ ಗ್ರ್ಯಾಜುಯೇಟೇ ಸಿಕ್ಕಿದ ಕಣಯ್ಯಾ!" ಎಂದು ಹೇಳುತ್ತ ಜೋರಾಗಿಯೇ ನಕ್ಕುಬಿಟ್ಟರು !

ಅವರು ಹಾಗೆ ನಕ್ಕುದನ್ನು ಕಂಡು ನಾನೂ ನಕ್ಕೆ. ಹಾಗೆ ನಕ್ಕು ಅಲ್ಲಿಗೆ ಎಷ್ಟೋ ದಿನಗಳಾಗಿದ್ದುವು !

ನನ್ನಂತಹ ದುಃಖಿಗೂ ಶ್ರೀಗಳವರು ನಗೆ ಬರಿಸಿದರು !....

ಶ್ರೀಗಳವರ ಕರುಣೆಯಿಂದ ನಾನು ಈಗ ಜೆ.ಎಸ್.ಎಸ್. ಸಂಸ್ಥೆಯ ಒಬ್ಬ ಸಾಮಾನ್ಯ ನೌಕರನಾದೆ. ನನ್ನ ಜೀವನ ನೆಟ್ಟಗಾಯಿತು.

ಜೊತೆಗೆ ನನ್ನ ಹಡಪದ ಸೇವೆಯನ್ನು ಶ್ರೀಗಳವರು ಇರುವ ತನಕವೂ ನಡೆಸಿಕೊಂಡೇ ಬಂದೆ.

ಇದೆಲ್ಲದರಿಂದ ನಾನು ಉದ್ಧಾರವಾಗಿದ್ದೇನೆ.

ಆವೊತ್ತು ಅವರು ನನ್ನ ಕೈ ಹಿಡಿಯದಿದ್ದರೆ ನಾನೇನು ಆಗುತ್ತಿದ್ದೆನೋ ! ಎಲ್ಲಿಯಾದರೂ ಹೋಗಿ ಪ್ರಾಣ ಕಳೆದುಕೊಳ್ಳಬೇಕಿತ್ತು, ಅಷ್ಟೆ.

ಆದರೆ ಶ್ರೀಗಳವರ ಆಶೀರ್ವಾದದಿಂದ ನಾನೂ ಒಬ್ಬ ಮನುಷ್ಯನಾದೆ.

ನನ್ನನ್ನು ಶ್ರೀಗಳವರು ಸಲಿಗೆಯಿಂದ ಮಾತನಾಡಿಸುತ್ತಿದ್ದರೂ ಹಾಸ್ಯಮಾಡುತ್ತಿದ್ದರು. ನಾನೊಬ್ಬ ಅವಿದ್ಯಾವಂತ. ನಾನೇನು ಅಷ್ಟು ಬುದ್ಧಿವಂತನಲ್ಲ – ನಾನು ಅನೇಕ ಸರ್ತಿ ತಪ್ಪು ಮಾಡುತ್ತಿದ್ದೆ. ಅವರು ಕೋಪಮಾಡಿಕೊಳ್ಳುತ್ತಲೇ ಇರಲಿಲ್ಲ. ಅಕಸ್ಮಾತ್ ಕೋಪಮಾಡಿ ಕೊಂಡರೆ, ಕ್ಷಣದಲ್ಲೇ– "ಏ ಪೆದ್ದ ! ಹೀಗೇನಾ ಮಾಡೋದು ?"– ಎಂದು ಬೈದು ಕೂಡಲೇ ನಕ್ಕು ತಿದ್ದುತ್ತಿದ್ದರು.

ಈ ರೀತಿ ನಾನು ಅವರ ಹತ್ತಿರ ಎಷ್ಟೋ ಸರ್ತಿ ಬೈಸಿಕೊಂಡಿದ್ದೇನೆ.

ಹೀಗೆ ಅವರಿಂದ ಬೈಸಿಕೊಳ್ಳುವುದರಲ್ಲೂ ಒಂದು ಸಂತೋಷ, ಪುಣ್ಯ !"

* * *

ನೆಹ್ರೂ ಅವರು ಪ್ರಧಾನಿಯಾಗಿದ್ದಾಗ ಸಂಸದರಾಗಿದ್ದ ಮತ್ತು ತಮ್ಮ ವಾಕ್‌ಪಟುತ್ವದಿಂದ ನೆಹ್ರೂ ಅವರ ಮೆಚ್ಚುಗೆ ಗಳಿಸಿದ ಶ್ರೀ ಎಂ.ಎಸ್. ಗುರುಪಾದಸ್ವಾಮಿಯವರು ಶ್ರೀಗಳವರ ವಿದ್ಯಾರ್ಥಿನಿಲಯದ ವಿದ್ಯಾರ್ಥಿಯಾಗಿದ್ದರು. ಅವರೊಂದು ಬೈಸಿಕಲ್ ಕೊಂಡುಕೊಂಡಿದ್ದರು. ಕೆಲವೇ ದಿನಗಳಲ್ಲಿ ಅದನ್ನು ಯಾರೋ





ಕದ್ದುಬಿಟ್ಟಿದ್ದರು. ಅವರು ಊಟ ಬಿಟ್ಟು ತುಂಬ ಚಿಂತಾಕ್ರಾಂತರಾದರು. ಯಾರೊಂದಿಗೂ ಹೇಳಿಕೊಳ್ಳಲಿಲ್ಲ.

ಒಂದೆರಡು ದಿನಗಳಾದಮೇಲೆ, ಬೆಳಿಗ್ಗೆ ನಿದ್ರೆಯಿಂದೆದ್ದು ಕೋಣೆಯಿಂದ ಎದ್ದು ಹೊರಗೆ ಬರುತ್ತಾರೆ ! ಅಲ್ಲಿಯೇ ಹೊಚ್ಚ ಹೊಸ ಬೈಸಿಕಲ್ ನಿಂತಿದೆ ! ಆದರೆ ಅದು ಕಳೆದುಹೋದ ಬೈಸಿಕಲ್ ಅಲ್ಲವೇ ಅಲ್ಲ ! ಹೊಚ್ಚಹೊಸ ಬೈಸಿಕಲ್ !

* * *

ನಂಜನಗೂಡು ತಾಲ್ಲೂಕಿನ ನಗರ್ಲೆ ಗ್ರಾಮದ ಸಾಹುಕಾರ ಶ್ರೀ ಸಿದ್ಧಪ್ಪನವರ ಮಕ್ಕಳಾದ ಶ್ರೀ ಎನ್. ಎಸ್. ಮಾದಪ್ಪನವರು ಹೀಗೆ ಹೇಳುತ್ತಾರೆ –

"ನನಗೆ ಆಗ ಇಪ್ಪತ್ತೆಂಟು ವರ್ಷವಿರಬಹುದು. ನಾನು ನಮ್ಮ ಹೊಲದಲ್ಲಿ ಮುಂಗಾರು ಮಳೆಬಿದ್ದು ಜೋಳ ಹಾಕಿಸುತ್ತಿದ್ದೆ. ನಮ್ಮ ಹೊಲದ ಹತ್ತಿರಕ್ಕೆ ಗುಂಡ್ಲುಪೇಟೆ ತಾಲ್ಲೂಕು, ಕುರುಬರಹುಂಡಿ ಮಠದ ವಿರಕ್ತ ಸ್ವಾಮಿಗಳು ಬಂದು ತಮಗೆ ಶಿವರಾತ್ರೀಶ್ವರ ಮಠದಲ್ಲಿ ಪ್ರಸಾದಕ್ಕೆ ವ್ಯವಸ್ಥೆ ಮಾಡಿಸಿಕೊಡಬೇಕೆಂದು ಕೇಳಿದರು. ಆದರೆ ನನಗೆ ಆ ಕೂಡಲೆ ಹೋಗಿ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರನ್ನು ಬೇಡಿಕೊಳ್ಳಲು ಸಮಯವಿರಲಿಲ್ಲ. ಏಕೆಂದರೆ, ಆಗ ಜೋಳ ಹಾಕಲು ಒಳ್ಳೆಯ ಹದವಿತ್ತು. ಮಳೆ ತೇವದಲ್ಲಿ ಬಿಟ್ಟು ಹೋದರೆ ಜೋಳ ಹಾಕಲು ತೇವ ಆರಿಹೋಗಿ ಜೋಳದ ಬಿತ್ತನೆ ನಿಂತುಹೋಗುತ್ತಿತ್ತು. ಏನು ಮಾಡುವುದು ಎಂದು ತುಂಬ ಯೋಚನೆ ಮಾಡಿ ಆ ಗುರುವಿನ ಮೇಲೆ ಭಾರ ಹಾಕಿ ಆ ವಿರಕ್ತಮೂರ್ತಿಗೆ ನಮ್ಮ ಹೊಲದಲ್ಲಿ ಬಾವಿನೀರಿನಲ್ಲಿ ಸ್ನಾನ ಮಾಡಿಸಿ, ಅಲ್ಲಿ ತುಂಬೆ ಹೂವಿನಲ್ಲಿ ಶಿವಪೂಜೆ ಮಾಡಿಸಿ, ಮನೆಯಿಂದ ಅಡಿಗೆ ಮಾಡಿ ತರಿಸಿ, ಹೊಲದಲ್ಲಿ ಅವರಿಗೆ ಪ್ರಸಾದ ಮಾಡಿಸಿದೆ. ಬಳಿಕ ಶ್ರೀಗಳವರಿಗೆ ಒಂದು ಪತ್ರ ಬರೆದು ಕಳಿಸಿಕೊಟ್ಟೆ.

"ಆದರೆ ಆಮೇಲೆ ತುಂಬ ಸಂಕಟಪಟ್ಟೆ. ನಾನು ಇನ್ನೂ ಹುಡುಗು. ನಾನ್ಯಾವ ಘನಂದಾರಿ ! ನಾನ್ಯಾವ ದೊಡ್ಡ ಮನುಷ್ಯ ! ನಾನು ಚಿಕ್ಕ ವಯಸ್ಸಿನ ಅಲ್ಪ ! ನನ್ನಂಥವನು ಅಂಥಾ ಮಹಾ ವ್ಯಕ್ತಿಗಳಿಗೆ ಪತ್ರ ಬರೆದು ಕಳಿಸಿದೆನಲ್ಲಾ ! ಎಂಥಾ ಉದ್ಧಟತನ ನನ್ನದು ! ಥೀ ಥೀ !– ಎಂದು ಹೀಗೆಲ್ಲಾ ತುಂಬ ಸಂಕಟಪಟ್ಟೆ ! ಎಂಥ ಕೆಲಸ ಮಾಡಿಬಿಟ್ಟೆನಲ್ಲಾ – ಎಂದು ತುಂಬ ಚಿಂತಿಸಿದೆ.

ಆದರೆ –

ಶ್ರೀಗಳವರು ನಾನು ಬರೆದ ಪತ್ರವನ್ನು ನೋಡಿ, ಒಬ್ಬ ಜಂಗಮರಿಗೆ ದಾರಿ ತೋರಿದ ನನ್ನ ಉದ್ದೇಶವನ್ನು ಮೆಚ್ಚಿ ಅವರಿಗೆ ಊಟ ಮತ್ತು ವಸತಿಯನ್ನು ಕಲ್ಪಿಸಿಕೊಟ್ಟಿದ್ದರು.





ಅಲ್ಲಿಂದ ಒಂದು ವಾರದ ಮೇಲೆ ಆ ವಿರಕ್ತಮೂರ್ತಿಗಳನ್ನು ನೋಡಿದೆ. ಶ್ರೀಗಳವರು ನನ್ನ ಪತ್ರವನ್ನು ಓದಿ ಸಂತೋಷಪಟ್ಟು ತಮಗೆ ಪ್ರಸಾದ ಮತ್ತು ವಸತಿ ಸೌಕರ್ಯ ಕಲ್ಪಿಸಿಕೊಟ್ಟರು ಎಂದರು.

"ಇಪ್ಪತ್ತೆಂಟು ವರ್ಷದವನಾಗಿದ್ದ ನನ್ನಂಥವನ ಪತ್ರಕ್ಕೆ ಅವರು ಕೊಟ್ಟ ಮನ್ನಣೆಯನ್ನು ನಾನು ಮರೆಯುವುದಕ್ಕೆ ಎಂದಿಗೂ ಸಾಧ್ಯವಿಲ್ಲ..."

* * *

ಕಡುಬಡತನದ ಬಾಲಕನೊಬ್ಬನಿಗೆ ಆಶ್ರಯ ಕೊಟ್ಟು, ಕೆಲಸ ಕೊಟ್ಟು, ಗುಮಾಸ್ತ ಕೆಲಸ ಕೊಟ್ಟು ಕೊನೆಗೆ– ಇನ್ನೂ ಬಾಲಕನಾಗಿದ್ದಾಗ–

"ಇದು ನನ್ನ (ಕಾಲೇಜಿನಲ್ಲಿ ಈಗ ಆಫೀಸ್ ಸೂಪರಿಂಟೆಂಡೆಂಟ್ ಮರಿಯಾಲದ ಜಿ. ಮಹಾದೇವಪ್ಪ) ಮನೆಯ ಮತ್ತು ನನ್ನನ್ನು ಹೆತ್ತು ಹೊತ್ತವರ ಮರ್ಯಾದೆಯನ್ನು ಉಳಿಸಿದ ಸಂದರ್ಭ–

"ನನ್ನ ತಂಗಿಗೆ ವಿವಾಹ ನಿಶ್ಚಯವಾಗಿತ್ತು. ಮಾತುಕತೆಗಳು ನಡೆದು ವಿವಾಹದ ದಿನವೂ ಗೊತ್ತಾಗಿತ್ತು. ಇದಕ್ಕೆ ಶ್ರೀಗಳವರ ಆಶೀರ್ವಾದವೂ ದೊರಕಿತ್ತು. ಅಷ್ಟುಮಾತ್ರವಲ್ಲ. ನಾವು ತುಂಬ ಬಡವರಾಗಿದ್ದುದರಿಂದ ಶ್ರೀಗಳವರಿಂದ ನಾನು ಆರ್ಥಿಕ ನೆರವನ್ನೂ ಈ ವಿವಾಹಕ್ಕೆ ಕೇಳಿ ಪಡೆದುಕೊಂಡಿದ್ದೆ. ಆದರೆ ಪರಿಸ್ಥಿತಿ ಹೇಗಾಯಿತೆಂದರೆ–ನಮಗೆ ನಮ್ಮ ಬಂಧುಗಳೊಬ್ಬರು ಮದುವೆಗಾಗಿ ಒಂದು ಸಾವಿರ ರೂಪಾಯಿಗಳನ್ನು ಕೊಡುವುದಾಗಿ ಭರವಸೆಕೊಟ್ಟಿದ್ದ ಅವರು ಕೊನೇ ಗಳಿಗೆಯಲ್ಲಿ ಇಲ್ಲವೆಂದುಬಿಟ್ಟರು ! ನನಗೆ ಆಕಾಶವೇ ತಲೆಯಮೇಲೆ ಬಿದ್ದಂತಾಯಿತು. ಆಗ ನಮಗೆ ಹಣ ಕೊಟ್ಟು ಸಹಾಯ ಮಾಡಲು ಬೇರೆ ಯಾರೂ ಇರಲಿಲ್ಲ. ಇದ್ದವರೆಂದರೆ ಶ್ರೀಗಳವರೊಬ್ಬರೆ. ಆದರೆ, ಅವರಿಂದ ಆಗಲೇ ಸಹಾಯ ಪಡೆದಾಗಿತ್ತು. ಮುಂದೇನು ಎಂದು ದಿಕ್ಕುತೋಚದ ಪರಿಸ್ಥಿತಿಯಲ್ಲಿದ್ದಾಗ ನನ್ನ ಮನಸ್ಸು ಮತ್ತೆ ಶ್ರೀಗಳವರನ್ನೇ ಕಾಣುವುದು ಸರಿ ಎಂದು ಹೇಳಿತು. ಆದರೆ ನನಗೆ ಅದೇನೋ ಸಂಕೋಚ. ನಮ್ಮ ಊರಿನಿಂದ ಮೈಸೂರಿಗೆ ಬಂದೆ.

"ಆ ಸಮಯದಲ್ಲಿ ಈಗ ಜೆ.ಎಸ್.ಎಸ್. ಆಸ್ಪತ್ರೆ ಮತ್ತು ಮಹಾವಿದ್ಯಾಪೀಠದ ಕಛೇರಿಗಳಿರುವ ಕಟ್ಟಡದ ನಿರ್ಮಾಣಕಾರ್ಯ ಸಾಗಿತ್ತು. ಆ ಕಟ್ಟಡ ಆಗ ಹೈಸ್ಕೂಲಿಗಾಗಿ ಮತ್ತು ಕಾಲೇಜಿಗಾಗಿ. ಆ ಕಟ್ಟಡವೇ ಸಂಸ್ಥೆ ಕಟ್ಟಿದ ಮೊದಲ ಬೃಹತ್ ಕಟ್ಟಡ. ಅದನ್ನು ನೋಡುತ್ತ ಶ್ರೀಗಳವರು ಕ್ಯಾತನಹಳ್ಳಿ ಶ್ರೀಗಳವರಾದ ಶ್ರೀ ಶಿವಪ್ರಭುಸ್ವಾಮಿಗಳವರೊಂದಿಗೆ ಅಲ್ಲಿ ನಡೆದಾಡುತ್ತಿದ್ದರು. ತುಂಬ ಅನಿರೀಕ್ಷಿತವಾಗಿ ಕಾಣಿಸಿಕೊಂಡ ನನ್ನನ್ನು ನೋಡುತ್ತಲೇ





ಅವರು ನಿಂತರು. ನಾನು ಸಮೀಪಿಸಿ ನಮಸ್ಕರಿಸಿ ಎದ್ದು ನಿಂತೆನಾದರೂ ಮಾತು ಹೊರಡಲಿಲ್ಲ. ಕಣ್ಣುಗಳಲ್ಲಿ ನೀರು ಬೇರೆ. ಅವರೇ ಒಂದೆರಡು ಸರತಿ ಕೇಳಿದ ಮೇಲೆ ನಡೆದುದನ್ನು ನಡೆದಂತೆ ತಿಳಿಸಿ, ಕನಿಷ್ಠ ಈಗ ಒಂದು ಸಾವಿರ ರೂಪಾಯಿ ಸಿಗದಿದ್ದರೆ ಮದುವೆ ನಿಂತೇ ಹೋಗುತ್ತದೆ ಎಂದು ಅಳುತ್ತ ಹೇಳಿದೆ.

'ಇಷ್ಟಕ್ಕೆಲ್ಲಾ ಹೆದರಿದ್ದೀಯಲ್ಲಾ !'– ಎಂದು ಶ್ರೀಗಳವರು ಬಾಕಿ ಉಳಿದ ಖರ್ಚುವೆಚ್ಚ ಗಳನ್ನು ಕುರಿತು ಕೇಳಿದರು. ನಾನು ಎಲ್ಲವನ್ನೂ ವಿವರವಾಗಿ ಹೇಳಿದೆ. ಅದಕ್ಕೆ ಅವರು–

'ಈಗ ನಮ್ಮ ಬಳಿ ಒಂದು ಸಾವಿರ ಇಲ್ಲ. ಸದ್ಯಕ್ಕೆ ಐದುನೂರು ರೂಪಾಯಿ ಇದೆ. ಕೊಡಿಸುತ್ತೇವೆ. ತೆಗೆದುಕೊಂಡು ಹೋಗು. ಮತ್ತೆ, ಚಾಮರಾಜನಗರ ಕಿನಕಳ್ಳಿ ಬಸವಣ್ಣನವರ ದಿನಸಿ ಅಂಗಡಿಗೆ ಒಂದು ಕಾಗದ ಕೊಡುತ್ತೇವೆ. ಅದನ್ನು ತೋರಿಸಿ ಅವರಿಂದ ಐದುನೂರು ರೂಪಾಯಿಗಳಿಗೆ ಮದುವೆಗೆ ಅಗತ್ಯವಿರುವ ಸಾಮಾನು ದಿನಸಿಯನ್ನು ಕೊಂಡುಕೋ.'

ಆ ಕಾಲದಲ್ಲಿ ಮದುವೆಯೊಂದು ಹಳ್ಳಿಗಳಲ್ಲಿ ನಿಂತುಹೋದರೆ ಎಂತಹ ಅವಮಾನವೆಂದು ಬಲ್ಲವರಿಗಷ್ಟೇ ಗೊತ್ತು.

ನಾನು ನಂಬಿದ ದೇವರು– ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳವರು– ನನ್ನ ಮನೆಯಲ್ಲಿ ಅಂತಹುದೊಂದು ಘಟನೆ ನಡೆಯದಂತೆ ಕಾಪಾಡಿದರು.

* * *

ಜೆ.ಎಸ್.ಎಸ್. ಕಾಲೇಜಿನಲ್ಲಿ ಪ್ರಿನ್ಸಿಪಾಲರಾಗಿದ್ದ ದಿವಂಗತ ಪ್ರೊ. ಹೆಚ್. ಎಂ. ಮರಿಸ್ವಾಮಿಯವರು ಜಗದ್ಗುರು ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಮಹಿಮೆಯನ್ನು ಕುರಿತು ಹೃದಯತುಂಬಿ ನಡೆದುದನ್ನು ನಡೆದಂತೆಯೇ ವರ್ಣಿಸಿದ್ದಾರೆ –

"೧೯೬೦ರಲ್ಲಿ ನನ್ನ ಹಿರಿಯ ಮಗ ಮಲ್ಲೇಶ್ ಭಾರತೀಯ ನೌಕಾದಳಕ್ಕೆ ಅಧಿಕಾರಿಯಾಗಿ ಆಯ್ಕೆಯಾದ. ವೈಯಕ್ತಿಕವಾಗಿ ಅದು ನಮಗಾರಿಗೂ ಇಷ್ಟವಿರಲಿಲ್ಲ. ಆದರೂ ಆತ ಹೋಗಿ ತರಬೇತಿ ಕೇಂದ್ರವಾದ ಕೊಚ್ಚಿನ್‌ನಲ್ಲಿ ರಿಪೋರ್ಟ್ ಮಾಡಿಕೊಂಡ. ಆದರೆ ಆತ ಹಾಗೆ ಹೋಗುವಾಗ ಶ್ರೀಗಳವರು ಊರಿನಲ್ಲಿರಲಿಲ್ಲ. ಇದ್ದಿದ್ದರೆ ಅವರ ಸಲಹೆಯನ್ನು ತೆಗೆದು ಕೊಳ್ಳುತ್ತಿದ್ದೆ. ಅವರು ವಾಪಸು ಬಂದಾಗ ವಿಷಯವನ್ನು ತಿಳಿಸಿದೆ. ಅವರು ನಿಮಗೆ ಇಷ್ಟವಿಲ್ಲದ ಮೇಲೆ ಕಳಿಸಬಾರದಿತ್ತು" ಎಂದರು.

"ಹೀಗೆ ನಾಲ್ಕಾರು ತಿಂಗಳುಗಳು ಕಳೆದುವು. ಅಷ್ಟರಲ್ಲಿ ನನ್ನ ಮಗನಿಗೆ ಅಲ್ಲಿ ಮುಂದುವರಿ ಯುವುದು ಅದೇಕೋ ಸುತರಾಂ ಇಷ್ಟವಾಗಲಿಲ್ಲ. ಆದರೆ ಅಲ್ಲಿಂದ ಬಿಡುಗಡೆಯೂ ಅಷ್ಟು ಸುಲಭಸಾಧ್ಯವಲ್ಲ. ಇಂತಹ ಪರಿಸ್ಥಿತಿಯಲ್ಲಿ ಶ್ರೀಗಳವರನ್ನು ಭೇಟಿ





ಮಾಡಿ ವಿಷಯ ಪ್ರಸ್ತಾಪಮಾಡಿದೆ. ಅವರು ಈ ವಿಷಯದಲ್ಲಿ ಯಾರ ಶಿಫಾರಸ್ಸೂ ನಡೆಯುವುದಿಲ್ಲವೆಂದು ತಿಳಿಸಿ ನನಗೆ ಒಂದು ಸಲಹೆಯನ್ನು ಕೊಟ್ಟರು. ಏನೆಂದರೆ 'ರಕ್ಷಣಾ ಇಲಾಖೆಯ ಮುಖ್ಯಸ್ಥರಿಗೆ ಮತ್ತು ರಕ್ಷಣಾ ಮಂತ್ರಿಗಳಿಗೆ ಒಂದೆರಡು ನಿರ್ದಿಷ್ಟ ಕಾರಣಗಳನ್ನು ಕೊಟ್ಟು ಒಂದು ಅರ್ಜಿ ರೂಪದ ಮನವಿಯನ್ನು ಸಲ್ಲಿಸಿ ಅವನ ಬಿಡುಗಡೆಗೆ ಪ್ರಾರ್ಥಿಸಿಕೊ. ಆಮೇಲೆ ನೋಡೋಣ' – ಎಂದರು. ನಾನು ಆ ಕೂಡಲೇ ಹಾಗೆಯೇ ಮಾಡಿ ಅರ್ಜಿಯನ್ನು ಸಂಬಂಧಪಟ್ಟವರಿಗೆ ನೇರವಾಗಿ ಕಳಿಸಿ ಮತ್ತೆ ಶ್ರೀಗಳವರನ್ನು ನೋಡಿದೆ. ಅವರು ವಿಷಯ ತಿಳಿದು ಒಂದೆರಡು ನಿಮಿಷ ಮೌನ ತಾಳಿದರು. ನಂತರ ಎದ್ದು ಒಳಗೆ ಹೋಗಿ ಮತ್ತೆ ಹತ್ತು ನಿಮಿಷಗಳ ನಂತರ ಹೊರಬಂದರು. ನನ್ನ ಕೈಗೆ ಪ್ರಸಾದವೆಂದು ಬಿಲ್ವಪತ್ರೆ, ದ್ರಾಕ್ಷಿ ಮತ್ತು ವಿಭೂತಿಯನ್ನು ಕೊಡುತ್ತ–

"ಇವನ್ನು ನೀನೇ ತೆಗೆದುಕೊಂಡು ಹೋಗಿ ಕೊಚ್ಚಿನ್‌ನಲ್ಲಿರುವ ನಿನ್ನ ಮಗನಿಗೆ ಕೊಟ್ಟು ಬರಬೇಕು"– ಎಂದರು.

ಅನಂತರ ಅವರು ತಮ್ಮ ಕೈಯಿಂದ ಐದು ರೂಪಾಯಿಯ ನೋಟನ್ನು ನನ್ನ ಕೈಗೆ ಕೊಡುತ್ತ –

"ಇದನ್ನು ನೀನು ಕೊಚ್ಚಿನ್‌ಗೆ ಹೋಗುವಾಗ ಬಸ್‌ಚಾರ್ಜು ಕೊಡುತ್ತೀಯಲ್ಲಾ– ಅದಕ್ಕೆ ತಪ್ಪದೆ ಈ ನೋಟನ್ನೇ ಸೇರಿಸಿ ಕೊಡು"– ಎಂದರು.

ನನಗೆ ಶ್ರೀಗಳವರಲ್ಲಿ ಅಪಾರ ಭಕ್ತಿ. ನಾನು ಅವರು ಹೇಳಿದಂತೆಯೇ ಮರುದಿನವೇ ಕೊಚ್ಚಿನ್‌ಗೆ ಹೊರಟು ನನ್ನ ಮಗನನ್ನು ಕಂಡು ಪ್ರಸಾದ ಕೊಟ್ಟು ವಾಪಸು ಬಂದೆನು.

ಅಲ್ಲಿಂದ ಸರಿಯಾಗಿ ಹದಿನೈದು ದಿನಕ್ಕೆ ನನ್ನ ಮಗನನ್ನು ಬಿಡುಗಡೆ ಮಾಡಬಹುದು – ಎಂಬ ಆಜ್ಞೆ ಟೆಲಿಗ್ರಾಂ ರೂಪದಲ್ಲಿ ದೆಹಲಿಯಿಂದ ಬಂದಿತು !

ಒಮ್ಮೆ ಮಿಲಿಟರಿಗೆ ಸೇರಿದರೆ ಮಧ್ಯದಲ್ಲಿ ಬಿಡುಗಡೆ ಪಡೆಯುವುದು ದುಸ್ಸಾಧ್ಯವೆಂಬುದು ಬಲ್ಲವರಿಗೇ ಗೊತ್ತು. ಮತ್ತೆ, ಆ ಸಮಯದಲ್ಲಿ ರಕ್ಷಣಾ ಖಾತೆ ಶ್ರೀಮತಿ ಇಂದಿರಾಗಾಂಧಿಯವರ ಕೈಲಿತ್ತೆಂದು ಕಾಣುತ್ತದೆ ! ಇಷ್ಟರಮೇಲೆ ಇಂತಹ ಆಜ್ಞೆ ರಾಷ್ಟ್ರಪತಿಗಳಿಂದ ಹೊರಡಬೇಕು !

ಹೀಗಿದ್ದರೂ ನನ್ನ ಮಗನ ಬಿಡುಗಡೆ ಅಷ್ಟು ಸಲೀಸಾಗಿ ಆಗಲು ಶ್ರೀ ಶಿವರಾತ್ರಿ ರಾಜೇಂದ್ರರ ಮಹಿಮೆ ಮತ್ತು ಸಂಕಲ್ಪದಿಂದ ಮಾತ್ರವೇ ಸಾಧ್ಯವಾಯಿತು ಎಂದು ನನ್ನ ಅಚಲ ನಂಬಿಕೆ !

**ಕೃಪೆ : ಸುತ್ತೂರ ಸುರಧೇನು**





# ದಿವ್ಯ ಚೇತನ

**ಪ್ರೊ. ಬಿ. ಸೋಮಶೇಖರಪ್ಪ**

*(ರಾಜೇಂದ್ರಸ್ವಾಮಿಗಳು ಓದುತ್ತಾ ಕುಳಿತಿದ್ದಾರೆ. ಮರಿ ಪಕ್ಕದಲ್ಲಿ ಕುಳಿತು ಬಿಲ್ವಪತ್ರೆ ಬಿಡಿಸುತ್ತಿದ್ದಾನೆ. ಹೊರಗಡೆ ಕಾಲ, ಸು. 1945)*

ಧ್ವನಿಗಳು : ಭಾರತ್ ಮಾತಾಕಿ ಜೈ, ಇಂಕ್ವಿಲಾಬ್ – ಜಿಂದಾಬಾದ್, ಬ್ರಿಟಿಷರೆ – ದೇಶಬಿಟ್ಟು ತೊಲಗಿ, ಬೇಕೆ ಬೇಕು – ಸ್ವಾತಂತ್ರ್ಯ ಬೇಕು. ದಾಸ್ಯ – ತೊಲಗಲಿ, ದೇಶ – ಬೆಳಗಲಿ.

ಮರಿ : ಬುದ್ಧಿ ಸ್ವಾತಂತ್ರ್ಯ ಹೋರಾಟಗಾರರು (ಓಡಿಹೋಗಿ ಬಾಗಿಲು ಹಾಕಲು ಪ್ರಯತ್ನಿಸುವನು)

ಶಿ.ರಾ.ಸ್ವಾಮಿ : ಏ ಮರಿ, ಬೇಡ, ಅವರು ಬರುವುದಾದರೆ ಬರಲಿ, ದೇಶಕ್ಕಾಗಿ ಹೋರಾಡುತ್ತಿರುವ ಅವರಿಗೆ ನಮ್ಮ ಕೈ ಜೋಡಿಸಬೇಕು, ಅದನ್ನು ಬಿಟ್ಟು ಬಾಗಿಲು ಹಾಕುತ್ತಿರುವೆಯಲ್ಲ. ನಮ್ಮ ಮೈಮನಸ್ಸುಗಳು ಸ್ವಾತಂತ್ರ್ಯ ಹೋರಾಟಕ್ಕೆ ತೆರೆದುಕೊಳ್ಳಬೇಕು. ಕಿಟಕಿ ಬಾಗಿಲು ಮುಚ್ಚಬೇಡ ತೆರೆ. (ಅಷ್ಟರಲ್ಲಿ ಮರಿಯನ್ನು ತಳ್ಳಿಕೊಂಡು ಒಬ್ಬ ಸ್ವಾತಂತ್ರ್ಯಸೇನಾನಿ ಒಳ ಬರುವನು. ಗಾಂಧಿ ಟೋಪಿ, ಜುಬ್ಬ ಪಂಚೆ ಧರಿಸಿರುವನು. ಕೈಯಲ್ಲಿ ಕಾಂಗ್ರೆಸ್ ಬಾವುಟ ಇರುವುದು)

ಸ್ವಾ. ಸೇನಾನಿ : ಸ್ವಾಮಿಗಳೆ ನಾವು ಸ್ವಾತಂತ್ರ್ಯ ಹೋರಾಟಗಾರರು. ನಮ್ಮನ್ನು ಪೊಲೀಸರು ಬೆನ್ನುಹತ್ತಿದ್ದಾರೆ. ಸ್ವಲ್ಪ ದಿನ ನಾವು ತಲೆಮರೆಸಿ ಕೊಂಡಿರಬೇಕಾಗಿದೆ. ನಮಗೆ ನಿಮ್ಮ ಮಠದಲ್ಲಿ ಆಶ್ರಯ ಕೊಡಬೇಕು. ಏಕೆಂದರೆ ಬ್ರಿಟಿಷರು ಮಠಗಳಿಗೆ, ದೇವಸ್ಥಾನಗಳಿಗೆ ನುಗ್ಗುವ ಧೈರ್ಯ ಮಾಡುವುದಿಲ್ಲ. ಇಲ್ಲಿಗೆ ಸಾಮಾನ್ಯವಾಗಿ ಅವರು ಬರುವುದಿಲ್ಲ. ಇದು ಒಳ್ಳೆ ಕ್ಷೇಮವಾದ ಸ್ಥಳವೆಂದು ಭಾವಿಸಿ ಬಂದಿದ್ದೇವೆ.

ಶಿ.ರಾ.ಸ್ವಾಮಿ : ಅದಕ್ಕೇನಂತೆ ಬಹಳ ಸಂತೋಷ, ನೀವು ಇಲ್ಲಿರುವ ತನಕ ನಿಮಗೆ ಯಾವ ತೊಂದರೆಯಾಗದಂತೆ ಎಚ್ಚರ ವಹಿಸುತ್ತೇವೆ. ನಾವೇ ಸ್ವಾತಂತ್ರ್ಯ





ಹೋರಾಟದಲ್ಲಿ ನೇರವಾಗಿ ಪ್ರವೇಶಿಸಲು ನಮ್ಮ ಸ್ಥಾನಮಾನಗಳ ತೊಡಕಿದೆ. ನಮ್ಮೆಲ್ಲರ ಕೆಲಸವನ್ನು ನೀವು ಮಾಡುತ್ತಿದ್ದೀರಿ ಎಂದ ಮೇಲೆ ನಿಮಗೆ ರಕ್ಷಣೆ ಕೊಡುವುದು, ನಿಮ್ಮ ಕ್ಷೇಮಸಮಾಚಾರ ನೋಡಿಕೊಳ್ಳುವುದು ನಮ್ಮ ಕರ್ತವ್ಯವಲ್ಲವೆ ನಿಶ್ಚಿಂತೆಯಿಂದ ಇರಿ. (ಹೊರಗಡೆಯಿರುವ 4-5 ಜನರನ್ನು ಆತ ಕರೆತರುವನು)

ಎಲ್ಲರೂ : (ಕೈ ಜೋಡಿಸಿ ನಮಸ್ಕರಿಸಿ) ನಿಮ್ಮ ಉಪಕಾರವನ್ನು ನಾವು ಮರೆಯುವುದಿಲ್ಲ.

ಶಿ.ರಾ.ಸ್ವಾಮಿ : ಛೆ, ಛೆ. ಹಾಗೆನ್ನಬೇಡಿ. ಇದು ನಮ್ಮ ಕರ್ತವ್ಯ, ಉಪಕಾರವೆಲ್ಲಿ ಬಂತು. ಹೋಗಿ ಒಳಗಡೆ ಇರಿ. ಯಾರಾದರೂ ಪೊಲೀಸಿನವರು ಬಂದರೆ ನಾವು ಸೂಚನೆ ಕೊಡುತ್ತೇವೆ. ನೀವು ತಕ್ಷಣ ನಮ್ಮ ಪೂಜೆ ಕೋಣೆಗೆ ಹೋಗಿಬಿಡಿ. ದೇಶ ಸೇವೆಯೇ ಈಶ ಸೇವೆ. ಈ ಅವಕಾಶ ಸಿಕ್ಕಿರುವುದು ನಮ್ಮ ಪುಣ್ಯ ಎಂದು ಭಾವಿಸುತ್ತೇವೆ.

ಮರಿ : ಬುದ್ದಿ ಬುದ್ದಿ ಪೂಜೆ ಕೋಣೆಗೆ, ಮಡಿ...

ಶಿ.ರಾ.ಸ್ವಾಮಿ : ಸ್ವಾತಂತ್ರ್ಯಸೇನಾನಿಗಳು ದೇವತೆಗಳಿಗಿಂತ ದೊಡ್ಡವರು. ಸಾಕ್ಷಾತ್ ದೈವಾಂಶಸಂಭೂತರು. ನಮ್ಮನ್ನು ದಾಸ್ಯದಿಂದ ಬಿಡಿಸಲು ಹೊರಟಿರುವ ಮಹಾತ್ಮರು. ಪುಣ್ಯಾತ್ಮರು. ಅವರು ಎಲ್ಲ ಮಡಿಗಿಂತ ಶ್ರೇಷ್ಠರು. ಅವರು ಎಲ್ಲಿದ್ದರೆ ಅದೇ ಪೂಜಾಸ್ಥಳ, ಮಡಿಸ್ಥಾನ.

ಮರಿ : ಬುದ್ದಿ

ಶಿ.ರಾ.ಸ್ವಾಮಿ : ಸುಮ್ಮನಿರು. (ಸ್ವಾತಂತ್ರ್ಯಸೇನಾನಿಗಳಿಗೆ) ನೀವು ಒಳಗಡೆ ಹೋಗಿ. ನಿಮ್ಮ ಊಟ ತಿಂಡಿಗೆ ಏನೂ ಯೋಚನೆ ಮಾಡಬೇಡಿ. ಎಲ್ಲಾ ವ್ಯವಸ್ಥೆ ನಮ್ಮಲ್ಲಿದೆ. ನಿಮ್ಮಲ್ಲಿ ನಿಷ್ಠಾವಂತ ಆಚಾರವಂತರಿದ್ದರೆ ಅದನ್ನೂ ನೀವು ನಿಸ್ಸಂಕೋಚವಾಗಿ ಇಲ್ಲಿ ಆಚರಿಸಬಹುದು.

ಎಲ್ಲರೂ : ಆಗಲಿ, ಆಗಲಿ. ಬಹಳ ಸಂತೋಷ. ನಿಮಗೆ ಭಾರತಮಾತೆಯ ಅನುಗ್ರಹ ಇರಲಿ. (ಒಳಗೆ ಹೋಗುವರು. ಭಾರತ್ ಮಾತಾಕಿ ಜೈ – ಘೋಷಣೆ)

(ಮತ್ತೆ ಸ್ವಾಮಿಗಳು ಓದಿನಲ್ಲಿ ಮಗ್ನರಾಗುತ್ತಾರೆ – ಸ್ವಲ್ಪ ಸಮಯದ ನಂತರ ಅರಮನೆಯ ಸೇವಕನೊಬ್ಬ ಪ್ರವೇಶಿಸುತ್ತಾನೆ. ಅವನನ್ನು ಪೊಲೀಸಿನವನೆಂದು ಭಾವಿಸಿ ಮರಿ ಗಾಬರಿಯಾಗಿ ಓಡಾಡುತ್ತಾ





ಸ್ವಾತಂತ್ರ್ಯಸೇನಾನಿಗಳಿಗೆ ಸೂಚನೆ ಕೊಡುತ್ತಾನೆ. ಅರಮನೆ ಸೇವಕನೆಂದು ತಿಳಿದು ಸ್ವಾಮಿಗಳು ಸಮಾಧಾನ ತಾಳುತ್ತಾರೆ. ಸೇವಕನು ಸ್ವಾಮಿಗಳಿಗೆ ನಮಸ್ಕರಿಸಿ)

ಅರಮನೆ ಸೇವಕ : ಬುದ್ದಿ ಮಹಾರಾಜರು ತಮ್ಮ ದರ್ಶನಕ್ಕಾಗಿ ಬರುತ್ತಿದ್ದಾರೆ. ನಿಮಗೆ ಮುಂಚಿತವಾಗಿ ತಿಳಿಸಲು ಕಳಿಸಿದರು.

ಶಿ.ರಾ.ಸ್ವಾಮಿ : ಯಾವಾಗ ಬರುತ್ತಾರಂತೆ.

ಅರಮನೆ ಸೇವಕ : ಈಗಲೇ. ಈಗ ಬಂದುಬಿಡಬಹುದು, ಅದೋ ಬಂದೇಬಿಟ್ಟರು. (ಪೀಠೋಪಕರಣಗಳನ್ನು ಮರಿ ಸರಿಪಡಿಸುವನು. ಅಷ್ಟರಲ್ಲಿ ಮಹಾರಾಜರ ಪ್ರವೇಶ. ಸ್ವಾಮಿಗಳು ಎದ್ದು ಹೋಗಿ ಅವರನ್ನು ಸ್ವಾಗತಿಸಿ ಕರೆತರುತ್ತಾರೆ. ಮಹಾರಾಜರು ಬಂದು ಸ್ವಾಮಿಗಳಿಗೆ ನಮಸ್ಕರಿಸಿ ಪೀಠದಲ್ಲಿ ಆಸೀನರಾಗುತ್ತಾರೆ. ಸ್ವಾಮಿಗಳೂ ಕುಳಿತು ಕೊಳ್ಳುತ್ತಾರೆ)

ಮಹಾರಾಜರು : ಆರೋಗ್ಯವಾಗಿದ್ದೀರ ಬುದ್ದಿ?

ಶಿ.ರಾ.ಸ್ವಾಮಿ : ಶಿವರಾತ್ರೀಶ್ವರರ ದಯೆಯಿಂದ ಆರೋಗ್ಯಕ್ಕೇನೂ ತೊಂದರೆ ಇಲ್ಲ. ತಾವು ಹೇಗಿದ್ದೀರಿ?

ಮಹಾರಾಜರು : ಪರವಾಗಿಲ್ಲ ಬುದ್ದಿ, ಸ್ವಲ್ಪ ಆಲಸ್ಯ ಇತ್ತು. ಕೇರಳದಿಂದ ಒಬ್ಬ ವೈದ್ಯರು ಬಂದಿದ್ದರು. 'ನವರ್ಕಲಿ' ಔಷಧೋಪಚಾರ ಮಾಡಿದರು. ಈಗ ಸ್ವಲ್ಪ ಹರ್ಷ ಎನ್ನಿಸುತ್ತಿದೆ.

ಶಿ.ರಾ.ಸ್ವಾಮಿ : ತಾಯಿಯವರ ಆರೋಗ್ಯ ಚೆನ್ನಾಗಿದೆಯೇ, ಬಹಳ ದಿವಸವಾಯಿತು ಅವರನ್ನು ನೋಡದೆ.

ಮಹಾರಾಜರು : ಪರವಾಗಿಲ್ಲ, ಚೆನ್ನಾಗಿದ್ದಾರೆ – ವಯಸ್ಸಾಗುತ್ತಾ ಬಂತು. ಸಣ್ಣಪುಟ್ಟ ತೊಂದರೆಗಳು ಇದ್ದದ್ದೇ. ಒಟ್ಟಾರೆ ಚೆನ್ನಾಗಿದ್ದಾರೆ.

ಶಿ.ರಾ.ಸ್ವಾಮಿ : ರಾಧಾಕೃಷ್ಣನ್ ಅರಮನೆಗೆ ಬಂದಿದ್ದರಂತೆ!

ಮಹಾರಾಜರು : ಹೌದು, ಬುದ್ಧಿ ಶಕ್ತಿವಿಶಿಷ್ಟಾದ್ವೈತದ ಬಗ್ಗೆ ಅವರೊಡನೆ ಚರ್ಚೆ ಮಾಡಬೇಕಾಗಿತ್ತು. ನಾವೇ ಆಹ್ವಾನಿಸಿದ್ದೆವು. ಬಹಳ ಓದಿಕೊಂಡಿದ್ದಾರೆ, ಚೆನ್ನಾಗಿ ವಿಶ್ಲೇಷಣೆ ಮಾಡುತ್ತಾರೆ. ಬಹಳ ಒಳ್ಳೆ ಮೇಧಾವಿಗಳು.

ಶಿ.ರಾ.ಸ್ವಾಮಿ : ಅವರು ಮೂಲತಃ ತತ್ವಶಾಸ್ತ್ರದ ಪ್ರಾಧ್ಯಾಪಕರಲ್ಲವೆ? ಅಲ್ಲದೆ ವಿಶ್ವವಿದ್ಯಾನಿಲಯದಲ್ಲಿ ಪಾಶ್ಚಾತ್ಯ ತತ್ತ್ವಶಾಸ್ತ್ರವನ್ನೂ ಅಧ್ಯಯನ





ಮಾಡಿ ನಿಕಷಮತಿಗಳಾಗಿದ್ದಾರೆ ಎಂದು ಕೇಳಿಬಲ್ಲೆವು. ನಾವೂ ಅವರನ್ನೊಮ್ಮೆ ಭೇಟಿ ಮಾಡಬೇಕು.

ಮಹಾರಾಜರು : ಅದಕ್ಕೇನಂತೆ ನಾವೇ ಅದಕ್ಕೆ ವ್ಯವಸ್ಥೆ ಮಾಡುತ್ತೇವೆ. ಒಮ್ಮೆ ಸುತ್ತೂರಿಗೆ ಅವರನ್ನು ಆಹ್ವಾನಿಸಬಹುದಲ್ಲ.

ಶಿ.ರಾ.ಸ್ವಾಮಿ : ಯಾವುದಾದರೂ ವಿಶೇಷ ಸಂದರ್ಭದಲ್ಲಿ ಆಹ್ವಾನಿಸೋಣ. ಈಗ ಸುಮ್ಮನೆ ಬೇಡ.

ಮಹಾರಾಜರು : ಹಾಸ್ಟೆಲ್ ಹೇಗೆ ನಡೆಯುತ್ತಿದೆ ಬುದ್ಧಿ.

ಶಿ.ರಾ.ಸ್ವಾಮಿ : ಚೆನ್ನಾಗಿ ನಡೆಯುತ್ತಿದೆ. (ಆಗಿರುವ ತೊಂದರೆಯನ್ನು ತೋರಗೊಡದೆ) ಸನ್ಯಾಸಿ ಸಂಸಾರದ ಕಥೆಯಾಗಿದೆ. (ನಗುವರು) ಆದರೂ ಆ ಕಷ್ಟದಲ್ಲಿ ಏನೋ ಒಂದು ತೃಪ್ತಿ ಇದೆ. ಧನ್ಯತಾಭಾವವಿದೆ ನಮಗೆ.

ಮಹಾರಾಜರು : ಅಂತಹ ಕಷ್ಟವೇನಾದರೂ ಇದ್ದಲ್ಲಿ ನಮಗೆ ತಿಳಿಸಬಹುದಲ್ಲ, ಆ ಕಷ್ಟದಿಂದ ನಿಮ್ಮ ಪೂಜೆ ಅನುಷ್ಠಾನಕ್ಕೆ ತೊಂದರೆ ಮಾಡಿಕೊಳ್ಳಬೇಡಿ.

ಶಿ.ರಾ.ಸ್ವಾಮಿ : ನಮ್ಮ ಪೂಜೆ ಅನುಷ್ಠಾನಕ್ಕೆ ನಾವೆಂದೂ ತೊಂದರೆ ಮಾಡಿಕೊಳ್ಳುವುದಿಲ್ಲ. ಆ ಭರವಸೆ ಕೊಡುತ್ತೇವೆ. ನಾವು ಒಂದಷ್ಟು ಸಾಮಾಜಿಕ ಕೆಲಸವನ್ನು ಮಾಡಬೇಕೆಂದಿದ್ದೇವೆ, ಜನಸೇವೆಯೇ ಜನಾರ್ಧನನ ಸೇವೆಯಲ್ಲವೆ, ಅದೂ ಪೂಜೆಯಷ್ಟೇ ಶ್ರೇಷ್ಠವಾದುದು. ಕರ್ನಾಟಕದ ಮಠಗಳು ಆ ಕೆಲಸ ಮಾಡಬೇಕು ಎಂಬುದು ಗವಿಮಠದ ಸ್ವಾಮಿಗಳಾದ ಶ್ರೀ ಗೌರಿಶಂಕರ ಸ್ವಾಮಿಗಳ ಇಚ್ಛೆ ಮತ್ತು ಅಭಿಲಾಷೆಯಾಗಿದೆ. ಅದನ್ನು ಕಾರ್ಯರೂಪಕ್ಕೆ ತರಬೇಕೆಂಬುದೂ ನಮ್ಮ ಆಸೆಯಾಗಿದೆ. ಶಿಕ್ಷಣಾರ್ಥಿಗಳಿಗೆ ಊಟ ವಸತಿ ಕಲ್ಪಿಸುವುದು, ವಿದ್ಯಾಕೇಂದ್ರಗಳನ್ನು ಸ್ಥಾಪಿಸುವುದು ನಮ್ಮ ಇಚ್ಛೆಯಾಗಿದೆ. ಅನ್ನದಾನಕ್ಕಿಂತ ವಿದ್ಯಾದಾನ ಮೇಲಲ್ಲವೆ?

ಮಹಾರಾಜರು : ನಾವು ರಾಜ ಮಹಾರಾಜರುಗಳು ಮಾಡಬೇಕಾಗಿದ್ದ ಕೆಲಸವನ್ನು ನೀವು ಕೈಗೆತ್ತಿಕೊಳ್ಳುತ್ತಿರುವುದು ಸಂತೋಷವೇ. ಹಿಂದೆಲ್ಲಾ ರಾಜರುಗಳು ತಮ್ಮ ಅರಮನೆ, ಕೋಟೆಕೊತ್ತಲ, ರಾಜ್ಯ ವಿಸ್ತರಣೆಯ ಬಗ್ಗೆಯೇ ಚಿಂತಿಸಿದರು. ಹಾಗಾಗಿ ಇಷ್ಟು ದೊಡ್ಡ ದೇಶದಲ್ಲಿ ಈಗಲೂ ದರಿದ್ರ, ಬಡತನ, ಅನಕ್ಷರತೆ ತಾಂಡವವಾಡುತ್ತಿವೆ.

ಶಿ.ರಾ.ಸ್ವಾಮಿ : ಮೈಸೂರು ಅರಸು ಮನೆತನ ಅದಕ್ಕೆ ಅಪವಾದ ಬಿಡಿ. ನಮ್ಮ





ರಾಜ್ಯದಲ್ಲಿ ಆಗಿರುವ ಪ್ರಗತಿಪರ ಕೆಲಸಗಳು ಭಾರತದ ಮತ್ತಾವ ರಾಜ್ಯದಲ್ಲಿ ಆಗಿವೆ ಹೇಳಿ. ನಿಮ್ಮ ದೊಡ್ಡಪ್ಪನವರಾದ ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಇಡೀ ದೇಶದಲ್ಲೇ ಮೊದಲು ಎನ್ನುವ ಅನೇಕ ಯೋಜನೆಗಳು ಪ್ರಾರಂಭವಾಗಿಲ್ಲವೆ, ವಿಶ್ವವಿದ್ಯಾನಿಲಯ, ವಿದ್ಯುಚ್ಛಕ್ತಿ, ಕಬ್ಬಿಣ ಕಾರ್ಖಾನೆ, ಗಂಧದೆಣ್ಣೆ ಕಾರ್ಖಾನೆ, ಮಾರಿಕಣಿವೆ ಜಲಾಶಯ ಒಂದೇ ಎರಡೇ ಇದು ಒಂದು ಆದರ್ಶ ರಾಜ್ಯ ಎಂದರೂ ತಪ್ಪಿಲ್ಲ. ಆ ಯಶಸ್ಸೆಲ್ಲಾ ನಿಮ್ಮ ಮನೆತನಕ್ಕೇ ಸೇರಿದ್ದಲ್ಲವೆ. ಅಲ್ಲದೆ ಪ್ರಜಾಪ್ರತಿನಿಧಿ ಸಭೆಯನ್ನು ಇಡೀ ದೇಶದಲ್ಲಿ ಮೊಟ್ಟಮೊದಲು ಜಾರಿಗೆ ತಂದು, ಸ್ವಾತಂತ್ರ್ಯ ಹೋರಾಟಕ್ಕೆ ಕುಮ್ಮಕ್ಕು ಕೊಟ್ಟ ರಾಜ ಮಹಾರಾಜರಲ್ಲಿ ಮೊಟ್ಟಮೊದಲಿಗರಲ್ಲವೆ ನೀವು. ಅಷ್ಟಿಲ್ಲದೆ ಮಹಾತ್ಮ ಗಾಂಧೀಜಿಯವರು ತಮ್ಮ ದೊಡ್ಡಪ್ಪ ನಾಲ್ವಡಿ ಕೃಷ್ಣರಾಜ ಒಡೆಯರಿಗೆ 'ರಾಜಋಷಿ' ಎಂದು ಕರೆದರೆ. ಸರ್ದಾರ್ ವಲ್ಲಭಬಾಯಿ ಪಟೇಲರು "ಮೈಸೂರು ಅರಸರಂಥ ರಾಜರಿದ್ದರೆ ನಮಗೆ ಪ್ರಜಾಪ್ರಭುತ್ವ ಏಕೆ ಬೇಕು" ಎಂದರಲ್ಲವೆ.

ಮಹಾರಾಜರು : ಅದನ್ನೆಲ್ಲಾ ಮುಂದುವರಿಸಿಕೊಂಡು ಹೋಗುವುದರ ಜೊತೆಗೆ ಇನ್ನಷ್ಟು ಪ್ರಗತಿಯನ್ನು ಸಾಧಿಸಬೇಕಾಗಿದೆ ಬುದ್ಧಿ. ಈ ಬ್ರಿಟಿಷರ ಆಡಳಿತದಲ್ಲಿ ನಿರೀಕ್ಷಿಸಿದಷ್ಟು ಕೆಲಸವಾಗುತ್ತಿಲ್ಲ. ಜೊತೆಗೆ ಈ ಸ್ವಾತಂತ್ರ್ಯ ಹೋರಾಟ ಒಂದು ನಿಲುಗಡೆಗೆ ಬಂದು ದೇಶಕ್ಕೆ ಸ್ವಾತಂತ್ರ್ಯ ಬಂದರೆ ಇನ್ನಷ್ಟು ಉತ್ಸಾಹದಿಂದ ಕೆಲಸ ಮಾಡಬಹುದು. ಅದರಿಂದ ಜನಜೀವನ ಸುಧಾರಿಸಬಹುದು.

ಶಿ.ರಾ.ಸ್ವಾಮಿ : ಅದಕ್ಕೆ ತಕ್ಕ ವೇದಿಕೆ ಕಲ್ಪಿಸಬೇಕಲ್ಲವೆ, ಅದಕ್ಕಾಗಿಯೇ ನಾವು, ಜನರು ವಿದ್ಯಾಬುದ್ಧಿ ಕಲಿತು ಉದ್ಧಾರವಾಗಲೆಂದು ವಿದ್ಯಾಸಂಸ್ಥೆಗಳನ್ನು ವಿದ್ಯಾರ್ಥಿನಿಲಯಗಳನ್ನು ಹಳ್ಳಿ - ದಿಳ್ಳಿಯಲ್ಲಿ ಪ್ರಾರಂಭಿಸಬೇಕೆಂದಿದ್ದೇವೆ.

ಮಹಾರಾಜರು : ಬಹಳ ಒಳ್ಳೆಯದು, ಬಹಳ ಒಳ್ಳೆಯದು. ನಮ್ಮ ಅರಮನೆಯ ಕಡೆಯಿಂದ ನಿಮಗೆ ಎಲ್ಲಾ ರೀತಿಯ ನೆರವು ಇರುತ್ತದೆಂದು ನಾವು ಭರವಸೆ ಕೊಡುತ್ತೇವೆ. ನೀವು ನಿಮ್ಮ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಧೈರ್ಯವಾಗಿ ಮುನ್ನುಗ್ಗಬಹುದು ಬುದ್ಧಿ.





ಹೇಗೂ ತಾವು ನಮ್ಮ ರಾಜಗುರುಗಳಲ್ಲವೆ. ರಾಜಗುರುತಿಲಕ ಎಂಬ ಬಿರುದು ಪಡೆದಿದ್ದೀರಿ.

ಶಿ.ರಾ.ಸ್ವಾಮಿ : ಅರಮನೆ, ಗುರುಮನೆ ಸೇರಿದರೆ ಏನಾದರೂ ಅದ್ಭುತವನ್ನು ಸಾಧಿಸಬಹುದು. ಮತ್ತೊಮ್ಮೆ ಮೈಸೂರು ರಾಜ್ಯ ವಿಜಯನಗರದ ವೈಭವವನ್ನು ಕಾಣುವಂತಾಗಲಿ ಎಂಬುದು ನಮ್ಮ ಹಾರೈಕೆ.

ಮಹಾರಾಜರು : ಹಾಗೆ ಹಾರೈಸಿ ಬುದ್ಧಿ, ಹಾಗೆ ಹಾರೈಸಿ (ನಮಸ್ಕಾರ ಮಾಡುವರು, ಸ್ವಾಮಿಗಳು ಆಶೀರ್ವಾದ ಮಾಡುವರು) (ಕತ್ತಲು)
(ಬೆಳಕು ಬಿದ್ದ ಕಡೆ ಸೂತ್ರಧಾರ ಮೇಳದವರು)

ಸೂತ್ರಧಾರ : ಹರಿದ ಬಟ್ಟೆ ಹೊಲಿದುಕೊಂಡು
ಹಸಿದ ಹೊಟ್ಟೆ ತುಂಬಿಸುತ್ತಾ
ಜ್ಞಾನದ ಜ್ಯೋತಿ ಹೊತ್ತಿಸುತ್ತಾ
ಕತ್ತಲನ್ನು ಓಡಿಸುತ್ತಾ
ಸುತ್ತೂರು ಸ್ವಾಮಿ ಬನ್ನಿ, ಅವತಾರವೆತ್ತಿದ ಸ್ವಾಮಿ ಬನ್ನಿ
ಶಿವರಾತ್ರಿಸ್ವಾಮಿ ಬನ್ನಿ

ಮೇಳ 1 : ನೋಡಿದೆಯಾ ಮೇಳ ಆ ಬುದ್ದೇರ ಮನಸ್ಸನ್ನು, ಮಕ್ಕಳು ಉಂಡರೆ ಪೂಜೆ ಇವರಿಗೆ, ಬೇರೆ ಪೂಜೆ ಬೇಡ, ಪ್ರಸಾದ ಬೇಡ. ಅವರಿಗೆ ಎಷ್ಟು ಬಡಿಸಿದರೂ ತೃಪ್ತಿ ಇಲ್ಲ, ಏನು ಕೊಡಿಸಿದರೂ ಸಮಾಧಾನವಿಲ್ಲ.

ಮೇಳ 2 : ಅಲ್ಲ ಆ ಅಡಿಗೆಯವ ಆ ಹುಡುಗರ ಮೇಲೆ ಕಾಯಿ ಕಡ್ಲೆ ಕದ್ದಿದ್ದಾರೆ ಅಂತ ದೂರು ಹೇಳಿದರೂ ಕೋಪಾನೇ ಮಾಡಿಕೊಳ್ಳದೆ ನಗುನಗುತ್ತಾ ಅವರ ಮುಖ ನೋಡ್ತಾರೆ.

ಸೂತ್ರಧಾರ : ಅವರಿಗೆ ಗೊತ್ತು ಕಣೋ ಹಸಿವಿನಿಂದ ಮಾಡಿದ ಕಳ್ಳತನ ಅಪರಾಧವಲ್ಲ ಅಂತ.

ಮೇಳ 2 : ಸೂತ್ರಪ್ಪ, ಸೂತ್ರಪ್ಪ, ಆ ಹುಡುಗರು ಊಟ ಮಾಡ್ತಾ ಇದ್ದದ್ದನ್ನು ನೋಡಿ ನನ್ನ ಬಾಯಲ್ಲಿ ನೀರೂರಿತು. ಆ ಜಿಲೇಬಿ ರಾಶಿ, ಆ ಲಾಡು ಉಂಡೆ.

ಸೂತ್ರಧಾರ : ಹೌದೌದು ಸುತ್ತೂರು ಮಠದ ಊಟ ಬಹಳ ರುಚಿ ಅಂತ ನಾಡಿನಲ್ಲೆಲ್ಲ ಸುದ್ದಿಯಾಗಿದೆ. ಈ ಮಠದ ಹುರುಳಿಕಟ್ಟಿನ ಸಾರಿಗೆ ಮೈಸೂರು ಮಹಾರಾಜರಂಥ'ವರೂ ಮಾರುಹೋಗಿದ್ದರು ಅಂತ ಜನ





ಮಾತಾಡುತ್ತಾರೆ. ಅದಕ್ಕೆ ಮಹಾರಾಜರು ಆಗಾಗ್ಗೆ ಮಠಕ್ಕೆ ಬರೋದು ಅಂತ ಕಾಣುತ್ತೆ.

ಮೇಳ 1 : ಹೇಗಾದರೂ ಮಾಡಿ ಒಂದು ಊಟ ಗಿಟ್ಟಿಸಿಕೊಳ್ಳಬೇಕಲ್ಲ.

ಸೂತ್ರಧಾರ : ಆ... ಹಾ... ಸ್ವಲ್ಪ ತಡಿ ಅಯ್ಯಾ ಮೇಳ ಮಠಗಳ ವಿಷಯ ನಿನಗೆ ಗೊತ್ತಿಲ್ಲ 'ವಿಷ ಕುಡಿದರೂ ಋಷಿ ಸಹವಾಸ ಬೇಡ' ಅಂತ ಗಾದೆಯಿದೆ. ಮಠಗಳಲ್ಲಿ ಪುಕ್ಕಟೆ ಯಾರೂ ಊಟ ಮಾಡಬಾರದು. ಹಾಗೆ ಮಾಡಿದರೆ ಅವರಿಗೆ ಶ್ರೇಯಸ್ಸು ಆಗುವುದಿಲ್ಲ ಅಂತಾರೆ. ಅಲ್ಲೇನಿದ್ದರೂ ಮುಕ್ಕಾಲು ಭಾಗ ಕಷ್ಟ ಕಾಲುಭಾಗ ಸುಖ. ಮಠಗಳಲ್ಲಿ ಯಾರಿಗೂ ಪುಕ್ಕಟೆ ಊಟ ಹಾಕಲ್ಲ. ಅಲ್ಲಿ ಏನಾದರೂ ಕೆಲಸ (ಕಾಯಕ) ಮಾಡಬೇಕಾಗುತ್ತೆ. ಅವರು ಅಂದರೆ ಮಠದವರು ಶರಣರ 'ಕಾಯಕವೇ ಕೈಲಾಸ' ತತ್ವಕ್ಕೆ ಬದ್ಧರಾಗಿರುವವರು. ತಿಳಿದುಕೋ. ಅಲ್ಲದೆ ಲಕ್ಷದಮೇಲೆ 96 ಸಾವಿರ ಜನರಿಗೆ ಬಸವಣ್ಣನು ತನ್ನ ಮಹಾಮನೆಯಲ್ಲಿ ಪುಕ್ಕಟೆ ದಾಸೋಹ ಮಾಡುತ್ತಿದ್ದುದನ್ನು ಕಂಡು ಅಲ್ಲಮಪ್ರಭುಗಳು "ಕಾಯಕ ಮಾಡುವವರಿಗೆ ಮಾತ್ರ ಕೂಳು ಹಾಕು" ಎಂದು ಬಸವಣ್ಣನವರಿಗೆ ಬೋಧಿಸಿದ್ದನ್ನು ಇವರು ಚಾಚೂ ತಪ್ಪದೆ ಪಾಲಿಸುತ್ತಿದ್ದಾರೆ.

ಮೇಳ 1 : ಹುಡುಗರು ಏನು ಕೆಲಸ ಮಾಡುತ್ತಾರೆ.

ಸೂತ್ರಧಾರ : ಓದೋ ಕೆಲಸ ಮಾಡುತ್ತಾರೆ. ಬಡ ವಿದ್ಯಾರ್ಥಿಗಳಿಗೆ ಅವರು ಯಾವ ಜಾತಿಯವರೇ ಆಗಿರಲಿ ಉಚಿತ ಊಟ ಹಾಕೋದು ಮಠಗಳ ದಾಸೋಹ ಧರ್ಮ. ಸೋಮಾರಿಗಳಿಗೆ ಮೈಗಳ್ಳರಿಗೆ ಊಟ ಹಾಕುವುದಿಲ್ಲ. ಅದು ಕಾಯಕತತ್ವ. ನೀನೇನು ಬಡವನೆ, ದರಿದ್ರನೆ, ಹೊಟ್ಟೆಗಿಲ್ಲದವನೆ, ಬಡ ವಿದ್ಯಾರ್ಥಿಯೆ ಏನೂ ಅಂತ ನಿನಗೆ ಊಟ ಹಾಕಬೇಕು.

ಮೇಳ 1 : ಸೂತ್ರಪ್ಪಾ ಈ ಭಜನೆ ನನಗೆ ಬೇಡ. ಏನಾದರೂ ಮಾಡು ನಾನು ಇಲ್ಲಿ ಒಂದು ಊಟ ಮಾಡಲೇಬೇಕಲ್ಲ.

ಮೇಳ 2 : ಹೌದೌದು ಏನಾದರಾಗಲಿ ಒಂದು ಊಟ ಇಲ್ಲಿ ಗಿಟ್ಟಿಸಲೇಬೇಕು.

ಸೂತ್ರಧಾರ : ಹಾಗಾದರೆ ನೀವು ಏನಾದರೂ ಒಂದು ಕಾಯಕ ಮಾಡಲೇಬೇಕು.





ಮೇಳ 1 : ಅಲ್ಲಿ ಉಣ್ಣೋವರೆಲ್ಲ ಏನಾದರೂ ಕೆಲಸ ಮಾಡಲೇಬೇಕೇನು.

ಸೂತ್ರಧಾರ : ಮಾಡಲೇಬೇಕು ಅಂತ ಕೇಳ್ತೀಯ ಅಲ್ಲಿ ನೋಡು
(ಸೂತ್ರಧಾರ ಮೇಳದ ಮೇಲೆ ಕತ್ತಲು, ಬೆಳಕು ಬಿದ್ದ ಕಡೆಯಲ್ಲಿ ಮಲೆ ಮಹದೇಶ್ವರ ಸ್ವಾಮಿಗಳು ರಾಗಿ ಬೀಸುವ ದೃಶ್ಯ ಕಾಣಿಸುತ್ತದೆ. ನೆರಳು ಬೆಳಕಿನ ಹಿನ್ನೆಲೆಯಲ್ಲಿ ರಾಗಿ ಬೀಸುವ ಪದ ಕೇಳಿಸುವುದು)

ಕಲ್ಲವ್ವ ಮಾತಾಯಿ ಮೆಲ್ಲವ್ವ ರಾಜುಣವ
ಜಲ್ಲಜಲ್ಲನೆ ಉದುರವ್ವ । ನಾ ನಿನಗೆ
ಬೆಲ್ಲದಾರತಿಯ ಬೆಳಗೇನು

ಕಲ್ಲು ಕೊಟ್ಟಪ್ಪಗೆ ಎಲ್ಲ ಭಾಗ್ಯವು ಬರಲಿ
ಪಲ್ಲಕ್ಕಿ ಮೇಲೆ ಮಗ ಬರಲಿ । ಅವರಿಗೆ
ಮಲ್ಲಿಗೆ ಹಾರ ಕೊರಳಿರಲಿ
ಕಂಡುಗ ರಾಗಿ ಬೀಸೋ ನನಮುತ್ತಿನ ರಾಗಿ ಕಲ್ಲೆ
ದಂಡೆ ತಂದಿವ್ನಿ ಕೊರಳೀಗೆ । ನಮ್ಮ ಶದ
ಕಂಬದ ಸಾಲಲ್ಲಿ ಇರು ಬಾರೋ

ರಾಗಿಯ ದೇವನೆ ಲೋಲ ಸಂಪನ್ನನೆ
ಭಕ್ತರನೆಬ್ಬಿಸೋ ಪದನಾಕಿ । ಪಾಡಿಕೊಂಡು
ಲೋಲ ನಮ್ಮಲ್ಲಿ ಇರು ಬಾರೋ

ಬೀಸೋ ಕಲ್ಲಿಗೆ ದೇಸವ ತಿರುಗ್ಯಾರೆ
ಸಕಲ ಸಂಪನ್ನರ ಮಗಳೀಗೆ । ನೀಲವ್ವಗೆ
ರಾಜ್ಯ ತಿರುಗ್ಯಾರೆ ಬಸವಯ್ಯ

ಕಲ್ಲು ಬಿಡ್ತೀನಂತ ಸಿಟ್ಟೇಕೆ ಸರಸತಿಯೆ
ಕುಕ್ಕೇಲಿ ರಾಗಿ ಬೆಳೆಯಲಿ । ತಕ್ಕೊಂಡು
ಮತ್ತೆ ರಾತುರಿಗೆ ಬರುತೀನಿ

ಕಲ್ಲು ಬಿಡ್ತೀನೆಂದು ಎಲ್ಲರೂ ಕೇಳ್ಯಾರು
ಕಲ್ಲು ಕಾವೇರಿ ಕಪಿಲೆಯ । ನಂಜಯ್ಯನ
ಕಲ್ಲು ಬಿಟ್ಟು ಕೈಯ್ಯ ಮುಗಿದೇವ





ಅದಾವ ನಮ ರಾಗಿ ಉಳಿದಾವ ನಮ ಹಾಡು
ಈಗ ಸಾಕವ್ವ ನನಕಲ್ಲ | ಕೈಯ್ಯಾನ
ಹಾಕಿದುಂಗುರ ಸವೆದಾವ

ಮೇಳ 2 : ಅವರ್‍ಯಾರಪ್ಪ ರಾಗಿ ಬೀಸುತ್ತಾ ಇರೋದು.

ಸೂತ್ರಧಾರ : ಮಲೆ ಮಹದೇಶ್ವರರು. ಅವರು ಪರಿವ್ರಾಜಕರಾಗಿ ದೇಶ ಸುತ್ತುತ್ತಾ ಸುತ್ತೂರಿಗೆ ಬಂದು ಕೆಲವು ದಿವಸ ಅಲ್ಲಿ ತಂಗಿದ್ದಾಗ ಸಾಧನೆ, ಜ್ಞಾನಾರ್ಜನೆ, ಅನುಷ್ಠಾನದಲ್ಲಿ ತೊಡಗಿದ್ದರಂತೆ. ಆಗ ಪುಕ್ಕಟೆ ಊಟ ಮಾಡಬಾರದು ಅನ್ನೋ ನಿಯಮದ ಪ್ರಕಾರ ರಾಗಿ ಬೀಸೋ ಕಾಯಕ ಮಾಡುತ್ತಿದ್ದರಂತೆ. ಅಂತಹ ಮಹಾತ್ಮರೂ ಹಾಗೆ ಮಾಡಿದರು ಅಂದಾಗ ನಮ್ಮ ನಿಮ್ಮ ಪಾಡೇನು, ಯಾರು ಕಾಯಕ ಮಾಡುತ್ತಾರೋ ಅವರಿಗೆ ಪ್ರಸಾದ, ಇದು ಕಾಯಕ ಮತ್ತು ದಾಸೋಹದ ತತ್ವ ತಿಳೀತ. "ರಟ್ಟೆ ಇರುವವನು ದುಡಿಯಬೇಕು, ನೆತ್ತಿ ಇರುವವನು ಓದಬೇಕು" ಎನ್ನುವುದು ಈ ಮಠದ ತತ್ತ್ವ.

ಮೇಳ 2 : ತಿಳೀತು ಅಪ್ಪ ಸೂತ್ರಧಾರ ಏನಾದರೂ ಕೆಲಸ ಮಾಡಿಸು, ಆದರೆ ನಮಗೆ ಒಂದು ಊಟ ಹಾಕಿಸು. ಸುತ್ತೂರು ಮಠದ ಊಟ ಬಹಳ ರುಚಿ ಅಂತ ಹೇಳಿ ಹುಚ್ಚು ಹತ್ತಿಸಿದ್ದೀಯ ಬೇರೆ.

ಸೂತ್ರಧಾರ : ಯಾತ್ರಾರ್ಥಿಗಳು ಅಂತಲೋ ಪ್ರವಾಸಿಗರು ಅಂತಲೋ ಹೇಳಿ ಒಂದು ಹೊತ್ತಿನ ಊಟ ಮಾಡಬಹುದು. 2ನೇ ಹೊತ್ತಿಗೆ ಊಟಕ್ಕೆ ಉಳಿದಿರಿ ಅಂದರೆ ಮಲೆ ಮಹದೇಶ್ವರರ ಹಾಗೆ ರಾಗಿ ಬೀಸಬೇಕಾಗುತ್ತೆ ಬನ್ನಿ (ಸ್ವಲ್ಪದೂರ ಮೂವರೂ ನಡೆದು ಜನರ ದೊಡ್ಡ ಸಾಲು ನೋಡಿ)

ಮೇಳ 2 : ಏ ಸೂತ್ರಧಾರಪ್ಪ ಏನು ಸುಳ್ಳು ಹೇಳುತ್ತೀಯಯ್ಯ ನೀನು.

ಸೂತ್ರಧಾರ : ನಾನೇನಪ್ಪ ಅಂಥ ಸುಳ್ಳು ಹೇಳಿದ್ದು.

ಮೇಳ 2 : ನೋಡು ಆ ಕ್ಯೂನ. ನಮಗಿಂತ ಮೊದಲೇ ಎಷ್ಟೊಂದು ಜನ ಊಟಕ್ಕೆ ಅಂತ ಕ್ಯೂ ನಿಂತಿದ್ದಾರೆ.

ಸೂತ್ರಧಾರ : ಅದು ಊಟದ ಕ್ಯೂ ಅಲ್ಲೋ ಪೆದ್ದೆ. ತಮ್ಮ ಕಷ್ಟಕಾರ್ಪಣ್ಯ ಹೇಳಿಕೊಂಡು ಸ್ವಾಮಿಗಳಿಂದ ಸಹಾಯ ಬೇಡಿ ಬಂದವರ ಕ್ಯೂ ಅದು. ಸ್ವಾಮಿಗಳು ತಮ್ಮ ಮಠಕ್ಕೆ ಬಂದವರಿಗೆ ದಾಸೋಹ ನಡೆಸಿ ಹೊಟ್ಟೆ ಹಸಿವು ಹಿಂಗಿಸುವುದಷ್ಟೇ ಅಲ್ಲ, ಅವರ ನೆತ್ತಿಗೂ ಬುತ್ತಿ ಕಟ್ಟಿ





ಕೊಡುತ್ತಾರೆ. ಅವರ ಕಷ್ಟಕಾರ್ಪಣ್ಯಗಳನ್ನು ನಿವಾರಿಸುತ್ತಾರೆ. ಅದನ್ನು ನೋಡು.

ಮೇಳ 1 : ಹೂಂ ನಡೆಯಲಿ ದಾಸೋಹ. ಉಂಡು ಬಂದು ನೋಡೋಣ ನಡೀರಿ, ಅದನ್ನೂ.

* * *

ಮಸಣಶೆಟ್ಟರು : (ಹಣ್ಣು ಹಾರ ತಟ್ಟೆಯೊಂದಿಗೆ ಪ್ರವೇಶಿಸಿ, ಅದನ್ನು ಸ್ವಾಮಿಗಳಿಗೆ ಅರ್ಪಿಸಿ ನಮಸ್ಕಾರ ಮಾಡಿ ನಿಲ್ಲುವರು)

ಶಿ.ರಾ.ಸ್ವಾಮಿ : ಚೆನ್ನಾಗಿದ್ದೀರ ಮಸಣಶೆಟ್ಟರೆ ಅಸೆಂಬ್ಲಿ ಮೀಟಿಂಗಿಗೆ ಹೋಗಿದ್ದಿರಾ. ಏನು ಬಂದ ಸಮಾಚಾರ.

ಮಸಣಶೆಟ್ಟರು : ನಿಮ್ಮ ಆಶೀರ್ವಾದದಿಂದ ಚೆನ್ನಾಗಿದ್ದೀನಿ ಬುದ್ದಿ. ಮೊನ್ನೆ ಅಸೆಂಬ್ಲಿ ಮುಗೀತು ಊರಿಗೆ ಹೊರಟಿದ್ದೆ. ಹಾಗೇ ನಿಮ್ಮ ದರ್ಶನ ಮಾಡಿಕೊಂಡು ಹೋಗೋಣ ಅಂತ ಬಂದೆ. ತಾವು ಆರೋಗ್ಯ ವಾಗಿದ್ದೀರಲ್ಲ ಬುದ್ದಿ.

ಶಿ.ರಾ.ಸ್ವಾಮಿ : ಶಿವನ ಕರುಣೆಯಿಂದ ಏನೂ ತೊಂದರೆ ಇಲ್ಲ. ಶಿವರಾತ್ರೀಶ್ವರರ ಪ್ರೇರಣೆಯಿಂದ ಸಂಸ್ಥೆ ಕಟ್ಟಿಕೊಂಡಿದ್ದೇವೆ. ಅದು ದಿನೇ ದಿನೇ ದೊಡ್ಡದಾಗಿ ಬೆಳಿತಾ ಇದೆ. ಎಲ್ಲ ನಮ್ಮ ದೊಡ್ಡ ಸ್ವಾಮಿಗಳ ಆಶೀರ್ವಾದ. ಈ ಮಧ್ಯೆ ನಮ್ಮ ಆರೋಗ್ಯದ ಕಡೆ ಗಮನ ಹರಿಸಲು ಟೈಮೇ ಇಲ್ಲ ಏನು ಬಂದ ಸಮಾಚಾರ.

ಮಸಣಶೆಟ್ಟರು : ಬುದ್ದಿ ಒಬ್ಬ ಬಡ ವಿದ್ಯಾರ್ಥಿ ನಮ್ಮೋನು ಬಹಳ ಚೆನ್ನಾಗಿ ಓದುತ್ತಾನೆ. ಮುಂದೆ ಓದಬೇಕು ಅನ್ನೋ ಹಂಬಲ ಬಹಳ ಇದೆ. ನಿಮ್ಮ ಇಂಜಿನಿಯರಿಂಗ್ ಕಾಲೇಜಿನಲ್ಲಿ ಒಂದು ಫ್ರೀ ಸೀಟು ಕೊಟ್ಟು ಹಾಸ್ಟೆಲ್‌ನಲ್ಲಿ ವ್ಯವಸ್ಥೆ ಮಾಡಿಕೊಟ್ಟರೆ ಬಹಳ ಉಪಕಾರವಾಗುತ್ತೆ.

ಶಿ.ರಾ.ಸ್ವಾಮಿ : ಎಷ್ಟು ಪರ್ಸೆಂಟೇಜ್ ಬಂದಿದೆ.

ಮಸಣಶೆಟ್ಟರು : (ಪೇಪರ್ ತೋರಿಸುತ್ತಾ) ಶೇ. 65 ಬಂದ ಹಾಗಿದೆ ಬುದ್ದಿ.

ಶಿ.ರಾ.ಸ್ವಾಮಿ : ಯಾವ ಸ್ಕೂಲು ಓದಿದ್ದು (ಪಕ್ಕದ ಹುಡುಗನಿಗೆ) ಏ ಮರಿ ಬಾರೋ ಇಲ್ಲಿ ಆಗಲೆ ಬಂದಿದ್ದನಲ್ಲ ಆ ಹುಡುಗನನ್ನು ಕರಿ ಇಲ್ಲಿ (ಹುಡುಗ ಬರುವನು)

ಮಸಣಶೆಟ್ಟರು : ಮಹಾರಾಜ ಸ್ಕೂಲು ಬುದ್ದಿ.

ಶಿ.ರಾ.ಸ್ವಾಮಿ : ನಿನ್ನ ಹೆಸರೇನಪ್ಪ, ನಿನ್ನ ಪರ್ಸೆಂಟೇಜ್ ಎಷ್ಟು.





ಹುಡುಗ : ರಾಚಪ್ಪಸ್ವಾಮಿ. ಶೇ. 75 ಬಂದಿದೆ.

ಶಿ.ರಾ.ಸ್ವಾಮಿ : ಈ ಹುಡುಗನೂ ನಿಮ್ಮವನೆ. ಕೊಳ್ಳೇಗಾಲದ ಹತ್ತಿರದವನು. ಇವನಿಗೆ ಶೇ. 75 ಬಂದಿದೆ. ನೀವು ಕರೆತಂದಿರೋ ಹುಡುಗನದು ಶೇ. 65 ಇದೆ. ನೀವೇ ಹೇಳಿ ಯಾರಿಗೆ ಸೀಟು ಕೊಡೋಣ. ಇಬ್ಬರೂ ನಿಮ್ಮವರೆ, ಇವನು ಯಾರ ಮುಖಾಂತರವೂ ಬಂದಿಲ್ಲ.

ಮಸಣಶೆಟ್ಟರು : ಬುದ್ದಿ ನಿಮ್ಮ ಚಿತ್ತ ನಾನೇನು ಹೇಳಲಿ.

ಶಿ.ರಾ.ಸ್ವಾಮಿ : ಹಾಗಲ್ಲ ಯಾರು ಅರ್ಹರೋ ಅವರಿಗೆ ನಮ್ಮ ಸಹಾಯ ಸಿಗಬೇಕಲ್ಲವೆ. ಅಲ್ಲದೆ ಇಂತಿಷ್ಟೇ ವಿದ್ಯಾರ್ಥಿಗಳನ್ನು ತೆಗೆದುಕೊಳ್ಳಬೇಕು ಎಂಬ ನಿಯಮ ಇದೆ.

ಮಸಣಶೆಟ್ಟರು : ಇವನಿಗೆ ಕೊಟ್ಟರೂ ನಮ್ಮ ಹುಡುಗನಿಗೇ ಕೊಟ್ಟ ಹಾಗಾಗುತ್ತೆ. ಹೆಚ್ಚು ಮಾರ್ಕ್ಸ್ ತೆಗೆದಿರುವ ಇವನಿಗೇ ಕೊಡಿ ಬುದ್ದಿ ಇನ್ನೇನು ಮಾಡುವುದು. ಅವನಿಗೆ ಬೇರೆ ಯಾವುದಾದರೂ ಕೋರ್ಸ್ ಮಾಡು ಅಂತ ಹೇಳುತ್ತೇನೆ. ನಮ್ಮವರಿಗೆ ಸ್ವಾಮಿಗಳು ಉಚಿತವಾಗಿ ಸೀಟು ಕೊಡ್ತಾರೋ ಇಲ್ಲವೋ ಅಂದುಕೊಂಡು ಬಂದಿದ್ದೆ. ಆದರೆ ಯಾರ ಶಿಫಾರಸ್ಸು ಇಲ್ಲದೆ ನೇರವಾಗಿ ನಿಮ್ಮ ಹತ್ತಿರ ಬಂದ ನಮ್ಮೂರ ಹುಡುಗನಿಗೆ ಸೀಟು ಕೊಟ್ಟಿದ್ದೀರಿ ಅಂದರೆ ನನಗೆ ಏನು ಹೇಳಬೇಕೋ ತಿಳಿಯುತ್ತಿಲ್ಲ. ನಂಬಲೇ ಆಗುತ್ತಿಲ್ಲ. ನಿಮ್ಮನ್ನು ಸರಿಯಾಗಿ ಅರ್ಥಮಾಡಿಕೊಳ್ಳದ ನನ್ನ ತಪ್ಪು ಅಭಿಪ್ರಾಯಕ್ಕೆ ನನಗೇ ನಾಚಿಕೆ ಆಗುತ್ತೆ. ನಮ್ಮ ಅಜ್ಞಾನಕ್ಕೆ ಕ್ಷಮೆ ಇರಲಿ ಬುದ್ದಿ.

ಶಿ.ರಾ.ಸ್ವಾಮಿ : ಕ್ಷಮಿಸುವುದು ಒಂದು ಕಡೆ ಇರಲಿ, ಈ ಹುಡುಗನಿಗೇ ಸೀಟು ಕೊಡಿ ಅಂದರಲ್ಲ ಅದು ನಿಮ್ಮ ದೊಡ್ಡ ಗುಣ. ಆಯಿತು ನಿಮ್ಮ ಹುಡುಗನಿಗೂ ಸೀಟು ಕೊಡೋಣ ಬನ್ನಿ.

ಮಸಣಶೆಟ್ಟರು : (ಜೇಬಿನಿಂದ ಆಹ್ವಾನ ಪತ್ರಿಕೆ ತೆಗೆದು ಕೊಡಲು ಅನುಮಾನಿಸುತ್ತಾ) ಬುದ್ದಿ ನನ್ನ ತಂಗಿ ಮಗಳ ಮದುವೆ ಆಹ್ವಾನ ಪತ್ರಿಕೆ, ನಮ್ಮಂಥವರ ಮನೆ ಮದುವೆಗೆ......

ಶಿ.ರಾ.ಸ್ವಾಮಿ : ಆಹ್ವಾನ ಪತ್ರಿಕೆ ಕೈಲೇ ಹಿಡಿದುಕೊಂಡು ಕೊಡದೆ ಅನುಮಾನಿಸುತ್ತಾ ನಿಂತರೆ ನಮಗೆ ಹೇಗೆ ತಿಳೀಬೇಕು. ಕೊಡಿ ಇಲ್ಲಿ ಯಾವತ್ತು ಮದುವೆ, ಹುಡುಗ ಏನು ಕೆಲಸ ಮಾಡುತ್ತಿದ್ದಾನೆ, ಮಗಳು ಏನು ಓದಿದ್ದಾಳೆ.





ಮಸಣಶೆಟ್ಟರು : (ಆಹ್ವಾನ ಪತ್ರಿಕೆಯನ್ನು ಬರೆದುಕೊಡುತ್ತಾ) ಮುಂದಿನ ತಿಂಗಳು 8ನೇ ತಾರೀಖು. ಹುಡುಗ ಇಂಜಿನಿಯರ್ ಬುದ್ದಿ, ಮಗಳನ್ನು ಹೆಚ್ಚು ಓದಿಸಲು ಆಗಲಿಲ್ಲ.

ಶಿ.ರಾ.ಸ್ವಾಮಿ : ಹೆಣ್ಣುಮಕ್ಕಳನ್ನು ಹೆಚ್ಚು ಓದಿಸಬೇಕು. ಗಂಡು ಹುಡುಗರಿಗಿಂತ ಹೆಣ್ಣುಮಕ್ಕಳು ಹೆಚ್ಚು ಓದಿದರೆ ಆ ಮನೆತನ, ಆ ಊರು, ದೇಶ ಉದ್ಧಾರವಾಗುತ್ತೆ. ಅವಳನ್ನು ಓದಿಸಬೇಕಾಗಿತ್ತು.

ಮಸಣಶೆಟ್ಟರು : ನಮ್ಮೂರಲ್ಲಿ ಹೈಸ್ಕೂಲು ಇಲ್ಲ ಬುದ್ದಿ. ಮಿಡ್ಲ್ ಸ್ಕೂಲ್ ತನಕ ಓದಿದ್ದಾಳೆ.

ಶಿ.ರಾ.ಸ್ವಾಮಿ : ನಿಮ್ಮೂರಲ್ಲಿ ಯಾಕೆ ಒಂದು ಹೈಸ್ಕೂಲ್ ಓಪನ್ ಮಾಡಿಸಬಾರದು. ನೀವು ಎಂ.ಎಲ್.ಸಿ. ಇದ್ದೀರಿ. ನಿಮ್ಮೂರಿಗೆ ನೀವು ಏನೂ ಮಾಡಲಿಲ್ಲ ಅಂದರೆ ಹೇಗೆ. ರಸ್ತೆ, ಸ್ಕೂಲ್, ಕರೆಂಟ್ ಇವನ್ನೆಲ್ಲಾ ಮಾಡಿಸಬೇಕು.

ಮಸಣಶೆಟ್ಟರು : ಆಯ್ತು ಬುದ್ದಿ ಮಾಡಿಸ್ತೀನಿ. ರಸ್ತೆಗೆ ಮಂಜೂರಾತಿ ಆಗಿದೆ. ಕರೆಂಟ್‌ಗೆ ಪ್ರಯತ್ನಿಸ್ತಾ ಇದ್ದೀನಿ. ಬುದ್ದಿ ಒಂದು ಮಾತು (ಅನುಮಾನಿಸುತ್ತಾ)

ಶಿ.ರಾ.ಸ್ವಾಮಿ : ಅದೇನು ಹೇಳಿ.

ಮಸಣಶೆಟ್ಟರು : ನಾವು ಹಿಂದುಳಿದವರು. ನಮ್ಮಗಳ ಮದುವೆಗೆ ನಿಮ್ಮನ್ನು ಕರೆದರೆ ಬರುತ್ತೀರೋ ಇಲ್ಲವೋ ಅನ್ನೋ ಅನುಮಾನದಿಂದಲೇ ಆಹ್ವಾನ ಕೊಟ್ಟೆ. ಏನೂ ತಪ್ಪು ತಿಳಿದುಕೊಳ್ಳಬೇಡಿ ಬುದ್ದಿ.

ಶಿ.ರಾ.ಸ್ವಾಮಿ : ನಾವು ನಿಮ್ಮ ಮದುವೆಗೆ ಬರಬೇಕೋ?

ಮಸಣಶೆಟ್ಟರು : ಬಂದರೆ ನಮ್ಮ ಪುಣ್ಯ. ಬಹಳ ಸಂತೋಷವಾಗುತ್ತೆ ಬುದ್ದಿ.

ಶಿ.ರಾ.ಸ್ವಾಮಿ : ನೋಡಿ ಸ್ವಾಮಿಗಳಿಗೆ ಯಾವ ಜಾತಿಗೀತಿ ಇಲ್ಲ. ಲಿಂಗಾಯಿತ ಸ್ವಾಮಿಗಳು ಬೇರೆ ಜಾತಿಯವರ ಮನೆಗೆ, ಸಮಾರಂಭಗಳಿಗೆ ಹೋಗಬಾರದು ಅಂತ ಎಲ್ಲಿದೆ. ಅವರು ಕೊಡುವ ಕಾಣಿಕೆ ತೆಗೆದುಕೊಳ್ಳುತ್ತಾರೆ. ಅದಕ್ಕೆ ಜಾತಿ ಇಲ್ಲವೆ. ನಾವು ಎಲ್ಲರಿಗೂ ಸೇರಿದವರು. ಎಲ್ಲರೂ ನಮಗೆ ಸೇರಿದವರು. ನಾವು ನಿಮ್ಮ ಮನೆ ಮದುವೆಗೆ ಬರುತ್ತೇವೆ ಹೋಗಿ.

ಮಸಣಶೆಟ್ಟರು : ನನಗೆ ಬಹಳ ಸಂತೋಷವಾಗುತ್ತಾ ಇದೆ ಬುದ್ದಿ. ನನಗೆ ನಂಬುವುದಕ್ಕೆ. ಆಗುತ್ತಿಲ್ಲ. ಹಾಗಾದರೆ ನಾವು ಹೋಗಿ ಎಲ್ಲಾ ಸಿದ್ಧಮಾಡಿಕೊಳ್ಳುತ್ತೇವೆ.





ತಾವು ದಯಮಾಡಿಸಬೇಕು ಬುದ್ಧಿ.... (ನಮಸ್ಕರಿಸಿ ಹೊರಡುವರು. ಹೋಗುತ್ತಾ ಕಣ್ಣೀರು ಒರಸಿಕೊಳ್ಳುವರು)

ಹೆಂಗಸು : (ಒಬ್ಬ ವ್ಯಕ್ತಿಯೊಡನೆ ಪ್ರವೇಶಿಸಿ, ಹೂ ಹಾರ ಹಣ್ಣು ತಟ್ಟೆಯಿಟ್ಟು ನಮಸ್ಕರಿಸುವಳು)

ಶಿ.ರಾ.ಸ್ವಾಮಿ : ಚೆನ್ನಾಗಿದ್ದೀರಮ್ಮ ಏನು ಸಮಾಚಾರ ಇವರು ಯಾರು? ನಿಮ್ಮ ಯಜಮಾನರು ತೀರಿಕೊಂಡು ವರ್ಷವಾಯಿತು ಅಲ್ಲವೆ?

ಹೆಂಗಸು : ಹೌದು ಬುದ್ದಿ. ಒಂದು ವರ್ಷದ ಆರಾಧನೆಗೆ ತಮ್ಮನ್ನು ಆಹ್ವಾನಿಸಲು ಬಂದಿದ್ದೇನೆ. ಇವನು ನನ್ನ ಸಂಬಂಧಿ.

ಶಿ.ರಾ.ಸ್ವಾಮಿ : ಮತ್ತೇಕೆ ಆಗಲೆ ಬಂದಿದ್ದೆವಲ್ಲ.

ಹೆಂಗಸು : ಹಾಗಲ್ಲ ಬುದ್ದಿ ನನ್ನ ಒಂದು ನಿರ್ಧಾರವನ್ನು ತಮಗೆ ತಿಳಿಸಿ ಆ ದಿನ ಅದನ್ನು ಕಾರ್ಯರೂಪಕ್ಕೆ ತರಲು ನಿಮ್ಮನ್ನು ಆಹ್ವಾನಿಸುತ್ತಿದ್ದೇನೆ.

ಶಿ.ರಾ.ಸ್ವಾಮಿ : ಅದೇನು ವಿಷಯ ಮೊದಲೇ ಹೇಳಿ ಆಮೇಲೆ ವಿಚಾರ ಮಾಡೋಣ.

ಹೆಂಗಸು : ಅವರನ್ನು ಉಳಿಸಿಕೊಳ್ಳುವುದಕ್ಕೆ ಮಾಡಬಾರದ ಪ್ರಯತ್ನವನ್ನೆಲ್ಲಾ ಮಾಡಿದ್ದಾಯಿತು. ಔಷಧೋಪಚಾರ, ಮಾಯಾಮಾಟ, ಅದೆಲ್ಲ ತಮಗೆ ಗೊತ್ತು. ಮಾಯಾಮಾಟ ಮಾಡಿಸಿದ್ದಕ್ಕೆ ನಿಮ್ಮಿಂದ ಬೈಸಿಕೊಂಡಿದ್ದು ಆಯಿತು. ಆದರೂ ಅವರನ್ನು ಉಳಿಸಿಕೊಳ್ಳಲು ಆಗಲಿಲ್ಲ (ಅಳುವಳು). (ಸ್ವಾಮಿಗಳು ಭಗವತ್ಪಾದರ ಫೋಟೋ ಕಡೆಗೆ ನೋಡುವರು) ತಮಗೆ ಗೊತ್ತಿರುವ ಹಾಗೆ ನಮ್ಮ ಯಜಮಾನರು ಬೇಕಾದಷ್ಟು ಆಸ್ತಿ ಮಾಡಿಟ್ಟು ಹೋಗಿದ್ದಾರೆ. ನಮಗೂ ಮಕ್ಕಳಿಲ್ಲ. ಯಾವುದಾದರೂ ಮಗುವನ್ನು ದತ್ತು ತೆಗೆದುಕೊಂಡು ಸಾಕೋಣ ಅಂತ ಈ ಒಂದು ವರ್ಷ ಪ್ರಯೋಗ ಮಾಡಿ ನೋಡಿದೆ ಅದೇಕೋ ಸರಿಬರಲಿಲ್ಲ.

ಶಿ.ರಾ.ಸ್ವಾಮಿ : ಏನಾಯ್ತಮ್ಮ.

ಹೆಂಗಸು : ಎಲ್ಲರಿಗೂ ನನ್ನ ಆಸ್ತಿ ಮೇಲೆ ಕಣ್ಣು. ನನ್ನ ಯೋಗಕ್ಷೇಮದ ಬಗ್ಗೆ, ನನ್ನ ಭವಿಷ್ಯದ ಬಗ್ಗೆ ಯಾರಿಗೂ ಕಾಳಜಿ ಇದ್ದ ಹಾಗೆ ಕಾಣಲಿಲ್ಲ ಅನ್ನಿಸಿತು.

ಶಿ.ರಾ.ಸ್ವಾಮಿ : ಅದಕ್ಕೆ ಏನು ಮಾಡಬೇಕು ಅಂತಿದ್ದೀರ.

ಹೆಂಗಸು : ನನ್ನ ಆಸ್ತಿಯನ್ನೆಲ್ಲಾ ನಮ್ಮ ಯಜಮಾನರ ವರ್ಷದ ಆರಾಧನೆ ದಿನ ಈ ಮಠಕ್ಕೆ ಬರಿಬೇಕು ಅಂತ ನಿರ್ಧರಿಸಿ ತಮ್ಮನ್ನು ಆಹ್ವಾನಿಸಲು ಬಂದಿದ್ದೇನೆ ಬುದ್ದಿ.





ಶಿ.ರಾ.ಸ್ವಾಮಿ : ಬೇಡಮ್ಮ ಆ ತಪ್ಪು ಮಾತ್ರ ಮಾಡಬೇಡಿ. ನಿಮ್ಮ ಆಸ್ತಿ ಮಠಕ್ಕೆ ಬೇಡ. ಮೊದಲು ನೀವು ಬದುಕಿರುವವರೆಗೆ ಈಗ ನೀವು ಹೇಗೆ ಜೀವನ ಮಾಡುತ್ತಾ ಇದ್ದೀರೋ ಹಾಗೇ ಸುಖವಾಗಿ ಇರಲು ಧಕ್ಕೆ ಬರದ ಹಾಗೆ ಇನ್ನೊಬ್ಬರ ಹಂಗಿಗೆ ಒಳಗಾಗದ ಹಾಗೆ ವ್ಯವಸ್ಥೆ ಮಾಡಿಕೊಳ್ಳಿ. ನಿಮ್ಮ ನಂತರ ಏನು ಮಾಡಬಹುದು ಅನ್ನುವುದನ್ನು ನಿಧಾನವಾಗಿ ಆಲೋಚನೆ ಮಾಡಿ. ದುಡುಕಬೇಡಿ.

ಹೆಂಗಸು : ನನಗೆ ಏನೂ ಹೊಳೆಯುವುದಿಲ್ಲ ಬುದ್ದಿ ನೀವೇ ಮಾರ್ಗದರ್ಶನ ಮಾಡಬೇಕು.

ಶಿ.ರಾ.ಸ್ವಾಮಿ : ಈಗ ನಮಗೂ ತಕ್ಷಣಕ್ಕೆ ಏನೂ ಹೊಳೆಯುತ್ತಿಲ್ಲ (ಆಲೋಚಿಸುತ್ತಾ) ಆದರೆ ಒಂದು ಕೆಲಸ ಮಾಡಬಹುದು.

ಹೆಂಗಸು : (ಆಸೆಯ ಕಣ್ಣುಗಳಿಂದ) ಅದೇನು ಹೇಳಿ ಬುದ್ದಿ ನೀವು ಹೇಳಿದ ಹಾಗೆ ಮಾಡುತ್ತೇನೆ.

ಶಿ.ರಾ.ಸ್ವಾಮಿ : ನೀವು ಒಂಟಿಯಾಗಿ, ಬೇರೊಬ್ಬರ ಆಶ್ರಯದಲ್ಲಿ ದಾಕ್ಷಿಣ್ಯಕ್ಕೆ ಸಿಕ್ಕು, ಹಂಗಿಗೊಳಗಾಗಿ ಬದುಕಬಾರದು. ಹಾಗೇನಾದರೂ ಆದರೆ ಬದುಕು ದುರ್ಭರವಾಗುತ್ತದೆ. ಆಗಲೆ ಹೇಳಿದೆವು ನೀವು ಇನ್ನೊಂದು ಮದುವೆ ಮಾಡಿಕೊಳ್ಳಿ ಎಂದು. ನೀವು ಕೇಳಲಿಲ್ಲ. ದಾನಗೀನದ ಮಾತು ಮರೆತುಬಿಡಿ. ಮೊದಲು ನಿಮ್ಮ ಆಸ್ತಿಯನ್ನೆಲ್ಲಾ ಭದ್ರಪಡಿಸಿಕೊಳ್ಳಿ. ನಿಮ್ಮ ಸಂತೃಪ್ತ ಜೀವನಕ್ಕೆ ವ್ಯವಸ್ಥೆ ಮಾಡಿಕೊಳ್ಳಿ. ನಿಮ್ಮ ಆಸ್ತಿಯಿಂದ ಬಂದ ಮಿಕ್ಕ ಆದಾಯದಲ್ಲಿ ಏನಾದರೂ ಸಾಮಾಜಿಕ ಕಾರ್ಯ ಮಾಡಬಹುದು ಅನ್ನಿಸುತ್ತೆ ನಮಗೆ.

ಹೆಂಗಸು : ಏನು ಮಾಡಬೇಕೆಂಬುದು ನನಗೂ ತಿಳಿಯದು ಬುದ್ದಿ. ನೀವೇ ಮಾರ್ಗದರ್ಶಕರಾಗಿ ಮುನ್ನಡೆಸಬೇಕು. ನನ್ನೊಬ್ಬಳಿಗೇ ಏನೆಲ್ಲ ಮಾಡುವ ಶಕ್ತಿಯಾಗಲೀ ಅನುಭವವಾಗಲೀ ಇಲ್ಲ. ನಿಮ್ಮ ಸಲಹೆಯಂತೆ ನಡೆದುಕೊಳ್ಳುತ್ತೇನೆ.

ಶಿ.ರಾ.ಸ್ವಾಮಿ : ಪುಕ್ಕಟೆ ಸಲಹೆ ಕೊಡುವುದಕ್ಕೇನಂತೆ (ನಗು) ನಾವು ಸಲಹೆಗಾರರಾಗಿಯೇ ಇರುತ್ತೇವೆ. ನಮ್ಮನ್ನು ಕೇಳಿದರೆ ಒಂದು ಕೆಲಸ ಮಾಡಬಹುದು ಅನ್ನಿಸುತ್ತೆ.

ಹೆಂಗಸು : ಅದೇನು ಹೇಳಿ ಬುದ್ದಿ.





ಶಿ.ರಾ.ಸ್ವಾಮಿ : ನಿಮ್ಮ ಯಜಮಾನರ ಹೆಸರಿನಲ್ಲಿ ಒಂದು ಟ್ರಸ್ಟ್ ಮಾಡಿ. ಅದಕ್ಕೆ ನೀವೇ ಕಾರ್ಯಾಧ್ಯಕ್ಷೆ, ಗೌರವಾಧ್ಯಕ್ಷೆ ಎಲ್ಲವೂ ಆಗಬಹುದು. ಅದಕ್ಕೆ ನೀವೇ ವಾರಸುದಾರಳು. ಅದರಿಂದ ಹೆಣ್ಣುಮಕ್ಕಳ ವಿದ್ಯಾಭ್ಯಾಸ, ಅವರ ಸರ್ವಾಂಗೀಣ ಅಭಿವೃದ್ಧಿಗೆ ಏನಾದರೂ ಕಾರ್ಯಕ್ರಮ ಹಾಕಿ ಕೊಳ್ಳಬಹುದು. ಆ ಬಗ್ಗೆ ಆಮೇಲೆ ವಿವರವಾಗಿ ತಜ್ಞರೊಡನೆ ಚರ್ಚಿಸಿ. ತೀರ್ಮಾನ ಕೈಗೊಳ್ಳಬಹುದು. ಇದನ್ನು ಯೋಚಿಸಿ. ಏನೇ ಆಗಲಿ ಆಸ್ತಿಯನ್ನು ಈ ಮಠಕ್ಕೆ ದಾನ ಮಾಡುವ ಯೋಚನೆಯನ್ನು ನಿಮ್ಮ ಮನಸ್ಸಿನಿಂದ ತೆಗೆದುಹಾಕಿಬಿಡಿ.

ಹೆಂಗಸು : ಆಯಿತು ಬುದ್ದಿ ನೀವು ಹೇಳಿದ ಹಾಗೆ ಮಾಡುತ್ತೇನೆ. ಮಾರ್ಗದರ್ಶನ ಮಾಡಬೇಕು. ಈಗ ಆರಾಧನೆಗೆ ಬರುತ್ತೀರಲ್ಲ.

ಶಿ.ರಾ.ಸ್ವಾಮಿ : ಈಗ ಬೇಡ ಮತ್ಯಾವಾಗಲಾದರೂ ಬಂದರಾದೀತು. ನೀವು ಹೋಗಿ ಬನ್ನಿ ಒಳ್ಳೆಯದಾಗಲಿ. (ಹೆಂಗಸು ನಿರ್ಗಮನ, ಕ್ಷೌರಿಕ ತನ್ನ ಹಡಪದೊಡನೆ ಪ್ರವೇಶ)

ಶಿ.ರಾ.ಸ್ವಾಮಿ : (ಬಿಕ್ಕಿ ಬಿಕ್ಕಿ ಅಳುತ್ತಾ ಕ್ಷೌರಿಕ ಮಾತನಾಡಲು ಪ್ರಯತ್ನಿಸುತ್ತಾನೆ) ಏಕೆ ಅಳುತ್ತಿದ್ದೀಯೋ, ನೀನು ಹೀಗೆ ಅಳುತ್ತಿದ್ದರೆ ನಮಗೆ ಹೇಗೆ ಗೊತ್ತಾಗಬೇಕು ನಿನ್ನ ಕಷ್ಟ. ಯಾಕೆ ಊಟ ಮಾಡಿಲ್ಲವೆ (ಅಳು ಜಾಸ್ತಿಯಾಗುತ್ತದೆ) ಮೊದಲು ತೃಪ್ತಿಯಾಗುವ ಹಾಗೆ ಅತ್ತುಬಿಡು. ಆಮೇಲೆ ಸಮಾಧಾನ ಮಾಡಿಕೊಂಡು ಹೇಳು.

ಕ್ಷೌರಿಕ : ಬುದ್ದಿ ನಮ್ಮ ಮನೆಯಲ್ಲಿ ಆಸ್ತಿಗಾಗಿ ಅಣ್ಣ ತಮ್ಮಗಳಲ್ಲಿ ಹೊಡೆದಾಟವಾಗಿ ಕಿರಿಯವನಾದ ನನಗೆ ಏನೂ ಕೊಡದೆ ಹೊರಗೆ ದಬ್ಬಿದ್ದಾರೆ. ಇರುವ ಒಂದು ಸಣ್ಣ ಮನೆಯಲ್ಲಿ ನನಗೆ ಪಾಲೇ ಇಲ್ಲ ಅನ್ನುತ್ತಿದ್ದಾರೆ. ಈಗ ಎರಡು ದಿನದಿಂದ ಊಟವನ್ನು ಹಾಕಿಲ್ಲ. ಈಗ ನಾನು ಬೀದಿಪಾಲಾಗಿದ್ದೇನೆ. ಕೈ ಕಸುಬು ಒಂದು ಬಿಟ್ಟರೆ ನನ್ನದೂ ಅನ್ನುವುದು ಒಂದು ಚೂರೂ ಇಲ್ಲ ಬುದ್ದಿ. ತಲೆ ಮೇಲೆ ಒಂದು ಸೂರೂ ಇಲ್ಲ. ನಿಲ್ಲುವುದಕ್ಕೆ ನೆಲೆಯಿಲ್ಲ. ನನ್ನವರು ಅನ್ನುವವರು ಯಾರೂ ಇಲ್ಲ ಬುದ್ದಿ.

ಶಿ.ರಾ.ಸ್ವಾಮಿ : ಪೆದ್ದ ಪೆದ್ದ ನಿನಗಿಂತ ಶ್ರೀಮಂತ ಈ ಜಗತ್ತಿನಲ್ಲಿ ಯಾರಾದರೂ ಇದ್ದಾರೇನೋ. ನಿನ್ನ ಕೈಲಿ ಕ್ಷೌರಿಕ ಕಸುಬು ಇದಿಯಲ್ಲ ಅದಕ್ಕಿಂತ





ಆಸ್ತಿ ಬೇಕೇನೋ, ಹೇಗಾದರೂ ಬದುಕಬಹುದು ಅದಕ್ಯಾಕೆ ಅಳುತ್ತೀಯ. ಕೈಲಿ ಕಸುಬಿದ್ದವರು ಬಡವರಲ್ಲ.

ಕ್ಷೌರಿಕ : ಬುದ್ದಿ ನಾನು ಈ ಊರು ಬಿಟ್ಟು ಹೋಗಬೇಕು ಅಂತ ಮಾಡಿದ್ದೀನಿ. ಕೈಲಿ ಹೇಗೂ ಕಸುಬಿದೆ. ಹೇಗಾದರೂ ಬದುಕುತ್ತೇನೆ. ನನ್ನ ಲೆಕ್ಕ ಚುಕ್ತ ಮಾಡಿ ದುಡ್ಡು ಕೊಟ್ಟುಬಿಡಿ, ಎಲ್ಲಾದರೂ ಹೋಗುತ್ತೇನೆ.

ಶಿ.ರಾ.ಸ್ವಾಮಿ : ಎಲ್ಲಾದರೂ ಅಂದರೆ ಎಲ್ಲಿಗೆ. ನಾವು ಕೊಡುವ ದುಡ್ಡು ಹೆಚ್ಚು ಅಂದರೆ ನೂರೋ ಇನ್ನೂರೋ ಆಗಬಹುದು. ಅದನ್ನು ತೆಗೆದುಕೊಂಡು ಏನು ಮಾಡುತ್ತೀಯಾ ಎಲ್ಲಿಗೆ ಹೋಗುತ್ತೀಯಾ.

ಕ್ಷೌರಿಕ : ಎಲ್ಲಾದರೂ ದೇಶಾಂತರ ಹೋಗುತ್ತೇನೆ ಏನಾದರೂ ಮಾಡುತ್ತೇನೆ ನನ್ನ ಹಣೆಯಲ್ಲಿ ಬರೆದ ಹಾಗೆ ಆಗುತ್ತೆ.

ಶಿ.ರಾ.ಸ್ವಾಮಿ : ನಿನ್ನ ಹಣೆಯಲ್ಲಿ ಏನು ಬರೆದಿದೆ ಎನ್ನುವುದು ನಿನಗೆ ಗೊತ್ತಾ. ದೇಶಾಂತರ ಅಂದರೆ ಏರೋಪ್ಲೇನ್ ಹತ್ತಿ ಅಮೇರಿಕಕ್ಕೆ ಹೋಗುತ್ತೀಯಾ, ಅಲ್ಲಿ ನಿನಗಿಂತ ಬುದ್ಧಿವಂತ ಕ್ಷೌರಿಕರಿದ್ದಾರೆ. ಎಲ್ಲೋ ಹೋಗಿ ಏನೋ ಮಾಡುವುದಕ್ಕಿಂತ ಹೇಗೂ ಕೈಲಿ ಕಸುಬಿದೆ. ಇಲ್ಲೇ ಆ ಕೆಲಸ ಮಾಡು. ಆಗುವುದಿಲ್ಲವೆ.

ಕ್ಷೌರಿಕ : ಇಲ್ಲ ಬುದ್ದಿ ನನಗೆ ಇಲ್ಲಿರಲು ಇಷ್ಟ ಇಲ್ಲ.

ಶಿ.ರಾ.ಸ್ವಾಮಿ : ಪೆದ್ದ ಪೆದ್ದ ದೇಶಾಂತರನೂ ಬೇಡ ಏನೂ ಬೇಡ. ಹೇಗೂ ನಿನ್ನ ಕೈಯಲ್ಲಿ ಕಾಯಕ ಇದೆ. ಅದನ್ನು ಇಲ್ಲೇ ಮಾಡು. ನೀನು ಕಂಡುಂಡ ಜಾಗ. ಕಷ್ಟ ಅಂದಾಗ ಸ್ನೇಹಿತರು ಸಿಗುತ್ತಾರೆ. ಬಂಧುಗಳಿರುತ್ತಾರೆ. ಗೊತ್ತಿಲ್ಲದ ಜಾಗದಲ್ಲಿ ಹೋಗಿ ಸಾಯುವುದಕ್ಕಿಂತ ಗೊತ್ತಿರೋ ಜಾಗದಲ್ಲಿ ಕಷ್ಟಪಡುವುದು ಮೇಲಲ್ಲವೇನೋ.... ನೀನು ಏನು ಓದಿದ್ದೀಯಾ.

ಕ್ಷೌರಿಕ : ಎರಡನೇ ಕ್ಲಾಸು ಬುದ್ದಿ.

ಶಿ.ರಾ.ಸ್ವಾಮಿ : (ಮರಿ ಕಡೆಗೆ) ಒಳ್ಳೆ ಗ್ರಾಜುಯೇಟ್ ಸಿಕ್ಕ ಕಣಪ್ಪ (ನಗು) ಒಂದು ಕೆಲಸ ಮಾಡುತ್ತೀಯಾ.

ಕ್ಷೌರಿಕ : ಒಂದ್ಯಾಕೆ ಎಷ್ಟಾದರೂ ಹೇಳಿ ಬುದ್ದಿ ನಿಮ್ಮ ಪಾದ ಕಾಲಲ್ಲಿ ತೋರಿಸಿದ್ದನ್ನು ಶಿರದಲ್ಲಿ ಹೊತ್ತು ಮಾಡ್ತೀನಿ.





ಶಿ.ರಾ.ಸ್ವಾಮಿ : ಒಂದೇ ಕೆಲಸ ಮಾಡು ಸಾಕು. ನಾಳೆಯಿಂದ ನಮ್ಮ ವಿದ್ಯಾಪೀಠಕ್ಕೆ ಕೆಲಸಕ್ಕೆ ಬಾ. ಬೆಳಿಗ್ಗೆ 10 ಗಂಟೆವರೆಗೆ ಎಲ್ಲಾದರೂ ಸಲೂನಿನಲ್ಲಿ ನಿನ್ನ ಕಸುಬು ಮಾಡು. ಸಂಜೆ 5 ಗಂಟೆ ಮೇಲೂ ಅದನ್ನು ಮುಂದುವರಿಸು. 10 ರಿಂದ 5 ನಮ್ಮ ಆಫೀಸಿನಲ್ಲಿ ಕೆಲಸ. ತಿಳೀತೆ.

ಕ್ಷೌರಿಕ : ಆಗಲಿ ಬುದ್ದಿ ನಿಮ್ಮ ಪಾದ.

ಶಿ.ರಾ.ಸ್ವಾಮಿ : ತಗೋ ಈ ಹಣನ ಒಂದು ಜೊತೆ ಬಟ್ಟೆ ಹೊಲಿಸಿಕೋ. ಬೇರೆ ವ್ಯವಸ್ಥೆ ಮಾಡಿಕೊಳ್ಳೋವರೆಗೆ ಮಠದಲ್ಲಿದ್ದು ಊಟ ಮಾಡಿಕೋ. ಈಗ ಊಟ ಮಾಡು ಹೋಗು (ಹಣ ಕೊಡುವರು. ತೆಗೆದುಕೊಂಡು ಕ್ಷೌರಿಕ ನಿರ್ಗಮನ)

(ಸ್ವಾಮಿಗಳೂ ನಿರ್ಗಮಿಸುವರು. ಮೃದಂಗದೊಡನೆ ಅಂಧನ ಪ್ರವೇಶ) (ಅಂಧನೊಬ್ಬ ಮೃದಂಗವನ್ನು ಹೊತ್ತುಕೊಂಡು ಸ್ವಾಮಿಗಳು ಕುಳಿತು ಕೊಳ್ಳುವ ಪೀಠದ ಎಡತುದಿಯಲ್ಲಿ ಕೆಳಗೆ ಕುಳಿತು ಆವೇಷಭರಿತನಾಗಿ ನುಡಿಸಲು ಪ್ರಾರಂಭಿಸುವನು. ಹಾಗೆ ಅವನು ನುಡಿಸುತ್ತಿದ್ದಾಗ ಸದ್ದಾಗ ದಂತೆ ಬಂದು ಸ್ವಾಮಿಗಳು ತಮ್ಮ ಆಸನದಲ್ಲಿ ಆಸೀನರಾಗುವರು. ಅವರು ಬಂದದ್ದನ್ನು ಸೂಕ್ಷ್ಮವಾಗಿ ಗಮನಿಸಿದ ಅಂಧನು ನಿಲ್ಲಿಸದೆ ಮೃದಂಗವಾದನವನ್ನು ಮುಂದುವರಿಸುವನು. ಸ್ವಾಮಿಗಳೂ ತನ್ಮಯರಾಗಿ ಆಲಿಸುತ್ತ ಕಣ್ಣು ಮುಚ್ಚಿ ಕುಳಿತುಕೊಳ್ಳುವರು. ಯಾರೂ ಸದ್ದು ಮಾಡದಂತೆ ಸನ್ನೆ ಮಾಡುವರು. ಸ್ವಲ್ಪ ಸಮಯದ ನಂತರ ಒಮ್ಮೆಗೇ ನಿಲ್ಲಿಸಿ ಕುರುಡನು ಮಾತನಾಡುವನು)

ಅಂಧ ಕಲಾವಿದ : ಬುದ್ದಿ ನನ್ನ ಪ್ರಾರ್ಥನೆ ಶಿವನಿಗೆ ಮುಟ್ಟಿತು.

ಶಿ.ರಾ.ಸ್ವಾಮಿ : ಯಾವ ಪ್ರಾರ್ಥನೆ ಏತಕ್ಕಾಗಿ. ಅದಿರಲಿ, ನಾವು ಬಂದದ್ದು ನಿನಗೆ ಹೇಗೆ ಗೊತ್ತಾಯ್ತು.

ಅಂಧ : ದೇವರು ನಮ್ಮ ಕಣ್ಣ ಕಿತ್ತುಕೊಂಡರೂ ಇನ್ನೊಂದು ಅಂಗವನ್ನು ಕೊಟ್ಟಿದ್ದಾನೆ ಬುದ್ದಿ. ನೀವು ಸದ್ದಿಲ್ಲದೆ ಬಂದು ಕುಳಿತುಕೊಂಡಾಗಲೆ ನನಗೆ ಗೊತ್ತಾಯ್ತು. ನನ್ನ ಪ್ರಾರ್ಥನೆ ನಿಲ್ಲಿಸಬಾರದಲ್ಲ ಅಂತ ಮುಂದುವರಿಸಿದೆ. ನನ್ನ ಸ್ಪರ್ಷ, ಗಂಧ ಶಕ್ತಿ ಬಹಳ ಚೆನ್ನಾಗಿ ಕೆಲಸ ಮಾಡುತ್ತವೆ ಬುದ್ದಿ.

ಶಿ.ರಾ.ಸ್ವಾಮಿ : ಅದು ಹೇಗೆ ?





ಅಂಧ : ನನಗೆ ಗೊತ್ತಿರುವವರು ಮಾತನಾಡದೆ ಕೈ ಕೊಡಲಿ ಅವರು ಯಾರು ಅಂತ ಹೇಳುತ್ತೇನೆ.

ಶಿ.ರಾ.ಸ್ವಾಮಿ : (ಮರಿಗೆ ಸನ್ನೆ ಮಾಡಿ ಅವನ ಕೈ ತೆಗೆದುಕೊಂಡು ಕುರುಡನಿಗೆ ಕೊಡುತ್ತಾ) ಇವನಾರು ಹೇಳು ನೋಡೋಣ.

ಅಂಧ : (ಮರಿಯ ಕೈ ಹಿಡಿದು ನೋಡಿ) ಸಿದ್ಧಲಿಂಗದೇವರು ಅಲ್ಲವೆ ಬುದ್ದಿ.

ಶಿ.ರಾ.ಸ್ವಾಮಿ : (ಅಚ್ಚರಿಯಿಂದ) ಒಳ್ಳೆಯದು, ಏನು ಬಹಳ ಆವೇಶದಿಂದ ಮೃದಂಗ ನುಡಿಸುತ್ತಿದ್ದೆ.

ಅಂಧ : ಶಿವನನ್ನು ಕರೆಯುತ್ತಿದ್ದೆ ಬುದ್ದಿ.

ಶಿ.ರಾ.ಸ್ವಾಮಿ : (ನಗುತ್ತಾ) ಪ್ರತ್ಯಕ್ಷನಾದನೆ?

ಅಂಧ : ಓಹೋ, ಆಗದೆ, ನನ್ನ ಮೃದಂಗ ಅಂದರೆ ಏನು ತಿಳಿದುಕೊಂಡಿರಿ, ಸಾಕ್ಷಾತ್ ಅಲ್ಲಮನ ಮದ್ದಳೆ ಊಂ.

ಶಿ.ರಾ.ಸ್ವಾಮಿ : ಎಲ್ಲಿ ಮತ್ತೆ ಆ ನಿನ್ನ ಶಿವ, ನಮಗೂ ತೋರಿಸು.

ಅಂಧ : ಅವನು ನಿಮಗೆ ಕಾಣಲ್ಲ. ನಮಗೆ ಕಾಣುತ್ತಾನೆ. ಯಾಕೆ ಅಂದರೆ ಆ ಶಿವ ನೀವೇ. ನೀವು ಕನ್ನಡಿ ಮುಂದೆ ನಿಂತರೆ ಕಾಣಿಸುತ್ತಾನೆ.

ಶಿ.ರಾ.ಸ್ವಾಮಿ : ಇತ್ತೀಚೆಗೆ ನೀನು ಬಹಳ ಬುದ್ಧಿವಂತ ಆಗಿದ್ದೀಯ. ಇದೇನು ಈ ಹೊತ್ತು ಈ ಅವತಾರ. ಇದ್ದಕ್ಕಿದ್ದ ಹಾಗೆ ಮೃದಂಗ ತಂದು ನುಡಿಸಲು ಶುರು ಮಾಡಿದ್ದೀಯ ಏನು ಸಮಾಚಾರ.

ಅಂಧ : (ಸ್ವಲ್ಪ ಹೊತ್ತು ಯೋಚಿಸಿ ದುಃಖಭಾರದಿಂದ ದನಿ ಮಾಡುವನು. ಬುದ್ದಿ ಬುದ್ದಿ (ಮುಂದೆ ಮಾತು ಹೊರಡದಾಗುವುದು)

ಶಿ.ರಾ.ಸ್ವಾಮಿ : ಏನು, ಏನು ಸಮಾಚಾರ ಅದೇಕೆ ಬಿಕ್ಕಳಿಸುತ್ತಿದ್ದೀಯ ಅದೇನು ಹೇಳು.

ಅಂಧ : (ಸ್ವಾಮಿಗಳ ಪಾದಗಳನ್ನು ಹುಡುಕಿ ಗಟ್ಟಿಯಾಗಿ ಹಿಡಿದು ಬಿಟ್ಟು ಬಿಡದೆ) ಬುದ್ದಿ ನೀವು ನನ್ನ ಕೆಲಸವನ್ನು ಖಂಡಿತ ಮಾಡಿಕೊಡುತ್ತೇನೆ ಎಂದು ಹೇಳುವವರೆಗೆ ನಿಮ್ಮ ಪಾದ ಬಿಡಲ್ಲ ಬುದ್ದಿ. ನೀವು ಹೂಂ ಅನ್ನಿ, ಬುದ್ದಿ.

ಶಿ.ರಾ.ಸ್ವಾಮಿ : ಅದೇನು ಕೆಲಸ ಏನು ವಿಚಾರ ಮೊದಲು ಹೇಳು ಆಮೇಲೆ ನೋಡೋಣ ಮೊದಲು ನಮ್ಮ ಕಾಲುಗಳನ್ನು ಬಿಡು.

ಅಂಧ : ಇಲ್ಲ ಬುದ್ದಿ ನೀವು ನನ್ನ ಕೆಲಸ ಮಾಡಿಕೊಡುತ್ತೇನೆ ಎಂದು ಹೇಳುವವರೆಗೆ ನಿಮ್ಮ ಪಾದ ಬಿಡಲ್ಲ ನೀವು ಹೂಂ ಅನ್ನಿ.





ಶಿ.ರಾ.ಸ್ವಾ : ಇದೊಳ್ಳೆ ಕಾಟವಾಯಿತಲ್ಲ ಅದೇನು ಹೇಳು.

ಅಂಧ : ಹೂಂ ಅನ್ನಿ ಬುದ್ದಿ ಆಮೇಲೆ ನನ್ನ ವಿಚಾರ ಹೇಳ್ತೀನಿ.

ಶಿ.ರಾ.ಸ್ವಾಮಿ : ಇದೊಳ್ಳೆ ಕಷ್ಟವಾಯಿತಲ್ಲ ಹೂಂ. ಅದೇನು ಹೇಳು.

ಅಂಧ : ಆ, ಡಿ.ಡಿ.ಪಿ.ಐ ನನ್ನನ್ನು ಯಳಂದೂರಿಗೆ ವರ್ಗ ಮಾಡಿದ್ದಾರೆ ಬುದ್ದಿ. ನಾನು ಕುರುಡ. ಹೇಗೆ ಹೋಗಲಿ, ಅಲ್ಲಿ ಎಲ್ಲಿ ಇರಲಿ, ಇಲ್ಲಾದರೆ ನಿಮ್ಮ ಪಾದದ ಬಳಿ ಹೇಗೋ ಇರುತ್ತೇನೆ. ಇಲ್ಲಿ ನನ್ನ ನೆರವಿಗೆ ಹುಡುಗರು ಇದ್ದಾರೆ, ನಿಮ್ಮ ಪ್ರಸಾದನಿಲಯದಲ್ಲಿ ಊಟ ಆಗುತ್ತೆ. ನಿಶ್ಚಿಂತೆಯಾಗಿದ್ದೀನಿ. ಏನಾದರೂ ಮಾಡಿ ನನ್ನ ವರ್ಗಾವಣೆ ಮನ್ನಾ ಮಾಡಿಸಿ ಬುದ್ದಿ.

ಶಿ.ರಾ.ಸ್ವಾಮಿ : ಆಗಲಿ ಆ ಡಿಡಿಪಿಐಗೆ ಹೇಳುತ್ತೇನೆ ಮೊದಲು ಕಾಲು ಬಿಡು.

ಅಂಧ : ಅವರಿಗೆ ಈಗಲೇ ಫೋನ್ ಮಾಡಿ ನನ್ನ ಕಷ್ಟ ಪರಿಹರಿಸುವವರೆಗೆ ತಮ್ಮ ಚಿತ್ತ, ಪಾದ ಬಿಡಲ್ಲ ಬುದ್ದಿ.

ಶಿ.ರಾ.ಸ್ವಾಮಿ : ಇದೊಳ್ಳೆ ಕಾಟವಾಯಿತಲ್ಲ ನಿಂದು (ಮರಿಗೆ) ಆ ಡಿಡಿಪಿಐಗೆ ಫೋನ್ ತಗೋ (ಮರಿ ಫೋನ್ ಡಯಲ್ ಮಾಡಿ)

ಮರಿ : ಹಲೋ, ಇದು ಡಿಡಿಪಿಐ ಮನೇನ.

ಧ್ವನಿ : ಹೌದು.

ಮರಿ : ಸುತ್ತೂರು ಮಠದಿಂದ ಮಾತನಾಡುತ್ತಿರುವುದು.

ಧ್ವನಿ : ಯಾರು ಬೇಕು.

ಮರಿ : ಸಾಹೇಬರು ಇದ್ದಾರೆಯೇ.

ಧ್ವನಿ : ಇದ್ದಾರೆ.

ಮರಿ : ಅವರಿಗೆ ಕೊಡಿ.

ಧ್ವನಿ : ಹಲೋ.

ಮರಿ : ಡಿಡಿಪಿಐ ಸಾಹೇಬರಾ.

ಧ್ವನಿ : ಹೌದು ಯಾರು.

ಮರಿ : ನಾವು ಸುತ್ತೂರು ಮಠದಿಂದ, ಸ್ವಾಮಿಗಳು ಮಾತನಾಡುತ್ತಾರೆ ನೋಡಿ. (ರಿಸೀವರ್‌ನ್ನು ಸ್ವಾಮಿಗಳಿಗೆ ಕೊಡುವನು)

ಶಿ.ರಾ.ಸ್ವಾಮಿ : ಹಲೋ ಸಾಹೇಬರಾ, ಚೆನ್ನಾಗಿದ್ದೀರ.





ಧ್ವನಿ : ಹೌದು ಬುದ್ದಿ ನಾನೇ ಮಾತನಾಡುತ್ತಿರುವುದು ಏನು ಬುದ್ದಿ.

ಶಿ.ರಾ.ಸ್ವಾಮಿ : ನೋಡಿ ನಿಮ್ಮ ತಿಲಕ್ ನಗರದಲ್ಲಿರೋ ಕುರುಡು ಮೂಗರ ಶಾಲೆಯಲ್ಲಿರುವ ಸಂಗೀತ ಮೇಷ್ಟ್ರು, ಅದೇ ಆ ಅಂಧ ಕಲಾವಿದ.

ಧ್ವನಿ : ಗೊತ್ತು ಗೊತ್ತು ಅವರಿಗೆ ಯಳಂದೂರಿಗೆ ವರ್ಗವಾಗಿದೆ.

ಶಿ.ರಾ.ಸ್ವಾಮಿ : ಅದೇ ಅವನು ಅಂಧ. ಇಲ್ಲಿ ನಮ್ಮ ಮಠದಲ್ಲೇ ಇದ್ದಾನೆ. ಇಲ್ಲಾದರೆ ಅವನ ನೆರವಿಗೆ ಹುಡುಗರಿದ್ದಾರೆ. ಹೇಗೋ ಆಗುತ್ತೆ. ಅಲ್ಲಿ ಹೋದರೆ ಅದು ಹೊಸ ಜಾಗ. ಅವನಿಗೆ ತೊಂದರೆಯಾಗುತ್ತೆ. ನೋಡಿಕೊಳ್ಳುವವರು ಯಾರೂ ಇರಲ್ಲ. ಅಲ್ಲದೆ ಅವನಿಂದ ನಮಗೂ ಸ್ವಲ್ಪ ಅನುಕೂಲವಾಗುತ್ತಿದೆ. ನಮ್ಮ ಮಠದ ಹುಡುಗರಿಗೆ ಸಂಗೀತ ಪಾಠ ಹೇಳಿಕೊಡುತ್ತಿದ್ದಾನೆ. ಅದು ತಪ್ಪಿಹೋಗುತ್ತೆ. ಆದ್ದರಿಂದ ನಮಗೋಸ್ಕರ ಅವನ ವರ್ಗಾವಣೆಯನ್ನು ರದ್ದುಮಾಡಿಕೊಡಿ.

ಧ್ವನಿ : ಇವರೊಬ್ಬರಿಗೆ ಹಾಗೆ ಮಾಡಿದರೆ ಎಲ್ಲರೂ ಬರುತ್ತಾರೆ ಬುದ್ದಿ ಏನು ಮಾಡಲಿ.

ಶಿ.ರಾ.ಸ್ವಾಮಿ : ಇದೊಂದು ವಿಶೇಷ ಸಂದರ್ಭ ಅಂತ ತಿಳಿದು ಮಾಡಬೇಕು. ದಯವಿಟ್ಟು ನಮಗಾಗಿ ನಾವು ಏನೂ ಕೇಳಲ್ಲ. ಏನೋ ಆ ಅಂಧನಿಗೆ ಅನುಕೂಲವಾದರೆ ಅಷ್ಟೇ ಸಾಕು.

ಧ್ವನಿ : ಅಯ್ಯೋ ಅಯ್ಯೋ ತಾವೇಕೆ ದಯವಿಟ್ಟು ಅಂತೀರ ಆಯ್ತು ಮಾಡಿಕೊಡ್ತೀನಿ ಬುದ್ದಿ ಅದರ ಚಿಂತೆ ಬಿಡಿ. (ರಿಸೀವರ್ ಇಡುವರು)

ಶಿ.ರಾ.ಸ್ವಾಮಿ : ಆಯ್ತು ಈಗಲಾದರೂ ಕಾಲು ಬಿಡು.

ಅಂಧ : ಏನಂದರು ಬುದ್ದಿ.

ಶಿ.ರಾ.ಸ್ವಾಮಿ : ಮಾಡಿಕೊಡ್ತಾರಂತೆ ನಿಶ್ಚಿಂತೆಯಾಗಿರು ಹೋಗು. ಆ ಹುಡುಗರಿಗೆ ಸಂಗೀತಪಾಠ ಹೇಳು ಹೋಗು.

ಅಂಧ : ನಿಮ್ಮ ಪಾದ ಬುದ್ದಿ ನನಗೆ ಗೊತ್ತಿತ್ತು ನನ್ನ ಶಿವ ನನ್ನ ಕೈ ಬಿಡಲ್ಲ ಅಂತ. ನೂರು ವರ್ಷ ಬಾಳು ನಮ್ಮಪ್ಪನೆ (ಮತ್ತೊಮ್ಮೆ ನಮಸ್ಕಾರ ಮಾಡಿ ಮೃದಂಗವನ್ನು ಹೆಗಲಿಗೇರಿಸಿ ನಿರ್ಗಮನ) ಕತ್ತಲು. ಬೆಳಕು ಬಿದ್ದಾಗ - ಸೂತ್ರಧಾರ-ಮೇಳ ಹಾಡುತ್ತ ಬರುವರು.

ಮೇಳ 2 : ನನಗೆ ಗೊತ್ತಿತ್ತು ಆ ಶಿವ ಆ ಕುರುಡನ ಕೈ ಬಿಡಲ್ಲ ಅಂತ.





ಮೇಳ 1 : ಏ ನಿಮ್ಮ ಶಿವ ಅಲ್ಲೋ ಆ ಸ್ವಾಮಿಗಳು ಅವನನ್ನ ಕೈಬಿಡಲಿಲ್ಲ ಅಂತ ಹೇಳು.

ಮೇಳ 2 : ನೋಡಿ ನನ್ನನ್ನು ಎಲ್ಲರೂ ಪೆದ್ದ ಅಂತೀರಿ. ನನ್ನ ಮಾತಿನ ಅರ್ಥ ನಿಮಗೆ ಹೊಳೀಲೇ ಇಲ್ಲ.

ಮೇಳ 1 : ಏನಪ್ಪ ಬುದ್ದಿವಂತ ನಿನ್ನ ಮಾತಿನ ಅರ್ಥ.

ಮೇಳ 2 : ಆ ಕುರುಡ ಏನಂದ ಸ್ವಾಮಿಗಳಿಗೆ ..... ನನ್ನ ಪಾಲಿನ ಶಿವ ನೀವೇ ಬುದ್ದಿ ಅನ್ನಲಿಲ್ಲವಾ.

ಮೇಳ 1 : ಹಾಂ ಹೌದು ಹೌದು.

ಮೇಳ 2 : ಏನು ಹೌದು ಹೌದು. ಅದಕ್ಕೆ ನಾನು ಹೇಳಿದ್ದು 'ಆ ಶಿವ ಅವನನ್ನು ಕೈಬಿಡಲಿಲ್ಲ' ಅಂತ.

ಮೇಳ 1 : ಹಾಂ ಹೌದು ಹೌದು.

ಮೇಳ 2 : ಹಾಂ ಹೌದು ಹೌದು (ಅಣಕಿಸುವನು)
(ಸೂತ್ರಧಾರನನ್ನು ಗಮನಿಸಿ) ಅದೇಕಪ್ಪ ಸೂತ್ರಧಾರಪ್ಪ ಸುಮ್ಮನಾದೆ. ಏನೋ ಚಿಂತೆ ಮಾಡುತ್ತಿರುವಂತಿದೆ.

ಸೂತ್ರಧಾರ : ಸ್ವಾಮಿಗಳೇನೋ ಆ ಅಂಧನನ್ನು ಕೈಬಿಡಲಿಲ್ಲ. ಆದರೆ ಆ ರಾಕ್‌ಲ್ಯಾಂಡ್ ಸ್ವಾಮಿಗಳನ್ನು ಕೈಬಿಡೋ ಪ್ರಸಂಗ ಬಂತು.

ಮೇಳ 2 : ಅದೇನಪ್ಪಾ ಅದು. ರಾಕ್ ಅಂಡ್ ರೋಲ್.

ಸೂತ್ರಧಾರ : ಏ ಮೇಳ ರಾಕ್ ಅಂಡ್ ರೋಲ್ ಅಲ್ವೋ, ರಾಕ್ ಲ್ಯಾಂಡ್ ಜಾಗ.

ಮೇಳ 1 : ಅದೇನಪ್ಪಾ ಅದು ಹೊಸ ಜಾಗ. ಎಲ್ಲಿದೆ. ಏನ್‌ಕತೆ ಅದನ್ನೂ ಸ್ವಲ್ಪ ತೋರಿಸು ನೋಡಿಬಿಡುವ.

ಸೂತ್ರಧಾರ : ಈಗ ಊಟಿಗೆ ಹೋಗಬೇಕು. ಸಿದ್ಧವಾಗಿರಿ.

ಮೇಳ 2 : ಊಟಿ. ಉದಕಮಂಡಲ, ಭಾಪುರೆ, ಊಟಿ ಟ್ರಿಪ್ ರೆಡಿ. ನಡಿ
(ನಿರ್ಗಮನ)

**ಕೃಪೆ : ದಿವ್ಯ ಚೇತನ**





# ದರಿದ್ರದೇವೋ ಭವ

**ದೇಜಗೌ**

**ಬ**ಡವರ ಬಗೆಗಿನ ಶಿಷ್ಯನ ಕಾತರತೆಯನ್ನು ಹಿರಿಯ ಸ್ವಾಮಿಗಳು ಮೆಚ್ಚಿಕೊಳ್ಳುತ್ತಾರೆ. ಆದರೆ ಯಾವ ಕೆಲಸವನ್ನಾದರೂ ವ್ಯವಸ್ಥಿತವಾಗಿ, ಅಚ್ಚುಕಟ್ಟಾಗಿ ಮಾಡಬೇಕೆಂಬ ಆಶಯ ಅವರದು. ಒಳ್ಳೆಯ ಕೆಲಸಕ್ಕೆ ಏನೇ ಅಡ್ಡಿಗಳಿದ್ದರೂ, ತಡಮಾಡದೆ ಪ್ರಾರಂಭಿಸಬೇಕೆಂದೂ, ಅದಕ್ಕೆ ಸತ್‌ಶಕ್ತಿಗಳ ಸಹಾಯ ದೊರೆಯಬಹುದೆಂಬ ಆಶಾವಾದಿ ರಾಜೇಂದ್ರ ಸ್ವಾಮಿಗಳು, ದೈವಕೃಪೆಯೊಂದಿದ್ದರೆ ಎಲ್ಲವೂ ಸಾಂಗವಾಗಿ ಕೈಗೂಡುತ್ತದೆಂಬ ದೈವಶ್ರದ್ಧೆ ಅವರದು.

ಹೀಗಿರುವಾಗ ಸಣ್ಣದಾದರೂ ಪರಿಣಾಮಕಾರಿಯಾದ ಘಟನೆಯೊಂದು ನಡೆಯಿತು. ಸಂಸ್ಕೃತ ಪಾಠಶಾಲೆಯ ಮುಂದೆ ಅರಳಿಕಟ್ಟೆಯೊಂದಿತ್ತು. ಒಂದು ದಿನ ಮಧ್ಯಾಹ್ನದ ಸಮಯದಲ್ಲಿ ಆ ಕಟ್ಟೆಯ ಕಡೆಯಿಂದ ಬಂದ ಚೀರುವಿಕೆಯೊಂದು ರಾಜೇಂದ್ರ ಸ್ವಾಮಿಗಳ ಹೃದಯದಲ್ಲಿ ಕಂಪನವುಂಟುಮಾಡುತ್ತದೆ. ಕಿಟಕಿಯ ಮೂಲಕ ನೋಡಿದಾಗ ಕರಾಳ ದೃಶ್ಯವೊಂದು ಅವರ ಕಣ್ಣಿಗೆ ಬೀಳುತ್ತದೆ. ಹರಿದ ಕೊಳಕು ಅಂಗಿ ಚೆಡ್ಡಿಗಳನ್ನು ಹಾಕಿಕೊಂಡ ಕೆದರುದಲೆಯ, ಬಡಕಲು ದೇಹದ ಸಣ್ಣ ಹುಡುಗನ ಕನಿಕರದ ದೃಶ್ಯವದು. ವಿದ್ಯಾರ್ಥಿನಿಲಯದ ಹುಡುಗನೊಬ್ಬನನ್ನು ಕಳುಹಿಸಿ, ಅವನನ್ನು ಕರೆಸಿಕೊಂಡು ಅವನ ಸ್ಥಿತಿಗತಿಗಳನ್ನು ವಿಚಾರಿಸಿಕೊಳ್ಳುತ್ತಾರೆ. ಅವನು ಕಣ್ಣೀರು ಸುರಿಸುತ್ತ, ಗೋಳಾಡುತ್ತ ತನ್ನ ಕತೆಯನ್ನು ತಡೆತಡೆದು ಹೇಳುತ್ತಾನೆ.

'ಅವನೊಬ್ಬ ತಂದೆಯಿಲ್ಲದ, ಬಡಹುಡುಗ. ತನ್ನೂರಲ್ಲಿ ಮಾಧ್ಯಮಿಕ ಶಾಲೆಯ ಓದನ್ನು ಮುಗಿಸಿ, ಮುಂದಿನ ವಿದ್ಯಾಭ್ಯಾಸಕ್ಕಾಗಿ, ಕೂಲಿಯಿಂದ ಜೀವಿಸುತ್ತಿದ್ದ ತಾಯಿಯನ್ನೊಪ್ಪಿಸಿ, ಮೈಸೂರಿಗೆ ಬರುತ್ತಾನೆ. ವಾರಾನ್ನದಿಂದ ಜೀವಿಸುತ್ತ, ಯಾರದೋ ಮನೆಯ ಜಗುಲಿಯ ಮೇಲೆ ವಾಸಿಸುತ್ತಾನೆ. ವಾರಾನ್ನ ನೀಡುತ್ತಿದ್ದ ಎರಡು ಮನೆಗಳ ಯಜಮಾನರಿಗೆ, ಮತ್ತು ವಾಸದ ಜಗಲಿಯ ಮನೆಯ ಯಜಮಾನರಿಗೆ ಬೇರೆ ಊರಿಗೆ ವರ್ಗವಾಗಲಾಗಿ, ಊಟ ವಸತಿಗಳಿಂದ ವಂಚಿತನಾಗಿ, ಊರಿಗೆ ಹೋಗಲು ಹಣವಿಲ್ಲದೆ, ಎರಡು ಮೂರು ದಿನಗಳಿಂದ ಊಟವಿಲ್ಲದೆ ನೆಲೆಯಿಲ್ಲದೆ, ಯಾರೋ ಸುತ್ತೂರು ಮಠದ ಹೆಸರು ಹೇಳಿದರೆಂದು ಬಂದು, ಸ್ವಾಮಿಗಳು ಸಿಗಲಿಲ್ಲವಾಗಿ ಸುಸ್ತಾಗಿ, ಗೋಳಾಡುತ್ತ ಅರಳಿಕಟ್ಟೆಯ ಮೇಲೆ ಒರಗಿಕೊಂಡು, ಒಂದೇ ಸಮನೆ ಗೋಳಾಡುತ್ತಾನೆ.





ಅಷ್ಟನ್ನು ಹೇಳುವಷ್ಟರಲ್ಲಿ ಅವನು ಆಯಾಸಗೊಂಡು ಕೆಳಗೆ ಬಿದ್ದುಬಿಡುತ್ತಾನೆ. ಸ್ವಾಮಿಗಳು ಗಂಜಿ ಮಾಡಿಸಿ, ತರಿಸಿ, ಕುಡಿಸಿದ ಕೆಲವು ಕ್ಷಣಗಳ ನಂತರ ಮೇಲೇಳುತ್ತಾನೆ. ಎದ್ದವನೆ ಊರಿಗೆ ಹೋಗಿ ತಾಯಿಯನ್ನು ನೋಡಬೇಕೆಂದು ಅಳುವಿನ ನಡುವೆ ಹೇಳುತ್ತಾನೆ. ಸ್ವಾಮಿಯವರು ವಿದ್ಯಾರ್ಥಿನಿಲಯದ ಒಬ್ಬ ಹುಡುಗನನ್ನು ಜೊತೆ ಮಾಡಿ, ಅವನಿಗೆ ಪ್ರಯಾಣಕ್ಕೆ ಬೇಕಾದ ಹಣವನ್ನು ಕೊಟ್ಟು, ಕಳುಹಿಸುತ್ತಾರೆ.

ಸ್ವಾಮಿಗಳಿಗೆ ಕೆಲವು ದಿನ ನಿದ್ದೆಯೇ ಹತ್ತುವುದಿಲ್ಲ. ಎಲ್ಲಿ ಹೋದರೂ, ನಿಂತಲ್ಲಿ ಕುಳಿತಲ್ಲಿ ನಡೆಯುವಲ್ಲಿ ಅವನ ನೆನಪೇ ಅವರನ್ನು ಕಾಡುತ್ತದೆ. ಶವವನ್ನು, ರೋಗಿಯನ್ನು, ಭಿಕ್ಷುಕನನ್ನು, ದುಡಿಯುವ ರೈತನನ್ನು ನೋಡಿ, ಹೃದಯ ಕರಗಿ ಚೆಲುವೆ ಮಡದಿಯನ್ನು, ಮೋಹದ ಮಗನನ್ನು, ಪ್ರೀತಿಯ ತಂದೆತಾಯಿಯರನ್ನು, ವೈಭವೋಪೇತವಾದ ಅರಮನೆಯನ್ನು, ತುಂಬಿತುಳುಕುತ್ತಿದ್ದ ಶ್ರೀಮಂತಿಕೆಯನ್ನು ತ್ಯಜಿಸಿ, ದುಃಖದ ಕಾರಣ ಮತ್ತು ನಿವಾರಣೆಯ ಶೋಧಕ್ಕಾಗಿ, ಸತ್ಯಾನ್ವೇಷಣೆಗಾಗಿ, ನಟ್ಟನಡುರಾತ್ರಿಯಲ್ಲಿ ನಗರವನ್ನು ತೊರೆದುಹೋದ ಭಗವಾನ್ ಬುದ್ಧನ ನೆನಪು ಅವರ ಮನಸ್ಸನ್ನಾವರಿಸಿಕೊಳ್ಳುತ್ತದೆ. ಅಟ್ಟಹಾಸದಿಂದ ಮೆರೆಯುವ ನಿಷ್ಕರುಣ ಅಧಿಕಾರಿಗಳ, ಬಡವರನ್ನು ಶೋಷಣೆ ಮಾಡುವ ಶ್ರೀಮಂತರ, ದುಡಿಯದೆ ಉಣ್ಣುವವರ, ಎಷ್ಟು ಕಷ್ಟಪಟ್ಟರೂ ಒಂದು ಹೊತ್ತು ಊಟಕ್ಕೂ ಗತಿಯಿಲ್ಲದ ಬಡವರ ಮೆರವಣಿಗೆ ಅವರ ನೆನಹುಗಣ್ಣಿನ ಮುಂದೆ ಹಾದುಹೋಗುತ್ತವೆ. ಸ್ವಾಮಿ ವಿವೇಕಾನಂದ, ಮಹಾತ್ಮ ಗಾಂಧಿಯಂಥವರ ತ್ಯಾಗಜೀವನ, ಸಂದೇಶಗಳು ಅವರ ಕನಸಿನಲ್ಲಿ ಕಾಣಿಸಿಕೊಳ್ಳುತ್ತವೆ. ಹೀಗಾಗಿ ಸ್ವಾಮಿಗಳು ನಿದ್ದೆಯಿಲ್ಲದೆ, ಷಡಕ್ಷರಮಂತ್ರ ವನ್ನು ಜಪಿಸುತ್ತ ಹಲವು ರಾತ್ರಿಗಳನ್ನು ಕಳೆಯುತ್ತಾರೆ. ಒಮ್ಮೊಮ್ಮೆ ತಮ್ಮೆಡೆಗೆ ಬರುವ ಬಡಮಕ್ಕಳ ಕತೆಯನ್ನು ಕೇಳಿ ಕಣ್ಣೀರು ಸುರಿಸುತ್ತಾರೆ. ತಾವು ಮನೆಯನ್ನು ತೊರೆದು ಕಾವಿಯುಟ್ಟು ಸನ್ಯಾಸಿಯಾದದ್ದೇಕೆ? ಸನ್ಯಾಸಿಜೀವನ ಬರಿಯ ನಟನೆಯಲ್ಲಿಯೇ ಕೊನೆಗೊಳ್ಳಬೇಕೆ? ಛೀ, ಅಂಥ ಸನ್ಯಾಸಿಜೀವನಕ್ಕೆ ಧಿಕ್ಕಾರ!

ಆಗ ಅವರಿಗೆ ಗೌರೀಶಂಕರ ಸ್ವಾಮಿಗಳ ಜೊತೆಯಲ್ಲಿ ಕಳೆದ ದಿನಗಳು ನೆನಪಿಗೆ ಬರುತ್ತವೆ: ಅವರು ತಮಗಿತ್ತ ಬುದ್ಧಿವಾದ ಜ್ಞಾಪಕಕ್ಕೆ ಬರುತ್ತದೆ. 'ಹೌದು, ಅಜ್ಞಾನ ದಾರಿದ್ರ್ಯಗಳ ನಾಶದಿಂದ ಮಾತ್ರ ಈ ದೇಶದ ಉದ್ಧಾರ ಸಾಧ್ಯ; ಅವುಗಳ ನಾಶ ಸನ್ಯಾಸಿಗಳ ಕರ್ತವ್ಯವಾಗಬೇಕು. ಕಾಶಿ ಯಾತ್ರೆಯಿಂದ ಶ್ರೀ ಗೌರೀಶಂಕರ ಸ್ವಾಮಿಗಳ ದರ್ಶನ, ಸಂದರ್ಶನ ದೊರೆತದ್ದು ನನ್ನ ಸೌಭಾಗ್ಯ. ಅಜ್ಞಾನ, ದಾರಿದ್ರ್ಯಗಳ ನಿವಾರಣೆಯೇ ನನ್ನ ಸನ್ಯಾಸಿಜೀವನದ ತಪಸ್ಸಾಗಬೇಕು' ಎಂದವರು ಆದಿಜಗದ್ಗುರು ಶಿವರಾತ್ರೀಶ್ವರರ ಗದ್ದುಗೆಯ ಸನ್ನಿಧಿಯಲ್ಲಿ ಪ್ರತಿಜ್ಞಾಬದ್ಧರಾಗುತ್ತಾರೆ.





ಮಠದ ಎಲ್ಲ ವ್ಯವಹಾರಗಳೂ ಹಿರಿಯ ಗುರುಗಳ ಕೈಯಲ್ಲಿದ್ದುದರಿಂದ, ವಿದ್ಯಾರ್ಥಿನಿಲಯದ ಪ್ರಾರಂಭಕ್ಕೆ ಅವರ ಅನುಮತಿ ಸಿಗಲಾರದ ಕಾರಣ, ತಾವು ಆ ದಿಶೆಯಲ್ಲಿ ಮುಂದುವರಿಯುವ ಬಗ್ಗೆ ಅವರು ಹಗಲಿರುಳು ಆಲೋಚಿಸುತ್ತಾರೆ. ಆಗ ಅವರಿಗೆ ಚಿನ್ನದ ರುದ್ರಾಕ್ಷಿಸರ, ಚಿನ್ನದ ಕರಡಿಗೆ, ಪಟ್ಟಾಭಿಷೇಕದ ಸಂದರ್ಭದಲ್ಲಿ ತಮಗೆ ತೊಡಿಸಿದ ಉಂಗುರಗಳು ನೆನಪಿಗೆ ಬಂದು, ಆನಂದದ ಅಲೆಗಳ ಮೇಲೆ ತೇಲಾಡಿದ ಅನುಭವವಾಗುತ್ತದೆ. ರುದ್ರಾಕ್ಷಿಗಾಗಲಿ, ಲಿಂಗಕ್ಕಾಗಲಿ ಚಿನ್ನದ ಕವಚ ಅನಗತ್ಯವೆಂದು ಅವರು ಆ ಕ್ಷಣವೆ ಭಾವಿಸುತ್ತಾರೆ. ಬಡಮಕ್ಕಳ ಸೇವೆಯೇ ದೇವರ ಸೇವೆ, ದೇವರ ಸೇವೆಗೆ ಬಳಸುವ ಚಿನ್ನ ಸಾರ್ಥಕತೆ ಪಡೆಯುತ್ತದೆ ಎಂದು ನಿರ್ಣಯಿಸಿ, ಆ ಚಿನ್ನವನ್ನು ಮಾರಿ, ಬಂದ ಹಣದಿಂದ ಮನೆಯೊಂದನ್ನು ಬಾಡಿಗೆಗೆ ತೆಗೆದುಕೊಂಡು, ಅಗ್ಗದ ಅಲ್ಯುಮಿನಿಯಂ ಪಾತ್ರೆಗಳನ್ನು ಕೊಂಡು, ತಮ್ಮ ಯೋಜನೆಯನ್ನು ಕಾರ್ಯಗತಗೊಳಿಸುತ್ತಾರೆ. ಹಿರಿಯ ಗುರುಗಳಿಗೆ ತಮ್ಮ ಯೋಜನೆ ಗೊತ್ತಾದರೆ ಅಡ್ಡಿ ಬರಬಹುದೆಂದು ಗೊತ್ತಿದ್ದುದರಿಂದ, ದೇವರ ಕಾರ್ಯಕ್ಕೆ ಅವರ ಅನುಮತಿ ಅನಗತ್ಯವೆಂದುಕೊಂಡು, ಒಂದು ದಿನ ಶುಭ ಮುಹೂರ್ತದಲ್ಲಿ ಉಚಿತ ವಿದ್ಯಾರ್ಥಿ ನಿಲಯವನ್ನು ಪ್ರಾರಂಭಿಸುವುದೆಂದು ತೀರ್ಮಾನಿಸಿ ಶ್ರೀಮನ್ಮಹಾರಾಜರ ಆಪ್ತ ಕಾರ್ಯದರ್ಶಿಗಳಾಗಿದ್ದ ಶ್ರೀ ಕೆ. ಗುರುದತ್ತರಿಂದ ನಿಲಯದ ಉದ್ಘಾಟನೆಯನ್ನು ನೆರವೇರಿಸಿ ಬಿಟ್ಟರು. ಸ್ವಾಮಿಗಳು ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್‌ರ ಗಮನಕ್ಕೂ ಬಂದಿದ್ದರೆಂಬುದು ಗಮನಾರ್ಹ. ಮಂತ್ರಮಹರ್ಷಿಗಳ ಹೆಸರಿನಲ್ಲಿಯೆ ಆಹ್ವಾನಪತ್ರಿಕೆಗಳು ಅಚ್ಚಾಗಿದ್ದರೂ, ಅದು ಅವರಿಗೆ ತಲುಪಿರಲಿಲ್ಲವಾದ್ದರಿಂದ, ಅವರು ಉದ್ಘಾಟನಾ ಸಮಾರಂಭಕ್ಕೆ ಬಂದಿರಲಿಲ್ಲ. ಈ ವಿಷಯ ಗೊತ್ತಿಲ್ಲದವರಂತೆ ಮೌನ ತಾಳಿದ್ದರೂ, ಒಳಗೊಳಗೇ ಅವರು ಬಹುಶಃ ಶಿಷ್ಯನ ಸಾಹಸವನ್ನು ಮೆಚ್ಚಿಕೊಂಡಿದ್ದಿರಬೇಕು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಭವಿಷ್ಯಕ್ಕೆ, ಅದರ ಅಸದೃಶವೂ ಅದ್ಭುತವೂ ಆದ ಸಾಧನೆ ಸಿದ್ಧಿಗಳಿಗೆ ಈ ವಿದ್ಯಾರ್ಥಿನಿಲಯವೇ ಬುನಾದಿಯಾಯಿತು. ಪ್ರಾರಂಭದಲ್ಲಿ ಹನ್ನೆರಡು ಮಂದಿ ವಿದ್ಯಾರ್ಥಿಗಳಿದ್ದರೂ, ರಾಜೇಂದ್ರ ಸ್ವಾಮಿಗಳ ಮಾತೃಹೃದಯದ ಔದಾರ್ಯದಿಂದಾಗಿ ಆ ಸಂಖ್ಯೆ ಹೆಚ್ಚುತ್ತ ಹೋಯಿತು. ಬರಬರುತ್ತ ಅದು ಬಸವೇಶ್ವರರ ಕಲ್ಪನೆಯ ದಾಸೋಹ ಮಂದಿರವೆ ಆಗುತ್ತದೆ. ಮಠದಿಂದ ಬರುತ್ತಿದ್ದ ದವಸಧಾನ್ಯಗಳಾಗಲಿ, ಹಣವಾಗಲಿ ನಿಲಯದ ನಿರ್ವಹಣೆಗೆ ಸಾಕಾಗುತ್ತಿರಲಿಲ್ಲ. ಭಕ್ತರ ಕಾಣಿಕೆಯಿಂದ, ಸಾಲಸೋಲಗಳಿಂದ ಮಕ್ಕಳಿಗೆ ಸ್ವಲ್ಪವೂ ತೊಂದರೆಯಾಗದಂತೆ ನೋಡಿಕೊಳ್ಳುತ್ತಿದ್ದರು. ನಿಧಾನವಾಗಿ ಆ ಸಾಲಗಳನ್ನು ತೀರಿಸುತ್ತಿದ್ದರು. ಕಾಲಕ್ರಮೇಣ ನಿಲಯದ ಕೀರ್ತಿ





ಗ್ರಾಮಾಂತರ ಪ್ರದೇಶಗಳಲ್ಲಿ ಹರಡಿತು; ಗ್ರಾಮಗಳ ಮುಖಂಡರ ಗಮನಕ್ಕೆ ತಲುಪುತ್ತಿತ್ತು. ಅವರು ಸ್ವಾಮಿಗಳನ್ನು ಪರಿಚಯಿಸಿಕೊಳ್ಳಲು ಹಾತೊರೆಯುತ್ತಿದ್ದರು.

ನಿಲಯದ ನಿರ್ವಹಣೆ ಸ್ವಾಮೀಜಿಯವರ ಕಾಲವನ್ನೆಲ್ಲ ಕಬಳಿಸುತ್ತಿದ್ದುದರಿಂದ ಅವರು ತಮ್ಮ ವ್ಯಾಸಂಗವನ್ನು ನಿಲ್ಲಿಸಬೇಕಾಯಿತು. ಸಂಸ್ಕೃತದ ಪವಿತ್ರ ಗ್ರಂಥಗಳನ್ನು ಅರ್ಥಮಾಡಿಕೊಳ್ಳುವಷ್ಟು ಸಂಸ್ಕೃತವನ್ನು, ವ್ಯವಹಾರಕ್ಕೆ ಸಾಕಾಗುವಷ್ಟು ಇಂಗ್ಲಿಷ್ ಭಾಷೆಯನ್ನು ಅವರು ಕಲಿತಿದ್ದರು. ಸಂಸ್ಕೃತದಲ್ಲಿ ಮಹಾ ವಿದ್ವಾಂಸರಾಗಬೇಕೆಂಬ ಅವರ ಮೊದಲ ಅಭೀಪ್ಸೆ ಈಡೇರದಿದ್ದರೂ, ಶಿಕ್ಷಣ ಕ್ಷೇತ್ರದಲ್ಲಿ ಅವರು ನಡೆಸಿದ ಸಾಹಸ ಇಡೀ ಜಗತ್ತಿಗೆ ಮಾದರಿಯಾಯಿತೆಂದೂ, ಸಾಂಸ್ಕೃತಿಕ ಕ್ಷೇತ್ರದಲ್ಲಿ ಸಾಧಿಸಿದ ಸಿದ್ಧಿ ಅನನ್ಯವಾದದ್ದೆಂದೂ ಹೇಳಬಹುದಾಗಿದೆ; ಕರ್ನಾಟಕದಲ್ಲಂತೂ ಅವರ ಸಾಧನೆ ಮನೆಮಾತಾಗಿದೆ. ಧರ್ಮಪ್ರಸಾರದಲ್ಲಿ ಜ್ಞಾನಕ್ಕೆ ಪ್ರಮುಖ ಸ್ಥಾನವಿರುವುದರಿಂದ, ಜ್ಞಾನಕ್ಕೆ ತಳಹದಿಯಾದ ಶಿಕ್ಷಣಕ್ಷೇತ್ರಕ್ಕೆ ಅವರು ಸಲ್ಲಿಸಿರುವ ಸೇವೆ ಅನುಪಮವಾಗಿದೆ; ಅವರೊಬ್ಬ ವಿಶಿಷ್ಟ ಧರ್ಮಪ್ರವರ್ತಕರಂತೆ ಪ್ರಕಾಶಿಸುತ್ತಾರೆ.

ಶ್ರೀ ರಾಜೇಂದ್ರ ಸ್ವಾಮಿಗಳ ಸೇವೆಯನ್ನು ಮೆಚ್ಚಿದ ಹಿರಿಯ ಸ್ವಾಮಿಗಳು ವಾಣೀ ವಿಲಾಸ ರಸ್ತೆಯಲ್ಲೊಂದು ದೊಡ್ಡ ಕಟ್ಟಡವನ್ನು ಖರೀದಿಸಿ, ಹೆಚ್ಚು ಹುಡುಗರನ್ನು ಸೇರಿಸಿಕೊಳ್ಳಲು ಅನುವು ಮಾಡಿಕೊಡುತ್ತಾರೆ. ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ದವಸಧಾನ್ಯಗಳ ಕೊಡುಗೆಯನ್ನು ಹೆಚ್ಚಿಸುತ್ತಾರೆ. ಮೈಸೂರು ಬೆಂಗಳೂರುಗಳನ್ನು ಹೊರತುಪಡಿಸಿ ಬೇರೆ ಕಡೆ ಬಿ.ಎ. ಆನರ್ಸ್ ಮತ್ತು ಎಂ.ಎ. ತರಗತಿಗಳಿಲ್ಲದೆ ಇದ್ದುದರಿಂದ ಸಂಸ್ಥಾನದ ನಾನಾ ಕಡೆಗಳ ವಿದ್ಯಾರ್ಥಿಗಳು ಮೈಸೂರಿನ ಕಡೆಗೆ ಬರುತ್ತಿರುತ್ತಾರೆ. ಮೈಸೂರಿನಲ್ಲಿ ವಿದ್ಯಾರ್ಥಿನಿಲಯದ ಸೌಕರ್ಯಗಳಿವೆಯೆಂದು ತಿಳಿದ ವಿದ್ಯಾರ್ಥಿಗಳು ಅರ್ಜಿ ಹಾಕುವುದಲ್ಲದೆ, ಮುಖಂಡರಿಂದ ಶಿಫಾರಸು ಪತ್ರಗಳನ್ನು ತರುತ್ತಾರೆ. ಪ್ರವೇಶ ಸಂಖ್ಯೆಯನ್ನು ನೂರರ ತನಕ ಹೆಚ್ಚಿಸಿದರೂ, ದಾವಣಗೆರೆ, ಶಿವಮೊಗ್ಗ, ಚಿತ್ರದುರ್ಗಗಳ ಕಡೆಯಿಂದ ಬರುತ್ತಿದ್ದ ಎಲ್ಲ ವಿದ್ಯಾರ್ಥಿಗಳಿಗೂ ಅವಕಾಶ ಕಲ್ಪಿಸಲು ಸಾಧ್ಯವಾಗುತ್ತಿರಲಿಲ್ಲ.

ದೊಡ್ಡ ನಗರಗಳಿಗೆ ಹೋಲಿಸಿದರೆ ಗ್ರಾಮಾಂತರ ಪ್ರದೇಶದಲ್ಲಿ ಶಿಕ್ಷಣ ಸೌಕರ್ಯಗಳಿಲ್ಲದೆ ಅಲ್ಲಿಯ ಮಕ್ಕಳು ಅವಿದ್ಯಾವಂತರಾಗಿಯೇ ಉಳಿಯಬೇಕಾಗುತ್ತದೆ. ಇಂಥ ಅನನುಕೂಲಗಳಿಂದಾಗಿ ಹಳ್ಳಿಯ ಹುಡುಗರು ಹಿಂದುಳಿಯಬೇಕಾಗುತ್ತದೆ. ರಾಜೇಂದ್ರ ಸ್ವಾಮಿಗಳ ಲಕ್ಷ್ಯವೆಲ್ಲ ಯಾವಾಗಲೂ ಅಜ್ಞಾನ, ದಾರಿದ್ರ್ಯಗಳ ನಿವಾರಣೆಯತ್ತಲೇ ಹರಿಯುತ್ತಿತ್ತು. ಪ್ರಯೋಗಾರ್ಥವಾಗಿ ಅವರು ಮೊದಲು ಟಿ.ನರಸೀಪುರವನ್ನು ಆರಿಸಿಕೊಂಡು, ಅಲ್ಲಿಯ ಮುಖಂಡರ ಸಭೆ ಸೇರಿಸಿ, ಅವರಿಂದ





ನೆರವಿನ ವಾಗ್ದಾನವನ್ನು ಪಡೆದು, ಬಾಡಿಗೆ ಮನೆಯೊಂದರಲ್ಲಿ ವಿದ್ಯಾರ್ಥಿನಿಲಯವನ್ನು ಸ್ಥಾಪಿಸುತ್ತಾರೆ. ತಾಲ್ಲೂಕಿನ ನಾನಾ ಕಡೆಗಳಿಂದ ಅಲ್ಲಿಗೆ ವಿದ್ಯಾರ್ಥಿಗಳು ಬರುತ್ತಾರೆ. ಹಳ್ಳಿಯ ಮಕ್ಕಳ ವ್ಯಾಸಂಗೋತ್ಸಾಹವನ್ನು ಕಂಡು ಸ್ವಾಮಿಗಳು ಆನಂದಭರಿತರಾಗು ತ್ತಾರೆ. ಅಲ್ಲಿಯ ಜನರ ಮತ್ತು ವಿದ್ಯಾರ್ಥಿಗಳ ಕಾತರತೆಯನ್ನೂ, ಉತ್ಸಾಹವನ್ನೂ ಕಂಡು ಹರ್ಷಿತರಾದ ಸ್ವಾಮಿಗಳು 1945ರ ಅಂತ್ಯದ ಹೊತ್ತಿಗೆ ಅಲ್ಲಿ ಮನೆಯೊಂದನ್ನು ಕೊಂಡುಕೊಂಡು, ಎಲ್ಲ ಸೌಕರ್ಯಗಳನ್ನೂ ಒದಗಿಸುತ್ತಾರೆ.

ಚಾಮರಾಜನಗರ ತಾಲ್ಲೂಕು ತುಂಬ ಹಿಂದುಳಿದ ಪ್ರದೇಶ. ಸ್ವಾಮಿಗಳು ಆ ಊರಿಗೆ ಪಯಣಿಸಿ, ಅಲ್ಲಿಯ ಮುಖಂಡರನ್ನು ಸೇರಿಸಿ, ಅವರೊಡನೆ ಸಮಾಲೋಚನೆ ನಡೆಸಿ, ಬಾಡಿಗೆ ಮನೆಯಲ್ಲಿ ವಿದ್ಯಾರ್ಥಿನಿಲಯವನ್ನು ಸ್ಥಾಪಿಸುತ್ತಾರೆ. ಇದು ನಡೆದದ್ದೂ 1945 ರಲ್ಲಿಯೆ. ಮೊದಮೊದಲು ಕೆಲವು ಜನ ವಿದ್ಯಾರ್ಥಿನಿಲಯಗಳ ಸ್ಥಾಪನೆಯ ಬಗ್ಗೆ ಸ್ವಾಮಿಗಳಿಗಿದ್ದ ಉತ್ಸಾಹವನ್ನೂ ಆತುರವನ್ನೂ ಕಂಡು ಅವುಗಳು ನಡೆಯುವ ಬಗ್ಗೆ ಸಂದೇಹ ವ್ಯಕ್ತಪಡಿಸುತ್ತಾರೆ. ಅಂಥವರಿಗೆ ಸ್ವಾಮಿಗಳು ಕೊಡುತ್ತಿದ್ದ ಉತ್ತರವಿದು: "ನಾನೊಬ್ಬ ಸನ್ಯಾಸಿ, ವಿದ್ಯಾರ್ಥಿನಿಲಯಗಳಿಂದ ನಾನೇನೂ ಲಾಭವನ್ನು ನಿರೀಕ್ಷಿಸುತ್ತಿಲ್ಲ. ಸತ್ಕಾರ್ಯ ಸಾಧನೆಯಷ್ಟೆ ನನ್ನ ಉದ್ದೇಶ. ಅಜ್ಞಾನವನ್ನು ಹೋಗಲಾಡಿಸ ಬೇಕೆಂಬುದು ನನ್ನ ಅಭಿಮತ. ಅದರಿಂದಾಗಿ ನಾನು ವಿದ್ಯಾರ್ಥಿನಿಲಯಗಳ ಸ್ಥಾಪನೆ ಶಿವಸೇವೆಯೆಂದು ಬಗೆದು, ಈ ಯೋಜನೆಯನ್ನು ಕೈಗೆತ್ತಿಕೊಂಡಿದ್ದೇನೆ. ಶಿವಕಾರ್ಯಕ್ಕೆ ಸೋಲಿಲ್ಲವೆಂಬುದು ನನ್ನ ಅಚಲವಾದ ವಿಶ್ವಾಸ. ಆ ಕಾರ್ಯ ಮಧ್ಯೆ ನಿಂತುಹೋದರೆ ನಾನೇನೂ ಚಿಂತಿಸುವುದಿಲ್ಲ. ಎಲ್ಲವೂ ಶಿವಲೀಲೆಯೆಂದು ನಾನು ಬಗೆಯುತ್ತೇನೆ. ವಿದ್ಯಾರ್ಥಿನಿಲಯಗಳ ಖಾಯಂ ನಿರ್ವಹಣೆಗೆ ಅಲ್ಲಲ್ಲಿಯ ಮುಖಂಡರ ಮತ್ತು ಜನರ ಹೊಣೆಗಾರಿಕೆಯೂ ಇರಬೇಕೆಂದು ಸ್ಪಷ್ಟಪಡಿಸುತ್ತೇನೆ".

ಆಗ ಮೈಸೂರು ಜಿಲ್ಲೆಯ ಅನೇಕ ತಾಲ್ಲೂಕುಗಳಲ್ಲಿ ಪ್ರೌಢಶಾಲೆಗಳೇ ಇರಲಿಲ್ಲ. ಶಾಲೆಗಳಿಲ್ಲದಿದ್ದರೆ ವಿದ್ಯಾರ್ಥಿನಿಲಯಗಳೇಕೆ ಎಂಬ ಪ್ರಶ್ನೆ ಸ್ವಾಮಿಗಳ ಮನಸ್ಸಿನಲ್ಲಿ ಮೂಡುತ್ತದೆ. ಶಾಲೆಗಳನ್ನು ಮತ್ತು ವಿದ್ಯಾರ್ಥಿನಿಲಯಗಳನ್ನು ನಡೆಸುವುದಾದರೆ ಸರ್ಕಾರದಿಂದ ಅನುದಾನ ದೊರೆಯುತ್ತದೆಂಬ ಸಂಗತಿ ಸ್ವಾಮಿಗಳಿಗೆ ತಿಳಿದಿತ್ತು. ಅದರಿಂದಾಗಿ ಅವರಿಗೆ ವಿದ್ಯಾ ಇಲಾಖೆಯ ಸಂಪರ್ಕ ಅತ್ಯಗತ್ಯವೆಂದು ಕಂಡುಬಂದದ್ದರಿಂದ ಆಗಾಗ್ಗೆ ರೈಲಿನಲ್ಲಿಯೋ ಬಸ್ಸಿನಲ್ಲಿಯೋ ಬೆಂಗಳೂರಿಗೆ ಹೋಗಬೇಕಾಗುತ್ತಿತ್ತು. ಅವಶ್ಯವಾದರೆ ಜೊತೆಯಲ್ಲಿ ಒಬ್ಬೊಬ್ಬರು ಸಹಾಯಕರನ್ನು ಕರೆದೊಯ್ಯುತ್ತಿದ್ದರು. ಒಂದೆರಡು ದಿನ ಬೆಂಗಳೂರಿನಲ್ಲಿ ಉಳಿಯಬೇಕಾದ ಸಂದರ್ಭವೊದಗಿದರೆ





ಯಾವುದಾದರೂ ಮಠದಲ್ಲಿ ರಾತ್ರಿಗಳನ್ನು ಕಳೆಯುತ್ತಿದ್ದರು. ಕೆಲವು ಮಠಗಳಲ್ಲಿ ಪ್ರಸಾದಕ್ಕೆ ಅವಕಾಶವಿರುತ್ತಿರಲಿಲ್ಲ. ದಿನವೆಲ್ಲ ಜಟಕಾಗಾಡಿಯಲ್ಲಿ ಕಚೇರಿಗಳಿಗೆ ಭೇಟಿಕೊಟ್ಟು, ಸಂಜೆ ವೇಳೆಗೆ ತಾವು ಇಳಿದುಕೊಂಡಿದ್ದ ಮಠಕ್ಕೆ ಬಂದು, ಸ್ನಾನ ಪೂಜೆ ಮುಗಿಸಿ, ಜೊತೆಯವರನ್ನು ಹೋಟೆಲುಗಳಿಗೆ ಕಳಿಸಿ, ತಾವು ನೀರು ಕುಡಿದು, ಅದೇ ಪ್ರಸಾದವೆಂದು ಹೇಳುತ್ತ, ಪಂಚಾಕ್ಷರಿಯನ್ನು ಜಪಿಸುತ್ತ ಮಲಗುತ್ತಿದ್ದರು. ಅವರು ಹಳ್ಳಿಗಳಿಗೆ ಹೋದಾಗಲೂ ಇದೇ ಕ್ರಮವನ್ನನುಸರಿಸುತ್ತಿ ದ್ದರು. ಎಷ್ಟು ಹೊತ್ತಾದರೂ ಮೈಸೂರಿಗೆ ವಾಪಸು ಬಂದು ಸ್ನಾನ ಪೂಜೆ ಮುಗಿಸಿಯೇ ಪ್ರಸಾದ ತೆಗೆದುಕೊಳ್ಳುತ್ತಿದ್ದುದು.

ವಾಣೀವಿಲಾಸ ರಸ್ತೆಯ ವಿದ್ಯಾರ್ಥಿನಿಲಯ ಬಹು ಬೇಗನೆ ರಾಜೇಂದ್ರ ಸ್ವಾಮಿಗಳ ಮಹತ್ವಾಕಾಂಕ್ಷೆಯ ದೃಷ್ಟಿಗೆ ತುಂಬ ಚಿಕ್ಕದಾಗಿ ಕಾಣಿಸುತ್ತದೆ. ಅದೇ ವರ್ಷ, ಅಂದರೆ 1948 ರಲ್ಲಿ, ಅವರು 'ಗೌರೀಶಂಕರ ಆಶ್ರಮ' ಎಂಬ ಮತ್ತೊಂದು ನಿಲಯವನ್ನು ತೆರೆಯುತ್ತಾರೆ. ಮುಂದಿನ ವರ್ಷ ಬನ್ನಿಮಂಟಪದಲ್ಲಿ ಜಾಗವನ್ನು ಪಡೆದು ಮತ್ತೊಂದು ನಿಲಯವನ್ನು ಪ್ರಾರಂಭಿಸುತ್ತಾರೆ. ಆದರೆ ಅವರಿಗೆ ಸುತ್ತೂರಿನಿಂದ ಬರುತ್ತಿದ್ದ ಸಾಮಗ್ರಿಗಳು ಇಪ್ಪತ್ತು ದಿನಗಳಿಗೆ ಮಾತ್ರ ಸಾಕಾಗುತ್ತಿದ್ದುವು; ಅಂಗಡಿಗಳಿಂದ ಸಾಲ ತಂದು ಉಳಿದ ದಿನಗಳ ಅವಶ್ಯಕತೆಗಳನ್ನು ಅವರು ಪೂರೈಸುತ್ತಿದ್ದರು. ಸಾಲ ತೀರುವೆ ನಿಧಾನವಾದಾಗ ಮತ್ತೆ ಮತ್ತೆ ಸಾಲ ಕೊಡಲು ಅಂಗಡಿಯವರು ಹಿಂದೆ ಮುಂದೆ ನೋಡುತ್ತಿದ್ದುದೂ ಉಂಟು.

* * *

**ಭಿಕ್ಷಾಟನಲೀಲೆ**

ವಿದ್ಯಾರ್ಥಿನಿಲಯವೊಂದರ ಮ್ಯಾನೇಜರು ಒಂದು ಬೆಳಗ್ಗೆ ಸ್ವಾಮಿಗಳ ಬಳಿ ಬಂದು "ಅಕ್ಕಿ ಮುಗಿದುಹೋಗಿದೆ. ಮಧ್ಯಾಹ್ನಕ್ಕೆ ಹೇಗೋ ಸರಿಹೊಂದಿಸಬಹುದು. ರಾತ್ರಿಗೆ ಇಲ್ಲವೇ ಇಲ್ಲ" ಎಂದರು. ಸ್ವಾಮಿಗಳು ಕೂಡಲೇ ಸ್ನಾನ ಪೂಜೆ ಪ್ರಸಾದ ಮುಗಿಸಿ, ಆದಿ ಜಗದ್ಗುರುಗಳನ್ನು ನೆನೆಯುತ್ತ ಕಾರಿನಲ್ಲಿ ಹಳ್ಳಿಗಳ ಕಡೆಗೆ ಹೊರಡುತ್ತಾರೆ. ಶಿವನ ಭಿಕ್ಷಾಟನಲೀಲೆ ಸ್ವಾಮಿಗಳ ಮೂಲಕ ಮತ್ತೊಮ್ಮೆ ಪ್ರದರ್ಶನವಾಗುತ್ತದೆ. ಮುಂಚಿತವಾಗಿ ತಿಳಿಸದೆ ಬಂದ ಸ್ವಾಮೀಜಿಯನ್ನು ನೋಡಿ ಭಕ್ತರು ಆಶ್ಚರ್ಯಚಕಿತರಾಗುತ್ತಾರೆ. ಏನೋ ಅನಿರೀಕ್ಷಿತ ಘಟನೆ ಸಂಭವಿಸಿರಬೇಕೆಂದು ಊಹಿಸಿಕೊಂಡು ಅವರನ್ನು ಶ್ರದ್ಧಾಭಕ್ತಿಗಳಿಂದ ಸ್ವಾಗತಿಸುತ್ತಾರೆ. ಎಂದಿನಂತೆ ಅವರ ಮುಖವನ್ನಾವರಿಸಿದ್ದ ಮಂದಸ್ಮಿತವನ್ನು ನೋಡಿ ಅವರು ಸಮಾಧಾನ ತಂದುಕೊಂಡು, ತಮ್ಮೂರಿಗೆ ದಯಮಾಡಿಸಿದ ಉದ್ದೇಶವೇನೆಂದು





ವಿನಯದಿಂದ ಕೇಳುತ್ತಾರೆ. ಸ್ವಾಮಿಗಳು ತಮ್ಮ ಮುಂದಿದ್ದ ಭಕ್ತರ ಕ್ಷೇಮಸಮಾಚಾರಗಳನ್ನು ವಿಚಾರಿಸಿದಾಗ ಭಕ್ತರಿಗೆ ಸಮಾಧಾನ ವಾಗುತ್ತದೆ. ಆಗ ಸ್ವಾಮೀಜಿಯವರು ವಿದ್ಯಾರ್ಥಿನಿಲಯಗಳ ಸ್ಥಿತಿಗತಿಗಳನ್ನು ವಿವರಿಸುತ್ತಾರೆ. ಭಕ್ತರ ಮುಖಂಡರಲ್ಲೊಬ್ಬರು ಎದ್ದು, ಅಜ್ಞಾನನಿವಾರಣೆಗಾಗಿ ಸ್ವಾಮಿಗಳು ಅನುಭವಿಸುತ್ತಿರುವ ಪಾಡು ಬವಣೆಗಳನ್ನು ಕಲ್ಲುಗಳೂ ಕರಗುವಂತೆ ವರ್ಣಿಸುತ್ತಾರೆ. ಅಷ್ಟು ಹೊತ್ತಿಗೆ ಬೇರೆ ಊರುಗಳ ಮುಖಂಡರೂ ಬಂದು ಗುಂಪಿನಲ್ಲಿ ಸೇರಿಕೊಳ್ಳುತ್ತಾರೆ. ಸಂಜೆ ಹೊತ್ತಿಗೆ ಒಂದೆರಡು ಪಲ್ಲ ಅಕ್ಕಿ ಜಮೆಯಾಗುತ್ತದೆ. ಮಾರನೆಯ ಬೆಳಗ್ಗೆ ಅಕ್ಕಿಯನ್ನು ಬನ್ನಿಮಂಟಪದ ವಿದ್ಯಾರ್ಥಿನಿಲಯಕ್ಕೆ ಕಳಿಸುವಂತೆ ಮುಖಂಡರಿಗೆ ತಿಳಿಸಿ ಕಾರಿನ ಡಿಕ್ಕಿಯಲ್ಲೊಂದು ಮೂಟೆಯನ್ನಿರಿಸಿಕೊಂಡು ಸ್ವಾಮೀಜಿ ಮೈಸೂರಿನತ್ತ ಹೊರಡುತ್ತಾರೆ. ಅವರು ವಿದ್ಯಾರ್ಥಿನಿಲಯವನ್ನು ಸೇರುವಷ್ಟರಲ್ಲಿ ರಾತ್ರಿ ಹತ್ತು ಗಂಟೆ.

ಅಷ್ಟರಲ್ಲಿ ಮ್ಯಾನೇಜರು ಪ್ರತಿಯೊಬ್ಬ ಹುಡುಗನಿಗೂ ನಾಲ್ಕಾಣೆಯಂತೆ ಹಂಚಿ, ಏನಾದರೂ ತಿಂಡಿ ತಿಂದು ಬಂದು ಮಲಗುವಂತೆ ಹೇಳಿರುತ್ತಾರೆ. ಸ್ವಾಮಿಗಳು ರಾತ್ರಿ ಹತ್ತು ಗಂಟೆಯಲ್ಲಿ ಅಡುಗೆಯವರನ್ನೆಬ್ಬಿಸಿ, ಅಡುಗೆಯನ್ನು ಮಾಡಿಸಿ, ಮಕ್ಕಳನ್ನು ಎಚ್ಚರಿಸಿ, ಅವರೆಲ್ಲರಿಗೂ ಊಟ ಬಡಿಸುತ್ತಾರೆ. ಸ್ವಾಮಿಗಳೇ ಪ್ರತಿಯೊಬ್ಬ ಹುಡುಗನ ಬಳಿ ಬಂದು, ಹೊಟ್ಟೆತುಂಬ ಊಟ ಮಾಡುವಂತೆ ಪ್ರೋತ್ಸಾಹಿಸುತ್ತಾರೆ.

ಹಬ್ಬಹರಿದಿನಗಳಲ್ಲಿ ಹೋಳಿಗೆ, ಚಿರೋಟಿ ಮೊದಲಾದ ಸಿಹಿತಿಂಡಿಗಳನ್ನು ಮಾಡಿಸಿ ಸ್ವಾಮೀಜಿ ಊಟದ ಸಮಯದಲ್ಲಿ ಮಕ್ಕಳ ಬಳಿ ನಿಂತು, ಚೆನ್ನಾಗಿ ತಿನ್ನುವಂತೆ ಪ್ರೀತಿಯಿಂದ ಒತ್ತಾಯಿಸುತ್ತಿದ್ದರು. ಯಾರು ಪುಷ್ಕಳವಾಗಿ ಊಟ ಮಾಡುತ್ತಾರೆಯೊ ಅವರು ಗಟ್ಟಿಮುಟ್ಟಾಗುತ್ತಾರೆ ಮಾತ್ರವಲ್ಲ, ಓದುವುದೂ ಸೇರಿದಂತೆ ಯಾವ ಕೆಲಸ ಕೊಟ್ಟರೂ ಸಮರ್ಥವಾಗಿ ಮಾಡುತ್ತಾರೆಂದು ಹೇಳಿ ಮಕ್ಕಳನ್ನು ಉಬ್ಬಿಸುತ್ತಿದ್ದರು. ಒಂದು ದಿನವೂ ಸ್ನಾನ ಪೂಜೆಗಳನ್ನು ಬಿಡಬಾರದೆಂದೂ, ಭಜನೆಗಳಲ್ಲಿ ಭಾಗವಹಿಸ ಬೇಕೆಂದು ಕಟ್ಟಾಜ್ಞೆ ಮಾಡುತ್ತಿದ್ದರು. ಶಾಲಾ ಕಾಲೇಜುಗಳಲ್ಲಿ ನಡೆಯುವ ಸ್ಪರ್ಧೆಗಳಲ್ಲಿ ಭಾಗವಹಿಸಬೇಕೆಂದು ಸೂಚನೆ ನೀಡುತ್ತಿದ್ದರು. ಕಷ್ಟದಲ್ಲಿದ್ದ ಹುಡುಗರಿಗೆ ಧನ ಸಹಾಯವನ್ನೂ ಮಾಡುತ್ತಿದ್ದರು. ಸ್ಪರ್ಧೆಗಳಲ್ಲಿ ಗೆದ್ದವರನ್ನು ಹತ್ತಿರಕ್ಕೆ ಕರೆದು, ಬೆನ್ನು ತಟ್ಟಿ, ಹೊಗಳುತ್ತಿದ್ದರು.

ಕಾಶಿಯಲ್ಲಿ ಮೂವತ್ತು ವರ್ಷಕಾಲ ಇದ್ದು ಅಪಾರ ಜ್ಞಾನವನ್ನೂ, ಮಹಾತ್ಮ ಗಾಂಧೀಜಿಯವರಂಥ ಗೌರವಾನ್ವಿತರ ಸ್ನೇಹವನ್ನೂ ಸಂಪಾದಿಸಿದ ಶ್ರೀ ಗೌರೀಶಂಕರ ಮಹಾಸ್ವಾಮಿಗಳು ತಮ್ಮ ಕೆಲಸ ಪೂರೈಸಿದ ನಂತರ ಮೈಸೂರಿಗೆ ಹಿಂತಿರುಗುತ್ತಾರೆ. ಅವರ ಆಗಮನದಿಂದ ರಾಜೇಂದ್ರ ಸ್ವಾಮಿಗಳು ಆನಂದತುಂದಿಲರಾದರು. ತಾವು ಬಯಸಿದ





ಭಾಗ್ಯತಾರೆ ತಾನಾಗಿಯೇ ಕೈಸೇರಿದಾಗ ಅವರ ಸಂತಸ ಮುಗಿಲು ಮುಟ್ಟುತ್ತದೆ. ಅವರ ವಿದ್ವತ್ ಕಾಮಧೇನುವಿನ, ತಪಸ್ಸಾಧನೆಯ ಪರಮ ಪ್ರಯೋಜನ ರಾಜ್ಯದ ಜನರಿಗೆ ಭಾಷಣ ಸಂಭಾಷಣೆಗಳ ರೂಪದಲ್ಲಿ, ಕೃತಿರೂಪದಲ್ಲಿ ಒದಗಬೇಕೆಂಬುದು ಸ್ವಾಮೀಜಿಯವರ ಅಪೇಕ್ಷೆಯಾಗಿತ್ತು. ಆ ಕಾರಣಕ್ಕಾಗಿ ಅವರು ಮೈಸೂರು, ಸುತ್ತೂರುಗಳಲ್ಲಿ ಅನೇಕ ಅನುಕೂಲಗಳನ್ನು ಕಲ್ಪಿಸಿದ್ದಲ್ಲದೆ, ಧಾರವಾಡ, ಬಿಜಾಪುರ ಸೇರಿದಂತೆ ರಾಜ್ಯದ ಹಲವು ಭಾಗಗಳಲ್ಲಿ ಅವರ ಜ್ಞಾನಾಮೃತವಾಹಿನಿಯು ಪ್ರವೇಶಿಸಲು ಅವಕಾಶ ಕಲ್ಪಿಸಿದರು. ಅವರ ನಿರಂತರ ಸಹವಾಸ, ಪ್ರೋತ್ಸಾಹಗಳಿಂದಾಗಿ ರಾಜೇಂದ್ರ ಸ್ವಾಮಿಯವರ ಉತ್ಸಾಹ ಸಂಭ್ರಮಗಳು ವ್ಯೋಮವಿಸ್ತಾರವಾಗಿ ಹರಿಯುತ್ತವೆ.

ತಮ್ಮ ಸಲಹೆಯನ್ನು ಗೌರವಿಸಿ, ಮೈಸೂರಿಗೆ ಹಿಂದಿರುಗಿ ಬಂದ ಕೆಲವೇ ವರ್ಷಗಳಲ್ಲಿ ರಾಜೇಂದ್ರ ಸ್ವಾಮಿಗಳು ಸಾಧಿಸಿದ ಸಾಹಸಕಾರ್ಯಗಳನ್ನು ಕಣ್ಣಾರೆ ಕಂಡ ಗೌರೀಶಂಕರ ಸ್ವಾಮಿಗಳು ಆಶ್ಚರ್ಯಚಕಿತರಾಗಿ, ಅವರ ಕ್ರತುಶಕ್ತಿಯನ್ನು, ಕರ್ತೃತ್ವಸಾಮರ್ಥ್ಯವನ್ನು, ಸೃಜನಶೀಲ ಪ್ರತಿಭೆಯನ್ನು ಪ್ರಶಂಸಿಸುತ್ತಾರೆ. "ನೀವೊಂದು ದೀಪವಾಗಿ ಬೆಳಗಬೇಕೆನ್ನುತ್ತೀರೊ? ಅಥವಾ ನಿಮ್ಮಿಂದ ಸಹಸ್ರಾರು ದೀಪಗಳು ಬೆಳಗಬೇಕೆನ್ನುತ್ತೀರೊ? ಆಲೋಚನೆ ಮಾಡಿ ನೋಡಿ" ಎಂದು ಅಂದು ಅವರು ಕಾಶಿಯಲ್ಲಿ ನುಡಿದಿದ್ದ ಭವಿಷ್ಯವಾಣಿ ನಿಜವಾಗಿರುವುದನ್ನು ನೋಡಿ ರಾಜೇಂದ್ರ ಸ್ವಾಮಿಗಳವರಿಗೆ ಹಿಂದೆ ತಾವಾಡಿದ್ದ ಜ್ಯೋತಿಷ್ಯವನ್ನು ಜ್ಞಾಪಿಸುತ್ತಾರೆ. "ನೀವು ಮಾಡಿರುವ ಸಾಧನೆಗೆ, ನಿಮ್ಮ ಸೃಜನಶೀಲ ಪ್ರತಿಭೆಗೆ ಎಷ್ಟು ಡಿಗ್ರಿಗಳನ್ನು ಕೊಟ್ಟರೂ ಕಡಮೆಯೆ" ಎಂದು ಅವರನ್ನು ಹೊಗಳುತ್ತಾರೆ. ವಿದ್ಯಾರ್ಥಿನಿಲಯ ಹಾಗೂ ಶಾಲೆಗಳ ಸ್ಥಾಪನೆಗೆ ಅವರು ಪಟ್ಟ ಪಾಡುಗಳನ್ನು ಕೇಳಿ ಅವರ ಕಾರ್ಯನಿಷ್ಠೆಗೆ ಬೆರಗಾದ ಶ್ರೀ ಗೌರೀಶಂಕರ ಸ್ವಾಮಿಗಳು "ನಿಯತಕಾಲದಲ್ಲಿ ಸ್ನಾನ ಪೂಜೆ ಪ್ರಸಾದಗಳನ್ನು ಮಾಡುವ ಮೂಲಕ ನಿಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು. ನೀವು ಆರೋಗ್ಯವಾಗಿದ್ದರೆ ಮಾತ್ರ ಇನ್ನೂ ಅಧಿಕವಾಗಿ ಸಮಾಜಕ್ಕೆ ಸೇವೆ ಸಲ್ಲಿಸುವ ಮೂಲಕ ನೀವು ಶಿವನ ಮೆಚ್ಚುಗೆಗೆ ಪಾತ್ರರಾಗುತ್ತೀರಿ" ಎಂದು ಅವರಿಗೆ ಪ್ರೀತಿ ಎಚ್ಚರಿಕೆಯನ್ನು ನೀಡುತ್ತಾರೆ.

ಅರಮನೆಯ ಪಂಚಗವಿ ಮಠದ ಅಧ್ಯಕ್ಷರಾಗಿದ್ದ ಗೌರೀಶಂಕರ ಸ್ವಾಮಿಗಳು ಅತ್ಯಂತ ಪ್ರಾಚೀನವಾದ ಸುತ್ತೂರು ಮಠದ ಬಗೆಗಿದ್ದ ಅಭಿಮಾನದಿಂದ ಅದರೊಡನೆ ನಿಕಟ ಸಂಪರ್ಕವನ್ನು ಹೊಂದಿದ್ದರು. ರಾಜೇಂದ್ರ ಸ್ವಾಮಿಗಳು ನಿತ್ಯವೂ ಸಾಧ್ಯವಿದ್ದಷ್ಟು ಹೊತ್ತು ಅವರ ಜೊತೆಯಲ್ಲಿದ್ದು, ಅವರಿಂದ ಲೌಕಿಕ ಹಾಗೂ ಪಾರಲೌಕಿಕ ವಿಚಾರಗಳನ್ನು ಕಲಿಯುತ್ತಿದ್ದರು. ಹಿರಿಯ ಜಗದ್ಗುರು ಪಟ್ಟದ ಶ್ರೀ ಶಿವರಾತ್ರೀಶ್ವರ ಸ್ವಾಮಿಗಳ ಆರೋಗ್ಯ





ತೃಪ್ತಿಕರವಾಗಿಲ್ಲದ್ದನ್ನು, ಆಗಾಗ್ಗೆ ಅವರಿಗೆ ಬರುತ್ತಿದ್ದ ಆಸ್ತಮ ಖಾಯಿಲೆಯ ಬಗ್ಗೆ ಚಿಂತಾಕ್ರಾಂತರಾಗುತ್ತಾರೆ. ಆಕರ್ಷಕವಾಗಿದ್ದ ದೊಡ್ಡದಾದ ನೋಟು ಪುಸ್ತಕವೊಂದನ್ನು ತರಿಸಿ, ಅದರ ಮೊದಲ ಪುಟದಲ್ಲಿ ಪ್ರಣವಸಹಿತ ಪಂಚಾಕ್ಷರೀ ಮಂತ್ರವನ್ನು ನಾಲ್ಕು ಸಾಲುಗಳಲ್ಲಿ ಬರೆಯುತ್ತಾರೆ. "ಪ್ರತಿನಿತ್ಯ ತದೇಕ ಚಿತ್ತರಾಗಿ ಈ ಮಂತ್ರವನ್ನು ಬರೆಯುತ್ತಿದ್ದರೆ, ಈ ಲೇಖನ ತಪಸ್ಸೇ ನಿಮ್ಮ ನಿತ್ಯಕಾಯಕವಾಗುವುದಾದರೆ ನಿಮ್ಮ ಆರೋಗ್ಯ ಸುಧಾರಿಸುತ್ತದೆ, ಶಿವಶಕ್ತಿ ನಿಮ್ಮ ಮೈಗೂಡುತ್ತದೆ" ಎಂದು ಗೌರೀಶಂಕರ ಸ್ವಾಮಿಗಳು ಶಿವರಾತ್ರೀಶ್ವರ ಸ್ವಾಮಿಗಳಿಗೆ ಸಲಹೆ ನೀಡುತ್ತಾರೆ. ಗೌರೀಶಂಕರ ಸ್ವಾಮಿಗಳ ಅಂದವಾದ ಬರವಣಿಗೆಯನ್ನು ನೋಡಿದ ಅವರ ಮನಸ್ಸು ಅರಳುತ್ತದೆ; ಆ ಶಿವಕಾರ್ಯವನ್ನು ಅವರು ಜೀವಮಾನದುದ್ದಕ್ಕೂ ಮುಂದುವರಿಸುತ್ತಾರೆ. ಕೆಲವೇ ದಿನಗಳಲ್ಲಿ ಅವರ ಆರೋಗ್ಯ ಸುಧಾರಿಸುತ್ತದೆ; ಚಿಂತಾಕ್ರಾಂತರಾಗಿದ್ದ ರಾಜೇಂದ್ರ ಸ್ವಾಮಿಗಳು ಪ್ರಫುಲ್ಲಚಿತ್ತರಾಗುತ್ತಾರೆ; ಎಂದಿಗಿಂತ ಹೆಚ್ಚು ಹುಮ್ಮಸ್ಸಿನಿಂದ ತಮ್ಮ ಕಾರ್ಯವನ್ನು ಮುಂದುವರಿಸುತ್ತಾರೆ. ಅಂದಿನಿಂದ ಹಿರಿಯ ಗುರುಗಳು 'ಮಂತ್ರಮಹರ್ಷಿ'ಗಳೆಂದೇ ಪ್ರಖ್ಯಾತರಾಗುತ್ತಾರೆ. ಮಂತ್ರಲೇಖನದ ಪ್ರಾರಂಭದಿಂದಲೇ ಅವರು ಮಠದ ಜವಾಬ್ದಾರಿಯನ್ನು ರಾಜೇಂದ್ರ ಸ್ವಾಮಿಗಳಿಗೆ ವಹಿಸುತ್ತಾರೆ.

ಶ್ರೀ ಗೌರೀಶಂಕರ ಸ್ವಾಮಿಗಳು ಮೈಸೂರಿಗೆ ಹಿಂದಿರುಗಿದ ನಂತರ ಪಂಚಗವಿಮಠ ಅನೇಕ ಧಾರ್ಮಿಕ ಕಾರ್ಯಕ್ರಮಗಳ ಕ್ರಿಯಾತ್ಮಕ ಕೇಂದ್ರವಾಗುತ್ತದೆ. ಮಹಾರಾಜ ಜಯಚಾಮರಾಜ ಒಡೆಯರ್ ಮತ್ತು ಮಹಾರಾಣಿಯವರು ಆಗಾಗ್ಗೆ ಮಠಕ್ಕೆ ಹೋಗಿ ಬರುತ್ತ, ಅವರ ಪ್ರವಚನಗಳನ್ನು ಕೇಳುತ್ತ, ಅವರೊಡನೆಯ ಅಧ್ಯಾತ್ಮಸಂಬಂಧಿ ಸಂಭಾಷಣೆಗಳಿಂದ ಪ್ರಭಾವಿತರಾಗಿ, ಮಾನವಜನ್ಮದ ಉದ್ದೇಶವನ್ನು ಅರ್ಥಮಾಡಿ ಕೊಳ್ಳುತ್ತಾರೆ. ಮಹಾರಾಜರ ಪ್ರಜಾವಾತ್ಸಲ್ಯವನ್ನು, ಜ್ಞಾನದಾಹವನ್ನು, ಸೌಜನ್ಯವನ್ನು, ಮಹೋನ್ನತ ಗುಣಗಳನ್ನು ಕಂಡು ಗೌರೀಶಂಕರ ಮಹಾಸ್ವಾಮಿಗಳು ಅವರನ್ನು ಮನಸಾರೆ ಮೆಚ್ಚಿಕೊಳ್ಳುತ್ತಾರೆ. ಸದಾ ಗೌರೀಶಂಕರ ಸ್ವಾಮಿಗಳ ಜೊತೆಯಲ್ಲಿರುತ್ತಿದ್ದ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳಿಗೂ ಜಯಚಾಮರಾಜ ಒಡೆಯರ ಪರಿಚಯವಾಗಿ, ಪರಿಚಯ ಪವಿತ್ರ ಮೈತ್ರಿಯಾಗಿ ಪರಿಣಮಿಸುತ್ತದೆ. ಸ್ವಾಮೀಜಿಯವರ ಶೈಕ್ಷಣಿಕ ಚಟುವಟಿಕೆಗಳನ್ನು, ಜನಸೇವೆಯನ್ನು, ತ್ಯಾಗವನ್ನು, ಶ್ರಮಜೀವನವನ್ನು, 'ಸಕಲ ಜೀವಿಗಳಿಗೆ ಲೇಸನೆ ಬಯಸುವ' ಮನೋಧರ್ಮವನ್ನು ಗುರುತಿಸಿದ ಮಹಾರಾಜರು ಅವರನ್ನು ಗುರುವಾಗಿ ಸ್ವೀಕರಿಸಿ, 'ರಾಜಗುರುತಿಲಕ' ಎಂಬ ಬಿರುದಿನ ಮೂಲಕ ಅವರನ್ನು ಗೌರವಿಸುತ್ತಾರೆ.

ರಾಜೇಂದ್ರ ಸ್ವಾಮಿಗಳಿಗೆ ಗುರುವಿನಂತಿದ್ದ, ಸಖರಂತಿದ್ದ, ಮಾರ್ಗದರ್ಶಕ ರಂತಿದ್ದ ಗೌರೀಶಂಕರ ಸ್ವಾಮಿಗಳು ಹೆಚ್ಚು ದಿನ ಬದುಕಿರುವುದು ಕ್ರೂರವಿಧಿಗೆ ಹಿಡಿಸಲಿಲ್ಲ. ಕೆಲವು





ವರ್ಷಗಳಲ್ಲಿಯೇ ಉದರಶೂಲೆಯ ವ್ಯಾಧಿ ಕಾಣಿಸಿಕೊಂಡು, ಕ್ರಮೇಣ ತೀವ್ರಗೊಳ್ಳಲಾಗಿ, ಭಕ್ತರ ಒತ್ತಾಯದಿಂದಾಗಿ ಅವರು ವೆಲ್ಲೂರು ಆಸ್ಪತ್ರೆಗೆ ದಾಖಲಾದರು. ಯಾವ ಚಿಕಿತ್ಸೆಯೂ ಫಲಕಾರಿಯಾಗದೆ 12.8.1952 ರಲ್ಲಿ ಅವರು ಲಿಂಗೈಕ್ಯರಾದರು. ಅವರ ಭಕ್ತಮಂಡಲಿಗಿಂತ ಹೆಚ್ಚಾಗಿ ಶೋಕತಪ್ತರಾದವರು ಶಿವರಾತ್ರಿ ರಾಜೇಂದ್ರ ಸ್ವಾಮಿಗಳು. ಅವರಿಗೆ ಕೆಲವು ಕಾಲ ದೈನಂದಿನ ಕರ್ತವ್ಯ ನಿರ್ವಹಣೆಯೂ ಕಷ್ಟವಾಗುತ್ತದೆ. ಅವರ ಆತ್ಮಸ್ವರೂಪದ ಬುದ್ಧಿವಾದವನ್ನೂ ಮಾರ್ಗದರ್ಶನವನ್ನೂ ನೆನೆನೆನೆದು, ಅವರು ತಮ್ಮ ಹೃದಯದಲ್ಲಿ ನೆಲೆಸಿದ್ದಾರೆಂದು ಬಗೆದು, ತಮ್ಮ ವಿಸ್ತರಣ ಕಾರ್ಯಕ್ರಮಗಳಿಂದ ಅವರ ಆತ್ಮಕ್ಕೆ ಶಾಂತಿಯುಂಟಾಗುತ್ತದೆಂದು ಭಾವಿಸಿ, ಎಂದಿನಂತೆ ಅವರು ಕಾರ್ಯೋದ್ಯುಕ್ತರಾಗುತ್ತಾರೆ.

ಮೈಸೂರು, ಟಿ. ನರಸೀಪುರ, ಚಾಮರಾಜನಗರಗಳಲ್ಲಿ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಿದ ರಾಜೇಂದ್ರ ಸ್ವಾಮಿಯವರು ಅಷ್ಟಕ್ಕೇ ತೃಪ್ತರಾಗಲಿಲ್ಲ. ಒಂದೆರಡು ಊರುಗಳು ಅಜ್ಞಾನಮುಕ್ತವಾದರೆ ಸಾಕೆ? ಇಡೀ ರಾಜ್ಯದಲ್ಲಿ ಅದು ಹರಡಿದಾಗ ಮಾತ್ರ ಎಲ್ಲೆಲ್ಲೂ ಬೆಳಕಾಗುತ್ತದೆಯೆಂಬುದು ಅವರ ಸಿದ್ಧಾಂತವಾಗಿತ್ತು. ಜ್ಞಾನ ಮಾನವನ ಮೂಲಭೂತ ಜೀವನತತ್ತ್ವ. ಅದರ ಅಸ್ತಿತ್ವದಿಂದ ದಾರಿದ್ರ್ಯ, ರೋಗ ಮೊದಲಾದ ವಿಪತ್ತುಗಳು ವಿನಾಶಗೊಳ್ಳುತ್ತವೆಂಬುದು ಅವರ ವೈಜ್ಞಾನಿಕ ವಾದ. ವಿವಿಧೆಡೆಗಳಿಂದ ಬಂದ ಭಕ್ತರು ತಂತಮ್ಮ ಊರುಗಳಲ್ಲಿ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸುವಂತೆ ಸ್ವಾಮಿಗಳಲ್ಲಿ ಅರಿಕೆ ಮಾಡಿಕೊಳ್ಳುತ್ತಿದ್ದರು. ಕೆಲವೆಡೆಗಳಲ್ಲಿ ನಿಲಯಗಳನ್ನು ಸ್ವಾಮಿಗಳೇ ಸ್ಥಾಪಿಸಲು ಮುಂದಾಗುತ್ತಿದ್ದರು. ತೆರಕಣಾಂಬಿ, ಕೃಷ್ಣರಾಜನಗರ, ಯಳಂದೂರು, ರಾಮಾಪುರ, ಹೊಳೆನರಸೀಪುರ, ಹಳ್ಳಿಮೈಸೂರು- ಇವೇ ಮೊದಲಾದ ಊರುಗಳಲ್ಲಿ ಪ್ರಸಾದನಿಲಯಗಳು ಸ್ಥಾಪನೆಗೊಂಡು, ವಿದ್ಯಾರ್ಥಿಗಳ ಸಂಖ್ಯೆ ಐದು ಸಾವಿರವನ್ನು ಮೀರಿತು. ಈ ನಿಲಯಗಳಲ್ಲಿ ಎಲ್ಲ ಜಾತಿಯ ಮತ್ತು ಮತಗಳ ವಿದ್ಯಾರ್ಥಿಗಳಿಗೆ ಮುಕ್ತ ಪ್ರವೇಶಾವಕಾಶವಿರುತ್ತಿತ್ತು.

ವೀರಶೈವ ಪ್ರಸಾದನಿಲಯಗಳಲ್ಲಿ ಮುಸ್ಲಿಮರಂಥ ಅನ್ಯಮತೀಯರನ್ನು, ಹರಿಜನರೇ ಮೊದಲಾದ ಅನ್ಯಜಾತಿಯವರನ್ನು ಸೇರಿಸಿಕೊಳ್ಳಬಹುದೆ ಎಂದು ಕೆಲವರು ಆಕ್ಷೇಪಣೆ ತೆಗೆಯುತ್ತಾರೆ. ಆಗ ಅವರಿಗೆ ಸ್ವಾಮೀಜಿ ಕೊಡುವ ಉತ್ತರವಿದು: "ವೀರಶೈವ ಮತ್ತು ವೀರಶೈವೇತರರ ನಡುವೆ ಇರುವ ವ್ಯತ್ಯಾಸವೇನು? ವೀರಶೈವರಿಗಿರುವಂತೆ ಅವರಿಗೂ ಕೈಯೆರಡು, ಕಣ್ಣೆರಡು, ಕಿವಿಯೆರಡು, ಕಾಲೆರಡು ಇವೆಯಲ್ಲವೆ? ಅವರೂ ಎಲ್ಲರಂತೆ ಬಾಯಿ ಮುಖಾಂತರ ತಾನೆ ಉಣ್ಣುವುದು, ಕುಡಿಯುವುದು; ಅವರಂತೆ ಮೂಗಿನಲ್ಲಿ ತಾನೆ ಉಸಿರಾಡುವುದು, ವೀರಶೈವರ ಮೇಲೆ ಬೀಸುವ ಗಾಳಿ ಅವರ ಮೇಲೂ





ಬೀಸುತ್ತದಲ್ಲವೆ? ಎಲ್ಲ ಮಾನವರ ಮೇಲೆ ಬೀಳುವ ಸೂರ್ಯ ಚಂದ್ರ ನಕ್ಷತ್ರಗಳ ಬೆಳಕು ಒಂದೆಯಲ್ಲವೆ? ಭೂಮಿಯ ಮೇಲೆ ನಡೆದಾಡುವ ಎಲ್ಲ ಮಾನವರ ನಿತ್ಯಕರ್ಮಗಳು ಏಕರೀತಿಯವಾಗಿರುವುದರಿಂದ ವರ್ಣ ಜಾತಿಗಳ ಭೇದ ಸರಿಯೆ? ಆದ್ದರಿಂದಲೆ ಬಸವೇಶ್ವರರು ವರ್ಣಭೇದ ಜಾತಿಭೇದಗಳನ್ನು ತಿರಸ್ಕರಿಸಿದ್ದು. ಈ ಬಗ್ಗೆ ಅವರೇನು ಹೇಳುತ್ತಾರೆ, ಕೇಳಿ:

ನೆಲನೊಂದೆ ಹೊಲಗೇರಿ ಶಿವಾಲಯಕ್ಕೆ
ಜಲವೊಂದೆ ಶೌಚಾಚಮನಕ್ಕೆ
ಕುಲವೊಂದೆ ತನ್ನ ತಾನರಿದವಂಗೆ
ಫಲವೊಂದೆ ಷಡುದರುಶನ ಮುಕ್ತಿಗೆ
ನೆಲವೊಂದೆ, ಕೂಡಲಸಂಗಮದೇವಾ,
ನಿಮ್ಮನರಿದವಂಗೆ

ಬಸವಣ್ಣನವರು ನಡೆದು ನುಡಿದದ್ದನ್ನು ಈ ದೇಶ ಮರೆತದ್ದರಿಂದಲೇ ದೇಶ ಅಜ್ಞಾನ ದಾರಿದ್ರ್ಯಗಳಲ್ಲಿ ಒದ್ದಾಡುವಂತಾಯಿತು ಎಂದು ಹೇಳಿ ಪ್ರಶ್ನೆ ಕೇಳಿದವರ ಬಾಯಿಯನ್ನು ಮುಚ್ಚಿಸುತ್ತಾರೆ.

ಆಗಿನ ಕಾಲದಲ್ಲಿ ಪ್ರೌಢಶಾಲೆಗಳು ಅಲ್ಲೊಂದು ಇಲ್ಲೊಂದಿದ್ದು ಅವು ಸಾಮಾನ್ಯವಾಗಿ ನಗರಗಳಿಗೆ ಮೀಸಲಾಗಿದ್ದುವು. ಇನ್ನು ಕಾಲೇಜುಗಳ ಹೆಸರು ಕೇಳಿದವರೆ ಬಹಳ ಕಡಿಮೆ. ಪ್ರೌಢಶಿಕ್ಷಣವನ್ನಾದರೂ ಎಲ್ಲರಿಗೂ ದೊರಕಿಸಬೇಕೆಂಬ ದೃಷ್ಟಿಯಿಂದ ಶ್ರೀಗಳು 1954ರಲ್ಲಿ ಮೈಸೂರಿನಲ್ಲಿ ಒಂದು ಜೆಎಸ್‌ಎಸ್ ಪ್ರೌಢಶಾಲೆಯನ್ನು ತೆರೆಯುತ್ತಾರೆ. ತೆರೆದರು, ನಿಜ. ಆದರೆ ಅದಕ್ಕೆ ಸೂಕ್ತವಾದ ಸ್ಥಳ ಸಿಗಲಿಲ್ಲ. ಹೈಸ್ಕೂಲಿಗೊಂದು ನೆಲೆ ಕಲ್ಪಿಸಲು ಜಾಗಕ್ಕಾಗಿ ಸ್ವಾಮೀಜಿಯವರು ಪರದಾಡುತ್ತಿದ್ದರೆಂಬ ಸಂಗತಿ ಮಹಾರಾಜ ಜಯಚಾಮರಾಜ ಒಡೆಯರ ಗಮನಕ್ಕೆ ಬಂತು. ತಮ್ಮ ಸರ್ಕಾರ ಜರುಗಿಸಬೇಕಾದ ಕರ್ತವ್ಯವನ್ನು, ಜನಹಿತ ಕಾರ್ಯವನ್ನು ಸ್ವಾಮೀಜಿಯವರೇ ನೆರವೇರಿಸುತ್ತಿದ್ದಾರೆ, ಅವರ ಮುಂದಿರುವ ಸಮಸ್ಯೆಗೆ ಪರಿಹಾರ ಹುಡುಕುವುದು ತಮ್ಮ ಧರ್ಮವೆಂದು ಭಾವಿಸಿ, ರಾಮಾನುಜ ರಸ್ತೆಯಲ್ಲಿ 'ಆನೆಕರೋಟಿ' ಎಂದು ಪ್ರಸಿದ್ಧವಾಗಿದ್ದ ಜಾಗವನ್ನು ಸ್ವಾಮೀಜಿಗೆ ಸುಲಭ ಬೆಲೆಗೆ ಮಾರಲು ನಿಶ್ಚಯಿಸುತ್ತಾರೆ.

ಆಗ ಆ ಜಾಗಕ್ಕೆ ನಿಗದಿಯಾಗಿದ್ದ ಬೆಲೆಯೇನೋ ತುಂಬ ಕಡಿಮೆ. ಆದರೆ ಅದನ್ನು ತುಂಬುವಷ್ಟೂ ಹಣ ಮಠದಲ್ಲಿರಲಿಲ್ಲ. ಆ ಹಣವನ್ನು ಕಂತುಗಳಲ್ಲಿ ತೀರಿಸುವ ಅವಕಾಶ ಇರುವುದಾದರೆ ಅದನ್ನು ಕೊಂಡುಕೊಳ್ಳುತ್ತಾರೆಂಬ ಸುದ್ದಿ ಮಹಾರಾಜರನ್ನು ಮುಟ್ಟುತ್ತದೆ. ಅದನ್ನು ಎರಡು ಕಂತುಗಳಲ್ಲಿ ತೀರಿಸಬಹುದೆಂದೂ, ಮೊದಲನೆಯ ಕಂತಿನ ಮೊಬಲಗು





25 ಸಾವಿರವನ್ನು ನಿಗದಿತ ದಿನದಂದು ಸಲ್ಲಿಸ ಬೇಕೆಂದೂ ಕರಾರಾಗುತ್ತದೆ. ಆದರೆ ಆ ಮೊತ್ತವೂ ಸ್ವಾಮೀಜಿಯ ಬಳಿಯಲ್ಲಿರಲಿಲ್ಲ. ಆದಿಜಗದ್ಗುರುಗಳ ಇಚ್ಛೆಯಿದ್ದಂತಾಗಲಿ, ಶಿವನ ಕೃಪೆಯಿದ್ದಂತಾಗಲಿ ಎಂದು ಪ್ರಣವಸಹಿತದ ಪಂಚಾಕ್ಷರಿ ಮಂತ್ರದ ಕೃಪೆಯನ್ನೇ ಆಶ್ರಯಿಸುತ್ತಾರೆ. ಸತ್ಕಾರ್ಯಕ್ಕೆ ಎಲ್ಲಿಂದಾದರೂ ನೆರವು ಲಭಿಸುತ್ತದೆಂಬ ಆತ್ಮವಿಶ್ವಾಸ ಅವರಿಗಿತ್ತು. ವಿದ್ಯಾಪ್ರಸಾರ ಕಾರ್ಯಕ್ಕೆ ಕೈಹಾಕಿದಂದಿನಿಂದ ಇಂಥ ಕ್ಲಿಷ್ಟ ಸಂದರ್ಭಗಳೆಷ್ಟೋ ಅವರಿಗೆ ಒದಗಿದ್ದುಂಟು. ಕೊನೆಯ ಗಳಿಗೆಯಲ್ಲಿ ಅವೆಲ್ಲವುಗಳಿಂದ ಅವರು ಪಾರಾಗಿಯೂ ಇದ್ದರು.

ಗೊತ್ತಾದ ದಿನವೂ ಹತ್ತಿರ ಬರುತ್ತಿತ್ತು. ಮಾರನೆಯ ಬೆಳಗ್ಗೆಯೆ 25 ಸಾವಿರ ರೂಪಾಯಿಗಳನ್ನು ಮಹಾರಾಜರಿಗೆ ಸಲ್ಲಿಸಬೇಕಾಗಿತ್ತು; ಸಲ್ಲಿಸದಿದ್ದರೆ ಕೈಗೆ ಬಂದ ತುತ್ತು ಬಾಯಿಗೆ ಬಂದಂತಾಗುವುದಿಲ್ಲ. ತಮ್ಮ ಬಳಿಗೆ ಬರುತ್ತಿದ್ದ ಭಕ್ತರ ಮುಂದೆ ಈ ಸಮಸ್ಯೆಯನ್ನು ಸ್ವಾಮೀಜಿಯವರು ಇಟ್ಟರು. ಆ ಸುದ್ದಿ ಆಗತಾನೇ ನಿವೃತ್ತರಾಗಿದ್ದ ಉಪಾಧ್ಯಾಯರೊಬ್ಬರ ಕಿವಿಗೆ ತಲುಪುತ್ತದೆ. ಅದೇತಾನೆ ಭವಿಷ್ಯನಿಧಿಯ ಹಣ ಅವರ ಕೈಸೇರಿತ್ತು. ಅವರು ಆ ಇಡೀ ಹಣವನ್ನು ಗುರುಸನ್ನಿಧಿಗೆ ಒಪ್ಪಿಸುತ್ತಾರೆ. ಭಕ್ತರ ಸಹಾಯದಿಂದ ಉಳಿದ ದುಡ್ಡನ್ನು ಸಂಗ್ರಹಿಸಿ ಮಹಾರಾಜರಿಗೆ ಕೊಟ್ಟು ಆನೆಕರೋಟಿಯ ವಿಸ್ತಾರವಾದ ಜಾಗವನ್ನು ಸ್ವಾಮೀಜಿ ಪಡೆದುಕೊಳ್ಳುತ್ತಾರೆ.

ಮಠದ ಮುಂದಿನ ಬೃಹತ್ತಾದ ವಿಕಾಸಕ್ಕೆ ಈ ವಿಸ್ತಾರವಾದ ಜಾಗ ಶುಭ ನಾಂದಿಯಾಗುತ್ತದೆ. ಸ್ವಾಮೀಜಿ ಪ್ರಾರಂಭಿಸಿದ ಮೊದಲ ಜೆಎಸ್ಎಸ್ ಪ್ರೌಢಶಾಲೆಯ ಕಲ್ಯಾಣ ಕೇಂದ್ರ ಅದಾಗುತ್ತದೆ. ಅಲ್ಲಿದ್ದ ಹಳೆಯ ಕಟ್ಟಡಗಳನ್ನೆ ಸರಿಪಡಿಸಿಕೊಂಡು, ಶಾಲೆಯನ್ನು ಪ್ರಾರಂಭಿಸಲಾಗುತ್ತದೆ. ಅಲ್ಲಿಯೇ ಮಠದ ಕೇಂದ್ರ ಕಾರ್ಯಾಲಯವು ಪ್ರಾರಂಭವಾಗುತ್ತದೆ; ಸ್ವಾಮೀಜಿಯ ವಾಸ್ತವ್ಯವೂ ಅಲ್ಲಿಗೆ ಸ್ಥಳಾಂತರಗೊಳ್ಳುತ್ತದೆ. ಅನಂತರ ಅಲ್ಲಿ ಅನೇಕ ಭವ್ಯ ಕಟ್ಟಡಗಳು ಮೇಲೇಳುತ್ತವೆ. ಕಾಲಾಂತರದಲ್ಲಿ ಅವು ಹೊಸ ಹೊಸ ಉದ್ದೇಶಗಳಿಗೆ, ವಿಜ್ಞಾನ ಕಲಾ ವಾಣಿಜ್ಯ ಕಾಲೇಜುಗಳಿಗೆ, ಜೆಎಸ್ಎಸ್ ಆಸ್ಪತ್ರೆಗೆ ಬಳಕೆಯಾಗುತ್ತವೆ. ಇವುಗಳ ಜೊತೆಗೆ ಅಲ್ಲಿ ಬೃಹತ್ತಾದ ವಿದ್ಯಾರ್ಥಿ ನಿಲಯವೊಂದು ತಲೆಯೆತ್ತುತ್ತದೆ.

ಪ್ರಸಾದನಿಲಯಗಳ ಸಂಖ್ಯೆ ಇಪ್ಪತ್ತನ್ನು ಮೀರಿದ ನಂತರ, ಸ್ವಾಮೀಜಿಯ ಲಕ್ಷ್ಯ ವಿದ್ಯಾಸಂಸ್ಥೆಗಳ ಸ್ಥಾಪನೆಯ ಕಡೆಗೆ ಹರಿಯುತ್ತದೆ. 1958 ರಲ್ಲಿ ಚಾಮರಾಜನಗರದಲ್ಲಿ ಪ್ರಾರಂಭವಾದ ಪ್ರೌಢಶಾಲೆ ಹಿಂದುಳಿದ ಪ್ರದೇಶಗಳ ಬೇಡಿಕೆಯನ್ನು ಪೂರೈಸುತ್ತಿತ್ತು. ಮುಂದಿನ ಹತ್ತು ವರ್ಷಗಳಲ್ಲಿ ಇಂಟರ್‌ಮೀಡಿಯೆಟ್ ಮತ್ತು ಪ್ರಥಮ ದರ್ಜೆ





ಕಾಲೇಜುಗಳು ತಲೆಯೆತ್ತಿ, ಅದು ಕ್ರಮೇಣ ದೊಡ್ಡ ವಿದ್ಯಾಕೇಂದ್ರವಾಗಿ ಬೆಳೆಯುತ್ತದೆ. 1972 ರಲ್ಲಿ ಮೈಸೂರಿನ ಸರಸ್ವತಿಪುರಂ ಬಡಾವಣೆಯಲ್ಲಿದ್ದ ನವಜ್ಯೋತಿ ಸ್ಟುಡಿಯೋ ಜಾಗವನ್ನು ಕೊಂಡ ಮೇಲೆ, ಅದು ನಿಜಕ್ಕೂ ಸರಸ್ವತಿಯ ಕೇಂದ್ರವೇ ಆಗುತ್ತದೆ. 1962 ರಲ್ಲಿಯೇ ಗ್ರಾಮಾಂತರ ಪ್ರದೇಶದಲ್ಲಿ ಅನೇಕ ಪ್ರೌಢಶಾಲೆಗಳನ್ನು ಸ್ಥಾಪನೆ ಮಾಡಿದ ನಂತರ, ಅವರ ಗಮನ ಬೆಂಗಳೂರಿನ ಕಡೆಗೆ ಹರಿಯುತ್ತದೆ. ಅಲ್ಲಿನ ಜಯನಗರದಲ್ಲಿ ಪ್ರೌಢಶಾಲೆಯೊಂದನ್ನು ಸ್ಥಾಪಿಸುತ್ತಾರೆ.

ಮೂಲ ಶಿಕ್ಷಣ ತರಬೇತಿ ಕೇಂದ್ರ, ದೈಹಿಕ ಶಿಕ್ಷಣ ಕಾಲೇಜು, ಇಂಜಿನಿಯರಿಂಗ್ ಕಾಲೇಜು ಮೊದಲಾದ ಹಲವು ವಿದ್ಯಾಸಂಸ್ಥೆಗಳು ಸ್ಥಾಪನೆಗೊಂಡ ನಂತರ ಸುತ್ತೂರು ಮಠ ಮತ್ತು ರಾಜೇಂದ್ರ ಸ್ವಾಮಿಗಳು ಕರ್ನಾಟಕ ರಾಜ್ಯಾದ್ಯಂತ ಮನೆಮಾತಾಗುತ್ತಾರೆ. ಸುತ್ತೂರು ಮಠದ ವಿದ್ಯಾಸಂಸ್ಥೆಗಳನ್ನು ಆಕ್ಸ್‌ಫರ್ಡ್ ಕೇಂಬ್ರಿಜ್ ವಿದ್ಯಾಸಂಸ್ಥೆಗಳಿಗೆ ಹೋಲಿಸಬಹುದೆ ಎಂಬ ಚರ್ಚೆ ಪರಿಣತರ ಗುಂಪಿನಲ್ಲಿ ನಡೆಯುತ್ತದೆ. ಜಗತ್ತಿನ ಯಾವ ಮಠವಾಗಲಿ, ಮಠೇತರ ಖಾಸಗಿ ವಿದ್ಯಾಸಂಸ್ಥೆಯಾಗಲಿ ಸುತ್ತೂರು ಮಠದಂತೆ ವೈವಿಧ್ಯಮಯ ವೈಭವಪೂರ್ಣ ಶೈಕ್ಷಣಿಕ ಚಟುವಟಿಕೆಗಳನ್ನು ನಡೆಸುತ್ತಿರುವಂತೆ ಕಾಣುವುದಿಲ್ಲ. ಎಲ್ಲ ಸಂಸ್ಥೆಗಳೂ ಶ್ರೀ ಶಿವರಾತ್ರೀಶ್ವರರ ಹೆಸರಿನಲ್ಲಿ ನಡೆಯುತ್ತಿದ್ದುವು. ಈ ಎಲ್ಲ ಸಂಸ್ಥೆಗಳನ್ನು ಒಗ್ಗೂಡಿಸಿ, ಒಂದು ವಿಶಾಲಾರ್ಥವನ್ನು ಧ್ವನಿಸುವ ಸಂಸ್ಥೆಯ ಹೆಸರಿನಲ್ಲಿ ನಿರ್ವಹಣೆ ಮಾಡಬೇಕೆಂಬ ಅಗತ್ಯ ಸ್ವಾಮೀಜಿಗೆ ಮತ್ತು ಭಕ್ತರಿಗೆ ಮನದಟ್ಟಾಗುತ್ತದೆ. ಭಕ್ತರಿಂದ ಬಂದ ಅನೇಕ ಸಲಹೆಗಳನ್ನು ಗಮನಿಸಿ, ಸಮಾಲೋಚಿಸಿ, 'ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾವಿದ್ಯಾಪೀಠ' ಎಂಬ ಅರ್ಥಗರ್ಭಿತವಾದ ಹೆಸರನ್ನು ಇಡಲಾಗುತ್ತದೆ. ಅದರ ಸಂಕ್ಷಿಪ್ತನಾಮ "ಜೆಎಸ್‌ಎಸ್ ಮಹಾವಿದ್ಯಾಪೀಠ" ಎಂದಾಗಿದೆ. ಶ್ರೀ ರಾಜೇಂದ್ರ ಸ್ವಾಮಿಗಳ ದೂರದೃಷ್ಟಿ, ಮಾನವೀಯತೆ, ಮಾತೃಹೃದಯ, ಶಿವನಿಷ್ಠೆ, ಕರ್ತೃತ್ವಶಕ್ತಿ, ಗುರುಭಕ್ತಿ, ತ್ಯಾಗಬುದ್ಧಿ, ಅಸಾಧಾರಣ ಪ್ರತಿಭೆ, ಅನುಪಮ ವಾದ ಶ್ರಮಗಳ ಪರಿಣಾಮವಾಗಿ ಇಷ್ಟೊಂದು ಸಂಸ್ಥೆಗಳು ಉದಯವಾಗಿವೆಯೆಂದು ಜನ ನಿಷ್ಕಲ್ಮಷ ಭಾವನೆಯಿಂದ ಹೊಗಳುತ್ತಾರೆ.

ಎನ್ನವರೊಲಿದು ಹೊನ್ನಶೂಲದಲಿಕ್ಕಿದರೆನ್ನ ಹೊಗಳಿ ಹೊಗಳಿ !
ಅಯ್ಯೊ ನೊಂದೆನು ಸೈರಿಸಲಾರೆನು !
ಕೂಡಲಸಂಗಮದೇವಾ, ನೀನೆನಗೊಳ್ಳಿದನಾದಡೆ
ಎನ್ನ ಹೊಗಳತೆಗಡ್ಡ ಬಾರಾ, ಧರ್ಮಿ !

ಎಂಬ ಬಸವಣ್ಣನವರ ವಚನವನ್ನುದ್ಧರಿಸಿ, "ಸುತ್ತೂರು ಮಠದ ಇಷ್ಟೊಂದು ಕೀರ್ತಿಗೆ ಭಕ್ತರ ಸಹಾಯವೇ ಕಾರಣ; ಸಮಾಜದ ಸಹಾಯ ಸಹಕಾರಗಳೇ ಕಾರಣ. ನಾನೊಬ್ಬನೇ





ಏನು ಮಾಡಬಲ್ಲೆ" ಎಂದು ಸ್ವಾಮೀಜಿ ತಮ್ಮ ವಿನಯವನ್ನೂ, ನಿರಹಂಕಾರವನ್ನೂ ಮೆರೆಯುತ್ತಾರೆ. ಮೇಲೆ ಹೇಳಿರುವ ಗುಣಸಮೂಹಗಳೆಲ್ಲವೂ ಸ್ವಾಮೀಜಿಯಲ್ಲಿ ಸಮನ್ವಿತಗೊಂಡಿವೆ ಎಂಬುದರಲ್ಲಿ ಸಂದೇಹವಿಲ್ಲ. ನಿಯತ ಕಾಲದಲ್ಲಿ ಆಹಾರ ಪಾನೀಯಗಳಿಲ್ಲದ, ಎರಡು ಮೂರು ದಿನಗಳ ಉಪವಾಸ, ವಿಶ್ರಾಂತಿಯಿಲ್ಲದ ಅಲೆದಾಟ ಅವರ ದೇಹದ ಮೇಲೆ ದುಷ್ಪರಿಣಾಮಗಳನ್ನು ಉಂಟುಮಾಡಿದುವೆಂಬ ಮಾತು ಸುಳ್ಳಲ್ಲ. ಇಷ್ಟೊಂದು ಕರುಣಾರ್ದ್ರ ಹೃದಯದ ತ್ಯಾಗಜೀವಿಗಳು ಜಗತ್ತಿನಲ್ಲಿಯೇ ವಿರಳ. ಅವರು ಕರ್ನಾಟಕಕ್ಕೆ ವರವಾಗಿ ಜನ್ಮತಾಳಿದ ಪುಣ್ಯಪುರುಷರು.

ಶ್ರೀ ರಾಜೇಂದ್ರ ಸ್ವಾಮಿಗಳ ಮತ್ತು ಸುತ್ತೂರು ಮಠದ ಹೆಸರು ದಿಗಂತವ್ಯಾಪಿ ಯಾಗುತ್ತಿದ್ದಂತೆ ಶ್ರೀ ರಾಜೇಂದ್ರ ಸ್ವಾಮಿಗಳಿಗೆ ಮತ್ತು ಭಕ್ತವೃಂದಕ್ಕೆ ಮಹಾನ್ ಆಘಾತವೊಂದು ಬಂದೆರಗುತ್ತದೆ. 1967 ರಲ್ಲಿ, ತಮ್ಮ 81 ನೆಯ ವಯಸ್ಸಿನಲ್ಲಿ, ಹಿರಿಯ ಜಗದ್ಗುರುಗಳಾದ ಶ್ರೀ ಶಿವರಾತ್ರೀಶ್ವರ ಸ್ವಾಮಿಗಳು ಲಿಂಗೈಕ್ಯರಾಗುತ್ತಾರೆ. ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳ ಶ್ರಮದಿಂದಾಗಿ ದೇಶದುದ್ದಕ್ಕೂ ಹರಡುತ್ತಿದ್ದ ಕೀರ್ತಿಯಿಂದ ಸಂತೃಪ್ತರಾಗಿ, ತಮ್ಮ ಕೊನೆಯ ವರ್ಷಗಳಲ್ಲಿ ಮಠದ ಜವಾಬ್ದಾರಿಯನ್ನು ಸಂಪೂರ್ಣವಾಗಿ ಶಿಷ್ಯರಿಗೆ ವಹಿಸಿ ಮಂತ್ರಲೇಖನದಲ್ಲಿ ತಲ್ಲೀನರಾಗಿ, ಅವರು ಶಿವಾನಂದವನ್ನು ಅನುಭವಿಸುತ್ತಿದ್ದರು. ರಾಜೇಂದ್ರ ಸ್ವಾಮಿಗಳಾದರೋ, ತಾವು ಕೈಗೊಳ್ಳುತ್ತಿದ್ದ ಎಲ್ಲ ಯೋಜನೆಗಳನ್ನು ಅವರ ಗಮನಕ್ಕೆ ತಂದು, ಅವರ ಆಶೀರ್ವಾದ ವನ್ನು ಪಡೆದ ಬಳಿಕವೇ ಮುಂದೆ ಅಡಿಯಿಡುತ್ತಿದ್ದುದು. ಹಿರಿಯ ಜಗದ್ಗುರುಗಳ ಮಂತ್ರಶಕ್ತಿಯೇ ತಮ್ಮ ವಿಜಯಕ್ಕೆ ಕಾರಣವೆಂದು ಅವರು ದೃಢವಾಗಿ ನಂಬಿದ್ದರು.

ನಾನಾ ವಿಧವಾದ ಉನ್ನತ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದ ಸ್ವಾಮೀಜಿ ಶಿಶು ಶಿಕ್ಷಣದ ಅಗತ್ಯವನ್ನು ಮರೆಯಲಿಲ್ಲ. ಅನೇಕ ಕಡೆಗಳಲ್ಲಿ ಶಿಶುವಿಹಾರ ಮತ್ತು ಬಾಲಜಗತ್ತುಗಳನ್ನು ಪ್ರಾರಂಭಿಸುತ್ತಾರೆ. ಕೈಗಾರಿಕಾ ತರಬೇತಿ ಸಂಸ್ಥೆಗಳೂ, ಪಾಲಿಟೆಕ್ನಿಕ್‌ಗಳೂ, ಫಾರ್ಮಸಿ ಕಾಲೇಜೂ ಸ್ಥಾಪನೆಗೊಳ್ಳುತ್ತವೆ. ಗುರುವಾಗತಕ್ಕವರಿಗೆ ಸಂಸ್ಕೃತ ಶಿಕ್ಷಣ ಅತ್ಯಾವಶ್ಯಕವೆಂದು ತಿಳಿದು ಅವರು ಗುರುಕುಲ ಮಾದರಿಯ ಶಾಲೆಗಳನ್ನು ತೆರೆಯುತ್ತಾರೆ. ಭಾರತೀಯ ಸಂಸ್ಕೃತಿಗೆ ಸಂಸ್ಕೃತ ಭಾಷೆಯು ಮಾತೃಸ್ಥಾನದಲ್ಲಿರುವುದರಿಂದ ಜನಸಾಮಾನ್ಯರೂ ಅದನ್ನು ಕಲಿಯಲೆಂಬ ದೃಷ್ಟಿಯಿಂದ ಹಲವು ಕಡೆ ಸಂಸ್ಕೃತ ಶಾಲೆಗಳನ್ನು ಪ್ರಾರಂಭಿಸುತ್ತಾರೆ.

**ಕೃಪೆ : ಸುತ್ತೂರ ಬೆಳದಿಂಗಳು**





# ಮುಚ್ಚಿಡಲು ಹೋಗದಿರಿ ಬದುಕಕಹಿವಿಷವ

**ಡಾ. ಪ್ರದೀಪಕುಮಾರ ಹೆಬ್ರಿ**

**ಶ್ರೀಪಟ್ಟಗುರುವರರು ಅರುವತ್ತು ಮೀರಿರಲು**
**ಗೌರಿಶಂಕರಸ್ವಾಮಿ ಶಿವರಾತ್ರಿ ರಾಜೇಂದ್ರ**
**ಗುರುವರಗೆ ಶ್ರೀಪೀಠ ಕೊಡುವಂತೆ ಸೂಚಿಸಲು ಶಿವಮಂತ್ರ ಕರುಣೆ ।**

ಗೌರಿಶಂಕರಸ್ವಾಮಿ ಪಟ್ಟಗುರುಗಳ ಕಂಡು
ಅರುವತ್ತು ಮೀರಿಹುದು ನಿಮಗೀಗ ಆಯಸ್ಸು
ಲೌಕಿಕದ ವಹಿವಾಟು ಹೊತ್ತಿರುವ ಹೊಣೆಯಿಂದ ಹೊರಬನ್ನಿ ಬೇಗ ।
ಬಿಡುಗಡೆಯ ಹೊಂದುತ್ತ ನಿಮ್ಮೆಲ್ಲ ಕಾರ್ಯದಲಿ
ಶಿವರಾತ್ರಿ ರಾಜೇಂದ್ರ ಗುರುಗಳಿಗೆ ವಹಿಸಿಬಿಡಿ
ಸಾಮರ್ಥ್ಯ ಅವರಲಿದೆ ಹೊರುವಲ್ಲಿ ಹೊಣೆಯನ್ನು ಹರಸುತಿರಿ ಅವರ।೧।

ಮಾತುಕತೆ ನಡೆಯುತಿಹ ಸಮಯದಲಿ ರಾಜೇಂದ್ರ
ಗುರುವರರು ಕಂಬಮರೆಯಲ್ಲಿದ್ದು ವಿನೀತತೆ
ಥರಥರನೆ ನಡುಗಿರಲು ಆಲಿಸಿದ ಮಾತಿನಲಿ ಕುಸಿದಿರಲು ಧೈರ್ಯ ।
ಗೌರಿಶಂಕರಸ್ವಾಮಿ ಮಾತುಗಳ ಆಲಿಸಿದ
ಶ್ರೀಪಟ್ಟಗುರುವರರ ಎದೆತುಂಬಿ ಬಂದ ದನಿ
ಮನದಭಾವಕೆನೀವು ಮಾತರೂಪವಕೊಟ್ಟು ತೋರಿದಿರಿ ನಿಜವ ।೨।

ಬಹುಕಾಲದಿಂದನಾ ಯೋಚಿಸುತ ಇದ್ದೆನದ
ಗಳಿಗೆಕೂಡಲಿಯೆನುವ ಆಸೆಯಿದ್ದಿತು ಮನದಿ
ಇಂದದುವು ಪರಿಪೂರ್ಣ ನಿಮ್ಮೊಲವ ಮಾತಿನಲಿ ಧನ್ಯನಾ ನಿಜದಿ।
ಮಾತುಮುಗಿಸುವ ಮೊದಲೆ ಮುಂಬಂದ ಕಿರಿಗುರುವು
ದಯವಿಟ್ಟು ಮಾಡದಿರಿ ನೀವಿಂಥ ಕಾರ್ಯಗಳ
ನಿಮ್ಮ ಆಜ್ಞೆಯಧರಿಸಿ ನಡೆಯುವೆನು ಮುಂದಕ್ಕೆ ಹರಸುತಿರಿ ನೀವು ।೩।





ಅಗ್ನಿಪರ್ವತವಾಗಿ ಸ್ಫೋಟಿಸಲು ಹಿರಿಯಗುರು
ಏನು ಎರಡಕ್ಷರವು ಬೆಂಕಿಕೆಂಡದ ಉರಿಯು
ರಾಜೇಂದ್ರ ಗುರುವರರ ಅಸ್ತಿತ್ವವನ್ನದುವು ನಡುಗಿಸಿದ ಭೀತಿ ।
ಮಿಂಚೊಂದು ಹೊಳೆದಂತೆ ಕಂಗಳಲಿ ಬಿಸಿಕೆಂಡ
ಕಂಡಂತೆ ಹಿರಿಯಗುರು ಕಂಗಳಲಿ ವಿಸ್ಮಿತರು
ಗೌರಿಶಂಕರಸ್ವಾಮಿ ತೋರುತ್ತ ಎದೆಯೊಲವ ಗುರುವರರೆ ನುಡಿಯು । ೪ ।

ಮತ್ತೊಮ್ಮೆ ಏನೆನುವ ಉಗ್ರವಿಹ ಮೊಗವನ್ನು
ಗೌರಿಶಂಕರಸ್ವಾಮಿರವರತ್ತ ತಿರುಗಿಸಲು
ಕಂಡಂತೆ ಮೃದುಮೃದುಲ ಮೊಗದಂದ ಕೋಮಲತೆ ಬೆಂಕಿಯಲಿ ಬೆಣ್ಣೆ ।
ಹಿರಿಯಗುರು ರುದ್ರಮುಖ ಕ್ಷಣದಲೆ ಶಾಂತದಲಿ
ಬೆಣ್ಣೆಕರಗುತತುಪ್ಪವಾಗಿರುವ ರೀತಿಯಲಿ
ಗೌರಿಶಂಕರನೋಟ ಕೈಲಾಸತಂಪಿನಲಿ ಸಾಂತ್ವನದ ಸೊಗದಿ । ೫ ।

ಅರಿತಂತೆ ಹಿರಿಯಗುರು ಚಹರೆಯನು ಸ್ಪಷ್ಟದಲಿ
ಅವರಿಗೇ ಅವರನ್ನು ಪರಿಚಯಿಸ ಬೇಕೆನುವ
ಭಾವದಲಿ ಕೇಳಿದರು ಪ್ರಶ್ನೆಯೊಂದನು ನೇರ ಉತ್ತರಕೆ ಕಾದು ।
ವಿಷಯವೊಂದಿದೆಯಿಲ್ಲಿ ಕಳವಳಕೆ ಕಾರಣದಿ
ಒಳಗೊಳಗೆ ಏನನೋ ಶತಯತ್ನ ಮಾಡುತ್ತ
ಅಡಗಿಸುತ ಇರುವಿರೆನೊ ಭಾವವಿದೆ ಮನದಲ್ಲಿ ಮುಚ್ಚಿಡುವಿರೇಕೆ । ೬ ।

ಗೌರಿಶಂಕರರೆದೆಯ ಒಲವನುಡಿ ಆಲಿಸುತ
ಶ್ರೀಪಟ್ಟ ಗುರುವರರು ದಿಗ್ಭ್ರಮೆಯ ನೋಟದಲಿ
ತಮ್ಮ ಮೈಯನು ತಾವು ಚಿವುಟಿರಲು ಅಚ್ಚರಿಗೆ ಕೊಡುತೊಂದು ರೂಪ।
ಅರಿತಿಹೆನು ನನ್ನನ್ನು ಅರಿತಿಹೆನು ಕಾರ್ಯಗಳ
ವಯಸು ಮಾಗಿದೆ ನಿಜವು ಶಕ್ತಿಯಿದೆ ಬಹುವಾಗಿ
ಮುಚ್ಚಿಡುವ ಕಾರ್ಯವನು ಎಚ್ಚರದಿ ಮಾಡಿಲ್ಲ ಬೆಚ್ಚಿಸುವಿರೇಕೆ । ೭ ।





ಗೌರಿಶಂಕರಗುರುವು ಕ್ಷಣತಡೆದು ಮತ್ತೊಮ್ಮೆ
ತೋರುತ್ತ ಒಲವನ್ನು ಮೆಲ್ಲನೇ ತುಟಿದೆರೆದು
ತಮ್ಮದಿಹ ಆರೋಗ್ಯ ದೃಢವಿಲ್ಲ ಅನ್ನಿಸಿಕೆ ಮನದಲ್ಲಿ ಛಾಪು ।
ಹೊರನೋಟ ತೋರದಿರೆ ಯಾವುದೇ ಗುರುತನ್ನು
ಅಂತರಾತ್ಮವು ಅರುಹಿ ಎಚ್ಚರಿಸುತಿದೆಯೆನ್ನ
ಮುಚ್ಚಿಡಲು ಹೋಗದಿರಿ ಬದುಕಿನಲಿ ಸಹಜವಿಹ ಕಹಿವಿಷಯವನ್ನು ।೮।

ಆಲಿಸುತ ಮಾತುಗಳ ಶ್ರೀಪಟ್ಟ ಗುರುವರರು
ಆಗಿಲ್ಲ ಬೇರೇನು ಕೆಮ್ಮುದಮ್ಮಿನ ಕಾಟ
ಸಹಜವಿದು ಈ ವಯದಿ ಎಲ್ಲರಿಗೆ ಅನ್ನಿಸಿರೆ ನಾನೆಂತು ಹೊರತು।
ಹೋಗಿಲ್ಲವೇ ನೀವು ವೈದ್ಯರಲ್ಲಿಗೆ ಸಲಹೆ
ಪಡೆಯುವಲಿ ಕಾಡುತಿಹ ಕೆಮ್ಮುದಮ್ಮಿನ ಬಗೆಗೆ
ಯೋಗ್ಯವಿಹ ಚಿಕಿತ್ಸೆಯನು ಮಾಡಿದರೆ ನೀವೊಮ್ಮೆ ನೆಮ್ಮದಿಯು ಖಚಿತ ।೯।

ಚಿಕಿತ್ಸೆಗೆ ಒಳಗಾಗೊ ಅನಿವಾರ್ಯವೆನಗಿಲ್ಲ
ಉಸಿರಿರುವವರೆಗಿರಲು ಕೆಮ್ಮುದಮ್ಮಿನ ಕಾಟ
ಕಾಡಿದರೆ ಔಷಧಿಯು ಇಲ್ಲದಿರೆ ನೆಮ್ಮದಿಯು ನಾನರಿತ ದಾರಿ।
ನಿಮ್ಮದೆಯ ನುಡಿಗಳನು ಒಪ್ಪುವೆವು ನಾನಿಲ್ಲಿ
ಮಾಡಿಸಲು ಬೇಕಿಲ್ಲ ಚಿಕಿತ್ಸೆಯನಿದಕಾಗಿ
ನಿಮಗೆ ನೀವೇ ಮಾಡಿ ಆರೋಗ್ಯ ಕಾಪಿಡುವ ದಾರಿಯಲಿ ಸಾಗಿ ।೧೦।

ಗೌರಿಶಂಕರಸ್ವಾಮಿ ಗುರುಗಳನು ಆಲಿಸುತ
ಮಾಡಬೇಕಿದೆಯೇನು ಅರಿತಿಲ್ಲ ನಾನವನು
ಚಿಕಿತ್ಸೆಯು ಬೇಕೆನುವ ಅರಿವಿನಲಿ ನಾನಿಲ್ಲ ಸಹಜವಿದು ವಯದಿ ।
ಕೆಮ್ಮುಬಂದರೆ ಕೆಮ್ಮಿ ದಮ್ಮುಬಂದರೆ ದಮಿಸಿ
ನಾನಿರುವೆ ಚಂದದಲಿ ಆತಂಕಕೆಡೆಯಿರದೆ
ಮಾಡಬೇಕಿದೆಯೇನು ಅರಿಯದಿರುವಲಿ ನಾನು ಹೇಳಿಬಿಡಿ ನೀವೆ ।೧೧।





ಹಿರಿಗುರುವ ಮಾತಿನಲಿ ಗೌರಿಶಂಕರಸ್ವಾಮಿ
ಹಾಸಮೊಗದಲಿ ಬೆಳಗಿ ಅಧರಗಳ ತೆರೆಯುತ್ತ
ನಾನು ಹೇಳಿದ ರೀತಿ ಮಾಡುವಿರ ನೀವೆನಲು ಕ್ಷಣಕಾಲ ಮೌನ ।
ಹಿರಿಯಗುರು ತುಟಿತೆರೆದು ಒಪ್ಪಿಗೆಯ ಇಚ್ಛೆಯಲಿ
ಭಾಷೆಕೊಡುವೆವುನಿಮಗೆ ನೀವುಹೇಳಿದತೆರದಿ
ಪಡೆಯುವೆವು ವೈದ್ಯೋಪಚಾರವನು ನಿಮ್ಮಿಂದ ನೀವೆನಗೆ ವೈದ್ಯ ।೧೨।

ಗೌರಿಶಂಕರಸ್ವಾಮಿ ನಸುನಗುವ ಅರಳಿಸುತ
ನಿಮ್ಮೆದೆಯ ಮಾತಿನಲಿ ತುಂಬುನಂಬಿಕೆ ನನಗೆ
ಇತ್ತಬನ್ನಿರಿನೀವು ನುಡಿಯುತ್ತ ಗುರುಗಳನು ನೆರಳಾಗಿಸುತ್ತ ।
ಒಳಗಿರುವ ಶ್ರೀಮಾದ ಈಶ್ವರರ ಗದ್ದುಗೆಯ
ಬಳಿಗವರ ಕರೆದೊಯ್ಯೆ ತಾಯಿಹಸುವನು ಕರುವು
ಅನುಸರಿಸೊ ರೀತಿಯಲಿ ಮೆಲ್ಲನೇ ಹೆಜ್ಜೆಯಿಡೆ ಕಿರಿಗುರುವು ಜೊತೆಗೆ ।೧೩।

ಗದ್ದಿಗೆಯ ಎದುರಿನಲಿ ಗೌರಿಶಂಕರಸ್ವಾಮಿ
ತಮ್ಮುತ್ತರೀಯವನು ಜೋಳಿಗೆಯ ಮಾಡುತ್ತ
ಶ್ರೀಪಟ್ಟಸ್ವಾಮಿಗಳ ಮುಂದಕ್ಕೆ ಚಾಚಿದರು ಕೇಳುವಲಿ ಭಿಕ್ಷೆ ।
ಗುರುಗಳೇ ನಾನೊಂದು ಭಿಕ್ಷೆಯನು ಬೇಡುವೆನು
ಕೊಟ್ಟುಬಿಡಿ ನೀವದನು ಪಕ್ಷಪಾತವು ಇರದೆ
ಅಕ್ಷಿಗಳ ಕುಣಿಸುತ್ತ ಹೊರಬಂದ ನುಡಿಗಳಲಿ ಗುರುಭಿಕ್ಷೆಯಾಸೆ ।೧೪।

ಭಿಕ್ಷೆಯನು ಕೇಳುವಿರ ನನ್ನಲ್ಲಿ ನೀವೆನಲು
ಖಂಡಿತಕು ಕೇಳುವೆನು ಕೊಡುವಲ್ಲಿ ಮನಮಾಡಿ
ಮಾತಿಗುತ್ತರದಲ್ಲಿ ಶ್ರೀಪಟ್ಟಗುರುವರರು ಕೇಳಿಬಿಡಿ ಮೊದಲು ।
ನಸುನಗೆಯ ಮೋಡಿಯಲಿ ಗೌರಿಶಂಕರಸ್ವಾಮಿ
ಕೋಪತಾಳುವ ನಿಮ್ಮ ಸ್ವಭಾವವನು ನನ್ನ
ಜೋಳಿಗೆಗೆ ಹಾಕಿಬಿಡಿ ನಿಮ್ಮ ಕೋಪವೆ ನಿಮ್ಮ ತೊಂದರೆಗೆ ನೆವನ ।೧೫।





ಹಾಕಿಬಿಡಿ ಭಿಕ್ಷೆಯನು ಆಲಿಸುತ ನುಡಿಗಳನು
ಶ್ರೀಪಟ್ಟ ಸ್ವಾಮಿಗಳು ಮುಗುಳುನಗೆಯಂದದಲಿ
ಒಪ್ಪಿಹೆನು ಬೇಡಿಕೆಗೆ ನೀಡುವಲಿ ನಾನಿರುವೆ ನಿಮ್ಮಿಚ್ಛೆಯಂತೆ ।
ಮೊಗದಲಿಹ ಮುಗುಳುನಗೆ ಅನವರತ ಮಾಸದೆಯೆ
ನಿಮ್ಮಮುಖ ಮಂಡಲದಿ ರಾರಾಜಿಸುತ್ತಿರಲಿ
ನುಡಿದವರು ಕ್ಷಣಕಾಲ ಮೌನಧ್ಯಾನದಲಲ್ಲಿ ಬಯಕೆಯಿಹ ಮೊಗದಿ ।೧೬।

ತಮ್ಮ ಉತ್ತರೀಯದ ಮುಸುಕಿನೊಳಗಡೆಯಿಂದ
ಫಳಫಳನೆ ಹೊಳೆಯುತಿಹ ರಟ್ಟಿರುವ ಪುಸ್ತಕವ
ಹೊರತೆಗೆದು ದಿಟ್ಟಿಸುತ ಗುರುಗಳನು ಒಲವಿನಲಿ ಶುಭಹರಕೆ ನುಡಿಯು ।
ಷಡಕ್ಷರೀ ಮಂತ್ರವಿಹ ಓಂ ನಮಃ ಶಿವಾಯ
ಮಂತ್ರವನು ಲಿಖಿಸಿರುವೆ ಆರುಸಾಲಲಿ ನಾನು
ಅನುದಿನವು ಈ ಮಂತ್ರ ಲಿಖಿಸುತ್ತ ಇರಿನೀವು ಎಡೆಬಿಡದೆ ನುಡಿಯು ।೧೭।

ಇದಹೊರತು ಬೇರಾವ ಕಾರ್ಯಗಳು ಬೇಕಿಲ್ಲ
ನಿಮ್ಮೆಲ್ಲ ಹೊಣೆಯನ್ನು ಕರಕಮಲ ಸಂಜಾತ
ರಾಜೇಂದ್ರ ಯತಿಗಳಿಗೆ ವಹಿಸಿಬಿಡಿ ತಕ್ಷಣದಿ ಸೊಗದನುಡಿ ಧಾರೆ ।
ನುಡಿಯುತ್ತ ಶ್ರೀಪಟ್ಟ ಗುರುಹಸ್ತಕರ್ಪಿಸಲು
ಷಡಕ್ಷರೀ ಮಂತ್ರಗಳ ಸಾಲುಗಳ ನೋಡುತ್ತ
ಗುರುವರರ ಕಂಗಳಿಗೆ ಅಕ್ಷರವು ಪ್ರಜ್ಯೋತಿ ಬಿಂದುಗಳ ಸಾಲು ।೧೮।

ಹಸ್ತವನು ತುಂಬಿದ್ದ ಪುಸ್ತಕವ ಮಸ್ತಕಕೆ
ಮೊದಲಾಗಿ ಏರಿಸುತ ನಂತರದಿ ಕಂಗಳಿಗೆ
ಒತ್ತುತ್ತ ಧ್ಯಾನಿಸುತ ಮೌನದಲಿ ಪರಶಿವನ ಕಾಣುವಲಿ ಮನವು ।
ಕರಕಮಲಸಂಜಾತರನುಬಳಿಗೆಕರೆಯುತ್ತ
ಮಸ್ತಕದಮೇಲಕ್ಕೆತಮ್ಮಅಮೃತಹಸ್ತ
ಇರಿಸುತ್ತ ಮತ್ತೊಮ್ಮೆ ಮೌನವಿಹ ಧ್ಯಾನದಲಿ ಹರಸುವಲಿ ಮೋದ ।೧೯।





ಇಂದಿನಿಂದಲಿ ಮಠದ ವ್ಯವಹಾರ ನಿಮ್ಮದಿರೆ
ಆದಿಗುರುಗಳ ಕೃಪೆಯು ನಿಮ್ಮ ಮೇಲಿರಲಿನ್ನು
ಸುತ್ತೂರು ಶ್ರೀಮಠದ ಗೌರವವ ಮೆರೆಸುವಲಿ ನೀವಾಗಿ ಮುಂದು ।
ಹರಸುತಿರೆ ಹಿರಿಯಗುರು ಕಿರಿಯರನು ಮೋದದಲಿ
ವಹಿಸಿರುವ ಹೊಣೆಭಾರ ಕುಸಿತಕ್ಕೆ ದಿಕ್ಕಾಗೆ
ಶ್ರೀಪಾದ ಬಳಿಕಿರಿಯ ದಿಂಡುಗೆಡೆಯುತದೀರ್ಘದಂಡದಲಿ ನಮನ ।೨೦।

ಅಂದಿನಿಂದಲೆ ಮೊದಲು ಶ್ರೀಪಟ್ಟಗುರುವರರು
ಬೆಳಿಗ್ಗೆಯೆಂಟು ಗಂಟೆ ಸಮಯಕ್ಕೆ ಸರಿಯಾಗಿ
ಮಂತ್ರಲೇಖನದಲ್ಲಿ ಅಚಲತೆಯ ಭಂಗಿಯಲಿ ಬಿಡುವಿರದ ತೆರದಿ ।
ಕುಳಿತಭಂಗಿಯಲವರು ಅತ್ತಿತ್ತ ತಿರುಗದೆಯೆ
ಮನವನ್ನು ಪೂರ್ಣದಲಿ ಮಂತ್ರಲೇಖನದಲ್ಲಿ
ತೊಡಗಿಸುತ ಅನವರತ ಧ್ಯಾನದಲಿ ಕುಳಿತಂತೆ ಆರಾಮದಲ್ಲಿ ।೨೧।

ಅನುದಿನವು ಹನ್ನೆರಡು ಘಂಟೆಗಳ ಕಾಲದಲಿ
ಬರೆಯುತ್ತ ಕುಳಿತವರು ಕುಳಿತಂತೆ ಬರೆಯುತಿರೆ
ಹತ್ತಾರುವರುಷಗಳು ಬರವಣಿಗೆ ಹೊರತಾಗಿ ಬೇರೇನು ಇರದೆ ।
ಕೋಟಿಕೋಟಿಯಸಂಖ್ಯೆ ಷಡಕ್ಷರೀ ಮಂತ್ರಗಳ
ಒಂದೆಪಡಿಯಚ್ಚಿನಲಿ ಎರಕಹೊಯ್ದಿಹತೆರದಿ
ಮುದ್ದಾದ ಅಕ್ಷರದಿ ಲಿಖಿಸುತ್ತ **ಮಂತ್ರಮಹರ್ಷಿ** ಶ್ರೀಬಿರುದಿನಲ್ಲಿ ।೨೨।

ಗುರುವರರು ಆಡಿರುವ ಸವಿನುಡಿಯನಾಲಿಸುವ
ಜಪದಲ್ಲಿ ಮೂರುವಿಧ ವಾಚಿಕವು ಉಪಾಂಶು
ಮಾನಸಿಕ ಎಂದೆನುವ ಹೆಸರಿನಲಿ ಕಂಗೊಳಿಸಿ ಮನಗೆಲ್ಲುವಂತೆ ।
ಉತ್ತರೋತ್ತರ ಹೆಚ್ಚು ಫಲಪ್ರದವು ಖಚಿತದಲಿ
ಮಾನಸಿಕ ಜಪದಿಂದ ಬಲುಸಿದ್ಧಿ ಒಳಿತಿನಲಿ
ತನುಮನದಿ ನಿಜಶುಚಿಯ ತುಂಬುತ್ತ ಪ್ರತಿನಿತ್ಯ ನಿಷ್ಠೆಯಿರಲೆದೆಯು ।೨೩।





ನಿಯಮಿತದ ಸಂಖ್ಯೆಯಲಿ ಬರೆಯುತಿರೆ ಪ್ರತಿದಿನವು
ಮಂತ್ರಲೇಖನ ಹೊರತು ಬೇರೇನು ಇರದಂತೆ
ಮನವನ್ನು ಶುದ್ಧದಲಿ ಇರಿಸುತಿರೆ ನಾವೊಮ್ಮೆ ಧನ್ಯತಾ ಮನವು ।
ಶುದ್ಧದಲಿ ಸ್ಫುಟದಲ್ಲಿ ಇದ್ದಿರಲು ಅಕ್ಷರವು
ಕಾಣುವುದು ಚಂದದಲಿ ತುಂಬುತ್ತ ಆನಂದ
ಮಾನಸಿಕ ಏಕಾಗ್ರ ನಿಜಭಾವ ನಮ್ಮದಿರೆ ವರಸಿದ್ಧಿ ಸಾಧ್ಯ । ೨೪ ।

ಲಕ್ಷ ಅಕ್ಷರವನ್ನು ಲೆಕ್ಕಿಸದೆ ನಾವಿದ್ದು
ಕೋಟಿಗಳ ಸಂಖ್ಯೆಯನು ಮೀರುವಲಿ ನಾವಿರಲು
ಅರಿವಿರದ ರೀತಿಯಲಿ ತಾನಾಗಿ ಉಸಿರಾಟ ನಮ್ಮದೆಯ ಹಿಡಿತ ।
ಪ್ರಾಣಾಯಾಮ ಕೊನೆಯ ಗುರಿಯಾದ ಕುಂಭಕವು
ಸುಲಭದಲಿ ಕೈವಶವು ಆಗುವುದು ಬಲುಖಚಿತ
ಸಾಕ್ಷಿನಾವೇ ಇದಕೆ ಮಾಡಿರುವ ಕಾರ್ಯದಲಿ ಪಡೆದಿರಲು ಸಿದ್ಧಿ । ೨೫ ।

ಹಲವಾರು ವರುಷಗಳ ಕಾಲದಲಿ ನಮಗಿದ್ದ
ಶ್ವಾಸರೋಗವು ಇಲ್ಲ ಮಂತ್ರಲೇಖನ ಬರೆಯೆ
ಸ್ವಾನುಭಾವದಿ ನಮ್ಮ ನುಡಿಯಿದುವು ನಿಮ್ಮೊಡನೆ ಆನಂದದಲ್ಲಿ ।
ಪರಶಿವನ ಕೃಪೆಯಿಂದ ಬರೆದಿಹೆವು ಅಗಣಿತದಿ
ನಾಲ್ಕುವರೆ ವರುಷಗಳ ಕಾಲದಿಹ ಬರವಣಿಗೆ
ಕೋಟಿಯನು ಮುಟ್ಟುವಲಿ ಬರೆದಿರುವೆ ಮಂತ್ರಗಳ ಆನಂದದಿಂದ । ೨೬ ।

ಮಂತ್ರಲೇಖನಫಲವು ಲೋಕಕ್ಷೇಮಕೆ ಮುಡಿಪು
ನಾನಿಡುವೆ ಆಸೆಯಲಿ ಭಕ್ತವೃಂದವ ಹರಸಿ
ಗುರುಮುಖದಿ ನೀವಿದರ ಬರವಣಿಗೆ ರೀತಿಯನು ಅರಿತಂತೆ ಒಳಿತು ।
ಮಂತ್ರಲೇಖನದಲ್ಲಿ ಶಿವನಾನುಭವಯೋಗ
ಗುಟ್ಟನ್ನು ನೀವರಿತು ಬದುಕ ಹಸನಾಗಿಸುತ
ಇಲ್ಲಿ ಸಲ್ಲುವರಲ್ಲಿ ಸಲ್ಲುವರು ಬಸವನೆದೆ ನುಡಿಯಂತೆ ನಡೆದು । ೨೭ ।





ಇಹದಲ್ಲಿ ಇರುವಂಥ ಈ ಜೀವಮಾನದಲಿ
ಶಿವ ಅನುಭವವ ಪಡೆದು ಅಮೃತರು ಆಗೋಣ
ಶಿವನೊಲುಮೆ ಪಡೆಯುವಲಿ ಶಿವಮಂತ್ರಲೇಖನವು ನಮ್ಮೆದುರ ದಾರಿ ।
ದೇಹಶಕ್ತಿಯು ಅಳಿದು ಬುದ್ಧಿಶಕ್ತಿಯು ಕುಸಿದು
ಸಂಕಟಕೆ ಸಿಲುಕಿದ್ದ ಸಮಯದಲಿ ನಾವೆದ್ದು
ಮಂತ್ರಯಜ್ಞದತಪವ ಅಪ್ಪಿರಲು ಅಂದದಲಿ ನಿಜಬದುಕ ಸಿದ್ಧಿ ।೨೮।

ಕಳೆದು ಹೋಗಿದೆ ವರ್ಷ ಹತ್ತಾರು ಲೆಕ್ಕದಲಿ
ಆತಂಕವಿರದಂತೆ ನಡೆಯುತಿದೆ ಮಹಯಜ್ಞ
ನಾವು ನಂಬಿದ ತಪವು ನಡೆಸುತಿದೆ ನಮ್ಮನ್ನು ವರವಾದ ಕರುಣೆ ।
ಅರಹುತಿಹ ಸವಿವಿಷಯ ಅನುಸರಿಸುತಿರಲವರು
ಮುಂಜಾನೆ ಕಾಡುಮಠ ಮೂಲಗದ್ದುಗೆ ಪೂಜೆ
ಗುರುವರರ ವಂದಿಸುತ ಮಂತ್ರಲೇಖನ ಮಣಿಹ ಅಣಿಯಾಗಿ ನಿತ್ಯ ।೨೯।

**ಕೃಪೆ : ರಾಜಗುರುತಿಲಕ**



# ರಸಋಷಿಯ ನುಡಿ ನೈವೇದ್ಯ

**ಕುವೆಂಪು**

[ಜಗದ್ಗುರು ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರಿಗೆ ಅವರ ಅಮೃತ ಮಹೋತ್ಸವ ಮತ್ತು ಪಟ್ಟಾಧಿಕಾರ ಸುವರ್ಣ ಮಹೋತ್ಸವವನ್ನು ಪೂಜ್ಯರ ಜನ್ಮದಿನವಾದ ೨೯-೮-೧೯೮೬ರಂದು ಆಚರಿಸಿದ ಶುಭ ಸಂದರ್ಭದಲ್ಲಿ ರಾಷ್ಟ್ರಕವಿ ಶ್ರೀ ಕುವೆಂಪು ಅವರು ಯಾವುದೇ ಇಂಥ ಸಮಾರಂಭಕ್ಕೆ ಆಗಮಿಸಲು ಒಪ್ಪದವರು, ಅತ್ಯಂತ ಸಂತಸದಿಂದ, ಪೂಜ್ಯರ ಈ ಮಹಾನ್ ಸಮಾರಂಭಕ್ಕೆ ಆಗಮಿಸಿ, "ಅರ್ಚನ" ಅಭಿನಂದನ ಗ್ರಂಥವನ್ನು ಬಿಡುಗಡೆ ಮಾಡಿ, ಮಾಡಿದ ಭಾಷಣ]

ಎಲ್ಲರಿಗೂ ನಮಸ್ಕಾರ.

ಸುತ್ತೂರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಯವರ ಎಪ್ಪತ್ತನೆಯ ವರ್ಷದ ವರ್ಧಂತಿ ಸಮಾರಂಭಕ್ಕೆ ನಾನು ಬಂದಿರುವುದು ನಿಮ್ಮಲ್ಲಿ ಅನೇಕರಿಗೆ ಹೇಗೋ ಹಾಗೆ ಸ್ವತಃ ನನಗೇ ಆಶ್ಚರ್ಯವನ್ನುಂಟುಮಾಡಿದೆ! ಅದಕ್ಕೆ ಕಾರಣ, ಶ್ರೀ ರಾಮಕೃಷ್ಣ ಮಹಾ ಸಂಘವನ್ನುಳಿದು ಬೇರೆ ಯಾವುದೇ ಮಠ, ದೇವಸ್ಥಾನಗಳಿಗೆ ಎಂದೆಂದೂ ಹೋಗಿ ಅಲ್ಲಿನ ಯಾವುದೇ ಕಾರ್ಯಕ್ರಮಗಳಲ್ಲಿ ನಾನು ಇದುವರೆಗೂ ಭಾಗವಹಿಸದೇ ಇದ್ದದ್ದು!

ಇಂದಾದರೂ ಈ ಸಭೆಗೆ ನಾನು ಬಂದದ್ದಕ್ಕೆ ಎರಡು ಕಾರಣಗಳಿವೆ.

ಒಂದು, ಕಳೆದ ಎಪ್ಪತ್ತು-ಎಂಬತ್ತು ವರ್ಷಗಳಿಂದ ಕರ್ನಾಟಕದ ನಾನಾ ಭಾಗಗಳಲ್ಲಿ ವೀರಶೈವ ಧರ್ಮದ ವಿವಿಧ ಸಂಪ್ರದಾಯಗಳ ಸಾಧು ಸಂತರು ಭರತಖಂಡದಲ್ಲಿಯೇ ಅಭೂತ ಪೂರ್ವವಾದ ಪ್ರಮಾಣದಲ್ಲಿ, ವಿಧಿವಿಧಾನಗಳಲ್ಲಿ ಶಾಲಾ ಕಾಲೇಜುಗಳನ್ನೂ, ಅವುಗಳಲ್ಲಿ ಓದುವ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಜಾತಿ ಮತ ಭೇದವಿಲ್ಲದೆ ಊಟ ವಸತಿಗಳನ್ನೂ ಏರ್ಪಡಿಸಿ ಲಕ್ಷ ಲಕ್ಷ ಜನರನ್ನು ವಿದ್ಯಾವಂತರನ್ನಾಗಿ ಮಾಡಿರುವುದಕ್ಕಾಗಿ ಅವರೆಲ್ಲರನ್ನೂ ಈ ಸಂದರ್ಭದಲ್ಲಿ ಅಭಿನಂದಿಸುವುದು.

ಈ ಅನ್ನದಾನ, ವಿದ್ಯಾದಾನಗಳನ್ನು ತಪಸ್ಸಿನಂತೆ ಕೈಗೊಂಡಿರುವ ಸ್ವಾಮಿಗಳ ಅಗ್ರಪಂಕ್ತಿ ಯಲ್ಲಿದ್ದಾರೆ ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಯವರು. ಆದುದರಿಂದ ಅವರೂ ಅತ್ಯಂತ ಅಭಿನಂದನೀಯರು ಎಂಬುದು ಸ್ವಯಂವೇದ್ಯವಾಗಿದೆ.





ಸ್ವಾಮಿ ವಿವೇಕಾನಂದರು, ತಮ್ಮ ಗುರುದೇವ, ಸರ್ವಧರ್ಮ ಸಮನ್ವಯಾಚಾರ್ಯ ಶ್ರೀ ರಾಮಕೃಷ್ಣ ಪರಮಹಂಸರಿಂದ ಪಡೆದು, ತಮ್ಮ ತಪಸ್ಸರ್ವಸ್ವವನ್ನೂ ಧಾರೆಯೆರೆದು ಜ್ವಲಂತಗೊಳಿಸಿದ ಮಹಾಮಂತ್ರ "ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ" – ಎಂಬುದು. ಅದರ ಅರ್ಥ "ಸ್ವಂತ ಮೋಕ್ಷಕ್ಕಾಗಿಯೂ, ಜಗತ್ತಿನ ಹಿತಕ್ಕಾಗಿಯೂ" – ಎಂದು.

ಸನ್ಯಾಸ ಧರ್ಮಕ್ಕೆ ಹೊಸ ವ್ಯಾಖ್ಯಾನವನ್ನು ನೀಡಿದ ವಿವೇಕಾನಂದರು ಈ ಮಂತ್ರವನ್ನು ಪುನರುಚ್ಚರಿಸಿ ಭಾರತದ ಅನೇಕ ಸನ್ಯಾಸ ಪಂಥಗಳೂ, ಗೃಹೀಭಕ್ತ ಸಂಘಗಳೂ ಅದರ ಅನುಷ್ಠಾನಕ್ಕೆ ತೊಡಗುವಂತೆ ಮಾಡಿದರು. ಕರ್ನಾಟಕದಲ್ಲಿ ವೀರಶೈವ ಮಠಾಧಿಪತಿಗಳು ಸ್ವಾಮಿ ವಿವೇಕಾನಂದರ ಮಂತ್ರಮಯ ಸಂದೇಶವನ್ನು ಶ್ರದ್ಧೆಯಿಂದ ಸ್ವೀಕರಿಸಿ ಅನುಷ್ಠಾನಕ್ಕೆ ತಂದಿರುವುದು ಈ ನೆಲದ ಭಾಗ್ಯವಿಶೇಷಗಳಲ್ಲೊಂದು ಎಂದು ನಾನು ನಂಬಿದ್ದೇನೆ.

ನಾನು ಇಲ್ಲಿಗೆ ಬರಲು ಒಪ್ಪಿದ್ದಕ್ಕೆ ಎರಡನೆಯ ಕಾರಣ –

– ನನಗೆ ಅತ್ಯಂತ ಪ್ರಿಯವಾಗಿರುವ ನನ್ನ 'ವಿಶ್ವಮಾನವ ಸಂದೇಶ'ದ ಪ್ರತಿಗಳನ್ನು ಮುದ್ರಿಸಿ ಇಲ್ಲಿಗೆ ಆಗಮಿಸುವವರೆಲ್ಲರಿಗೂ ಅದನ್ನು ಹಂಚುವ ಭರವಸೆಯನ್ನು ಈ ಸಮಾರಂಭದ ವ್ಯವಸ್ಥಾಪಕರು ನನಗೆ ನೀಡಿದ್ದು.

"ವಿಶ್ವಮಾನವ ಸಂದೇಶ"ವು ನನಗೆ ಪ್ರಿಯವಾಗಿರುವುದಕ್ಕೆ ಕಾರಣ –

ಕರ್ನಾಟಕದ, ಭರತಖಂಡದ, ಇಡೀ ವಿಶ್ವದ ಉದ್ಧಾರವು ಈ ಸಂದೇಶದಲ್ಲಿ ನಿರೂಪಿಸಿರುವ ಪಂಚ ಮಂತ್ರಗಳನ್ನೂ ಸಪ್ತ ಸೂತ್ರಗಳನ್ನೂ ಆಚರಣೆಗೆ ತಂದಾಗಲೇ ಎಂಬ ನನ್ನ  ಹೃತ್ಪೂರ್ವಕವಾದ ಶ್ರದ್ಧೆ.

ಜನರ ಹೃದಯದಲ್ಲಿ ಮನೆಮಾಡಿರುವ ಮೂಢ ನಂಬಿಕೆಗಳನ್ನೂ, ಜಾತೀಯತೆಯನ್ನೂ ನಿರ್ಮೂಲ ಮಾಡುವವರೆಗೆ ಮಾನವ ಜನಾಂಗದ ಉದ್ಧಾರ ಸಾಧ್ಯವೇ ಇಲ್ಲ ಎಂಬುದು ಎಲ್ಲರಿಗೂ ಮನವರಿಕೆಯಾಗಬೇಕು. ಮಹತ್ಪ್ರಮಾಣದ ಸಾಮಾಜಿಕ ಕ್ರಾಂತಿಯೊಂದು ವಿಚಾರಕ್ರಾಂತಿಯ ರೂಪದಲ್ಲಿ ನಡೆದು ಮಾನವನ ಮತಿಯಲ್ಲಿ ವಿವೇಕವನ್ನು ಸ್ಥಾಪಿಸಲೇಬೇಕಾಗಿದೆ.

ಎರಡು ಸಾವಿರದ ಐದುನೂರು ವರ್ಷಗಳ ಹಿಂದೆ ಭರತಖಂಡದಲ್ಲಿ ಗೌತಮಬುದ್ಧನು ಅಂಥದೊಂದು ಕ್ರಾಂತಿಯನ್ನು ನಡೆಸಿದ. ಆದರೆ ಪುರೋಹಿತಶಾಹಿಯು ಅದನ್ನು ವಿಫಲಗೊಳಿಸಿ ಬೌದ್ಧಧರ್ಮವು ಈ ದೇಶದಿಂದ ಕಣ್ಮರೆಯಾಗುವಂತೆ ಮಾಡಿತು. ಅನಂತರ ಮಹಾವೀರನು ಆರಂಭಿಸಿದ ಕ್ರಾಂತಿಯೂ ಪುರೋಹಿತಶಾಹಿಯ ಚಾಕಚಕ್ಯತೆಯಿಂದ ಮತ್ತೆ ವಿಫಲವಾಯಿತು.





ಭರತಖಂಡವು ಕಂಡ ಮತ್ತೊಬ್ಬ ಮಹಾಕ್ರಾಂತಿಕಾರಿಯೆಂದರೆ ಬಸವಣ್ಣನವರು. ಎಂಟುನೂರು ವರ್ಷಗಳ ಹಿಂದೆ ಜಾತಿ, ಮತ, ಲಿಂಗ, ವೃತ್ತಿ ಭೇದಗಳನ್ನೆಲ್ಲ ನಿರ್ಮೂಲನ ಗೊಳಿಸಲು ಮಹತ್ಪ್ರಮಾಣದಲ್ಲಿ ಸಾಧನೆ ನಡೆಸಿದ ಮಹಾಪುರುಷರು ಅವರು.!

ಭರತಖಂಡದ ಜನಜೀವನದ ದುರಂತವೆಂದರೆ ಪ್ರತಿಯೊಬ್ಬ ವಿಚಾರಕ್ರಾಂತಿಪುರುಷ ನನ್ನೂ, ಉದ್ಧಾರಪರವಾದ ಅವನ ಸಮಸ್ತ ಸಾಧನೆ - ಬೋಧನೆಗಳನ್ನೂ ಪುರೋಹಿತಷಾಹಿಯು ನುಂಗಿ ನಿರ್ನಾಮಗೊಳಿಸುವುದು. ಬಸವೇಶ್ವರರು ಇದಕ್ಕೆ ಹೊರತಾಗಲಿಲ್ಲ. ಮಾತ್ರವಲ್ಲ, ಅವರ ಸಂದೇಶದ ಮಹತ್ತನ್ನು ಅರಿಯದೇ ಹೋದದ್ದು. ಅಂದು ಮಾತ್ರವಿರಲಿ, ಇಂದೂ ಜಾತೀಯತೆಯು ಈ ದೇಶದ, ಏಕೆ ಮಾನವತೆಯ ವಿಷಮ ಸಾಂಕ್ರಾಮಿಕ, ಕ್ಯಾನ್ಸರ್, ಏಯ್ಡ್ಸ್ ಎಂದು ನಿರ್ವಿವಾದವಾಗಿ ತೀರ್ಮಾನ ಮಾಡುವ ಈ ವಿಜ್ಞಾನ ಯುಗದಲ್ಲೂ ಜಾತೀಯತೆಯನ್ನು ನಿರಾಕರಿಸಿದ ಬಸವೇಶ್ವರರ ಅನುಯಾಯಿಗಳೇ ಒಳಜಾತಿಗಳನ್ನು ಸೃಷ್ಟಿಸಿಕೊಂಡು ಒಬ್ಬರು ಮತ್ತೊಬ್ಬರಿಗಿಂತ ಶ್ರೇಷ್ಠ ಎಂದು ಭಾವಿಸಿ ವಿಚಾರಪರರ ಕಣ್ಣಿನಲ್ಲಿ ನಗೆಪಾಟಲಾಗಿರುವುದು!

ಇದು ಸಹಸ್ರ ವರ್ಷಗಳ ಭರತಖಂಡದ, ಏಕೆ ಇಡೀ ಜಗತ್ತಿನ ಮಾನವ ಜನಾಂಗದ ಧರ್ಮ, ಸಂಸ್ಕೃತಿ, ವಿಚಾರ, ವಿಜ್ಞಾನಗಳೆಲ್ಲ ಕಳೆದ ಶತಮಾನದ ಮಧ್ಯಭಾಗದಲ್ಲಿ, ಗಂಗಾತೀರದ ದಕ್ಷಿಣೇಶ್ವರದಲ್ಲಿ ಮಾನವರೂಪವನ್ನು ಧರಿಸಿ ಘೋರವಾದ ತಪಸ್ಸನ್ನು ನಡೆಸಿ, ಸರ್ವಧರ್ಮ ಸಮನ್ವಯ ಮಂಗಳಮಂತ್ರವನ್ನು ಸಾಕ್ಷಾತ್ಕರಿಸಿಕೊಂಡಿತು – ಶ್ರೀ ರಾಮಕೃಷ್ಣ ಪರಮಹಂಸರ ರೂಪದಲ್ಲಿ.

ಶ್ರೀ ಸ್ವಾಮಿಯವರು ಆಯುರಾರೋಗ್ಯಾದಿಭಾಗ್ಯದಿಂದ ಕೂಡಿದ್ದು, ಹೀಗೆಯೇ ಮಂದಹಾಸದ ಬೆಳದಿಂಗಳನ್ನು ಸೂಸುತ್ತಾ ಸಮಾಜಸೇವೆ, ಸಮಾಜಸುಧಾರಣೆಗಳನ್ನು ನಡೆಸುತ್ತಾ ಈ ಬಗೆಯ ಸೇವಾಕಾರ್ಯಗಳಲ್ಲಿ ತೊಡಗಿರುವವರಿಗೆಲ್ಲ ಆದರ್ಶಪ್ರಾಯರಾಗಿ ಮುಂದುವರೆಯಲಿ ಎಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

**ಮತ್ತೊಮ್ಮೆ ಎಲ್ಲರಿಗೂ ನಮಸ್ಕಾರ.**

**ಕೃಪೆ : ನೆನಪು ದಿವ್ಯಾನುಭವ (ಭಾಗ–2)**

☐





# ಆಶ್ರಯ ನೀಡಿದ ಶ್ರೀಮಠ

**ಡಾ. ಜಿ.ಎಸ್. ಶಿವರುದ್ರಪ್ಪ**

[ರಾಷ್ಟ್ರಕವಿ ಪದವಿ ಪುರಸ್ಕಾರ ಪಡೆದಾಗ ಜೆಎಸ್‌ಎಸ್ ಪ್ರಸಾದನಿಲಯಗಳ ಹಿರಿಯ ವಿದ್ಯಾರ್ಥಿಗಳ ಸಂಘವು ದಿನಾಂಕ 16.6.2007 ರಂದು ಸನ್ಮಾನಿಸಿದಾಗ ಶ್ರೀ ಜಿ.ಎಸ್. ಶಿವರುದ್ರಪ್ಪ ನವರು ಮಾಡಿದ ಭಾಷಣ]

ಸುತ್ತೂರು ಮಠದ ವಿದ್ಯಾರ್ಥಿನಿಲಯದ ಹಳೆಯ ವಿದ್ಯಾರ್ಥಿ ಗಳಲ್ಲಿ ಒಬ್ಬನಾದ ನನ್ನನ್ನು, ಜಗದ್ಗುರು ಶ್ರೀ ಶಿವರಾತ್ರೀಶ್ವರ ಪ್ರಸಾದ ನಿಲಯಗಳ ಹಿರಿಯ ವಿದ್ಯಾರ್ಥಿಗಳ ಸಂಘವು ನನಗೆ ರಾಷ್ಟ್ರಕವಿ ಪ್ರಶಸ್ತಿ ಬಂದ ಸಂದರ್ಭದಲ್ಲಿ, ಈ ದಿನ ಅತ್ಯಂತ ಪ್ರೀತಿ, ವಿಶ್ವಾಸಗಳಿಂದ ಅಭಿನಂದಿಸಿ ಗೌರವಿಸಿದೆ. ಅದಕ್ಕಾಗಿ ನಾನು ಪ್ರಸಾದನಿಲಯಗಳ ಹಿರಿಯ ವಿದ್ಯಾರ್ಥಿಸಂಘದ ಅಧ್ಯಕ್ಷರಾದ ಶ್ರೀ ಎಲ್. ರೇವಣಸಿದ್ಧಯ್ಯ ಮತ್ತು ಇತರ ಪದಾಧಿಕಾರಿಗಳಿಗೆ ಕೃತಜ್ಞತೆಯ ವಂದನೆಗಳನ್ನು ಸಲ್ಲಿಸುತ್ತ ಈ ಸನ್ಮಾನವನ್ನು ತುಂಬ ಪ್ರೀತಿಯಿಂದ ಸ್ವೀಕರಿಸಿದ್ದೇನೆ.

ಈ ಸಮಾರಂಭದ ಜತೆಗೆ ಇನ್ನೆರಡು ವಿಶೇಷಗಳು ಸೇರಿಕೊಂಡಿವೆ. ಮೊದಲನೆಯದು ಪ್ರೊ. ಲಿಂಗದೇವರು ಹಳೆಮನೆಯವರು ನನ್ನ ಸಾಹಿತ್ಯ ಹಾಗೂ ವ್ಯಕ್ತಿತ್ವವನ್ನು ಕುರಿತು ರಚಿಸಿರುವ ಕಿರು ಕೃತಿಯೊಂದು ನನ್ನ ಪ್ರೀತಿಯ ಕವಿಯೂ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಡಾ. ಸಿದ್ಧಲಿಂಗಯ್ಯನವರಿಂದ ಬಿಡುಗಡೆಯಾಗುತ್ತಿದೆ ಅನ್ನುವುದು. ಪ್ರೊ. ಲಿಂಗದೇವರು ಇಂಥದೊಂದು ಕೃತಿಯನ್ನು ಬರೆದಿದ್ದಾರೆನ್ನುವುದು ನನಗೆ ಸಂತೋಷದ ಸಂಗತಿ ಕೂಡಾ. ಎರಡನೆಯದು, ಭಾರತೀಯ ಭಾಷಾ ಸಂಸ್ಥಾನದ ವತಿಯಿಂದ ನನ್ನ ತರುಣ ಮಿತ್ರರು, ಸಾಹಿತ್ಯ ಹಾಗೂ ಚಲನಚಿತ್ರ ವಲಯಗಳಲ್ಲಿ ಹೆಸರು ಮಾಡಿರುವ ಶ್ರೀ ಕೃಷ್ಣ ಮಾಸಡಿಯವರು ನನ್ನನ್ನು ಕುರಿತು ಸಿದ್ಧಪಡಿಸಿರುವ ಸಾಕ್ಷ್ಯಚಿತ್ರವೊಂದು ಈ ದಿನ ಪ್ರದರ್ಶಿತವಾಗಲಿದೆ ಅನ್ನುವುದು. ಈ ಸಾಹಸಗಳಿಗಾಗಿ ನಾನು ಪ್ರೊ. ಲಿಂಗದೇವರು ಹಳೆಮನೆಯವರನ್ನೂ, ಶ್ರೀ ಕೃಷ್ಣ ಮಾಸಡಿಯವರನ್ನೂ ಅಭಿನಂದಿಸುತ್ತೇನೆ. ಮತ್ತು, ನನ್ನನ್ನು ಕುರಿತು ಪ್ರಿಯರಾದ ಶ್ರೀ ಗೊ.ರು. ಚನ್ನಬಸಪ್ಪನವರು, ಡಾ. ಎಂ. ಚಿದಾನಂದಮೂರ್ತಿ ಯವರು ಮತ್ತು ಡಾ. ಸಿ.ಪಿ.ಕೆ. ಹಾಗೂ ಡಾ. ಸಿದ್ಧಲಿಂಗಯ್ಯನವರು ತುಂಬ ಪ್ರೀತಿಯಿಂದ ಮಾತನಾಡಿದ್ದಾರೆ. ತಮ್ಮ ನಡುವಣ ಒಬ್ಬ ಕವಿಯನ್ನು ಕುರಿತು ಆತನ ಸಮಕಾಲೀನ ಸಹೃದಯರು ತಾಳುವ ಆಸಕ್ತಿ, ನಡೆಯಿಸುವ ಚರ್ಚೆ ಇವೆಲ್ಲ ಆ ಕವಿಗೆ ತೋರುವ





ಗೌರವವಷ್ಟೇ ಅಲ್ಲ, ಆ ಮೂಲಕ ಒಂದು ಭಾಷೆಗೆ ಮತ್ತು ಆ ಭಾಷೆಯನ್ನಾಡುವ ಜನಕ್ಕೆ ತೋರುವ ಗೌರವವೂ ಹೌದು.

ನಾನು ಮೂರು ಮಠಗಳ ತೊಟ್ಟಿಲಲ್ಲಿ ಬೆಳೆದವನು. ಅಂದರೆ, ನನ್ನ ಶೈಕ್ಷಣಿಕ ಜೀವನವು ವಿಕಾಸಹೊಂದಿದ್ದು ಶರಣಧರ್ಮದ ಮೂರು ಮುಖ್ಯ ಮಠಗಳು ನಡೆಯಿಸುತ್ತಿರುವ ವಿದ್ಯಾರ್ಥಿನಿಲಯಗಳ ಆಶ್ರಯ ಮತ್ತು ಪೋಷಣೆಯಲ್ಲಿ. ಮೊದಲನೆಯದು, ನನಗೆ ಹೈಸ್ಕೂಲಿನ ದಿನಗಳಲ್ಲಿ ಆಶ್ರಯ ಕೊಟ್ಟದ್ದು ಚಿತ್ರದುರ್ಗದ ಶ್ರೀ ಮುರುಘ ರಾಜೇಂದ್ರ ಸ್ವಾಮಿಗಳು ದಾವಣಗೆರೆಯಲ್ಲಿ ಸ್ಥಾಪಿಸಿರುವ ಜಯದೇವ ವಿದ್ಯಾರ್ಥಿನಿಲಯ. ದಾವಣಗೆರೆಯ ಜಯದೇವ ವಿದ್ಯಾರ್ಥಿನಿಲಯ ಸ್ಥಾಪಿತವಾಗಿ ಒಂದು ನೂರು ವರ್ಷವಾಯಿತು. ಕಳೆದ ತಿಂಗಳು ಅದರ ಶತಮಾನೋತ್ಸವ ವರ್ಷದ ಆಚರಣೆಯ ಸಂದರ್ಭದಲ್ಲಿ ಅದರ ಹಳೆಯ ವಿದ್ಯಾರ್ಥಿಯಾದ ನನ್ನನ್ನು ರಾಷ್ಟ್ರಕವಿ ಪುರಸ್ಕೃತನೆಂದು ಗೌರವಿಸಲಾಯಿತು. ಎರಡನೆಯದು ನನ್ನ ಇಂಟರ್‌ಮೀಡಿಯೇಟ್ ಕಾಲೇಜಿನ ದಿನಗಳಲ್ಲಿ ನನಗೆ ಆಶ್ರಯ ಕೊಟ್ಟದ್ದು ಪೂಜ್ಯ ಶ್ರೀ ಶಿವಕುಮಾರಸ್ವಾಮಿಗಳ ಸಿದ್ಧಗಂಗಾ ಮಠದ ಪ್ರಸಾದನಿಲಯ. ಋಷ್ಯಾಶ್ರಮಸದೃಶವಾದ ಈ ಕ್ಷೇತ್ರದಲ್ಲಿ ನನ್ನ ಕವಿತೆಗೆ ರೆಕ್ಕೆ ಪುಕ್ಕಗಳು ಮೂಡಿದುವೆಂದು ಹೇಳಬಹುದು. ಮೂರನೆಯದು ನನ್ನ ಬಿ.ಎ. ಆನರ್ಸ್ ತರಗತಿಯ ಶಿಕ್ಷಣದ ಸಂದರ್ಭದಲ್ಲಿ ಆಶ್ರಯ ಕೊಟ್ಟದ್ದು ಮೈಸೂರಿನಲ್ಲಿರುವ ಶ್ರೀ ಸುತ್ತೂರು ಜಗದ್ಗುರುಗಳು ನಡೆಯಿಸುತ್ತಿದ್ದ ಶ್ರೀ ಶಿವರಾತ್ರಿ ರಾಜೇಂದ್ರ ವಿದ್ಯಾರ್ಥಿನಿಲಯ. ಈ ಮೂರೂ ಮಠಗಳು ಕರ್ನಾಟಕದ ಶಿಕ್ಷಣ ಹಾಗೂ ಸಂಸ್ಕೃತಿಯ ಸಂವರ್ಧನೆಯಲ್ಲಿ ವಹಿಸಿರುವ ಪಾತ್ರ ಮಹತ್ವದ್ದು. ಇವುಗಳ ಆಶ್ರಯವಿಲ್ಲದಿದ್ದ ಪಕ್ಷದಲ್ಲಿ ನಾನು ಹಾಗೂ ನನ್ನಂಥ ಅಸಂಖ್ಯ ಬಡ ವಿದ್ಯಾರ್ಥಿಗಳು ಶಿಕ್ಷಣದ ಸವಲತ್ತನ್ನು ಪಡೆದುಕೊಂಡು ಮುಂದೆ ಬರಲು ಸಾಧ್ಯವೇ ಇರುತ್ತಿರಲಿಲ್ಲ ಅನ್ನುವುದು ಒಂದು ಚಾರಿತ್ರಿಕ ಸತ್ಯವಾಗಿದೆ. ಸುತ್ತೂರು ಮಠದ ವಿದ್ಯಾರ್ಥಿನಿಲಯದ ಒಬ್ಬ ಹಳೆಯ ವಿದ್ಯಾರ್ಥಿಯಾಗಿ ನನ್ನ ಅಂದಿನ ದಿನಗಳನ್ನು ನೆನೆಯುವುದು ಅಂದರೆ, ಮೈಸೂರಿನ ಮಹಾರಾಜ ಕಾಲೇಜಿನ ಉಜ್ವಲವಾದ ಆ ದಿನಗಳನ್ನು ನೆನೆಯುವುದು ಎಂದೇ ಅರ್ಥ. ಮಹಾಕವಿ ಕುವೆಂಪು, ಪಂಡಿತೋತ್ತಮ ಡಿ.ಎಲ್. ನರಸಿಂಹಾಚಾರ್, ಆಚಾರ್ಯ ತೀ.ನಂ. ಶ್ರೀಕಂಠಯ್ಯ, ಮಹಾವಾಗ್ಮಿ ಟಿ.ಎ. ಪುರುಷೋತ್ತಮ, ವಿನೋದಪ್ರಿಯ ಪ್ರೊ. ವಿ.ಎಲ್. ಡಿಸೌಜ, ತತ್ವಜ್ಞಾನಿ ಎಂ. ಯಾಮುನಾಚಾರ್ಯ, ಮಾಧುರ್ಯವೇ ಮೂರ್ತಿವೆತ್ತಂತಿದ್ದ ರಾಳ್ಲಪಳ್ಳಿ ಅನಂತಕೃಷ್ಣಶರ್ಮ–ಈ ಹೆಸರುಗಳೇ ಸಾಕು. ಇವರ ನಡುವೆ ಸೇರಿಸಬೇಕಾದದ್ದು ವಾತ್ಸಲ್ಯದ ಪ್ರತಿಮಾಸ್ವರೂಪರಾದ ಪ್ರೊ. ತ.ಸು. ಶಾಮರಾಯರು.

ಶಾಮರಾಯರ ನೆನಪು ಬರುತ್ತಲೇ ನಾನು ಸುತ್ತೂರು ಮಠದ ವಿದ್ಯಾರ್ಥಿನಿಲಯಕ್ಕೆ ಸೇರಿಕೊಂಡ ಸ್ವಾರಸ್ಯವಾದ ಸಂಗತಿ ಕಣ್ಣ ಮುಂದೆ ಬಂದು ನಿಲ್ಲುತ್ತದೆ.





ಅದು 1946ನೆಯ ಇಸವಿ. ಗ್ರಾಮೀಣ ಪರಿಸರದ ಮಧ್ಯಮ ವರ್ಗದ ಕುಟುಂಬದಿಂದ ಬಂದ ನಾನು ಮನೆಯೊಳಗಣ ಆರ್ಥಿಕ ಸಂಕಷ್ಟಗಳ ಕಾರಣದಿಂದ ವಿದ್ಯಾಭ್ಯಾಸವನ್ನು ಮುಂದುವರಿಸಲಾಗದೆ, ಕೆಲವು ಕಾಲ ಮಿಡಲ್ ಸ್ಕೂಲ್ ಮೇಷ್ಟ್ರಾಗಿ, ಕೆಲವು ಕಾಲ ತಾಲ್ಲೂಕು ಕಛೇರಿಯ ಗುಮಾಸ್ತನಾಗಿ ಹಲವು ಅವಸ್ಥಾಂತರಗಳನ್ನು ಹಾದು, ಅದು ಹೇಗೋ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಕನ್ನಡ ಬಿ.ಎ. ಆನರ್ಸ್ ತರಗತಿಗೆ ಸೇರಿಕೊಂಡಿದ್ದೆ. ಆದರೆ ಏನು ಕಾರಣವೋ ಏನೋ ಮೈಸೂರಿನ ಯಾವ ವಿದ್ಯಾರ್ಥಿನಿಲಯದಲ್ಲೂ ನನಗೆ ಪ್ರವೇಶ ದೊರೆಯಲಿಲ್ಲ. ಹೀಗಾಗಿ ನಾನು ನನ್ನಂತೆಯೆ ಇದ್ದ ಒಂದಿಬ್ಬರು ಗೆಳೆಯರೊಂದಿಗೆ, ಮೈಸೂರಿನ ಡಿ. ಸುಬ್ಬಯ್ಯ ರಸ್ತೆಯಲ್ಲೊಂದು ಕೊಠಡಿಯನ್ನು ಬಾಡಿಗೆಗೆ ಹಿಡಿದು, ಒಂದಷ್ಟು ಅನ್ನ ಬೇಯಿಸಿ ಕೊಂಡು ಹೋಟಲಿನಿಂದ ಸಾಂಬಾರ್ ಕೊಂಡು ತಂದು, ನಮ್ಮ ದಿನಗಳನ್ನು ನೂಕುತಿದ್ದೆವು.

ಇಂಥ ದಿನಗಳಲ್ಲಿ ಒಂದು ದಿನ ಮಹಾರಾಜ ಕಾಲೇಜಿನಲ್ಲಿ ನಮ್ಮ ಗುರುಗಳಾದ ತ.ಸು. ಶಾಮರಾಯರು ಕುಮಾರವ್ಯಾಸನ 'ಉದ್ಯೋಗ ಪರ್ವ'ದ ಒಂದು ಸಂದರ್ಭವನ್ನು ಕುರಿತು ಪಾಠ ಮಾಡುತ್ತಿದ್ದರು. ಇದ್ದಕ್ಕಿದ್ದ ಹಾಗೆ ನನಗೆ ತಲೆ ಸುತ್ತಿದಂತಾಗಿ, ಡೆಸ್ಕಿನ ಮೇಲೆ ತಲೆಯಿರಿಸಿ ಒರಗಿಕೊಂಡೆ. ಕೊಂಚ ಹೊತ್ತಿನ ಮೇಲೆ ಸುಧಾರಿಸಿಕೊಂಡು ಮಂಕಾಗಿ ಕೂತ ನನ್ನನ್ನು ಶಾಮರಾಯರು ಗಮನಿಸಿದರು.

ತರಗತಿ ಮುಗಿದ ಕೂಡಲೇ ನನ್ನ ಕಡೆ ನೋಡಿ 'ಏ ಮಗೂ, ಏನಾಗಿದೆ ನಿನಗೆ? ಯಾಕೆ ಹೀಗಿದ್ದೀ? ಊಟ ಮಾಡಿದ್ದೀಯ ತಾನೆ?' ಅಂದರು. ನಾನೆಂದೆ: 'ಊಟ ಆಗಿದೆ ಸಾರ್, ಏನೋ ಸ್ವಲ್ಪ ತಲೆ ಸುತ್ತಿದ ಹಾಗಾಯಿತು, ಅಷ್ಟೆ'. 'ಎಲ್ಲಿ ಮಾಡಿದೆ, ಯಾವ ಹಾಸ್ಟಲು' ಅಂದರು ಮೇಷ್ಟ್ರು. 'ಯಾವ ಹಾಸ್ಟಲಲ್ಲೂ ಇಲ್ಲ ಸಾರ್, ಹೋಟಲಿನಲ್ಲಿ' ಅಂದೆ. 'ಸುಳ್ಳು, ಸುಳ್ಳು. ನೀನು ಊಟಾನೇ ಮಾಡಿಲ್ಲ ಅನ್ನೋದನ್ನ ನಿನ್ನ ಮುಖವೇ ಹೇಳುತ್ತೆ. ಬಾ ನನ್ನ ಜತೆಗೆ' – ಎಂದು ಸೀದಾ ತಮ್ಮ ಮನೆಗೆ ಕರೆದುಕೊಂಡು ಹೋದರು. 'ಲೇ, ನನ್ನ ಜತೆಗೆ ಇವನಿಗೂ ಎಲೆ ಹಾಕೇ' ಎಂದು ಅಡುಗೆಮನೆಯೊಳಗಿದ್ದ ತಮ್ಮ ಮಡದಿಗೆ ಕೇಳುವಂತೆ ಹೇಳಿದರು. ಮುಂದಿನ ಹದಿನೈದು ನಿಮಿಷಗಳಲ್ಲಿ ನಡೆದಿತ್ತು ನಮ್ಮ ಊಟ. 'ಬಡ್ಸು ಬಡ್ಸು, ಸರಿಯಾಗಿ ಬಡ್ಸು' ಎಂದು ತಮ್ಮ ಹೆಂಡತಿಗೆ ಹೇಳುತ್ತಲೇ 'ನಾಚಿಕೆಪಟ್ಟುಕೊಳ್ಳಬೇಡ ಕಣಯ್ಯಾ, ಸರಿಯಾಗಿ ಊಟ ಮಾಡು' ಅಂದರು. ಊಟವಾದ ಮೇಲೆ ನನ್ನ ಪೂರ್ವೋತ್ತರಗಳನ್ನೆಲ್ಲ ವಿಚಾರಿಸಿದರು. ಮರುದಿನ ನನ್ನನ್ನು ಸುತ್ತೂರು ಜಗದ್ಗುರುಗಳಾದ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳ ಹತ್ತಿರ ಕರೆದುಕೊಂಡು ಹೋದರು. 'ಸ್ವಾಮೀಜಿ ಇವನೊಬ್ಬ ಬಡ ಹುಡುಗ. ನನ್ನ ವಿದ್ಯಾರ್ಥಿ. ಯಾವ ಹಾಸ್ಟಲಲ್ಲೂ ಇವನಿಗೆ ಅವಕಾಶ ಸಿಕ್ಕಿಲ್ಲ. ಇವನಿಗೆ ನಿಮ್ಮ ಹಾಸ್ಟಲಲ್ಲಿ ದಯಮಾಡಿ ಅನುಕೂಲ ಮಾಡಿಕೊಡಿ' ಎಂದು ಕೇಳಿಕೊಂಡರು. ಪೂಜ್ಯ ಸ್ವಾಮಿಗಳು ನಕ್ಕು ಹೇಳಿದರು. 'ಶಾಮರಾಯರೇ ಇವನು ಲಿಂಗಾಯತರ ಹುಡುಗ, ನೀವು ಬ್ರಾಹ್ಮಣರು. ಇವನ ಬಗ್ಗೆ ನಿಮಗೇನು ಇಷ್ಟೊಂದು ಆಸಕ್ತಿ?'





ಶಾಮರಾಯರು ಎಂದೂ ಯಾವುದಕ್ಕೂ ತಮ್ಮ ಸ್ವಂತಕ್ಕೆಂದು ಯಾರ ಹತ್ತಿರವೂ ಹೋದವರಲ್ಲ. ಪೂಜ್ಯ ಸ್ವಾಮೀಜಿಯವರು ಶಾಮರಾಯರ ಬಗ್ಗೆ ತುಂಬ ವಿಶ್ವಾಸವಿರಿಸಿಕೊಂಡವರು. ಅವರೇ ಹೀಗಂದ ಮೇಲೆ ಶಾಮರಾಯರು ಸ್ವಲ್ಪ ಕಟುವಾಗಿಯೇ ಹೇಳಿದರು. 'ಸ್ವಾಮೀಜಿ, ನನ್ನ ವಿದ್ಯಾರ್ಥಿಗಳು ನನ್ನ ಮಕ್ಕಳಿದ್ದಂತೆ. ಅವರು ನನ್ನ ಮಟ್ಟಿಗೆ ಜಾತ್ಯತೀತರು. ಅವರದು ವಿದ್ಯಾರ್ಥಿಗಳ ಜಾತಿ, ನಾನು ಅವರ ಗುರು'. ಸ್ವಾಮಿಗಳ ನಗುಮುಖ ಅರಳಿತು. ಸ್ವಾಮೀಜಿ ಹೇಳಿದರು: 'ನಾನು ಅದನ್ನು ಬಲ್ಲೆ, ಕೇವಲ ಹಾಸ್ಯಕ್ಕಾಗಿ ಹೇಳಿದೆ. ನಾಳೆಯಿಂದಲೇ ಈತ ನಮ್ಮ ಹಾಸ್ಟೆಲಿಗೆ ಬಂದು ಸೇರಿಕೊಳ್ಳಲಿ.'

ಅಂತೂ ಇಂತೂ ಶಾಮರಾಯರ ಕೃಪೆಯಿಂದ ಸುತ್ತೂರು ಮಠದ ವಿದ್ಯಾರ್ಥಿ ನಿಲಯದೊಳಗೆ ಪ್ರವೇಶ ಪಡೆದ ನಾನು, ಅಂದಿನಿಂದ ಮೂರು ವರ್ಷಗಳ ಕಾಲ ಅಶನ-ವಸತಿ ಸೌಲಭ್ಯಗಳನ್ನು ಪಡೆದುಕೊಳ್ಳುವ ಸುಯೋಗವೊಂದು ಪ್ರಾಪ್ತವಾಯಿತು. ಆ ಸುಯೋಗವೇ ಈಹೊತ್ತು ಶ್ರೀ ಶಿವರಾತ್ರೀಶ್ವರ ವಿದ್ಯಾರ್ಥಿನಿಲಯದ ಹಿರಿಯ ವಿದ್ಯಾರ್ಥಿಗಳ ಸಂಘದಿಂದ ಸನ್ಮಾನಗೊಳ್ಳುವ ಸಂದರ್ಭಕ್ಕೆ ನಾಂದಿಯಾಯಿತೆಂದು ಭಾವಿಸುತ್ತೇನೆ.

ಜತೆಗೆ ಇಂದಿನ ಹಾಗೂ ಹಿಂದಿನ ಕೆಲವು ಅಭಿನಂದನ ಸಮಾರಂಭಗಳ ಹಿಂದೆ ಪೂಜ್ಯ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ನನ್ನ ಬಗ್ಗೆ ಇರಿಸಿರುವ ಪ್ರೀತಿ-ಅಭಿಮಾನಪೂರ್ವಕವಾದ ಆಶೀರ್ವಾದದ ಪರಿವೇಷವೊಂದು ಅಗೋಚರವಾಗಿ ಇದೆ ಎನ್ನುವುದು ನನ್ನ ಭಾಗ್ಯವಾಗಿದೆ.

ನವೋದಯ ಉತ್ಕರ್ಷಕಾಲದಲ್ಲಿ ಕನ್ನಡ ಸಾಹಿತ್ಯವನ್ನು ಪ್ರವೇಶಿಸಿದ ನಾನು ಈವರೆಗಿನ ವಿವಿಧ ಸಾಹಿತ್ಯ ಚಳವಳಿಗಳಿಂದ ನನ್ನ ಸೃಜನಶೀಲತೆಗೆ ಅಗತ್ಯವಾದ ಗುಣಾತ್ಮಕ ಅಂಶಗಳನ್ನು ಕರಗಿಸಿ ಕೊಳ್ಳುತ್ತ, ಅರಗಿಸಿಕೊಳ್ಳುತ್ತ ಸಾಹಿತ್ಯಕ್ಷೇತ್ರದಲ್ಲಿ ಅಲ್ಪಸ್ವಲ್ಪ ಸಾಧನೆ ಮಾಡಿದ್ದೇನೆ. ಕನ್ನಡ ಜನ ನನ್ನನ್ನು ಪ್ರೀತಿಯಿಂದ ಕವಿ ಎಂದು ಮೆಚ್ಚಿ ಒಪ್ಪಿಕೊಂಡಿದೆ. ನನ್ನ ಅಧ್ಯಾಪಕತನದ ಜೀವನದಲ್ಲಿ ನಾನು ಸಂಪಾದಿಸಿದ ಸಂಪತ್ತೆಂದರೆ, ನಾನು ಹೆಮ್ಮೆಪಟ್ಟುಕೊಳ್ಳ ಬಹುದಾದ ಹಾಗೂ ಸಾಹಿತ್ಯದ ವಿವಿಧ ಕ್ಷೇತ್ರಗಳಲ್ಲಿ ಹೆಸರು ಮಾಡಿರುವ ಬಹುಸಂಖ್ಯೆಯ ವಿದ್ಯಾರ್ಥಿಗಳೇ. ಕಾಲದಿಂದ ಕಾಲಕ್ಕೆ ಅಯಾಚಿತವಾಗಿ ಪ್ರಶಸ್ತಿಗಳು ನನಗೆ ಲಭ್ಯವಾಗಿವೆ. ಈ ಎಲ್ಲವನ್ನೂ ನೋಡಿದರೆ ನಾನು ಅದೃಷ್ಟವಂತನೆಂದೇ ಹೇಳಬೇಕು. ಒಂದು ರೀತಿಯಲ್ಲಿ ನಾನು ಕೊಟ್ಟದ್ದಕ್ಕಿಂತ ಪಡೆದದ್ದೇ ಹೆಚ್ಚೆಂದು ತೋರುತ್ತದೆ.

ಹೀಗೆ ಪಡೆದದ್ದರ ಪಟ್ಟಿಗೆ ಇಂದಿನ ಸಮಾರಂಭವೂ ಸೇರುತ್ತದೆ. ಅದಕ್ಕಾಗಿ ನಿಮಗೆ ಕೃತಜ್ಞತೆಯ ವಂದನೆ ಅಂದರೆ ಅಷ್ಟೆ ಸಾಕೆ? ನಿಜವಾಗಿಯೂ ಹೇಳಬೇಕಾದದ್ದು ಹೇಳಿದ್ದರ ಆಚೆಗೇ ಉಳಿದು ಬಿಡುತ್ತದೆ. ನಮಸ್ಕಾರ.

**ಕೃಪೆ : ಘನ–ಮನ**

□





# ನಿತ್ಯಸ್ಮರಣೆ

**ತ.ಸು. ಶಾಮರಾವ್**

ಬಹಳ ಹಿಂದಿನ ಸಂಗತಿ. ಅಂದು ಗುರುವಾರ. ತರಗತಿಯಿಂದ ಹೊರಗೆ ಕಾಲಿಟ್ಟಿದ್ದೆ. ಆ ವೇಳೆಗೆ ಸರಿಯಾಗಿ ಅಲ್ಲಿಗೆ ಬಂದ ವಿಶ್ವವಿದ್ಯಾನಿಲಯದ ಕಾರಕೂನನೊಬ್ಬ ನನ್ನನ್ನು ಸಂಧಿಸಿ, ಪ್ರೊಫೆಸರ್ ಸಾಹೇಬರೇ, ನಿಮ್ಮೊಡನೆ ಅತ್ಯಂತ ಗುಟ್ಟಾದ ಒಂದು ಸಂಗತಿಯನ್ನು ತಿಳಿಸಬೇಕಾಗಿದೆ. ಬನ್ನಿ, ಆ ಆಲದ ಮರದ ಬಳಿಗೆ ಹೋಗೋಣ ಎಂದು ಹೇಳಿ ನನ್ನನ್ನು ಪ್ರಾಚ್ಯವಸ್ತು ಸಂಶೋಧನಾಲಯದ ಮುಂದಿದ್ದ ಒಂದು ಮರದ ನೆರಳಿಗೆ ಕರೆದುಕೊಂಡು ಹೋದ. ಅಲ್ಲಿ ಇಬ್ಬರೂ ಕುಳಿತೆವು. ಅನಂತರ ಆತ ನನ್ನನ್ನು ಕುರಿತು ನಿಮಗೆ ಒಂದು ಕೆಟ್ಟ ವಿಷಯವನ್ನು ತಿಳಿಸಬೇಕಾಗಿದೆ. ದಯವಿಟ್ಟು ಕ್ಷಮಿಸಿ. ಅಂದರೆ ನಿಮ್ಮ ಕೆಲಸವಿನ್ನೂ ಖಾಯಂ ಆಗಿಲ್ಲ. ನೀವು ಬರೀ ಬಿ.ಎ. ಆನರ್ಸ್ ಪಾಸು ಮಾಡಿರುವವರು, ವಿಶ್ವವಿದ್ಯಾನಿಲಯದಲ್ಲಿ ಎಂ.ಎ. ಆಗಿರಬೇಕೆಂಬ ನಿಯಮವಿದೆ. ಈ ವಿಷಯವನ್ನೇ ಮುಂದೆ ಮಾಡಿಕೊಂಡು ಎಂ.ಎ. ಆದವರೊಬ್ಬರು ಕುಲಪತಿಗಳಿಗೆ ಅರ್ಜಿ ಸಲ್ಲಿಸಿದ್ದಾರೆ. ಅದಕ್ಕೆ ಕುಲಪತಿಗಳು ಆ ಅರ್ಜಿಯ ಮೇಲೆ ಎಂ.ಎ. ಆದವರನ್ನು ನೇಮಿಸಿ ಕೊಂಡು ನಿಮ್ಮನ್ನು ಮನೆಗೆ ಕಳುಹಿಸಬಹುದೆಂದು ಬರೆದಿಟ್ಟಿದ್ದಾರೆ. ನಾಳೆ ಬೆಳಗ್ಗೆ ವಿಶ್ವವಿದ್ಯಾನಿಲಯದಿಂದ ನಿಮ್ಮ ಕಾಲೇಜಿಗೆ ಪತ್ರ ಬರಬಹುದು. ನೀವು ಮನೆಗೆ ಹೋಗಬೇಕಾಗುತ್ತದೆ ಎಂದು ತಿಳಿಸಿದ. ಇದನ್ನು ಕೇಳಿ ನನಗೆ ಸಿಡಿಲು ಬಡಿದಂತಾಯಿತು. ನಾನು ದಿಗ್ಭ್ರಾಂತನಾಗಿ ದೇವರ ಸ್ಮರಣೆ ಮಾಡುತ್ತ ಕಾಲೇಜಿಗೆ ಹಿಂದಿರುಗಿದೆ.

ಬಸವಣ್ಣ ಎನ್ನುವವರು ನಮ್ಮ ಕಾಲೇಜಿನ ಮುಖ್ಯ ಗುಮಾಸ್ತರು. ಅವರಿಗೆ ನನ್ನಲ್ಲಿ ಅತಿಶಯವಾದ ಅಭಿಮಾನ. ಅವರ ಬಳಿಗೆ ಹೋಗಿ ಮನೆಗೆ ಹೊರಡಲು ಸಿದ್ಧರಾಗುತ್ತಿದ್ದ ಅವರೊಡನೆ ನನಗೆ ಪ್ರಾಪ್ತ ವಾಗಿದ್ದ ಭಯಂಕರ ಸ್ಥಿತಿಯನ್ನು ನಿವೇದಿಸಿದೆ. ಅವರು ಅತ್ಯಂತ ವಿಷಾದ ದಿಂದ "ಇನ್ನೇನು ಗತಿ!" ಎಂದು ಹಲುಬಿದರು. ಬೇಲಿ ಎದ್ದು ಹೊಲ ಮೇಯುವಾಗ ಅದನ್ನು ತಪ್ಪಿಸುವುದು ಹೇಗೆ! ಸ್ವಲ್ಪ ಹೊತ್ತು ಅವರು ಕಿಂಕರ್ತವ್ಯತಾಮೂಢರಾಗಿ ಕುಳಿತರು. ಆಮೇಲೆ ನನ್ನೊಡನೆ ರಾಯರೇ, ಈ ಅಪಾಯದಿಂದ ಪಾರಾಗಲು ನನಗೊಂದು ಉಪಾಯ ತಲೆಗೆ ಹೊಳೆಯುತ್ತಿದೆ. ಸುತ್ತೂರು ಮಠದ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ





ಮೇಲೆ ಈ ಕುಲಪತಿಗಳಿಗೆ ಅತ್ಯಂತ ಭಕ್ತಿ ಮತ್ತು ವಿಶ್ವಾಸ. ನೀವು ಅವರನ್ನು ಕಂಡು ನಿಮ್ಮ ತೊಂದರೆಯನ್ನು ಹೇಳಿ ಕೊಂಡರೆ, ದಯಾಮಯರಾದ ಅವರು ನಿಮ್ಮ ರಕ್ಷಣೆಗೆ ಒದಗಬಹುದು ಎಂದರು. ನನಗೆ ಸ್ವಾಮಿಗಳ ಪರಿಚಯವಿರಲಿಲ್ಲ. ಬಸವಣ್ಣ ತಾವೇ ಅವರ ಬಳಿಗೆ ಕರೆದೊಯ್ಯುವುದಾಗಿ ತಿಳಿಸಿದರು.

ಸಂಜೆ ಆರು ಗಂಟೆಯ ವೇಳೆಗೆ ಬಸವಣ್ಣನವರೊಡನೆ ನಾನು ಸುತ್ತೂರು ಸ್ವಾಮಿಗಳ ಬಳಿಗೆ ಹೋದೆ. ಸದಾ ಜನರ ಗುಂಪೇ ನೆರೆದಿರುವ ಆ ಸ್ವಾಮಿಗಳ ಮಠದಲ್ಲಿ ನನ್ನ ಪುಣ್ಯದಿಂದಲೋ ಏನೋ ಅಂದು ಯಾರೂ ಇರಲಿಲ್ಲ. ಸ್ವಾಮಿಗಳೊಬ್ಬರೇ ಯಾವುದೋ ಗ್ರಂಥದಲ್ಲಿ ಮಗ್ನರಾಗಿ ಕುಳಿತಿದ್ದರು. ಬಾಗಿಲಲ್ಲಿ ಕುಳಿತಿದ್ದ ಶಿವಭಕ್ತ ನೊಡನೆ ಬಸವಣ್ಣನವರೊಡನೆ ನಾನು ಬಂದಿರುವುದಾಗಿ ಹೇಳಿ ಕಳಿಸಿದೆ. ಒಡನೆಯೇ ಒಳಹೋಗಲು ಅಪ್ಪಣೆ ದೊರೆಯಿತು. ಇಬ್ಬರೂ ಸ್ವಾಮಿಗಳಿಗೆ ದೀರ್ಘದಂಡ ನಮಸ್ಕಾರ ಮಾಡಿ ಎದುರಿಗೆ ಕುಳಿತೆವು. ಸದಾ ಹಸನ್ಮುಖಿಗಳಾದ ಆ ಸ್ವಾಮಿಗಳು ಬಸವಣ್ಣನವರನ್ನು ಕುರಿತು ಏನು ವಿಚಾರ? ಎಂದು ಕೇಳಿದರು. ಬಸವಣ್ಣನವರು ಅತ್ಯಂತ ನಮ್ರರಾಗಿ ಇವರು ಟಿ.ಎಸ್. ಶಾಮರಾಯರು, ನಮ್ಮ ಕಾಲೇಜಿನ ಕನ್ನಡ ಅಧ್ಯಾಪಕರು. ನಿಮ್ಮನ್ನು ಕಾಣಲು ಬಂದಿದ್ದಾರೆ ಎಂದು ನನ್ನ ಪರಿಚಯ ಮಾಡಿಕೊಟ್ಟರು.

ನನ್ನ ಹೆಸರು ಕೇಳುತ್ತಲೇ ಸ್ವಾಮಿಗಳವರು, ಓಹೋ, ಇವರೇನಾ ಶಾಮರಾಯರು? ಇವರ ಹೆಸರನ್ನು ಕೇಳಿದ್ದೇವೆ. ಅತ್ಯಂತ ಕುಶಲರಾದ ಉಪಾಧ್ಯಾಯರೆಂದು ವಿದ್ಯಾರ್ಥಿಗಳು ಹೇಳುತ್ತಿರುತ್ತಾರೆ. ನಮಗೆ ಇವರನ್ನು ಕಾಣಬೇಕೆಂಬ ಅಪೇಕ್ಷೆ ಇತ್ತು. ಪರಶಿವನು ತಾನಾಗಿಯೇ ಇವರನ್ನು ನಮ್ಮ ಬಳಿಗೆ ಕರೆದುತಂದಿದ್ದಾನೆ. ತುಂಬಾ ಸಂತೋಷ. ನೀವು ಎಲ್ಲಿ ವಾಸವಾಗಿದ್ದೀರಿ? ಎಂದು ಕೇಳಿದರು. ನಾನು ಕೃಷ್ಣಮೂರ್ತಿ ಪುರಂನಲ್ಲಿ ಎಂದು ಮಾತ್ರ ಉತ್ತರಿಸಿದೆ. ಆಗ ಬಸವಣ್ಣನವರು ಮಾತನ್ನು ಮುಂದುವರಿಸಿ, ಬುದ್ಧೀ, ಈಗ ಇವರು ಒಂದು ಅಪಾಯಕ್ಕೆ ಸಿಕ್ಕಿದ್ದಾರೆ. ಅವರನ್ನು ಕೆಲಸದಿಂದ ಕಿತ್ತುಹಾಕಬೇಕೆಂದು ಕುಲಪತಿಗಳು ಆಜ್ಞೆ ಮಾಡಿದ್ದಾರೆ. ನಾಳೆ ಬೆಳಗ್ಗೆ ಅವರು ಮನೆಗೆ ಹೋಗಬೇಕಾಗುತ್ತದೆ ಎಂದರು. ಇದನ್ನು ಕೇಳುತ್ತಲೇ ಸ್ವಾಮಿಗಳು ತಮಗೆ ಏನೋ ನಷ್ಟವಾದವರಂತೆ ನಿಟ್ಟುಸಿರುಬಿಟ್ಟು, ಹಾಂ! ಹಾಗೆ ಯಾಕಂತೆ? ಎಂದು ಪ್ರಶ್ನಿಸಿದರು. ಆಗ ನಾನು, ನಾನಿನ್ನೂ ಎಂ.ಎ. ಪಾಸು ಮಾಡಿಲ್ಲ. ಆದರೆ ನನಗೆ ಬಿ.ಎ. ಆನರ್ಸ್‌ನಲ್ಲಿ ಉಪಕುಲಪತಿಗಳ ಬಂಗಾರದ ಪದಕ ಬಹುಮಾನವಾಗಿ ಬಂದಿದೆ. ಇಡೀ ವಿಶ್ವವಿದ್ಯಾನಿಲಯದ ಎಲ್ಲಾ ಆನರ್ಸ್ ವಿದ್ಯಾರ್ಥಿಗಳಲ್ಲಿ ಪ್ರಪ್ರಥಮನಾದವನಿಗೆ ಆ ಬಂಗಾರದ ಪದಕ ಬರುತ್ತದೆ. ನಾನು ಅದನ್ನು ಪಡೆದಿದ್ದೇನೆ, ಅದಕ್ಕಾಗಿಯೇ ನಾನು ಕೇಳದೆಯೇ ನನಗೆ ಈ ಉದ್ಯೋಗ ದೊರೆತಿದೆ ಎಂದೆ. ಒಡನೆಯೇ ಶ್ರೀಗಳು ಸರಿ, ಹಾಗಾದರೆ ನಿಮ್ಮನ್ನು ಕಿತ್ತುಹಾಕುವುದು ಸರಿಯಲ್ಲ. ಈ ದಿನ ರಾತ್ರಿ ಹತ್ತು ಗಂಟೆಗೆ ಉಪಕುಲಪತಿಗಳ





ಬಂಗಲೆ ಬಳಿ ಬನ್ನಿ. ನಾವೇ ಖುದ್ದಾಗಿ ಕುಲಪತಿಗಳನ್ನು ಭೇಟಿ ಮಾಡಿ ಮಾತನಾಡುತ್ತೇವೆ. ನೀವೇನೂ ಹೆದರಬೇಡಿ, ನಾವು ಎಲ್ಲವನ್ನೂ ನೋಡಿಕೊಳ್ಳುತ್ತೇವೆ ಎಂದರು. ಅವರ ಮಾತನ್ನು ಕೇಳಿ ನನ್ನ ಕಣ್ಣಲ್ಲಿ ನೀರು ಉಕ್ಕಿತು. ಅವರಿಗೆ ಮತ್ತೊಮ್ಮೆ ದೀರ್ಘದಂಡ ನಮಸ್ಕಾರ ಮಾಡಿ ಮನೆಗೆ ಹಿಂದಿರುಗಿದೆ.

ಸ್ವಾಮೀಜಿಯವರ ಅಪ್ಪಣೆಯಂತೆ ನಾನು ಬಸವಣ್ಣನೊಡನೆ ಅಂದು ರಾತ್ರಿ ಹತ್ತು ಗಂಟೆಯ ವೇಳೆಗೆ ಕುಲಪತಿಗಳ ಮನೆಯ ಬಳಿಗೆ ಹೋದೆ. ಆ ವೇಳೆಗೆ ಸರಿಯಾಗಿ ಸ್ವಾಮಿಯವರು ತಮ್ಮ ಕಾರಿನಲ್ಲಿ ಅಲ್ಲಿಗೆ ಬಂದರು. ನೌಕರನೊಬ್ಬ ಸ್ವಾಮೀಜಿಯವರನ್ನು ಕಾಣುತ್ತಲೇ ಅತ್ಯಂತ ಭಕ್ತಿಗೌರವಗಳಿಂದ ನಮಸ್ಕರಿಸಿ ಅವರು ಬಂದಿರುವ ವಿಚಾರವನ್ನು ಕುಲಪತಿಯವರಿಗೆ ತಿಳಿಸಿದ. ಸ್ವಾಮೀಜಿಯವರ ಆಗಮನದ ಸುದ್ದಿ ಕೇಳುತ್ತಲೇ ಹೊರಬಂದ ಕುಲಪತಿಗಳು ಅವರಿಗೆ ನಮಸ್ಕರಿಸುತ್ತ ಸ್ವಾಗತಿಸಿ, ಒಳಗೆ ಕರೆದೊಯ್ದು ಕೂರಿಸುತ್ತ, ಸ್ವಾಮೀಜಿ, ತಾವು ಈ ಸಮಯದಲ್ಲಿ ಇಲ್ಲಿಗೆ ದಯಮಾಡಿಸಿರುವುದನ್ನು ನೋಡಿದರೆ ಯಾವುದೋ ಮಹತ್ಕಾರ್ಯವೇ ನಿಮ್ಮನ್ನು ಇಲ್ಲಿಗೆ ಕರೆತಂದಿರುವುದೆಂದು ನನಗನಿಸುತ್ತದೆ. ಏನು ವಿಚಾರವೆಂದು ಅಪ್ಪಣೆ ಕೊಡಬೇಕು ಎಂದು ಕೇಳಿದರು. ಸ್ವಾಮೀಜಿ ಮುಗುಳ್ನಗುತ್ತ, ಅಹುದು, ಬಹುಮುಖ್ಯವಾದ ಒಂದು ವಿಷಯವನ್ನು ಮಾತನಾಡಿ ವಿಶ್ವವಿದ್ಯಾಲಯಕ್ಕೆ ಆಗಬಹುದಾದ ಒಂದು ಸಣ್ಣ ನಷ್ಟವನ್ನು ತಪ್ಪಿಸಬೇಕೆಂದು ಬಂದಿದ್ದೇವೆ ಎಂದರು. ಅದೇನೆಂದು ಕುಲಪತಿಗಳು ಆಶ್ಚರ್ಯದಿಂದ ಕೇಳಿದಾಗ ಸ್ವಾಮೀಜಿಯವರು, ನಷ್ಟವಿನ್ನೂ ಆಗಿಲ್ಲ, ಆದರೆ ಹಾಗೆ ಆಗಬಹುದಾದುದನ್ನು ತಪ್ಪಿಸಲೆಂದೇ ಬಂದಿದ್ದೇವೆ ಎಂದು ಅವರು ಮುಂದುವರಿದು, ಟಿ.ಎಸ್. ಶಾಮರಾಯರೆಂಬುವರು ಅತ್ಯಂತ ದೊಡ್ಡ ವಿದ್ವಾಂಸರು, ಪ್ರತಿಭಾಶಾಲಿಗಳು, ಎಲ್ಲಕ್ಕೂ ಹೆಚ್ಚಾಗಿ ವಿದ್ಯಾರ್ಥಿಗಳ ಪ್ರೇಮಾದರಕ್ಕೆ ಪಾತ್ರರಾದವರು. ಅವರನ್ನು ಕೆಲಸದಿಂದ ವಜಾ ಮಾಡಿ ಬೇರೊಬ್ಬರನ್ನು ಆ ಸ್ಥಾನದಲ್ಲಿ ನೇಮಿಸುವಿರೆಂದು ಕೇಳಿದೆ. ಇದು ಬಹಳ ಅನ್ಯಾಯವೆಂದು ಅನಿಸುತ್ತಿದೆ. ಆದ್ದರಿಂದ ನಿಮ್ಮೊಡನೆ ಅದನ್ನು ತಿಳಿಸಲೆಂದೇ ಬಂದೆವು ಎಂದರು. ಆಗ ಕುಲಪತಿಗಳು, ಸ್ವಾಮೀಜಿ ಆತ ಬರೀ ಬಿ.ಎ. ಆನರ್ಸ್, ಎಂ.ಎ. ಅಲ್ಲ, ಪ್ರಥಮ ದರ್ಜೆಯಲ್ಲಿ ಎಂ.ಎ. ಪಾಸು ಮಾಡಿದ ವ್ಯಕ್ತಿಯೊಬ್ಬರು ಆ ಸ್ಥಾನಕ್ಕೆ ಅರ್ಜಿ ಹಾಕಿಕೊಂಡಿದ್ದಾರೆ. ನಾನು ಅವರಿಗೆ ಆ ಸ್ಥಾನವನ್ನು ಕೊಡಲು ನಿಶ್ಚಯಿಸಿದ್ದೇನೆ. ಇದರಲ್ಲಿ ಅನ್ಯಾಯವೇನು ಬಂತು? ಎಂದು ಕೇಳಿದರು. ಆಗ ಸ್ವಾಮೀಜಿಯವರು, ಎಂ.ಎ. ಮಾಡಿಲ್ಲದಿದ್ದರೂ ಎಂ.ಎ. ತರಗತಿಗೆ ಪಾಠ ಹೇಳುತ್ತಿದ್ದಾನೆ. ಆತನ ಕೆಲಸ ಮೆಚ್ಚತಕ್ಕದೆಂದು ಕನ್ನಡ ಪ್ರಾಧ್ಯಾಪಕರು ಹೇಳುವುದನ್ನು ಕೇಳಿದ್ದೇವೆ. ಪ್ರತಿಭಾಶಾಲಿ, ಪಂಡಿತ, ವಿದ್ವಾಂಸ, ಗೌರವಾನ್ವಿತ, ಶಿಷ್ಯರ ಗೌರವಕ್ಕೆ ಪಾತ್ರ ಎಂದರು. ಆಗ ಉಪಕುಲಪತಿಗಳು ಇದೇಕೆ ಆತನನ್ನು ಇಷ್ಟು ವಹಿಸಿಕೊಂಡು ಮಾತನಾಡುತ್ತಿರುವಿರಿ? ಎಂದಾಗ, ಸ್ವಾಮೀಜಿ ಯವರು ಹಾಗೇನಿಲ್ಲ,





ಇಂತಹ ಅಧ್ಯಾಪಕನನ್ನು ಕಳೆದುಕೊಂಡರೆ ವಿಶ್ವವಿದ್ಯಾನಿಲಯಕ್ಕೇ ನಷ್ಟವೆಂದು ನಮ್ಮ ಭಾವನೆ. ಇದರ ಮೇಲೆ ನಿಮ್ಮ ಇಷ್ಟ ಎಂದರು. ಒಡನೆಯೇ ಕುಲಪತಿಗಳು, ಸ್ವಾಮೀಜಿ, ನನ್ನನ್ನು ಕ್ಷಮಿಸಿ, ನಿಮ್ಮ ಅಪ್ಪಣೆಯನ್ನು ಅಗತ್ಯವಾಗಿ ಪಾಲಿಸುತ್ತೇನೆ. ಶಾಮರಾಯರನ್ನು ಕೆಲಸದಿಂದ ತೆಗೆದುಹಾಕುವುದಿಲ್ಲ ಎಂದರು. ಅದಕ್ಕೆ ಸ್ವಾಮೀಜಿಯವರು ಮೃದುವಾಗಿ, ಅದು ನ್ಯಾಯವಾಗುತ್ತದೆ, ಧರ್ಮಸಮ್ಮತ, ಹಾಗೆ ಮಾಡಿದರೆ ದೇವರು ಮೆಚ್ಚುತ್ತಾನೆ ಎಂದು ಹೇಳಿ ಅಲ್ಲಿಂದ ಬೀಳ್ಕೊಂಡರು. ಒಳಗೆ ನಡೆದ ಸಂಭಾಷಣೆಯನ್ನು ನಾವು ಕೇಳಿದೆವಾದರೂ ಸ್ವಾಮೀಜಿಯವರು ನನ್ನನ್ನು ಕುರಿತು, ಎಲ್ಲವೂ ಸರಿಹೋಗಿದೆ ನಾಳೆ ನಿಮಗೆ ಕರೆ ಬರಬಹುದು, ವಿಶ್ವವಿದ್ಯಾನಿಲಯ ದಿಂದ. ಧೈರ್ಯವಾಗಿ ನೀವು ಇರುವ ವಿಚಾರವನ್ನು ತಿಳಿಸಿರಿ ಎಂದು ಹೇಳಿ ತಮ್ಮ ಆಶ್ರಮಕ್ಕೆ ಹಿಂದಿರುಗಿದರು. ನಾನು, ಬಸವಣ್ಣನವರು ಸಮಾಧಾನಚಿತ್ತದಿಂದ ನಮ್ಮ ನಮ್ಮ ಮನೆಗೆ ಹಿಂದಿರುಗಿದೆವು.

ಸ್ವಾಮೀಜಿ ತಿಳಿಸಿದಂತೆ ಮರುದಿನ ಹನ್ನೊಂದು ಗಂಟೆಗೆ ವಿಶ್ವವಿದ್ಯಾನಿಲಯದ ಕುಲಪತಿಗಳಿಂದ ನನಗೆ ಕರೆ ಬಂತು. ಅವರು ಕೇಳಿದರು, ನೀನೇಕೆ ಇನ್ನೂ ಎಂ.ಎ. ಪಾಸು ಮಾಡಿಲ್ಲ? ನೀನು ಹೀಗೆ ಇದ್ದರೆ ಒಂದಲ್ಲ ಒಂದು ದಿನ ಮನೆಗೆ ಹೋಗಬೇಕಾಗುತ್ತದೆ ಎಂದು ಅಬ್ಬರಿಸಿದರು. ನಾನು ನಮ್ರನಾಗಿ, ಆದಷ್ಟು ಬೇಗ ಎಂ.ಎ. ಡಿಗ್ರಿ ತೆಗೆದುಕೊಳ್ಳುತ್ತೇನೆ ಎಂದು ಅವರಿಗೆ ಭರವಸೆ ಹೇಳಿ ಹಿಂತಿರುಗಿದೆ. ಹೀಗೆ ನನ್ನ ಉದ್ಯೋಗಕ್ಕಿದ್ದ ಒಂದು ಅಪಮೃತ್ಯು ಶ್ರೀ ಸ್ವಾಮೀಜಿ ಯವರ ಕೃಪೆಯಿಂದ ತಪ್ಪಿದಂತಾಯಿತು. ಆದರೆ, ಸಾಕ್ಷಾತ್ ಶಿವನಂತೆಯೇ ಬಂದು ಆ ಅಪಮೃತ್ಯುವನ್ನು ಶ್ರೀ ಶಿವರಾತ್ರಿ ರಾಜೇಂದ್ರಸ್ವಾಮಿಗಳವರು ದೂರ ತಳ್ಳದೇ ಹೋಗಿದ್ದರೆ ಆ ಅಪಮೃತ್ಯು ನನ್ನ ಕೆಲಸವನ್ನು ಕಸಿದುಕೊಂಡು ಹೋಗದೇ ಬಿಡುತ್ತಿರಲಿಲ್ಲ!

ಮೇಲೆ ತಿಳಿಸಿದ ಘಟನೆಯ ನಂತರ ನಾನು ಆಗಾಗ ಅವರನ್ನು ಕಾಣಲು ಹೋಗುತ್ತಿದ್ದೆ. ಇದರಿಂದ ನನ್ನ ಮತ್ತು ಅವರ ಆತ್ಮೀಯತೆ ಬೆಳೆಯುತ್ತಾ ಹೋಗುತ್ತಿತ್ತು. ಒಮ್ಮೆ ಅವರೊಡನೆ ಮಾತನಾಡುತ್ತಾ ಕುಳಿತಿದ್ದಾಗ ಅವರು ರಾಯರೇ, ಮುಂದಿನ ವಾರ ಸುತ್ತೂರಿನಲ್ಲಿ ನಮ್ಮ ಗುರುಗಳ ವಾರ್ಷಿಕೋತ್ಸವವಿದೆ. ನೀವು ಅದರಲ್ಲಿ ಭಾಗವಹಿಸಿ ಅಲ್ಲಿಯೇ ಪ್ರಸಾದವನ್ನು ಸ್ವೀಕರಿಸಿ ಬರಬಹುದಲ್ಲಾ? ಎಂದರು. ಆಗ ನಾನು ಸುತ್ತೂರನ್ನು ನೋಡಿಲ್ಲ. ಅಲ್ಲಿಗೆ ಹೇಗೆ ಬರಬೇಕೋ ನಾನರಿಯೆ. ಅಲ್ಲಿಗೆ ಬಸ್ಸು ಹೋಗುತ್ತದೆಯೇ? ಎಂದು ಕೇಳಿದೆ. ಅವರು ಮುಗುಳ್ನಗುತ್ತ, ರಾಯರೇ, ನೀವೇನೂ ಯೋಚಿಸಬೇಡಿ, ಆ ದಿನ ಬೆಳಗ್ಗೆ ಏಳು ಗಂಟೆಗೆ ಸರಿಯಾಗಿ ಕಾರು ಬಂದು ನಿಮ್ಮ ಮನೆಯ ಮುಂದೆ ನಿಲ್ಲುತ್ತದೆ. ನೀವು ಪ್ರಯಾಣಕ್ಕೆ ಸಿದ್ಧರಾಗಿರಬೇಕು ಎಂದು ನಗುತ್ತ ನುಡಿದರು. ನಾನು ಸಂತೋಷದಿಂದ ನನ್ನ ಒಪ್ಪಿಗೆಯನ್ನು ನೀಡಿದೆ. ಮತ್ತೆ, ಆ ದಿನ ನಾನು ಸಿದ್ಧನಾಗಿ ಕುಳಿತಿದ್ದೆ. ಮೈಸೂರು ವಿಶ್ವವಿದ್ಯಾನಿಲಯದ





ಸುಪ್ರಸಿದ್ಧ ಪ್ರಾಧ್ಯಾಪಕರಾದ ಡಿಸೋಜರವರು ತಮ್ಮ ಪತ್ನಿಯೊಡನೆ ಕಾರಿನಲ್ಲಿ ನನ್ನ ಮನೆಯ ಮುಂದೆ ನಿಂತು 'ಶಾಮರಾವ್' ಎಂದು ಕೂಗುಹಾಕಿದರು. ನಾನು ಅವರನ್ನು ಆತ್ಮೀಯತೆ ಯಿಂದ ಮನೆಯೊಳಕ್ಕೆ ಆಹ್ವಾನಿಸಿ, ಕಾಫಿಯನ್ನಿತ್ತು ಅವರು ಅದನ್ನು ಸವಿಯುತ್ತಾ ರಾಯರೇ, ಸುತ್ತೂರು ಸ್ವಾಮಿಗಳು ನಿಮ್ಮನ್ನು ಸುತ್ತೂರಿಗೆ ಕರೆತರುವಂತೆ ನನಗೆ ಆಜ್ಞಾಪಿಸಿದ್ದಾರೆ, ಬನ್ನಿ ಹೋಗೋಣ ಎಂದರು. ಅದಕ್ಕಾಗಿಯೇ ಸಿದ್ಧನಾಗಿ ಕುಳಿತಿದ್ದ ನಾನು ಅವರೊಡನೆ ಹೊರಟು ಸುಮಾರು ಒಂಬತ್ತು ಗಂಟೆಯ ವೇಳೆಗೆ ಸುತ್ತೂರನ್ನು ಸೇರಿದೆ. ಅಲ್ಲಿನ ಮಠದಲ್ಲಿ ಅಂದು ಎಲ್ಲಿಲ್ಲದ ಭಕ್ತಿಯ ಸಂಭ್ರಮ. ನಾನು ಭಕ್ತಿಯಿಂದ ಅಲ್ಲಿನ ಮೂಲ ಗದ್ದುಗೆಗೆ ನಮಸ್ಕರಿಸಿ ಇತರರ ಸಡಗರದಲ್ಲಿ ನಾನೂ ಪಾಲ್ಗೊಂಡೆ. ಮಧ್ಯಾಹ್ನ ಹನ್ನೆರಡು ಗಂಟೆಗೆ ರುಚಿಭರಿತ ಪ್ರಸಾದವನ್ನು ಸೇವಿಸಿ, ಕೆಲಹೊತ್ತು ಅಲ್ಲಿ ಸೇರಿದ್ದವ ರೊಡನೆ ಅವರಲ್ಲಿ ವಿಶ್ವವಿದ್ಯಾ ನಿಲಯದ ಅಧಿಕಾರವರ್ಗ ಸಾಕಷ್ಟಿತ್ತು. ಲೋಕಾಭಿರಾಮವಾಗಿ ಮಾತನಾಡುತ್ತಾ ಹೋದ ಕಾರಿನಲ್ಲಿಯೇ ಮೈಸೂರಿಗೆ ನನ್ನ ಮನೆಗೆ ಹಿಂದಿರುಗಿದೆ. ಈ ಪದ್ಧತಿ ಹಲವು ವರ್ಷಗಳವರೆಗೆ ನಡೆಯಿತು. ಈಗ ನಿಶ್ಶಕ್ತಿ, ಕರೆದರೂ ಹೋಗುವ ಸ್ಥಿತಿ ನನಗಿಲ್ಲ. ಆದರೆ ನಾನು ಹಾಗೆ ಅಲ್ಲಿಗೆ ಹೋದಾಗಲೆಲ್ಲಾ ಶ್ರೀಗಳವರು ಒಬ್ಬ ಸಾಮಾನ್ಯ ವಿದ್ವಾಂಸನಾದ ನನಗೆ ತೋರುತ್ತಿದ್ದ ಪ್ರೀತ್ಯಾದರಗಳನ್ನು ನೆನೆದರೆ ಅವರ ವಿದ್ವತ್‌ಪ್ರೇಮ ಅಸೀಮವಾದುದು ಎಂದೆನಿಸುತ್ತದೆ.

ಶ್ರೀಗಳವರಿಗೆ ನನ್ನಲ್ಲಿ ಅತ್ಯಂತ ಹೆಚ್ಚಿನ ಪ್ರೀತ್ಯಾದರಗಳಿದ್ದು ವೆಂದು ನನ್ನ ಭಾವನೆ. ಇದು ಸತ್ಯವೆಂದು ತೋರುವ ಕೆಲವು ಘಟನೆಗಳು ನಡೆದಿವೆ. ನಾನು ನಿತ್ಯವೂ ಸಂಜೆಯ ವೇಳೆ ಕುಕ್ಕರಹಳ್ಳಿ ಕೆರೆಯ ಕಡೆ ನನ್ನ ವಿದ್ಯಾರ್ಥಿಮಿತ್ರರೊಡನೆ ಕಾಲಾಡಿಸಲು ಹೋಗುವ ಪದ್ಧತಿ. ಶ್ರೀ ಸ್ವಾಮೀಜಿಯವರೂ ಆ ದಿನ ತಮ್ಮ ಒಬ್ಬ ಶಿಷ್ಯರೊಡನೆ ಸಂಜೆಯ ವಾಯುಸೇವನೆಗೆಂದು ಅಲ್ಲಿಗೆ ಬಂದಿದ್ದರು. ಆದರೆ ಅವರನ್ನು ಕಂಡ ನಾನು ಅವರ ಸಮೀಪಕ್ಕೆ ಹೋದೆನೊ ಅಥವಾ ಅವರೇ ನನ್ನನ್ನು ಕಂಡು, ರಾಯರೇ ಕ್ಷೇಮವೆ? ಎಂದು ನನ್ನನ್ನು ಸಮೀಪಿಸಿದರೊ ಹೇಳುವುದು ಕಷ್ಟ! ಅವರದು ಅಂತಹ ವಿದ್ವತ್ಪ್ರೇಮ. ಇದು ಹಾಗಿರಲಿ. ಈಗ್ಗೆ ಸುಮಾರು ಇಪ್ಪತ್ತು ವರ್ಷಗಳ ಹಿಂದೆ ನಡೆದ ಒಂದು ಪುಟ್ಟ ಘಟನೆ ನನ್ನ ಹೃದಯದಲ್ಲಿ ಚಿರಸ್ಥಾಯಿಯಾಗಿ ನೆಲೆಸಿದೆ. ಒಂದು ದಿನ ಆ ದಿನವೇ ನನ್ನ ಬಾಳಿನ ಸುದಿನ. ಮಧ್ಯಾಹ್ನ ಸುಮಾರು ಒಂದು ಗಂಟೆಯ ಸಮಯ. ನಾನು ಊಟಕ್ಕಾಗಿ ಏಳುವ ಮುನ್ನ ಬಾಗಿಲನ್ನು ಮುಂದೆ ಮಾಡಲೆಂದು ಹೆಜ್ಜೆ ಇಟ್ಟಿದ್ದೆ. ಓ! ಇದೇನಾಶ್ಚರ್ಯ! ಸ್ವಾಮೀಜಿಯವರು ನನ್ನ ಮನೆಯೊಳಗೆ ತಮ್ಮ ಒಬ್ಬರು ಶಿಷ್ಯರೊಡನೆ! ನಾನು ಅಚ್ಚರಿಯಿಂದ ಸ್ತಂಭೀಭೂತನಾದೆ. ನನ್ನ ಕಣ್ಣುಗಳನ್ನು ನಾನೇ ನಂಬದಾದೆ. ಆಹ್ವಾನಿಸಿದರೂ ಬರಲಾರರೆಂದು ಭಾವಿಸಿದ್ದ ಪೂಜ್ಯ ಶ್ರೀಗಳು ಆಹ್ವಾನವಿಲ್ಲದೆಯೇ ನನ್ನ ಮನೆಗೆ ಆಗಮಿಸಿದರೆಂದರೆ ಅದು ಒಂದು ಪವಾಡವೇ ಸರಿ. ನಮಸ್ಕರಿಸಿ ತೊದಲುತ್ತ, ಸ್ವಾಮೀಜಿ, ಇದೇನು ನಿಮ್ಮ ಕರುಣೆ!? ನಾನು ಧನ್ಯ. ತಮ್ಮ





ಪಾದಧೂಳಿಯಿಂದ ನನ್ನ ಮನ, ಮನೆಗಳು ಪವಿತ್ರವಾದವು ಎಂದೆ. ಸ್ವಾಮೀಜಿ ಕಿರುನಗೆ ನಗುತ್ತ, ರಾಯರೆ, ಇಲ್ಲಿ ಯಾರೋ ಭಕ್ತರ ಮನೆಗೆ ಆಹ್ವಾನಿತರಾಗಿ ಬಂದಿದ್ದೆವು. ಹಿಂದಿರುಗುವಾಗ ನಿಮ್ಮ ಹೆಸರಿನ ಹಲಗೆ ಕಣ್ಣಿಗೆ ಬಿತ್ತು. ನಿಮ್ಮನ್ನು ಮಾತನಾಡಿಸಿ ಹೋಗುವಾ ಎಂದು ಬಂದೆವು. ಒಳಗೆ ಬರಬಹುದೇ ಎಂದು ನಕ್ಕರು. ಅದಕ್ಕೆ ನಾನು ಅಪರಿಮಿತ ಸಂತೋಷ ದಿಂದ ಮತ್ತೊಮ್ಮೆ ಅವರಿಗೆ ನಮಸ್ಕರಿಸಿ, ಮನೆಯವರೆಲ್ಲ ರಿಗೂ ನಮಸ್ಕರಿಸುವಂತೆ ಸೂಚಿಸಿ ಅವರನ್ನು ಒಳಕ್ಕೆ ಕರೆದೊಯ್ದು ಆಸೀನ ರಾಗಬೇಕೆಂದು ಪ್ರಾರ್ಥಿಸಿದೆ. ಅನಂತರ ಬೆಳ್ಳಿಯ ತಟ್ಟೆಯೊಂದರಲ್ಲಿ ತೆಂಗಿನಕಾಯಿಯನ್ನು, ಐವತ್ತು ರೂಪಾಯಿಗಳ ದಕ್ಷಿಣೆಯನ್ನೂ ಸ್ವಾಮೀಜಿ ಯವರ ಪಾದಕ್ಕೆ ಒಪ್ಪಿಸಿದೆ. ಸ್ವಾಮೀಜಿಯವರು ಪ್ರೀತಿಯಿಂದ ಅದನ್ನು ಸ್ವೀಕರಿಸಿದರು. ಇದಲ್ಲವೆ ನಮ್ಮ ಭಾಗ್ಯ! ಆ ದಿನ ನಮ್ಮ ಮನೆಯಲ್ಲಿ ಭಕ್ತಿಯ ಹೊಳೆಯೇ ಹರಿಯಿತೆನ್ನಬಹುದು.

ನಾನು ಮೈಸೂರಿನಲ್ಲಿರುವ ಸುತ್ತೂರು ಮಠಕ್ಕೆ ಎಷ್ಟು ಸಾರಿ ಹೋಗಿದ್ದೇನೋ ನನಗೆ ಗೊತ್ತಿಲ್ಲ. ಎಷ್ಟೋ ಸಲ ಭಾಷಣಕ್ಕಾಗಿ, ಸ್ವಾಮಿಗಳನ್ನು ಕಾಣುವುದಕ್ಕಾಗಿ ಹೋಗಿದ್ದೇನೆ. ಪ್ರತಿಯೊಂದು ಸಲವೂ ಅತ್ಯಂತ ಸಂತೋಷದಿಂದ ಹಿಂದಿರುಗಿದ್ದೇನೆ. ಬಹಳ ಹಿಂದೆ, ನಾನು 'ಶಿವಶರಣ ಕಥಾರತ್ನಕೋಶ'ವನ್ನು ಬರೆದು ಪ್ರಕಟಿಸಿದಾಗ ಅದರ ಮೊಟ್ಟಮೊದಲ ಪ್ರತಿಯನ್ನು ಶ್ರೀ ಸ್ವಾಮೀಜಿಯವರಿಗೆ ಒಪ್ಪಿಸಿದೆ. ಸ್ವಾಮೀಜಿ ಪುಸ್ತಕದ ಗಾತ್ರವನ್ನು ಕಂಡು ಚಕಿತಗೊಂಡರು. ಸಂಸ್ಥೆ ಯೊಂದು ಹಲವು ಜನರ ಸಹಾಯ, ಸಹಕಾರಗಳಿಂದ ಮುಗಿಸಬಹು ದಾದ ಈ ಬೃಹತ್ಕಾರ್ಯವನ್ನು ನೀವೊಬ್ಬರೇ ಮಾಡಿ ಮುಗಿಸಿದ್ದೀರಿ. ನಿಮಗೆ ಎಷ್ಟು ಅಭಿನಂದನೆಗಳನ್ನು ಸಲ್ಲಿಸಿದರೂ ಅಲ್ಪವೇ, ನಮ್ಮ ಹೃತ್ಪೂರ್ವಕವಾದ ಅಭಿನಂದನೆಗಳು, ನಿಮಗೆ! ಎಂದು ಹೇಳಿ ಮೂರು ದಿನಗಳಲ್ಲಿ ಆ ಗ್ರಂಥವನ್ನು ಓದಿ ನನ್ನೊಡನೆ ತಮ್ಮ ಅಭಿಪ್ರಾಯವನ್ನು ತಿಳಿಸುವುದಾಗಿ ಹೇಳಿದರು. ಮೂರು ದಿನಗಳ ಮೇಲೆ ಹೋಗಿ ಕಂಡಾಗ ಅವರು ಮುಗುಳ್ನಗುತ್ತಾ, ಇದು ಚೊಕ್ಕ ಬಂಗಾರ, ಎರಡು ಮೂರು ಕಡೆ ಸ್ವಲ್ಪ ಕಿಲುಬು ಸೇರಿಕೊಂಡಿದೆ. ಅದನ್ನು ಸರಿಪಡಿಸಬೇಕು ಎಂದರು. ಆದರೆ ಆ ಕಿಲುಬು ಏನೆಂದು ಅವರು ಸ್ಪಷ್ಟಪಡಿಸಲಿಲ್ಲ. "ಹೇಳುತ್ತೇವೆ, ಹೇಳುತ್ತೇವೆ" ಎಂದು ಹೇಳುತ್ತಲೇ ಕಾಲವನ್ನು ನೂಕಿದರು. ಹೀಗೇಕೆ ಮಾಡಿದರೆಂದು ನನಗೆ ಇಂದಿಗೂ ಹೊಳೆಯುತ್ತಿಲ್ಲ. ಇದಾದ ಕೆಲವು ದಿನಗಳಲ್ಲಿಯೇ ನಾನು ಮೈಸೂರನ್ನು ಬಿಟ್ಟು ಹತ್ತು ವರ್ಷಗಳ ಕಾಲ ಗುಬ್ಬಿಗೆ ಹೋಗಿ ನೆಲೆಸಬೇಕಾಯಿತು. ನಾನು ಪುನಃ ಬರುವ ವೇಳೆಗೆ ಅವರು ಲಿಂಗೈಕ್ಯರಾಗಿದ್ದರು. ನನ್ನ ದುರದೃಷ್ಟಕ್ಕಾಗಿ ನನ್ನನ್ನು ನಾನೇ ಹಳಿದುಕೊಂಡೆ. ನನಗೆ ದೊರಕಿದ್ದ ಭಾಗ್ಯ ಮಧ್ಯ ದಲ್ಲಿಯೇ ಕೈಜಾರಿತ್ತು. ಇನ್ನು ಮುಂದೆ 'ಸಂಕಟ ಬಂದರೆ ವೆಂಕಟ ರಮಣ' ಎಂದು ಯಾರನ್ನು ಕೂಗಲಿ? ಇದೇನೇ ಇರಲಿ, 'ಶಿವಶರಣ ಕಥಾರತ್ನಕೋಶ'ದಲ್ಲಿ ಸೇರಿಕೊಂಡಿರುವ ಕಿಲುಬು ಏನೆಂದು ಹೇಳುವು ದಾಗಿ ಅವರು ಹಲವು ಸಾರಿ ತಿಳಿಸಿದರೂ ಹೇಳದಿದ್ದುದು ನನಗೆ ಇಂದಿಗೂ ಒಂದು ಒಗಟೆ!

**ಕೃಪೆ : ಘನ–ಮನ**





# ಮಾನವಮುಖಿಯಾದ ದೈವತ್ವ

ಡಾ. ಪ್ರಭುಶಂಕರ

**ಕೆ**ಲವರ ಮೂರ್ತಿ ಜೀವನದುದ್ದಕ್ಕೂ ನಮ್ಮ ಹೃದಯಮಂದಿರ ದಲ್ಲಿ ಚಿರಂತನವಾಗಿ, ದಶಕಗಳ ಕಾಲ, ನಂದಾದೀಪದಂತೆ ಬೆಳಕನ್ನು ಚೆಲ್ಲುತ್ತಾ ಉಳಿದಿರುತ್ತದೆ. ಮರ ಗಿಡ ಬಳ್ಳಿಗಳಿಲ್ಲದ ಕಡೆಯಲ್ಲೂ ಇದ್ದಕ್ಕಿದ್ದಂತೆ ಹೊಮ್ಮುವ ಮಲ್ಲಿಗೆಯ ಕಂಪಿನಂತೆ ಅವರ ಉಸಿರು ನಮ್ಮ ಉಸಿರಾಗುತ್ತದೆ. ಬದುಕಿನ ಯಾವುದೋ ಜಂಜಾಟದಿಂದ ನಮ್ಮ ಶ್ವಾಸೋಚ್ಛ್ವಾಸ ನಿಂತೇಹೋಯಿತು ಎಂದಾಗ ಅವರ ಅಸ್ತಿತ್ವ ನಮಗೆ ಆಮ್ಲಜನಕವಾಗಿ ಜೀವದಾನ ಮಾಡುತ್ತದೆ. ಅವರ ಔದಾರ್ಯ ನಮ್ಮ ಕಡುಲೋಭಿತನವನ್ನು ಕುಟ್ಟಿ ಪುಡಿ ಪುಡಿ ಮಾಡಿ ಅದನ್ನು ದಾನಧರ್ಮಗಳಿಗೆ ಒದಗುವ ವಜ್ರವೈಡೂರ್ಯವನ್ನಾಗಿಸುತ್ತದೆ. ದೇವಮನೋಹರವಾದವರ ಮಂದಹಾಸ ಲೌಕಿಕವಾದ ಹಿಂಸೆ, ನೋವುಗಳಿಂದ ರಕ್ತ ಸುರಿಸುವ ನಮ್ಮ ಹೃದಯ ಹಾಲು ಚೆಲ್ಲುವಂತೆ ಮಾಡುತ್ತದೆ. ಅಂಥವರು ನಮ್ಮ ಅಭವ ಬಂಧುಗಳು, ಬಾಳಿಗೊಂದು ನಂಬಿಕೆಯನ್ನು ನೀಡುವಂಥವರು; ಬಾಳಿನ ನೌಕೆಯನ್ನು ಮುಳುಗಿಸಲು ಬಂದ ಬಿರುಗಾಳಿಯನ್ನು ತಮ್ಮ ಶಿವತ್ವದಿಂದ ತಂಗಾಳಿಯನ್ನಾಗಿ ಮಾಡುವಂಥವರು. ಹೀಗೆ ನನಗೆ ಆತ್ಮೀಯರಾದವರಲ್ಲಿ ಪೂಜ್ಯಶ್ರೀ ರಾಜೇಂದ್ರ ಸ್ವಾಮಿಗಳು ಒಬ್ಬರು.

ಹಾಗೆ ನೋಡಿದರೆ ನನಗೂ ಅವರಿಗೂ ಕೊಡುವ-ಪಡೆಯುವ ಯಾವ ಸಂಬಂಧವೂ ಇಲ್ಲ. ಮಹಾರಾಜ ಕಾಲೇಜಿನಲ್ಲಿ ಮೊದಲ ವರ್ಷದ ಬಿ.ಎ. ಆನರ್ಸ್‌ಗೆ ಸೇರಿದ ನಾನು ಊಟ-ವಸತಿಗಳ ವಿಷಯಕ್ಕೆ ಏನು ಮಾಡುವುದು ಎಂದು ತಿಳಿಯದೆ ಅವರಲ್ಲಿಗೆ ನಾಲ್ಕಾರು ಬಾರಿ ಹೋಗಿದ್ದು ಉಂಟು. ಯಾವ ಉಂಟು–ಇಲ್ಲಗಳನ್ನೂ ನಿರ್ದಿಷ್ಟವಾಗಿ ಹೇಳದೆ ಮತ್ತೆ ಮತ್ತೆ ಅವರು ಓಡಾಡಿಸಿದಾಗ ನಾನು ಬೇಸರಪಟ್ಟು ಕೊಂಡದ್ದೂ ಹೌದು. ಆದರೆ ಅವರು ಹಾಗೆ ಮಾಡುತ್ತಿದ್ದದ್ದು ನಿಜವಾಗಿಯೂ ಅನ್ನ-ವಸತಿಗಳ ಅವಶ್ಯಕತೆ ಇರುವ ವ್ಯಕ್ತಿಗಳನ್ನು ಕಂಡುಹಿಡಿಯುವುದಕ್ಕಾಗಿ ಎಂಬುದನ್ನು ಅನೇಕ ವರ್ಷಗಳ ಅನಂತರ ಅವರ ಜೀವನವನ್ನು ವ್ಯಾಖ್ಯಾನಿಸಿದ ಡಾ. ತಿಪ್ಪೇರುದ್ರಸ್ವಾಮಿ ಯವರಿಂದ ತಿಳಿದು ನನಗಾದ ಭ್ರಾಂತಿ ದೊಡ್ಡ ಪ್ರಮಾಣದ್ದು.





ನಾನೇನೋ ನನ್ನ ದೊಡ್ಡಪ್ಪನವರ ಆರ್ಥಿಕ ನೆರವಿನಿಂದ ಮಹಾರಾಜ ಕಾಲೇಜು ಹಾಸ್ಟೆಲಿನಲ್ಲಿ ನೆಮ್ಮದಿಯಿಂದ ಕಾಲ ಕಳೆದೆ. ನನಗೆ ಸೀಟು ಕೊಡದೆ ಸ್ವಾಮೀಜಿ ದೊಡ್ಡ ಉಪಕಾರವನ್ನೇ ಮಾಡಿದರು. ಆದರೂ ರಾಜೇಂದ್ರ ಸ್ವಾಮಿಯವರ ದಾಸೋಹಕಾರ್ಯವನ್ನು, ಸಹಸ್ರಾರು ಸಹಸ್ರಾರು ವಿದ್ಯಾರ್ಥಿಗಳ ಜೀವನ ಅವರಿಂದ ರೂಪು ಗೊಂಡದ್ದನ್ನು ಹತ್ತಿರದಿಂದ ಅಧ್ಯಯನ ಮಾಡುವ ನನ್ನ ಕುತೂಹಲ ದಣಿವನ್ನೇ ಕಾಣದೇ ಹೋಯಿತು. ನನಗೆ ತೀರ ಆಪ್ತರಾದ ಡಾ. ಜಿ.ಎಸ್. ಶಿವರುದ್ರಪ್ಪ, ಡಾ. ಎಂ. ಚಿದಾನಂದಮೂರ್ತಿ, ಡಾ. ಡಿ.ಎಂ. ನಂಜುಂಡಪ್ಪ ಮುಂತಾದ ಪ್ರತಿಭಾಶಾಲಿಗಳು ಸ್ವಾಮೀಜಿ ಯವರ ಕೃಪಾಹಸ್ತದ ನೆರಳಿನಲ್ಲಿ ಬಾಳಿ, ಅವರ ಔದಾರ್ಯದ ತಂಬಿಸಿಲಿನಲ್ಲಿ ಅರಳಿ, ನಮ್ಮ ಸಾರಸ್ವತ, ಬೌದ್ಧಿಕ ವಲಯಗಳನ್ನು ಬೆಳಗದೆ ಹೋಗಿದ್ದರೆ ಆಗುತ್ತಿದ್ದ ಅಪಾರವಾದ ನಷ್ಟವನ್ನು ನೆನೆದು ನನ್ನ ಹೃದಯ ಈಗಲೂ ಮೆಲ್ಲನೆ ಕಂಪಿಸುತ್ತದೆ. ಈ ದೃಷ್ಟಿಯಿಂದ ರಾಜೇಂದ್ರ ಸ್ವಾಮೀಜಿಯವರದ್ದು ಲೋಕದ ದುಃಖದುಮ್ಮಾನಗಳಿಗೆ ಸ್ಪಂದಿಸದ ಅಲಿಪ್ತ, ನೀರಸ, ನಿರ್ಜೀವ ವೈರಾಗ್ಯವಲ್ಲ. ಸದಾ ಲೋಕಾನುಕಂಪೆಯಿಂದ ಅನ್ಯರಿಗಾಗಿಯೇ ಮಿಡಿಯುವ, ಯಾರನ್ನು ಅಥವಾ ಯಾವುದನ್ನು ಪರಮರಸ ಎಂದು ಕರೆಯುತ್ತೇವೆಯೋ ಆ ಪರಮ ಕರುಣಾರಸದಿಂದ ಆರ್ದ್ರವಾದ, ಜೀವಮುಖಿಯಾದ ವೈರಾಗ್ಯ.

ಶ್ರೀ ಕುವೆಂಪುರವರನ್ನು ಬಿಟ್ಟರೆ ಮಹಾರಾಜ ಕಾಲೇಜಿನಲ್ಲಿ ನನಗೆ ತುಂಬ ಆತ್ಮೀಯರಾದ ಗುರುಗಳೆಂದರೆ ಶ್ರೀ ತ.ಸು. ಶಾಮರಾಯರು. ರಾಜೇಂದ್ರ ಸ್ವಾಮಿಗಳು ಅವರಿಗೆ ಮಾಡಿದ ಉಪಕಾರವನ್ನು, ಹೊತ್ತಲ್ಲದ ಹೊತ್ತಿನಲ್ಲಿ ಅವರನ್ನು ವೈಸ್‌ಛಾನ್ಸಲರ್ ಬಂಗಲೆಗೆ ಕರೆದೊಯ್ದು ಅವರ ಉದ್ಯೋಗವನ್ನು ಉಳಿಸಿಕೊಟ್ಟು ಅವರ ಬಾಳಿಗೆ ದಿಕ್ಕಾದುದನ್ನು ಶಾಮರಾಯರು ಎಷ್ಟೋ ಸಲ ಗದ್ಗದ ಧ್ವನಿಯಲ್ಲಿ ನನಗೆ ನಿರೂಪಿಸಿದ್ದಾರೆ.

ನನಗೆ ಆಪ್ತಮಿತ್ರರಾದ ಕೆ.ಸಿ. ಶಿವಪ್ಪ ಬೆಂಗಳೂರಿನಲ್ಲಿ ಇಂಜಿನಿಯರಿಂಗ್ ಶಿಕ್ಷಣ ಬಿಟ್ಟು ಮತ್ತೆ ಮೈಸೂರಿಗೆ ಬಂದು, ಮಹಾರಾಜ ಕಾಲೇಜಿನಲ್ಲಿ ಮೊದಲೇ ಕೊಟ್ಟಿದ್ದ ಬಿಎಸ್‌ಸಿ ಆನರ್ಸ್ ಸೀಟು ಕೈತಪ್ಪಿಹೋಗಿ, ಒಂದು ವರ್ಷದ ಉನ್ನತ ವಿದ್ಯಾಭ್ಯಾಸದ ಅವಕಾಶವನ್ನು ಕಳೆದುಕೊಳ್ಳುವುದರಲ್ಲಿದ್ದರು. ಆಗ ಪೂಜ್ಯ ಶ್ರೀಗಳವರು ಅವರನ್ನು ವೈಸ್‌ಛಾನ್ಸಲರ್ ಅವರ ಮನೆಗೆ ಕರೆದೊಯ್ದರು, ತೊಂದರೆಯನ್ನು ತಿಳಿಸಿದರು. ಆ ಮಹನೀಯರು ಅನುಕೂಲವನ್ನು ಕಲ್ಪಿಸಿ ಈತ ಒಂದು ವರ್ಷ ಕಳೆದುಕೊಳ್ಳದಂತೆ ಮಾಡಿದರು. ಸ್ವಾಮೀಜಿಯವರ ಅಂತಃ ಕರಣಪೂರಿತ ಸಕಾಲಿಕ ನೆರವು ಇಂತಹ ನೂರಾರು ಉಪಕಾರಗಳಿಗೆ ಕಾರಣವಾದುದನ್ನು ನೆನೆಯುತ್ತಲೇ ನಾನು ಅನೇಕ ಬಾರಿ ರೋಮಾಂಚನವನ್ನು ಅನುಭವಿಸಿದ್ದೇನೆ.





ಶ್ರೀ ರಾಜೇಂದ್ರ ಸ್ವಾಮಿಗಳಿಗೂ ನನಗೂ ಆತ್ಮೀಯತೆ ಬೆಳೆದದ್ದು ಹೇಗೆ ಎಂಬುದನ್ನು ನೆನಪು ಮಾಡಿಕೊಳ್ಳುತ್ತಿದ್ದೇನೆ. ನಮ್ಮ ಮೊದಲ ಮಗಳು ನಿವೇದಿತಾ ಹುಟ್ಟಿದಾಗ, ಅವಳು ಎರಡು ತಿಂಗಳ ಮಗುವಾಗಿದ್ದಾಗ, ಅವಳನ್ನು ತೋರಿಸಲೆಂದು ನಾನು ಮತ್ತು ನನ್ನ ಶ್ರೀಮತಿ ಡಾ. ಶಾಂತಾ ಅವರ ಬಳಿಗೆ ಹೋದೆವು. ಆಗ ಸ್ವಾಮೀಜಿ ಇದ್ದದ್ದು ಮಠ ಎಂದು ಕರೆಯಲಾಗದ ಹಳೆಯ ಮನೆಯಲ್ಲಿ. ಸ್ವಾಮೀಜಿ ಹೃದಯತುಂಬಿ ಮಗುವನ್ನು ಆಶೀರ್ವದಿಸಿದ್ದು ಮಾತ್ರವಲ್ಲ, ನಮ್ಮ ಮೂವರನ್ನು ಅಲ್ಲೇ ಇನ್ನೊಂದು ಕೊಠಡಿಗೆ ಕರೆದೊಯ್ದರು. ಅಲ್ಲಿ ಮಂತ್ರಮಹರ್ಷಿಗಳು ಎಂದು ನಿರ್ದೇಶಿಸಲ್ಪಡುತ್ತಿದ್ದ ಹಿರಿಯ ಶಿವರಾತ್ರಿ ಸ್ವಾಮಿಗಳು ಕುಳಿತು ಶಿವಪಂಚಾಕ್ಷರಿಯನ್ನು ಬರೆಯುವ ತಪಸ್ಸಿನಲ್ಲಿ ತೊಡಗಿದ್ದರು. ಬಾಗುಬೆನ್ನಿನ, ಜೀರ್ಣಕಾಯದ ಆ ತೇಜಸ್ಸಿನ ಪುಂಜವನ್ನು ಕಂಡು ನಾನು ನಿಂತಲ್ಲೇ ನೆಲಕ್ಕೆ ಅಂಟಿ ನಿಂತೆ. ವಿಚಾರದಿಂದ ನಿಶಿತವಾದದ್ದು ಎಂದು ನಾನು ತಿಳಿದಿದ್ದ ನನ್ನ ಮತಿ ಕೆಲವು ನಿಮಿಷಗಳ ಕಾಲ ಕೆಲಸ ಮಾಡುವುದನ್ನು ಮರೆತು ಮಣಿಯಿತು. ಅಷ್ಟೇನೂ ಆರ್ಥಿಕ ಬೆಂಬಲವಿಲ್ಲದ ರಾಜೇಂದ್ರ ಸ್ವಾಮಿಗಳು ನೂರಾರು ಜನರಿಗೆ ಊಟ ವಸತಿಗಳನ್ನು ಒದಗಿಸುವುದಕ್ಕೆ ಸಾಹಸ ಮಾಡಿದ್ದು ಹೇಗೆ ಎಂಬುದು ಫಳಾರನೆ ಹೊಳೆಯಿತು. ತಮ್ಮ ಬೆನ್ನ ಹಿಂದೆ ಈ ತಪಸ್ಸಿನ ತವನಿಧಿ ಇರುವಾಗ ಆ ಸಂಪತ್ತನ್ನು ವ್ಯವಹಾರ ಜಗತ್ತಿಗೆ ಹರಿಸುವುದಷ್ಟೇ ರಾಜೇಂದ್ರ ಸ್ವಾಮಿಯವರ ಕೆಲಸ ಎಂಬುದನ್ನು ಅರ್ಥಮಾಡಿಕೊಂಡೆ. ತಮ್ಮನ್ನು ನಂಬಿಕೊಂಡಿದ್ದ ವಿದ್ಯಾರ್ಥಿಗಳಿಗೆ ಊಟ ಒದಗಿಸಲು ಸಾಧ್ಯವಾಗದಾಗ ಸ್ವಾಮೀಜಿ ತಮ್ಮ ಚಿನ್ನದ ಕರಡಿಗೆಯನ್ನು ಅಡವಿಟ್ಟು ಆಹಾರಪದಾರ್ಥಗಳನ್ನು ತರಿಸಿದರು ಎಂಬುದನ್ನು ಮುಂದೊಮ್ಮೆ ಓದಿದಾಗ ನನಗೆ ಆಶ್ಚರ್ಯವಾಗಲಿಲ್ಲ. ಮಂತ್ರಮಹರ್ಷಿಗಳ ಕೃಪೆಯಿಂದ ಅವರಿಗೆ ಚಿನ್ನದ ಕರಡಿಗೆ ದೊರೆತಿತ್ತು ಎಂಬ ಕಾರ್ಯಕಾರಣಸಂಬಂಧ ಸ್ಪಷ್ಟವಾಯಿತು, ಅಷ್ಟೆ. ಅಷ್ಟೇ ಅಲ್ಲ, ಚಿನ್ನದ ಕರಡಿಗೆಯಿಂದ ಬಿಡುಗಡೆಹೊಂದಿದ ಸಂತೋಷದಲ್ಲಿ ಆ ಇಷ್ಟಲಿಂಗವು ಸ್ವಾಮೀಜಿಗೆ ಹೊನ್ನಿನ ಹೊಳೆಯನ್ನು ಹರಿಸುವ ತೀರ್ಮಾನವನ್ನೂ ಮಾಡಿರಬಹುದು!

ಸ್ವಾಮೀಜಿಯ ಮತ್ತು ನನ್ನ ಸಂಬಂಧ ಬೆಳೆಯಿತು. ಯಾರಿಗಾದರೂ ನನ್ನ ಮೂಲಕ ಏನಾದರೂ ಸಹಾಯ ದೊರೆಯಬಹುದಾಗಿದ್ದ ಸಂದರ್ಭದಲ್ಲಿ ಅವರು ನನಗೆ ಹೇಳಿ ಕಳುಹಿಸುತ್ತಿದ್ದರು. ಅಥವಾ ನಮಗೇ ಏನಾದರೂ ಅವರನ್ನು ನೋಡಬೇಕು ಎನಿಸಿದಾಗ ಅವರನ್ನು ನೋಡಲು ಹೋಗುತ್ತಿದ್ದೆವು. ನಮ್ಮ ಇಬ್ಬರು ಹೆಣ್ಣುಮಕ್ಕಳೂ ಅವರ ಎಂಜಿನಿಯರಿಂಗ್ ಕಾಲೇಜಿನಲ್ಲಿಯೇ ಶಿಕ್ಷಣ ಪಡೆದರು. ಆ ಸಂದರ್ಭದಲ್ಲಿ ಅವರು ನೀಡಿದ ನೆರವು ಚಿರಸ್ಮರಣೀಯವಾದದ್ದು.

ಅವರಿಗೊಮ್ಮೆ ತೀವ್ರವಾದ ಅನಾರೋಗ್ಯ ಉಂಟಾಗಿ ಬೆಳಗ್ಗೆ ಬೇಗ ಅವರಿಗೆ ಇಂಜೆಕ್ಷನ್ ಕೊಡಬೇಕಾಗುತ್ತಿತ್ತು. ನನ್ನ ಶ್ರೀಮತಿ ಆ ಕೆಲಸ ಮಾಡುತ್ತಿದ್ದರು. ಒಂದು ದಿನ ಸ್ವಾಮೀಜಿ





ನಮ್ಮ ಮನೆಯವರನ್ನು ಕುರಿತು ಹೇಳಿದರು : "ನೀವು ನಮ್ಮನ್ನು ನೋಡಲು ಬರಬೇಕಾದರೆ ನಮ್ಮ ಆರೋಗ್ಯ ಬಿಗಡಾಯಿಸಬೇಕು ಎನ್ನಿ!" ಅವರ ಮಾತನ್ನು ಕೇಳಿ ನಮ್ಮ ಕರುಳು ಚುಳ್ ಎಂದಿತು. "ಇಲ್ಲ ಸ್ವಾಮೀಜಿ, ದಿನಾ ಬರುತ್ತೇವೆ" ಎಂದೆವು. ಹಾಗೆ ಅನೇಕ ದಿನಗಳ ಕಾಲ ಪ್ರತಿದಿನ ಅವರ ದರ್ಶನ ಪಡೆದೆವು.

1976. ನಾನು ಹೆಂಡತಿ ಮಕ್ಕಳ ಸಮೇತ ಕಾಶಿಗೆ ಎರಡು ವರ್ಷಕ್ಕೆಂದು ಹೊರಡುವ ಸಮಯ. ಪೂಜ್ಯರಿಗೆ ನಮ್ಮ ರಾಮಕೃಷ್ಣ ವಿದ್ಯಾ ಶಾಲೆಯನ್ನು ತೋರಿಸಬೇಕೆಂಬ ಉತ್ಸುಕತೆ ನನಗೆ. ನೋಡಬೇಕೆಂಬ ಬಯಕೆ ಅವರಿಗೆ. ಅವರನ್ನು ಅವರ ಪರಿವಾರ ಸಮೇತ – ಅದರಲ್ಲಿ ಯಾರು ಯಾರು ಇದ್ದರು ಎಂಬುದು ಈಗ ನೆನಪಿಗೆ ಬರುತ್ತಿಲ್ಲ - ವಿದ್ಯಾ ಶಾಲೆಯ ಆವರಣಕ್ಕೆ ಕರೆದುಕೊಂಡು ಹೋದೆ. ಆ ಸಸ್ಯಕಾಶಿಯನ್ನು ನೋಡಿ ಅವರಿಗಾದ ಆನಂದಕ್ಕೆ ಪಾರವೇ ಇರಲಿಲ್ಲ. ಜೊತೆಗೆ ಶಾಲೆಯ ಮಕ್ಕಳ ಶಿಸ್ತುಬದ್ಧ ಜೀವನ ಅವರ ಮೇಲೆ ತುಂಬ ಪರಿಣಾಮ ಬೀರಿತು. ಅಲ್ಲಿನ ಪ್ರಾರ್ಥನಾ ಮಂದಿರದಲ್ಲಿ ಮಕ್ಕಳನ್ನು ಉದ್ದೇಶಿಸಿ ಪುಟ್ಟ, ಆದರೆ ಹೃದಯಸ್ಪರ್ಶಿಯಾದ ಭಾಷಣ ಮಾಡಿದರು. ಆಗ ಅವರು ಹೇಳಿದ್ದು: "ಇದನ್ನೆಲ್ಲ ನೋಡಿ ನಮಗೆ ಅನ್ನಿಸುತ್ತಿದೆ. ನಾವು ಚಿಕ್ಕವರಾಗಿದ್ದು ಈ ಶಾಲೆಯಲ್ಲಿ ಸೇರಿಕೊಂಡಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು ! ಆ ಭಾಗ್ಯ ನಮಗೆ ಇಲ್ಲವಲ್ಲ!"

ಸ್ವಾಮೀಜಿಯವರು ಮತ್ತು ರಾಷ್ಟ್ರಕವಿ ಕುವೆಂಪು ಅವರು ಮುಖಾಮುಖಿಯಾಗುವ ಒಂದು ಸನ್ನಿವೇಶ ಸೃಷ್ಟಿಯಾದುದಕ್ಕೆ ನಾನು ಉಪಕರಣವಾದೆ ಎಂಬುದು ಎಂದೆಂದಿಗೂ ನನಗೆ ಸಂತೋಷವನ್ನು ನೀಡುತ್ತಿದೆ. 1984 : ಶ್ರೀ ರಾಜೇಂದ್ರ ಸ್ವಾಮಿಗಳ ಪಟ್ಟಾಧಿಕಾರ ಸುವರ್ಣ ಮಹೋತ್ಸವ ಶುಭ ಸಂದರ್ಭದಲ್ಲಿ ಹೊರತಂದ ಅಭಿನಂದನ ಗ್ರಂಥ "ಅರ್ಚನ" ಪ್ರಕಟಣೆಗೆ ಸಿದ್ಧವಾಗಿತ್ತು. ಅದಕ್ಕೆ ರಾಷ್ಟ್ರಕವಿ ಕುವೆಂಪು ಅವರಿಂದ ಮುನ್ನುಡಿ ಬರೆಸಲೂ, ಕುವೆಂಪು ಅವರು ಅದನ್ನು ಬಿಡುಗಡೆ ಮಾಡಲೂ ನಾನು ನಿಮಿತ್ತಮಾತ್ರನಾದೆ ಎಂಬ ಧನ್ಯತಾಭಾವ ನನ್ನದು.

ಸದಾ ಹಸನ್ಮುಖಿಯಾಗಿದ್ದ ಶ್ರೀಗಳನ್ನು ದುಃಖ ಆವರಿಸಿದ್ದ ಸಂದರ್ಭದಲ್ಲಿ ನೋಡಬೇಕಾದ ಪರಿಸ್ಥಿತಿಯೂ ಒದಗಿತು. ಅವರ ಹಿರಿಯರಾದ ಮಂತ್ರಮಹರ್ಷಿಗಳು ನಿಧನರಾಗಿದ್ದರು. ಅವರ ಕಳೇಬರವನ್ನು ನೋಡಲು ಸುತ್ತೂರಿಗೆ ಹೋಗಿದ್ದೆ. ಅಪಾರವಾದ ಜನಸ್ತೋಮ. ಮಠದಲ್ಲಿ ಮಹರ್ಷಿಗಳ ಪಾರ್ಥಿವ ಶರೀರ ಅಲಂಕೃತವಾಗಿ ಮಲಗಿತ್ತು. ಪಕ್ಕದಲ್ಲಿ ದುಃಖ ರೂಪು ತಾಳಿದಂತೆ ರಾಜೇಂದ್ರ ಸ್ವಾಮಿಗಳು ಕುಳಿತಿದ್ದರು. ಕಾಷಾಯವಸ್ತ್ರ ಅವರ ಸಹಜ ಭಾವನೆಗಳಿಗೆ ತೆರೆಯಾಗಿರಲಿಲ್ಲ. ಅವರು ಆಗ – ಸಾವಿನ ಸನ್ನಿಧಿಯಲ್ಲಿ – ಸಾಮಾನ್ಯ ಮಾನವರಂತೆ ದುಃಖಿಸುತ್ತಾ ಕುಳಿತಿದ್ದರು. ಆ ದೃಶ್ಯ ಅತ್ಯಂತ ಸಹಜವಾಗಿತ್ತು.





ಸತ್ತವರು ವೃದ್ಧರು – ಸಾವು ಎಲ್ಲರಿಗೂ ಬರತಕ್ಕದ್ದು – ಇಂಥ ದಿನನಿತ್ಯದ ಬೋಧನೆಯ ಚಿಂತನೆಗಳು ಸ್ವಾಮೀಜಿಯನ್ನು ಅಮಾನವೀಯತೆಯ ಅಂಚಿಗೆ ಒಯ್ದಿರಲಿಲ್ಲ. ರಾಜೇಂದ್ರ ಸ್ವಾಮಿಗಳ ದುಃಖದಲ್ಲಿ ನಾವೂ ಭಾಗಿಗಳಾದೆವು. ಮಂತ್ರ ಮಹರ್ಷಿಗಳಿಗೆ ಕೃತಜ್ಞತೆಯ ಕಾಣಿಕೆಯನ್ನು ಸಲ್ಲಿಸಿದೆವು. ಕೃತಜ್ಞತೆ ಎಂದೆ. ಅದಕ್ಕೆ ವಿಶೇಷ ಕಾರಣ ಇದೆ. ರಾಜೇಂದ್ರ ಸ್ವಾಮಿಗಳು, ತಮ್ಮ ಆಧ್ಯಾತ್ಮಿಕ ತಂದೆಯಾದ ಮಂತ್ರಮಹರ್ಷಿಗಳಿಗೆ ತಿಳಿಸದೆಯೇ ಅವರ ಪರಿಸ್ಥಿತಿಯಲ್ಲಿದ್ದ ಇತರ ಭವಿಷ್ಯತ್ ಸನ್ಯಾಸಿಗಳಂತೆ ಕಾಶಿಯ ವಿದ್ವತ್ತಿನ ಕನಸಿನ ಗುಂಗಿನಲ್ಲಿ ಪಲಾಯನಪಟುಗಳಾಗಿದ್ದರು! ಅದು ತಿಳಿದ ಹಿರಿಯರು ಅವರನ್ನು ಹಿಂದಿರುಗಿಸಿದರು. ಲಕ್ಷಾಂತರ ವಿದ್ಯಾರ್ಥಿಗಳ ಪುಣ್ಯ ಅವರ ಬೆಂಬಲಕ್ಕೆ ಅಶರೀರಿಯಾಗಿ ನಿಂತಿದ್ದರಿಂದ ಹಿರಿಯರ ಬಯಕೆ ಈಡೇರಿತು. ಅಸಾಧಾರಣ ಕರ್ತೃತ್ವಶಕ್ತಿಯ ರಾಜೇಂದ್ರರು ಹಿಂದಿರುಗಿ ಪೀಠವನ್ನು ಅಲಂಕರಿಸಿದರು.

ಅವರ ಅಂತ್ಯಕ್ರಿಯೆಯಲ್ಲೂ ನಾನು ಭಾಗವಹಿಸಿದ್ದೆ. ಈಗಿನ ದೇಶಿಕೇಂದ್ರ ಸ್ವಾಮಿಗಳು ಸನ್ಯಾಸಗ್ರಹಣದ ಪೂರ್ವಸ್ಥಿತಿಯಲ್ಲಿ ರಾಜೇಂದ್ರರ ಕಳೇಬರದ ಪಕ್ಕದಲ್ಲಿ ಮ್ಲಾನವದನರಾಗಿ ನಿಂತಿದ್ದರು. ಇತಿಹಾಸ ಪುನರಾವರ್ತಿಸಿತು! ಇಬ್ಬರು ಮಹಾನ್ ಸಂತರ ತಪಃಫಲ ದೇಶಿಕೇಂದ್ರ ಸ್ವಾಮಿಗಳಲ್ಲಿ ನೆಲೆಗೊಂಡು ಕರ್ನಾಟಕದ ಒಳಗೆ ಹೊರಗೆ ಅನೇಕ ವಿದ್ಯಾಕ್ಷೇತ್ರಗಳ ಹೆಬ್ಬಾಗಿಲುಗಳನ್ನು ವಿದ್ಯಾತುರರ ಪಾಲಿಗೆ ತೆರೆಯಿತು.

ಈ ಎಲ್ಲ ಘಟನೆಗಳೂ ನನ್ನ ಪಾಲಿಗೆ ಪವಾಡಗಳಂತೆ ತೋರುತ್ತಿವೆ. ಪವಾಡದಂತೆ ತೆರೆದುಕೊಂಡ ವಿದ್ಯಾಮಂದಿರಗಳ ಹೆಬ್ಬಾಗಿಲುಗಳು ಜ್ಞಾನಾಕಾಂಕ್ಷಿಗಳಿಗೆ ತೀರ್ಥಕ್ಷೇತ್ರಗಳಾಗಿ ಉಳಿಯುತ್ತವೆ !

**ಕೃಪೆ : ಘನ–ಮನ**





# ಗುಣಗ್ರಾಹಿ

**ಡಾ. ಪಾಟೀಲ ಪುಟ್ಟಪ್ಪ**

**ಬೆ**ಳಗಾಂನಲ್ಲಿ ನಾಗನೂರುಸ್ವಾಮಿಗಳು ಅಂತ ಇದ್ದಾರೆ ಧಾರವಾಡದಲ್ಲಿ ಮಹಾಂತ ಸ್ವಾಮಿಗಳು ಅಂತ ಇದ್ದಾರೆ. ಈ ಯಾದಿ ಬಹಳ ದೊಡ್ಡದೇನಿಲ್ಲ, ಎಷ್ಟು ಜನಗಳನ್ನು ನಾವು ನೆನೆದರೂ ಕೂಡ ನಮಸ್ಕಾರ ಮಾಡಬೇಕು ಅನ್ನತಕ್ಕಂತಹ ಒಂದು ವ್ಯಕ್ತಿತ್ವ ಇಟ್ಟುಕೊಂಡ ವರು, ಚಾರಿತ್ರ್ಯ ಇಟ್ಟುಕೊಂಡವರು ಸ್ವಾಮಿಗಳ ವರ್ಗದವರಲ್ಲಿ ಬಹಳ ಕಡಿಮೆ ಜನ ಇದ್ದಾರೆ. ಗುರುಪೀಠದಲ್ಲಿ ಇರತಕ್ಕಂತಹ ಜನ ಈ ನೀತಿಮತ್ತೆಯನ್ನು, ಚಾರಿತ್ರ್ಯವನ್ನು ಇಟ್ಟುಕೊಂಡರೆ ಸಮಾಜ ಒಂದು ಅನುಕರಣೀಯವಾದ ಚಾರಿತ್ರ್ಯವನ್ನು ಕಾಣುತ್ತದೆ. ಇಲ್ಲದೆ ಹೋದರೆ ನಮಗಿಂತಲೂ ಇವರು ಭಿನ್ನರಾದವರಲ್ಲ ಅಂತ ಅಸಡ್ಡೆ ಮನೆ ಮಾಡುತ್ತದೆ.

ಗುರುಪೀಠದಲ್ಲಿ ಇರತಕ್ಕಂತಹ ಸ್ವಾಮಿಗಳು ಮಹಾಪಂಡಿತರಿ ದ್ದಾರೆ, ಬಹಳ ಚೆನ್ನಾಗಿ ಮಾತಾಡುತ್ತಾರೆ ಅಂತ ಜನಗಳಲ್ಲಿ ಕೆಲವರು ಹೇಳುತ್ತಾರೆ. ಪಂಡಿತರಾಗಿದ್ದಾರೆ ಅಂದರೆ ನಾವು ವಿಶ್ವವಿದ್ಯಾನಿಲಯಗಳ ಗ್ರಂಥಾಲಯಗಳನ್ನು ಪೂಜೆ ಮಾಡಬೇಕು ಅದರಲ್ಲಿರತಕ್ಕಂತಹ ಪಾಂಡಿತ್ಯ ಯಾರಲ್ಲಿಯೂ ಇಲ್ಲ. ಮಾತಾಡು ತ್ತಾರೆ ಅಂದರೆ, ನೀವು ಆಕಾಶವಾಣಿ ಹಾಕಿದರೆ ಮಾತಾಡುವವರು ಅನೇಕ ಜನ ಸಿಗುತ್ತಾರೆ. ಮಾತಿನಿಂದ ಕೈಲಾಸ ತೋರಿಸತಕ್ಕಂತಹವರು ಇದ್ದಾರೆ. ಈ ಮಾತಿನ ಚಮತ್ಕಾರಕ್ಕೆ ಮರುಳಾಗಬೇಕು ಅನ್ನುವವರಾದರೆ ವಿಶ್ವ ವಿದ್ಯಾಲಯಗಳಲ್ಲಿ ಮಾತನ್ನೇ ಒಂದು ವೃತ್ತಿಯನ್ನಾಗಿ ಮಾಡಿಕೊಂಡವರು ಅನೇಕ ಜನ ಇದ್ದಾರೆ. ಆದ್ದರಿಂದ ಅವರ ಕಾಲಿಗೆ ಬೀಳಬಹುದು. ಆದರೆ, ಸ್ವಾಮಿಗಳಾದವರಿಂದ ನಾವು ಅಪೇಕ್ಷೆ ಮಾಡುವುದು ಏನು ಅಂದರೆ, ಸಮಾಜಕ್ಕೆ ಮಾರ್ಗದರ್ಶನ ಮಾಡತಕ್ಕಂತಹ ಚಾರಿತ್ರ್ಯ ಅವರಲ್ಲಿರಬೇಕು. ಆ ಚಾರಿತ್ರ್ಯಕ್ಕೆ ನಾನು ತಲೆಬಾಗುತ್ತೇನೆ. ಅಂತಹ ಚಾರಿತ್ರ್ಯವಿರುವ ಮಹಾಸ್ವಾಮಿಗಳವರಲ್ಲಿ ನಾನು ತಲೆ ಬಾಗುತ್ತೇನೆ. ಸುತ್ತೂರಿನ ರಾಜೇಂದ್ರಮಹಾಸ್ವಾಮಿಗಳವರು ಅಂತಹ ಮಹಾಚಾರಿತ್ರ್ಯ ಉಳ್ಳವರು. ಅವರು ಕಾಲಿನಿಂದ ತೋರಿಸಿದ ಕೆಲಸ ನಾನು ತಲೆಯಿಂದ ಮಾಡುವುದಕ್ಕೆ ಸಿದ್ಧ. ಚಾರಿತ್ರ್ಯ ಇರತಕ್ಕಂತಹ ಜನ ನಮಗೆ ಮಾನ್ಯರೆನಿಸುತ್ತಾರೆ. ಇವರು ಅನೇಕ ಕಾಲದಿಂದ ತಮ್ಮ ನೀತಿಯಿಂದ, ತಮ್ಮ ವೈಯಕ್ತಿಕ ಚಾರಿತ್ರ್ಯದಿಂದ, ಸತ್ಕಾರ್ಯಗಳಿಂದ ಸಮಾಜಕ್ಕೆ ಮಾರ್ಗದರ್ಶನ ಮಾಡುತ್ತಿದ್ದಾರೆ.





ಸಾಮೂಹಿಕವಾಗಿ ಜನ ಉದ್ಧಾರ ಆಗಬೇಕು. ವೈಯುಕ್ತಿಕವಾದಂತಹ ಯೋಗ್ಯತೆ ಬೆಳೆಸಿಕೊಂಡು, ಸಾಮೂಹಿಕ ಹಿತಕ್ಕೋಸ್ಕರ ಮನುಷ್ಯ ಶ್ರಮ ಪಡಬೇಕು. ಸರ್ವರ ಸಮಷ್ಟಿ ಹಿತದಲ್ಲಿ ತನ್ನ ಹಿತ ಇದೆ ಅನ್ನತಕ್ಕಂತಹ ಭಾವನೆ ಮನುಷ್ಯನಲ್ಲಿ ಬರಬೇಕು. ನಾವು ಈಗ ವ್ಯಕ್ತಿಯ ಕಡೆಗೆ ನೋಡಿಕೊಳ್ಳುತ್ತಾ ಇದ್ದೇವೆ. ವ್ಯಕ್ತಿ ವ್ಯಕ್ತಿ ಕೂಡಿ ಸಮಾಜ ಆಗಿದೆ. ವ್ಯಕ್ತಿ ತನ್ನ ಹಿತವನ್ನು ಸಾಧನೆ ಮಾಡಿಕೊಳ್ಳುವಾಗ, ಸಮಾಜದ ದೃಷ್ಟಿಯನ್ನು ಕಣ್ಣಮುಂದೆ ಇಟ್ಟುಕೊಳ್ಳಬೇಕು. ಸಮಾಜದೊಟ್ಟಿಗೆ ತಾನು ಬೆಳೆಯಬೇಕು. ಒಬ್ಬನೇ ಬೆಳೆಯೋದು ಅಂದರೆ ಯಾವನಾದರೂ ಹಿಮಾಲಯಕ್ಕೆ ಹೋಗಿ ಮೂಗು ಹಿಡಿದು ಕುಳಿತುಕೊಂಡು ಅಲ್ಲಿ ತಪಸ್ಸು ಮಾಡಬಹುದು. ಆದರೆ ಇವಾಗ ಅಂತಹ ಒಂದು ಸಮಯ ಯಾರಿಗೂ ಸಿಗುವುದಿಲ್ಲ. ಇವತ್ತು ನಾವು ಮಹಾನುಭಾವರನ್ನು ಸಮಾಜದಲ್ಲಿ ಹುಡುಕಬೇಕಾಗುತ್ತದೆ. ಸಮಾಜದಲ್ಲಿದ್ದುಕೊಂಡೇ ಮಹಾತ್ಮರೆನಿಸಬೇಕು. ಜನರೊಟ್ಟಿಗೆ ಬೆಳೆದು ಜನರನ್ನು ಎಚ್ಚರಿಸ ತಕ್ಕಂತಹ ಒಂದು ಕೆಲಸ ಮಾಡಬೇಕು. ಇವತ್ತು ಸಮಾಜ ಅಂದರೆ ಒಂದು ಜಾತಿಗೆ ಸೇರಿದಂತಹ ಸಮಾಜ ಅಲ್ಲ. ಇದು ಒಂದು ಸಂಕೀರ್ಣವಾದಂತಹ ಸಮಾಜ. ಬಹುಬಗೆಯ ಜನ ಕೂಡಿರತಕ್ಕಂತಹ ಸಂಕೀರ್ಣವಾದ ಒಂದು ಸಮಾಜ ವ್ಯವಸ್ಥೆಯಲ್ಲಿ ನಾವು ಬದುಕಿದ್ದೇವೆ. ಈ ಕಲ್ಪನೆ ಪ್ರತಿಯೊಬ್ಬರಲ್ಲಿಯೂ ಇರಬೇಕು. ಅವನು ವೈಯಕ್ತಿಕ ವಾಗಿ ತನ್ನ ಆಚಾರವಿಚಾರ ಯಾವುದಾದರೂ ಇರಿಸಿಕೊಂಡಿರಬಹುದು. ಆದರೆ ಸಮಷ್ಠಿಯೊಂದಿಗೆ ತಾನು ಬೆರೆತು ಹೋಗಬೇಕಾಗಿದೆ ಎನ್ನುವ ತಿಳುವಳಿಕೆ ಇರಬೇಕು. ಅನೇಕ ಬಗೆಯ, ಬಗೆಬಗೆಯ ಜನ, ಅಂದರೆ ಜಾತಿ ಅನ್ನತಕ್ಕಂತಹ ಒಂದು ಅರ್ಥನೂ ಕೂಡ ಇದೆ. ನಿಮ್ಮದು ಯಾವ ಬಗೆ ಅಂಥ ಕೇಳುತ್ತಾರಲ್ಲ ಹಾಗೆ. ಅನೇಕ ಬಗೆಗಳಿಗೆ ಸೇರಿರತಕ್ಕಂತಹ ಜನ ಇರುವ ಸಂಕೀರ್ಣ ಸಮಾಜದಲ್ಲಿ ನಾವು ಇರುವುದರಿಂದ ಎಲ್ಲರನ್ನೂ ಆಲೋಚನೆ ಮಾಡಿ ನಾವು ಬದುಕು ಮಾಡಬೇಕಾಗಿದೆ. ಜಗತ್ತು ಎಲ್ಲ ಬಗೆಯ ಜನರಿಂದ ಕೂಡಿಯಾಗಿದೆ. ನನ್ನ ಕೆಲವು ಜನರೇ ಜಗತ್ತಲ್ಲ. ಜಗದೀವರೆಗೆ ಒಂದೇ ಮನುಜಕುಲಂ ಅಂತ ಪಂಪ ಕೂಡ ಒಂದು ಸಾವಿರ ವರ್ಷದ ಹಿಂದೆ ಇದರ ಕಲ್ಪನೆ ಇರಿಸಿಕೊಂಡಿದ್ದ. ಜನ ಅಂದರೆ ಎಲ್ಲ ಒಂದು. ದೊಡ್ಡವರ ಕಣ್ಣಲ್ಲಿ ಬೇರೆ ಬೇರೆ ಬಗೆಗಳು ಕಾಣುವುದಿಲ್ಲ. ಒಂದೇ ಬಗೆಯಾಗಿ ಎಲ್ಲ ಜನರು ಕಾಣುತ್ತಾರೆ. ಅಂತಹ ಒಂದು ಕಲ್ಪನೆ ಇಟ್ಟುಕೊಂಡು ಮನುಷ್ಯ ಇವತ್ತು ಬೆಳೆಯಬೇಕಾಗಿದೆ. ಜನರಲ್ಲಿ ವ್ಯತ್ಯಾಸ ಇರಿಸದಂತೆ ಎಲ್ಲ ಜನಗಳ ಹಿತ ಸಂಬಂಧ ನನ್ನ ಹಿತ ಸಂಬಂಧಗಳೊಂದಿಗೆ ಹೆಣೆದುಕೊಂಡಿದೆ. ಅನ್ನತಕ್ಕಂತಹ ಒಂದು ಸಾಮಾಜಿಕ ನ್ಯಾಯದ ದೃಷ್ಠಿ ಇರಿಸಿಕೊಂಡು ಮನುಷ್ಯ ಇವರು ವ್ಯವಹಾರ ಮಾಡಬೇಕಾಗಿದೆ. ನನ್ನಷ್ಟಕ್ಕೆ ನಾನು ಬದುಕುವುದಲ್ಲ. ನನ್ನಷ್ಟಕ್ಕೆ ನಾನು ಮೋಕ್ಷ ಸಾಧನೆ ಮಾಡಿಕೊಳ್ಳುವುದಲ್ಲ. ಅನೇಕ ಬಗೆಯ ಸಂಪ್ರದಾಯಗಳಿಗೆ ತಿಳುವಳಿಕೆಗಳಿಗೆ ನಂಬುಗೆಗಳಿಗೆ ಒಳಪಟ್ಟಂತಹ ಜನ ಇರತಕ್ಕಂತಹ ಒಂದು ಸಂಕಿರಣ





ಸಮಾಜದಲ್ಲಿ ನಾವು ವಾಸವಾಗಿರುವುದರಿಂದ ಅವರೆಲ್ಲರೊಟ್ಟಿಗೆ ನಾವು ಬೆರೆತು ನಮ್ಮ ಬದುಕು ಮಾಡಬೇಕಾಗಿದೆ. ನನ್ನ ಮಟ್ಟಿಗೆ ನಾನು ಇರುವುದು ಅದು ನನ್ನ ಧರ್ಮ ಅಲ್ಲ. ಇವತ್ತು ಧರ್ಮ ಅದು ವಿಶ್ವಧರ್ಮ. ಪ್ರತಿಯೊಂದು ಧರ್ಮದಲ್ಲಿರತಕ್ಕ ಒಳ್ಳೆಯದನ್ನು ಆರಿಸಿಕೊಂಡು ನಾವೆಲ್ಲ ಇವತ್ತು ಸಾರ್ವತ್ರಿಕವಾಗಿ ಮನುಷ್ಯ ಹೋರಾಟ ಮಾಡಬೇಕಾದರೆ ಅನ್ಯಾಯದ ವಿರುದ್ಧ ಹೋರಾಟ ಮಾಡಬೇಕು. ಅನ್ಯಾಯ ಮಾಡತಕ್ಕಂತಹವರು ನಿಮ್ಮ ವಿರೋಧಿಗಳಾಗುತ್ತಾರೆ. ಆದರೆ ವಿರೋಧ ಮಾಡಿಕೊಳ್ಳ ಬೇಕಾದರೆ, ಅನ್ಯಾಯದ ವಿರುದ್ಧ ಹೋರಾಟ ಮಾಡಿ, ಅಂತಹ ವಿರೋಧ ಕಟ್ಟಿಕೊಳ್ಳಬೇಕು. ನ್ಯಾಯವನ್ನು ಗೆಲ್ಲಿಸಬೇಕು. ನೀನು ಒಬ್ಬೊಂಟಿ ಯಾದರೇನು ಹೋರಾಟ ಮಾಡು. ಹೋರಾಟ ಮಾಡಿ ಸತ್ಯವನ್ನು, ಸತ್ವವನ್ನು ಎತ್ತಿನಿಲ್ಲಿಸಬೇಕು. ಆ ರೀತಿ ಇವತ್ತು ಸಮಾಜದಲ್ಲಿ ಸರಿ ಮಾಡಬೇಕಾದದ್ದು, ಸರಿಯಾಗಬೇಕಾದದ್ದು ಬಹಳಷ್ಟು ಇದೆ. ಅದಕ್ಕೋಸ್ಕರ ದೊಡ್ಡ ಹೋರಾಟ ನಡೆಯಬೇಕಾಗಿದೆ. ಸಮಾಜವನ್ನು ತಿದ್ದುವುದಕ್ಕೆ ಸಾಮಾನ್ಯ ಶಕ್ತಿ ಸಾಕಾಗುವುದಿಲ್ಲ, ಆದರ್ಶ ಅನ್ನುವುದು ಸಮಾಜದಲ್ಲಿ ಇಲ್ಲದೇ ಹೋದರೆ ಸಮಾಜ ಹಾಳಾಗುತ್ತದೆ. ಮನುಷ್ಯ ಹಾಳಾಗುತ್ತಾನೆ. ಒಂದು ಉನ್ನತವಾದ ಆದರ್ಶ. ಮನುಷ್ಯ ಪ್ರೇರಣೆ ಕೊಡಬೇಕು. ಆ ಧರ್ಮ ಅದಕ್ಕೆ ಪ್ರೇರಣೆ ಕೊಡದೇ ಹೋದರೆ ಅದು ಧರ್ಮ ಅಲ್ಲ. ಧರ್ಮ ಮನುಷ್ಯನನ್ನು ಬದುಕಿಸಬೇಕು, ಸಾಯಿಸಬಾರದು. ಎಲ್ಲ ಜನ ಬದುಕುವಂತಹ ಒಂದು ಸ್ಥಿತಿಯನ್ನು ಸಮಾಜದಲ್ಲಿ ನಾವು ನಿರ್ಮಾಣ ಮಾಡದೇಹೋದರೆ ಅದು ಧರ್ಮ ಎಂತಹದ್ದು ಅಲ್ಲ. ನಾವು ಪ್ರತಿಪಾದನೆ ಮಾಡತಕ್ಕಂತಹ ಧರ್ಮ ಮಾನವ ಧರ್ಮ. ಅದು ಬೆಳೆಯ ಬೇಕು. ಆದರೆ ನಮ್ಮೊಳಗೆ ಎಷ್ಟು ಜನ ಮನುಷ್ಯರಿದ್ದಾರೆ. ನಾವು ಬಟ್ಟೆ ತೊಟ್ಟುಕೊಂಡಿದ್ದೇವೆ ಅನ್ನುವ ಕಾರಣದಿಂದ ನಾವು ಮನುಷ್ಯರಂತೆ ಕಾಣುತ್ತಿದ್ದೇವೆ. ಆದರೆ ಬಟ್ಟೆ ತೊಟ್ಟುಕೊಂಡವರೆಲ್ಲ ಮನುಷ್ಯರಲ್ಲ. ಬಡವನಾದವನು, ಸ್ವಾಮಿಗಳ ಕಣ್ಣಿನಲ್ಲಿ ಅವನ ನಡವಳಿಕೆಯಿಂದ, ನೀತಿಯಿಂದ ಬಹಳ ದೊಡ್ಡವನಾಗಿರಬಹುದು. ಶ್ರೀಮಂತನಾದವನು ತನ್ನಲ್ಲಿ ಹಣ ಇದೆ. ನೀತಿಯನ್ನು ನಾನು ಸಂಪಾದನೆ ಮಾಡಿಕೊಂಡಿದ್ದೇನೆ ಅನ್ನತಕ್ಕಂತಹ ಒಂದು ಭಾವನೆ ಇಟ್ಟುಕೊಂಡಿರಬಹುದು. ಯಾವನು ಹಣ ಹೆಚ್ಚು ಕೊಡುತ್ತಾನೆ ಅವನಲ್ಲ, ಯಾವನು ಗುಣ ಹೆಚ್ಚು ತೋರಿಸುತ್ತಾನೆ ಅವನು ಪ್ರಮುಖ ನಾದವನು. ಅಂತಹ ಗುಣಗ್ರಾಹಿ ಸಮಾಜವನ್ನು ನಿರ್ಮಾಣ ಮಾಡಬೇಕಾದರೆ, ನಿಜವಾದಂತಹ ಧಾರ್ಮಿಕಭಾವನೆಯನ್ನು ನಾವು ಪ್ರಚೋದಿಸಬೇಕು. ಆ ಕಾರ್ಯವನ್ನು ರಾಜೇಂದ್ರ ಮಹಾಸ್ವಾಮಿ ಗಳವರು ನಿರ್ವಿಘ್ನವಾಗಿ ಮತ್ತು ನಿರ್ವಂಚನೆಯಿಂದ ಮಾಡುತ್ತಿದ್ದಾರೆ. ಅವರಿಗೆ ನನ್ನ ಅನಂತ ಪ್ರಣಾಮಗಳು.

**ಕೃಪೆ : ಘನ–ಮನ**





# ನಮ್ಮೊಡನಿದ್ದ ದೈವ: ಪೂಜ್ಯ ರಾಜೇಂದ್ರ ಶ್ರೀ

**ಡಾ. ಡಿ. ಎಸ್. ಗುರು, ದೇವನೂರು**

ಸಾಮಾನ್ಯವಾಗಿ ಸೆಪ್ಟೆಂಬರ್ ಮಾಹೆ ಪ್ರತಿ ವರ್ಷ ಮೈಸೂರು ನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಒಂದು ರೀತಿಯ ಸಂಭ್ರಮ ಸಡಗರ ಹಬ್ಬದ ವಾತಾವರಣವೇ ಸರಿ. ಇದಕ್ಕೆ ಹಲವು ಕಾರಣಗಳು ಉಂಟು. ಸ್ವರ್ಣಗೌರಿ ವ್ರತ, ಗಣೇಶ ಚತುರ್ಥಿ, ಗಣೇಶ ವಿಸರ್ಜನೆ ಮೆರವಣಿಗೆ, ಓಣಂ ಹಬ್ಬ ಇತ್ಯಾದಿ ಹಲವು ಹಬ್ಬಗಳ ಆಚರಣೆ ಒಂದೆಡೆಯಾದರೆ, ಸಾಂಪ್ರದಾಯಿಕವಾದರೂ ವಿಶ್ವವಿಖ್ಯಾತ ಐತಿಹಾಸಿಕ ದಸರಾ ಕಾರ್ಯಕ್ರಮದ ಪೂರ್ವ ತಯಾರಿಯಲ್ಲಿ ತೊಡಗಿಸಿಕೊಳ್ಳುವ ಆನಂದ ಇನ್ನೊಂದೆಡೆ. ಇದಲ್ಲದೆ ಸೆಪ್ಟೆಂಬರ್ 5 ಹಾಗೂ 15ನೇ ತಾರೀಖಿನಂದು ಬರುವ ಶಿಕ್ಷಕರ ದಿನಾಚರಣೆ ಹಾಗೂ ಇಂಜಿನಿಯರಿಂಗ್ ದಿನಾಚರಣೆ ಮತ್ತೊಂದೆಡೆ. ಇಷ್ಟೆಲ್ಲದರ ನಡುವೆ ಸಂಘ–ಸಂಸ್ಥೆಗಳು, ಹಳ್ಳಿ ಹಳ್ಳಿಗಳಲ್ಲಿರುವ ಶಾಲಾ–ಕಾಲೇಜುಗಳು, ಮಠಮಾನ್ಯಗಳು, ಗುಡಿ ದೇಗುಲಗಳು ಬಹಳ ಸಂಭ್ರಮದಿಂದ ಹಾಗೂ ಉತ್ಸುಕತೆಯಿಂದ ಪ್ರೀತಿ ತುಂಬಿದ ಹೃದಯದಿಂದ ಭಕ್ತಿ ಪೂರ್ವಕವಾಗಿ ಆಚರಿಸುವ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಜಯಂತಿ ಮಹೋತ್ಸವವು ಒಂದು ಕಾರಣ ಎಂದರೆ ತಪ್ಪಾಗಲಾರದು. ರಾಜಗುರುತಿಲಕ, ಬಡವರಬಂಧು, ದಾಸೋಹಮೂರ್ತಿ, ದಿವ್ಯಮೂರ್ತಿ, ಹೀಗೆ ಹತ್ತು ಹಲವು ಬಿರುದಾಂಕಿತರಾದಂತಹ, ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ಒಂದು ಕ್ರಾಂತಿಯನ್ನೇ ಎಬ್ಬಿಸಿ ಶಿಕ್ಷಣದಿಂದ ಯಾರೂ ವಂಚಿತರಾಗಬಾರದು, ಅದರಲ್ಲೂ ಬಡತನ ಮತ್ತು ವಸತಿ ಸೌಕರ್ಯವಿಲ್ಲವೆಂಬ ಕಾರಣಕ್ಕಾಗಿ ಶಿಕ್ಷಣವನ್ನು ಮೊಟಕುಗೊಳಿಸಬಾರದು ಎಂಬ ಸದುದ್ದೇಶದೊಂದಿಗೆ ಉಚಿತ ವಿದ್ಯಾರ್ಥಿ ನಿಲಯಗಳನ್ನು, ಶಿಕ್ಷಣ ಸಂಸ್ಥೆಗಳನ್ನು, ಪಟ್ಟಣ, ತಾಲ್ಲೂಕು ಹಾಗೂ ಗ್ರಾಮಗಳಲ್ಲಿ ಸ್ಥಾಪಿಸಿದಂತಹ ದೈವೀ ಪುರುಷರ ಜಯಂತಿ ಮಹೋತ್ಸವವನ್ನು ಮನೆಯ ಹಬ್ಬದಂತೆ ಆಚರಿಸುವುದು ಒಂದು ಪುಣ್ಯವೇ ಸರಿ ಎಂಬ ಭಾವನೆಯಿಂದ ಆಚರಿಸಲಾಗುತ್ತಿದೆ.

ಸಾಮಾನ್ಯವಾಗಿ ಒಂದು ಮಾತಿದೆ. ಭಗವಂತ ಒಂದು ನಿರ್ದಿಷ್ಟವಾದ ಸಮಾಜಕ್ಕೆ ಅಥವಾ ಸಮುದಾಯಕ್ಕೆ ಅಥವಾ ಒಂದು ಪ್ರಾಂತ್ಯಕ್ಕೆ ಏನಾದರೂ ಒಳ್ಳೆಯದು ಮಾಡಬೇಕು ಎಂದರೆ ಒಂದು ಮಗುವಿಗೆ ಜನ್ಮ ನೀಡುವನು ಹಾಗೂ ಸಾಧ್ಯವಾದರೆ ಭಗವಂತನೇ ಆ





ಮಗುವಿನ ರೂಪದಲ್ಲಿ ಅವತರಿಸುವನು ಎನ್ನುವ ಮಾತು. ರಾಮಾಯಣದಲ್ಲಿ ರಾಮನಾಗಿ ಮತ್ತು ಮಹಾಭಾರತದಲ್ಲಿ ಕೃಷ್ಣನಾಗಿ ಅವತರಿಸಿ ಸಮಾಜದಲ್ಲಿ ಅಧರ್ಮವ ಹೋಗಲಾಡಿಸಿ ಧರ್ಮ ಸ್ಥಾಪನೆ ಮಾಡಿರುವುದು ಸನಾತನ ಧರ್ಮದಲ್ಲಿ ಕಾಣುತ್ತೇವೆ. ಚಾಮರಸನ ಪ್ರಭುಲಿಂಗಲೀಲೆಯಲ್ಲಿ ಸಾಕ್ಷಾತ್ ಪರಮೇಶ್ವರನೇ ಅಲ್ಲಮಪ್ರಭುವಾಗಿ ಮತ್ತು ಆತನ ನಂದಿಯೇ ಜಗಜ್ಯೋತಿ ಬಸವೇಶ್ವರರಾಗಿ ಅವತರಿಸಿ, ಹನ್ನೆರಡನೇ ಶತಮಾನದಲ್ಲಿ ಸಮಾನತೆಯ ಹರಿಕಾರರಾಗಿ ಸಾಮಾಜಿಕ ಸುಧಾರಣೆಗೆ ಕಾರಣೀಭೂತರಾದರು ಎನ್ನುವ ಮಾತಿದೆ. 19–20 ನೇ ಶತಮಾನದಲ್ಲಿ ಬಹುಶಃ ಭಾರತದಂತಹ ದೊಡ್ಡ ರಾಷ್ಟ್ರ ಶತಶತಮಾನ ಗಳಿಂದಲೂ ಬ್ರಿಟಿಷರ ಸಂಕೋಲೆಗಳಿಗೆ ಒಳಗಾಗಿ, ಹಿಂಸೆ ಕ್ರೌರ್ಯಗಳನ್ನು ಅನುಭವಿಸುತ್ತಿದ್ದ ಕಾಲಘಟ್ಟದಲ್ಲಿ ದೇಶಕ್ಕೆ ಸ್ವಾತಂತ್ರ್ಯ ಪಡೆಯುವಲ್ಲಿ ಒಬ್ಬ ಪ್ರಭಾವಿ ನಾಯಕನ ಅವಶ್ಯಕತೆ ಇದೆ ಎಂದು ಭಗವಂತನು ಮೋಹನದಾಸ ಕರಮಚಂದ ಗಾಂಧೀಜಿಗೆ ಜನ್ಮವಿತ್ತ ಎನ್ನುವು ದಾದರೆ,. 20ನೇ ಶತಮಾನದಲ್ಲಿ ಮೈಸೂರು ನಗರ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿನ ಜನರ ಅನಕ್ಷರತೆಯನ್ನು ಹೋಗಲಾಡಿಸಿ ಅವರಲ್ಲಿ ಸೃಜನಶೀಲತೆಯನ್ನು ತುಂಬಲು ಶಿಕ್ಷಣಕ್ಕೆ ಅವಕಾಶವಾಗಬೇಕು ಎನ್ನುವ ಮಹತ್ವಾಕಾಂಕ್ಷೆಯಿಂದ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳಿಗೆ ಜನ್ಮ ನೀಡಿದ ಎಂದರೆ ಅತಿಶಯೋಕ್ತಿಯಲ್ಲ.

ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಶ್ರೀಗಳ ಹುಟ್ಟಿನ ವಾಸ್ತವಿಕತೆಯನ್ನು ಅರಿತರೆ ನಿಜಕ್ಕೂ ರೋಮಾಂಚನವಾಗುತ್ತದೆ. ವಿಜ್ಞಾನ ತಂತ್ರಜ್ಞಾನ ಮುಂದುವರೆದಿರುವ ಈ ಆಧುನಿಕ ಯುಗದ ದಿನಗಳಲ್ಲಿ ನಾಳೆ ಹುಟ್ಟುವ ಮಗು ಹೆಣ್ಣು ಅಥವಾ ಗಂಡು ಎಂದು ತಿಳಿದುಕೊಳ್ಳುವುದು ಸಾಧ್ಯವಿದೆ, ಆದರೆ ಅಂದಿನ ದಿನಗಳಲ್ಲಿ ಅಂದರೆ ನೂರು ವರ್ಷಗಳಿಗೂ ಹಿಂದೆ 1916 ರಲ್ಲಿ ನಾಳೆ ಹುಟ್ಟುವ ಮಗು ಗಂಡು ಎಂದು ಖಚಿತವಾಗಿ ನಿರ್ಧರಿಸಿ ಆ ಮಗು ಮುಂದೆ ಸಮಾಜಸೇವೆಯಲ್ಲಿ ತೊಡಗಿಸಿಕೊಳ್ಳಬೇಕು ಮತ್ತು ಆತನ ಜೀವನ ಅದಕ್ಕೆ ಅರ್ಪಿತವಾಗಬೇಕು, ಆದ್ದರಿಂದ ತಾವು ದಂಪತಿಗಳು ಆ ಮಗುವನ್ನು ಐದು ವರ್ಷ ಆರೈಕೆ ಮಾಡಿ ನಂತರ ಮಠಕ್ಕೆ ಒಪ್ಪಿಸಿ ಬಿಡಬೇಕು ಎಂದು ನಿರ್ದಾಕ್ಷಿಣ್ಯವಾಗಿ ಜಗದ್ಗುರು ಶ್ರೀ ಮಂತ್ರ ಮಹರ್ಷಿಗಳು ಶ್ರೀಮತಿ ಶಂಕರಮ್ಮ ಹಾಗೂ ಶ್ರೀ ಮಲ್ಲಿಕಾರ್ಜುನ ದೇವರು ಎಂಬ ಶರಣ ದಂಪತಿಗಳಿಗೆ ಆದೇಶವಿತ್ತು ಆಶೀರ್ವದಿಸಿದುದಲ್ಲದೆ, ಹುಟ್ಟಿದ ಮಗುವಿಗೆ ಶ್ರೀ ಶಿವರಾತ್ರಿ ರಾಜೇಂದ್ರ ಎಂಬ ನಾಮಕರಣ ಮಾಡಿದ್ದು, ನಂತರ ಆ ಮಗು ಅದಕ್ಕೆ ತಕ್ಕಂತೆ ಲೌಕಿಕ ಜೀವನದಿಂದ ದೂರವಿದ್ದು ಶಿಕ್ಷಣಾಭ್ಯಾಸ ಮಾಡಿ ತದನಂತರ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡು ಮಾನವ ಕುಲೋದ್ಧಾರಕರಾದದ್ದು ನಿಜಕ್ಕೂ ಅಚ್ಚರಿ ಹುಟ್ಟಿಸುವಂತದ್ದು. ಬಾಲಶ್ರೀ ಶಿವರಾತ್ರಿ ರಾಜೇಂದ್ರರಿಗೆ ಯಾವುದೇ ರೀತಿಯ ಸಂಬಂಧವೇ ಇಲ್ಲದ ಒಬ್ಬ ಹುಡುಗ ಅರಳಿ ಮರದ ಕಟ್ಟೆಯ ಮೇಲೆ ದಣಿವು ಹಸಿವಿನಿಂದ





ನರಳುತ್ತಾ ಜ್ವರ ಪೀಡಿತನಾಗಿ ಮಲಗಿರುವುದನ್ನು ಗಮನಿಸಿ ಆತನ ಕಷ್ಟಗಳಿಗೆ ಸ್ಪಂದಿಸಿ, ಉಪಚರಿಸಿ ರಾತ್ರಿಯೆಲ್ಲಾ ಯೋಚಿಸಿ ಶ್ರೀಗಳು ಆಧ್ಯಾತ್ಮಿಕ ಅತ್ಯುನ್ನತ ಶಿಖರಗಾಮಿಯಾದದ್ದು ನಿಜಕ್ಕೂ ರೋಚಕವೇ ಸರಿ.

ಡಾ. ಸರ್ವಪಲ್ಲಿ ರಾಧಾಕೃಷ್ಣನ್ ರವರ "Discontent with the actual is the necessary precondition of every moral change and spiritual rebirth" ("ವಾಸ್ತವದೊಂದಿಗಿನ ಅಸಮಾಧಾನವು ಪ್ರತಿ ನೈತಿಕ ಬದಲಾವಣೆ ಮತ್ತು ಆಧ್ಯಾತ್ಮಿಕ ಪುನರ್ಜನ್ಮದ ಅಗತ್ಯಕ್ಕೆ ಪೂರ್ವಾಪೇಕ್ಷಿತವಾಗಿರುತ್ತದೆ") ವಾಣಿಯಂತೆ ಬಾಲಶ್ರೀ ಶಿವರಾತ್ರಿ ರಾಜೇಂದ್ರರು ವಾಸ್ತವಿಕತೆಯೊಂದಿಗೆ ರಾಜಿ ಮಾಡಿಕೊಳ್ಳದೆ, ಅಸಮಾಧಾನದ ಮನಸ್ಸಿನಿಂದ ಅವರ ನೈತಿಕ ಆಲೋಚನೆಗಳನ್ನು ಬದಲಾಯಿಸಿ, ತಮ್ಮ ಆಧ್ಯಾತ್ಮಿಕ ಜೀವನದ ಪುನರ್ಜನ್ಮ ಪಡೆದರು ಎಂದು ಅರ್ಥೈಸಬಹುದಾಗಿದೆ.

ಐತಿಹಾಸಿಕ ಸಂದರ್ಭಗಳು ಮತ್ತು ಪ್ರಕೃತಿಯ ಪ್ರತಿಕೂಲಗಳ ವಿರುದ್ಧ ಹೋರಾಡಬಹುದಾದ ಒಬ್ಬ ಸೃಜನಶೀಲ ಸ್ವತಂತ್ರ ವ್ಯಕ್ತಿಯನ್ನು ಶಿಕ್ಷಣದಿಂದಲ್ಲಷ್ಟೆ ತಯಾರು ಮಾಡಲು ಸಾಧ್ಯ ಎಂದು ಶಿಕ್ಷಣದ ಮಹತ್ವವನ್ನು ಅಕ್ಷರಸಃ ಅರ್ಥೈಸಿಕೊಂಡ ಪೂಜ್ಯರು ಜಾತಿ, ಧರ್ಮ, ಲಿಂಗ ಬೇಧವಿಲ್ಲದೆ ಹಾಗೂ ಗ್ರಾಮೀಣ, ಪಟ್ಟಣ ಎನ್ನುವ ಯಾವುದೇ ತಾರತಮ್ಯವಿಲ್ಲದೇ ಎಲ್ಲರೂ ಸಮಾನವಾದ ಶಿಕ್ಷಣವನ್ನು ಪಡೆಯಬೇಕು ಎನ್ನುವ ಏಕಭಾವನೆಯೊಂದಿಗೆ ತಮ್ಮ ಶಿಕ್ಷಣವನ್ನೇ ಮೊಟಕುಗೊಳಿಸಿ ನಗರ, ಪಟ್ಟಣ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಶಾಲಾ ಕಾಲೇಜುಗಳನ್ನು ಸ್ಥಾಪಿಸುವುದರ ಜೊತೆಗೆ ಬಡತನ ಹಿನ್ನೆಲೆಯುಳ್ಳ ವಿದ್ಯಾರ್ಥಿಗಳಿಗೋಸ್ಕರ ಉಚಿತ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಿ ಅವಿಸ್ಮರಣೀಯರಾಗಿ ನಮ್ಮೆಲ್ಲರ ಹೃದಯದಲ್ಲಿ ನೆಲೆಗೊಂಡಿರುವುದು ಅವರ ಸಾಧನೆಯ ವೈಖರಿಯ ಮಹತ್ವ ಎನಿಸುವುದು.

ಸುಮಾರು ಐವತ್ತಕ್ಕೂ ಹೆಚ್ಚು ವರ್ಷಗಳ ಕಾಲ ಸತತ ಭಗೀರಥ ಪ್ರಯತ್ನದಿಂದ ಸಂಸ್ಕೃತ ಪಾಠಶಾಲೆಯಿಂದ ಶುರು ಮಾಡಿದ ಪೂಜ್ಯಶ್ರೀಗಳ ಕಾಯಕವು ಒಂದರ ನಂತರ ಒಂದರಂತೆ ಗುರುಕುಲ, ವಿದ್ಯಾರ್ಥಿನಿಲಯ, ಮಹಿಳಾ ಶಾಲಾ–ಕಾಲೇಜುಗಳು, ಗ್ರಾಮೀಣ ಪ್ರದೇಶಗಳಲ್ಲಿ ಶಾಲಾ ಕಾಲೇಜುಗಳು, ತಾಲ್ಲೂಕು ಕೇಂದ್ರಗಳಲ್ಲಿ ವಿದ್ಯಾರ್ಥಿನಿಲಯಗಳು ಹಾಗೂ ಪದವಿ ಮಟ್ಟದವರೆಗೂ ವಿದ್ಯಾಸಂಸ್ಥೆಗಳನ್ನು, ಮತ್ತು ತದನಂತರ ಇಂಜಿನಿಯರಿಂಗ್ ಕಾಲೇಜನ್ನು ಸ್ಥಾಪಿಸಲು ಕಾರಣವಾಯಿತು. ಆರೋಗ್ಯದ ದೃಷ್ಟಿಯಿಂದ ಶುರುವಾದ ಆರೋಗ್ಯಧಾಮ, ನಂತರದ ದಿನಗಳಲ್ಲಿ ಮೆಡಿಕಲ್ ಕಾಲೇಜಾಗಿ ತನ್ನದೇ ಆದ ಒಂದು ದೊಡ್ಡ ಆಸ್ಪತ್ರೆ ಹೊಂದಿ ಸೇವೆಯಲ್ಲಿ ತೊಡಗಿಸಿಕೊಳ್ಳುವಂತಾಯಿತು. ಅಲ್ಲದೆ ಪ್ರಸಾರಂಗ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಹೀಗೆ ಇನ್ನೂ ಹಲವು ಹೆಚ್ಚು ಸಂಸ್ಥೆಗಳನ್ನು ಸ್ಥಾಪಿಸಿದ ಅವರು ಮಾನವೀಯ ಮೌಲ್ಯಗಳನ್ನು ಬಿತ್ತುವ ವಚನ ಸಾಹಿತ್ಯಾಸಕ್ತಿ





ಉಳ್ಳವರಾಗಿದ್ದರು ಎಂಬುದನ್ನು ಎತ್ತಿ ತೋರಿಸುತ್ತದೆ. ಎಲ್ಲಾ ಸಂಸ್ಥೆಗಳನ್ನು ವ್ಯವಹರಿಸಿ ನಿರ್ದೇಶಿಸಲು ಒಂದು ವಿದ್ಯಾಪೀಠವನ್ನು ಸ್ಥಾಪಿಸಿ ಆಡಳಿತಾತ್ಮಕವಾಗಿ ಮುನ್ನಡೆಸಲು ತೀರ್ಮಾನಿಸಿದ್ದು, ಅವರ ವ್ಯವಹಾರಿಕ ಕೌಶ್ಯಲ್ಯವನ್ನು ಬಿಂಬಿಸುತ್ತದೆ.

ವಿದ್ಯಾರ್ಥಿಗಳಿಗೆ ಅನ್ನದಾಸೋಹ, ವಸತಿ ದಾಸೋಹ, ಅಕ್ಷರ ದಾಸೋಹ ಕಲ್ಪಿಸುವುದರ ಜೊತೆಗೆ ಪ್ರೀತಿ ವಿಶ್ವಾಸದ ದಾಸೋಹ ಉಣಬಡಿಸಿದುದು ಪೂಜ್ಯಶ್ರೀಗಳ ಒಂದು ವಿಶಾಲ ಮಾತೃ ಹೃದಯದ ಸ್ವರೂಪವನ್ನು ಪ್ರತಿನಿಧಿಸುತ್ತದೆ. ಡಾ. ಸರ್ವಪಲ್ಲಿ ರಾಧಾಕೃಷ್ಣನ್‌ರವರ ಸಂದೇಶದಂತೆ ಪೂಜ್ಯ ರಾಜೇಂದ್ರ ಶ್ರೀಗಳು ವಿದ್ಯಾರ್ಥಿಗಳಲ್ಲಿ ಜ್ಞಾನವ ನೀಡಿ ಶಕ್ತಿಯನ್ನು ತುಂಬುವುದರ ಜೊತೆಗೆ ಅವರಿಗೆ ಪ್ರೀತಿಯನ್ನೂ ಕೊಟ್ಟು ಸಂಪೂರ್ಣ ರನ್ನಾಗಿ ಮಾಡಿದರು ಎಂದರೆ ಅತಿಶಯೋಕ್ತಿಯಲ್ಲ. ಎಳೆವಯಸ್ಸಿನ ವಿದ್ಯಾರ್ಥಿಯೊಬ್ಬನು ಉದ್ದಿನ ಹಪ್ಪಳವನ್ನು ಆಸೆ ಪಡುತ್ತಾನೆ ಎಂಬ ಕಾರಣಕ್ಕೆ  ಭಕ್ತರ ಮನೆಯಲ್ಲಿ ತಮಗೆ ಪ್ರಸಾದದ ಜೊತೆ ಬಡಿಸಿದ ಉದ್ದಿನ ಹಪ್ಪಳವನ್ನು ಅಮ್ಮನ ರೀತಿಯಲ್ಲಿ ತಂದು ವಿದ್ಯಾರ್ಥಿಗೆ ಕೊಟ್ಟದ್ದು, ಬಳ್ಳಾರಿಯಿಂದ ಬಂದು ಆಶ್ರಯ ಪಡೆದ ಮುಸಲ್ಮಾನರ ಹುಡುಗ ತಾನು ದಿನಂಪ್ರತಿ ಅಲ್ಲಿ ಬಳ್ಳಾರಿಯಲ್ಲಿ ಅಲ್ಲಾ ದೇವರು ಇರುವನೆಂದು ಪ್ರಾರ್ಥಿಸುತ್ತಿದ್ದೆ ಆದರೆ ನೋಡಿರಲಿಲ್ಲ, ಈಗ ತಿಳಿಯಿತು ಅಲ್ಲಾ ಅಲ್ಲಿಲ್ಲ ಆದರೆ ಇಲ್ಲಿ ಸುತ್ತೂರು ಶ್ರೀಗಳ ರೂಪದಲ್ಲಿ ನನ್ನನ್ನು ಕಾಪಾಡುತ್ತಿದ್ದಾನೆ ಎಂದು ಉದ್ಧರಿಸಿದುದು, ತ.ಸು. ಶಾಮರಾವ್‌ರವರು ಪೂಜ್ಯಶ್ರೀಗಳು ನೀಡಿದ ನೆರವನ್ನು ನೆನೆದು ಶಿವರಾತ್ರಿ ರಾಜೇಂದ್ರ ಸ್ವಾಮೀಜಿಯವರು ಒಬ್ಬ ಮನುಷ್ಯರಲ್ಲ ಒಂದು ಶಕ್ತಿ, ಹಾಗೂ ದೈವ ಸಂಭೂತರು ಎಂದು ಹೆಮ್ಮೆಯಿಂದ ಸಾರಿ ಸಾರಿ ಹೇಳಿದುದಲ್ಲದೇ ಇನ್ನು ಮುಂದೆ ಸಂಕಟ ಬಂದಾಗ ವೆಂಕಟರಮಣ ಎಂದು ಯಾರನ್ನು ಕೂಗಲಿ ಎಂದು ದುಃಖಿಸಿದ್ದು, ಹೀಗೆ ಹಲವು ಹತ್ತು ಪ್ರಸಂಗಗಳು ಪೂಜ್ಯಶ್ರೀಗಳ ಸಾಮಾಜಿಕ ಕಳಕಳಿಗೆ ಹಾಗೂ ಅವರ ಹೃದಯ ಔದಾರ್ಯಕ್ಕೆ ನಿದರ್ಶನಗಳಾಗಿ ಉಳಿದಿವೆ.

ತಮ್ಮ ಚಿನ್ನದ ರುದ್ರಾಕ್ಷಿ ಸರ ಮಾರಿದ್ದು, ಚಿನ್ನದ ಕರಡಿಗೆ ಗಿರವಿ ಇಟ್ಟದ್ದು, ಎಷ್ಟೋ ರಾತ್ರಿ ಸ್ನಾನ ಪ್ರಸಾದವಿಲ್ಲದೆ ಮಲಗಿದ್ದು, ಬೈಸಿಕಲ್ ಬಾಡಿಗೆ ಕೊಡಲು ಕಾಸಿಲ್ಲದೆ ಆ ಬೈಸಿಕಲ್ಲನ್ನು ಉಪಯೋಗವಿಲ್ಲದಿದ್ದರೂ ಹಾಗೇ ಇಟ್ಟುಕೊಂಡಿದ್ದು ಒಂದು ವಾರದ ನಂತರ ಯಾರೋ ಭಕ್ತರ ಮನೆಯಲ್ಲಿ ಕಾಣಿಕೆಯಾಗಿ ಕೊಟ್ಟ ದಕ್ಷಿಣೆ ಹಣದಿಂದ ಸೈಕಲ್ ಬಾಡಿಗೆ ಕಟ್ಟಿದ್ದು, ಹಳ್ಳಿ ಹಳ್ಳಿಗೆ ಹೋಗಿ ದವಸಧಾನ್ಯ ಭಿಕ್ಷೆ ಕೈಗೊಂಡಿದ್ದು, ಹೀಗೆ ಹಲವು ಸಂದರ್ಭಗಳು ಪೂಜ್ಯಶ್ರೀಗಳು ಮಾಡಲೇಬೇಕು ಎಂದು ನಿರ್ಧರಿಸಿದ್ದನ್ನು ಎಷ್ಟೇ ಕಷ್ಟವಾದರೂ ಸರಿ ಮಾಡಿಯೇ ತೀರಿಸುತ್ತಿದ್ದರು ಎಂಬುದಕ್ಕೆ ಸಾಕ್ಷಿಗಳಾಗಿವೆ ಎಂದರೆ ತಪ್ಪೇನಿಲ್ಲ.

ಸಂಸ್ಥೆಗಳನ್ನು ಪ್ರಾರಂಭಿಸುವ ಸಮಯದಲ್ಲಿ ಅವುಗಳು ಭವಿಷ್ಯದಲ್ಲಿ ಹೇಗಿರಬೇಕು ಎನ್ನುವ ಮುಂದಾಲೋಚನೆ ಪೂಜ್ಯಶ್ರೀ ರಾಜೇಂದ್ರ ಮಹಾಸ್ವಾಮಿಗಳ ದಾರ್ಶನಿಕತ್ವವನ್ನು





ತೋರಿಸಿದರೆ, ಅವುಗಳನ್ನು ಸ್ಥಾಪಿಸುವಾಗ ಎಲ್ಲರೊಡಗೂಡಿ ತೆಗೆದುಕೊಳ್ಳುತ್ತಿದ್ದ ತೀರ್ಮಾನ ಅವರು ಪ್ರಜಾಸತ್ತಾತ್ಮಕ ನಾಯಕತ್ವ ಹಾಗೂ ಪ್ರಾರಂಭಿಸುವಾಗ ತಾವೇ ಸ್ವತಃ ನಿಂತು ಮೇಲ್ವಿಚಾರಣೆ ಮಾಡುತ್ತಿದ್ದುದು ಅವರು ಸೇವಕ ನಾಯಕತ್ವ ಗುಣ ಸಂಪನ್ನರು ಎಂಬುದನ್ನು ಸಾಬೀತುಪಡಿಸುತ್ತವೆ. ಪೂಜ್ಯಶ್ರೀಗಳ ಈ ಒಂದು ಧೀಮಂತ ಸಾಧನೆಯ ಪ್ರವಾಸದುದ್ದಕ್ಕೂ ಕೆಲವರು ಸಹಕರಿಸಿದರೆ, ಹಲವರು ಸ್ವಾಮೀಜಿಗೆ ಮನಃಶಾಂತಿ ಇಲ್ಲದವರು, ಜಗತ್ತಿನ ಜನರೆಲ್ಲ ನನ್ನವರೇ ಎನ್ನುವ ಭ್ರಮೆಯುಳ್ಳವರು, ಹಾಗೆ ಇವರಿಗೆ ಯಾಕೆ ಬೇಕು ಇದೆಲ್ಲಾ ಎಂದು ಭಾವಿಸುವುದಲ್ಲದೆ, ಅವರಿಗೆ ನೇರವಾಗಿ ಇಲ್ಲವೇ ಪತ್ರ ಮುಖೇನ ಬರೆದು ತಿಳಿಸಿದ್ದು ಉಂಟು. ಅದಕ್ಕೆ ಪೂಜ್ಯಶ್ರೀಗಳ ಶಾಂತಿಮಂತ್ರವೇ ಉತ್ತರವಾಗುತ್ತಿದ್ದುದ್ದನ್ನು ಗಮನಿಸಿದರೆ ಬಹುಶಃ ಅವರು ಒಳಗೊಳಗೆ ಡಿವಿಜಿಯವರ ಮಂಕುತಿಮ್ಮನ ಕಗ್ಗದ ಈ ಸಾಲುಗಳು ಹೇಳುವ ಹಾಗೆ

ಗಿಡದಿ ನಗುತಿರುವ ಹೂ ಪ್ರಕೃತಿ ಸಖನಿಗೆ ಚಂದ।
ಮಡದಿ ಮುಡಿದಿರುವ ಹೂ ಯುವಕಂಗೆ ಚಂದ॥
ಗುಡಿಯೊಳಗೆ ಕೊಡುವ ಹೂ ದೈವಭಕ್ತಂಗೆ ಚಂದ।
ಬಿಡಿಗಾಸು ಹೂವಳಿಗೆ– ಮಂಕುತಿಮ್ಮ॥

–ಡಿ.ವಿ.ಜಿ

ಅದು ಅವರವರ ಭಾವಕ್ಕೆ ತಕ್ಕದ್ದು ಎಂದು ಭಾವಿಸಿ ಉದಾಸೀನಿಸಿ ಯಾವಾಗಲೂ ಹಸನ್ಮುಖಿಯಾಗಿ ಶಾಂತಚಿತ್ತದಿಂದ ಇರುತ್ತಿದ್ದರು ಎನಿಸುತ್ತದೆ. ಇದನ್ನು ಜಗತ್ತು ಕಂಡಂತಹ ಶ್ರೇಷ್ಠ ಆಂಗ್ಲಭಾಷಾ ಸಾಹಿತಿ ಶೇಕ್ಸ್‌ಪಿಯರ್ ಹೀಗೆ ಬಣ್ಣಿಸುತ್ತಾನೆ, "There is nothing either good or bad, but thinking makes it so" (ಒಳ್ಳೇದು ಕೆಟ್ಟದ್ದು ಏನು ಇಲ್ಲ ಆಲೋಚನೆ ಹಾಗೇ ಮಾಡಿಸುತ್ತದೆ).

ಯಾರೇ ಆಗಲಿ, ಎಷ್ಟೇ ಚಿಕ್ಕವರಾಗಿರಲಿ ಅಥವಾ ದೊಡ್ಡವರಾಗಿರಲಿ ಅವರಲ್ಲಿನ ಒಳ್ಳೆತನದ ಗುಣಗಳನ್ನಷ್ಟೇ ಗಮನಿಸಿ ಪ್ರತ್ಯೇಕಿಸಿ ಅತ್ಯುತ್ತಮ ಪ್ರಶಂಸೆಯ ಮಾತುಗಳನ್ನು ಅವರ ಬಗ್ಗೆ ಹೆಮ್ಮೆಯಿಂದ ವ್ಯಕ್ತಪಡಿಸಿ ಅವರಿಗೆ ಒಂದು ರೀತಿಯ ಉತ್ತೇಜನ ನೀಡುತ್ತಿದ್ದ ಬಗೆಯಂತೂ, ಪ್ರತಿಯೊಬ್ಬರು ಸ್ವಾಮೀಜಿಯವರ ಭೇಟಿಯ ನಂತರ ಶ್ರೀಗಳಿಗೆ ಅವರ ಕಂಡರೆ ಅತೀ ಅಕ್ಕರೆ ಎನ್ನುವ ಒಂದು ಭಾವನೆ ಮೂಡುವಂತೆ ಮಾಡುತ್ತಿತ್ತು ಎಂಬುದು ಹಲವರ ಮಾತಾಗಿದೆ. ಅವರ ಆ ಪ್ರಶಂಸನೀಯ ಮಾತುಗಳು ಅವರನ್ನು ಭೇಟಿಯಾಗಿ ಬಂದವರಿಗೆ ನಾವು ಮತ್ತೊಬ್ಬರ ಜೊತೆ ಹೇಗೆ ನಡೆದುಕೊಳ್ಳಬೇಕು ಎಂಬುದನ್ನು ತಿಳಿಹೇಳಿದಂತಿರುತ್ತಿತ್ತು. ಟಿಬೇಟಿಯನ್ ದಲೈಲಾಮರವರು ಹೇಳಿದ "The Roots of all goodness lie in the soil of appreciation for goodness" ಮಾತಿನಂತೆ, ಇಂತಹ ಶ್ಲಾಘನೀಯ ಪದಗಳು ನಮ್ಮ ನೈತಿಕ ಚಿಂತನೆಯನ್ನು ಬದಲಾಯಿಸಿ ಅದರ





ಮೂಲಕ ಏಕರೂಪ ಜೀವನವನ್ನು ಕಟ್ಟಿಕೊಳ್ಳುವ ದಿಕ್ಕಿನಲ್ಲಿ ಸಾಗಲು ಸಹಕಾರಿ ಎಂದರೆ ತಪ್ಪಾಗಲಾರದು. ಎಲ್ಲಾ ರೀತಿಯ ಒಳ್ಳೆಯತನವು ಅಂದರೆ ಸ್ವಭಾವ, ಸಮಗ್ರತೆ, ಪ್ರಾಮಾಣಿಕತೆ, ದಯೆ, ಔದಾರ್ಯ, ನೈತಿಕಧೈರ್ಯ ಮುಂತಾದವುಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವಂತೆ ಪ್ರೇರೇಪಿಸುತ್ತಿದ್ದವು ಎಂಬುದು ಹಲವರ ಅಭಿಪ್ರಾಯ.

ಇವನಾರವ ಇವನಾರವ ಎನ್ನದೆ, ಇವನಮ್ಮವ ಇವನಮ್ಮವ ಎಂದೆನಿಸಯ್ಯ ಎಂಬ ಬಸವಣ್ಣನವರ ವಾಣಿಯಂತೆ ಧರ್ಮ, ಜಾತಿ ಹಾಗೂ ಲಿಂಗ ಬೇಧವಿಲ್ಲದೆ ಎಲ್ಲಾ ನಿರ್ಗತಿಕರಿಗೆ, ದುರ್ಬಲರಿಗೆ, ಬಡವರಿಗೆ ಹಾಗೂ ಅನಕ್ಷರಸ್ಥರಿಗೆ ಆಸರೆಯಾಗಿ ಸೇವೆಯಲ್ಲಿ ತೊಡಗಿಸಿಕೊಂಡು, ಮಹಾತ್ಮ ಗಾಂಧಿಜಿಯವರ ವಾಣಿ **"ಇನ್ನೊಬ್ಬರ ಸೇವೆಯಲ್ಲಿ ನಿನ್ನ ನೀ ಮರೆಯುವುದೇ ನಿನ್ನ ನೀ ಕಂಡುಕೊಳ್ಳುವ ಅತ್ಯುತ್ತಮ ಮಾರ್ಗ"** ಎಂಬಂತೆ ತಮ್ಮನ್ನೇ ಮರೆಯುತ್ತಿದ್ದರು ಎಂದರೆ ಅತಿಶಯೋಕ್ತಿಯಲ್ಲ. ತಮ್ಮ ಜೀವನ ಪೂರ್ತಿ ವಿದ್ಯಾರ್ಥಿಗಳನ್ನು ಕಂಡರೆ ಅದರಲ್ಲೂ ಬಡತನದ ಪ್ರತಿಭಾನ್ವಿತ ವಿದ್ಯಾರ್ಥಿಗಳೇನಾದರೂ ಅವರ ಬಳಿ ಹೋದರೆ ಆವರನ್ನು ಅತಿಥಿ ಎನ್ನುವ ಭಾವದಿಂದ, ಪ್ರೀತಿಯಿಂದ ಮಾತನಾಡಿಸುತ್ತಿದ್ದುದನ್ನು ನೆನಪಿಸಿಕೊಂಡರೆ ಶ್ರೀ ಕೆ. ಸಿ. ಶಿವಪ್ಪನವರ ಕೆಳಕಂಡ ಸಾಲುಗಳು ನೆನಪಿಗೆ ಬರುತ್ತವೆ.

ಉಪಚರಿಸು ಬಂದವರ ಕಾಣು ಅಕ್ಕರೆಯಿಂದ
ನಗುವಿರಲಿ ಮೊಗದಲಿ ಮಾತುಕತೆಯಲಿ
ಮಮತೆಯಿಂದುಪಚಾರ ಅವಕಾಶವೆಂದರೆಯೆ
ಅತಿಥಿ ದೇವನ ರೂಪ – ಮುದ್ದುರಾಮ.

—ಕೆ. ಸಿ. ಶಿವಪ್ಪ.

ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ ಬೆಳೆಸುವಲ್ಲಿ ಪೂಜ್ಯಶ್ರೀಗಳು ಸಂಪೂರ್ಣ ತೊಡಗಿಸಿಕೊಂಡಿದ್ದು ಅಲ್ಲದೆ, ಯಾರಾದರೂ ಗ್ರಾಮೀಣ ಪ್ರದೇಶದ ಸಹೋದರ ಸಹೋದರಿಯರು ಕ್ಷುಲಕ ವಿಷಯಕ್ಕೋ, ಇನ್ಯಾವುದೋ ಕಾರಣಕ್ಕೋ ಜಗಳವಾಡಿ ಅಸಮಾಧಾನಗೊಂಡಿದ್ದು ಪೂಜ್ಯರ ಗಮನಕ್ಕೆ ಬಂದಲ್ಲಿ, ಅವರುಗಳನ್ನು ಅವರ ಗ್ರಾಮದ ಹಿರಿಯರ ಜೊತೆ ಕರೆಯಿಸಿ ಎಲ್ಲರಿಗೂ ನ್ಯಾಯ ಸಮ್ಮತವಾಗುವ ಹಾಗೆ ಅವರ ಸಮಸ್ಯೆಗೆ ಸ್ಪಂದಿಸಿ, ನಿವಾರಿಸಿ ಅವರಿಗೆ ಸ್ನೇಹ ಸಂಬಂಧದ ಬಗ್ಗೆ ತಿಳಿಹೇಳುತ್ತಿದ್ದರು ಎಂಬುದು ಶ್ರೀಗಳಲ್ಲಿ ಇದ್ದ ಕೌಟುಂಬಿಕ ಕಳಕಳಿಯ ನಿದರ್ಶನವೆನ್ನಬಹುದು. ಪೂಜ್ಯಶ್ರೀ ಶಿವರಾತ್ರಿ ರಾಜೇಂದ್ರಶ್ರೀಗಳ ಈ ಜವಾಬ್ದಾರಿಯುತ ನಡೆಯನ್ನು ಗಮನಿಸಿದರೆ ಅವರು ಮಾನವ ಕುಲದ ಸಂಬಂಧಗಳಿಗೆ ಹೆಚ್ಚು ಗೌರವ ಕೊಡುತ್ತಿದ್ದರು ಎನಿಸುತ್ತದೆ. ಹಾಗೆ ಕೆಳಕಂಡ ಆಧುನಿಕ ವಚನದಂತೆ ಜೀವನ ಎನ್ನುತ್ತಿದ್ದರು ಎಂದೆನಿಸುತ್ತದೆ.

ಎಲ್ಲರೂ ಜನಿಸುವಾಗ ಒಬ್ಬರೆ ! ಸಾಯುವಾಗಲೂ,
ನಡುವಿನಲಿರಬೇಕು ಜೊತೆ ಜೊತೆಯಲಿ





ಸಾಮರಸ್ಯದ ಉತ್ಸಾಹದಲಿ, ಪ್ರೀತಿಯ ಬೆಸುಗೆಯಲಿ
ಇದುವೆ ಜೀವನ ಸಮೀಕರಣ । ಗುರುಮಲ್ಲ.
—ಡಿ. ಎಸ್. ಗುರು.

ನನಗನ್ನಿಸುವ ಹಾಗೆ ಮಹಾಭಾರತದಲ್ಲಿ ಒಂದು ಪ್ರಸಂಗವಿದೆ. ಈ ಜಗತ್ತಿನಲ್ಲಿ ಯಾರು ಅತೀ ಶ್ರೇಷ್ಠರು ಎಂಬ ಪ್ರಶ್ನೆ ಬಂದಾಗ ಮೊದಲು ಜೀವಕೋಟಿಗಳು ಶ್ರೇಷ್ಠರು ಎಂದೂ, ಆ ಜೀವಕೋಟಿಗಳಲ್ಲಿ ಬುದ್ಧಿಮತ್ತೆಯುಳ್ಳ ಮಾನವನು ಉತ್ತಮನು ಹಾಗೂ ಆ ಮಾನವರಲ್ಲಿ ಶಿಕ್ಷಣ ಪಡೆದು ಸಂಸ್ಕಾರವುಳ್ಳ ದ್ವಿಜರು ಅತ್ಯುತ್ತಮರು, ಆ ದ್ವಿಜರಲ್ಲಿ ವಿಚಾರವಂತರಾಗಿ, ವಿಚಾರಗಳನ್ನು ಪ್ರವಚನದ ಮೂಲಕ ಮತ್ತೊಬ್ಬರಿಗೆ ತಿಳಿ ಹೇಳುವವರು ಇನ್ನೂ ಉತ್ತಮರು ಎಂದು. ಆ ಉತ್ತಮ ವಿಚಾರವಂತ ಪ್ರವಚನಕಾರರಲ್ಲಿ ಅದನ್ನು ಆಚರಣೆಗೆ ತರುವಂತಹ ಆಚಾರವಂತರು ಅತೀ ಶ್ರೇಷ್ಠರು ಎಂಬ ಬೋಧನೆ. ಆ ಅತೀ ಶ್ರೇಷ್ಠರು ಬಹುಶಃ ಕೋಟಿಗೊಬ್ಬ ಎಂದು ಹೇಳುವರು. ಬಸವೇಶ್ವರರ ಕಾಯಕ ಮತ್ತು ದಾಸೋಹ ತತ್ವಗಳನ್ನು ಅಕ್ಷರಸಃ ನಿಜರೂಪದ ಆಚರಣೆಗೆ ತಂದಂತಹ ನಮ್ಮ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಅಂತಹ ಕೋಟಿಗೊಬ್ಬ ಅತೀ ಶ್ರೇಷ್ಠರು ಎಂಬದು ನನ್ನ ಭಾವನೆ.

ಶ್ರೀಗಳು ಎಂದೂ ತಾವು ತಮಗಾಗಿ ಬದುಕಬೇಕು, ತಮ್ಮದು ಯಶಸ್ವಿ ಬದುಕಾಗಬೇಕು ಎಂದು ಬಯಸಿದವರಲ್ಲ. ಸಮಾಜದ ಪ್ರತಿಯೊಬ್ಬರು ಶಿಕ್ಷಣ ಪಡೆಯಬೇಕು, ಸಂಸ್ಕಾರವುಳ್ಳವರಾಗಿ ಸುಸಂಸ್ಕೃತರಾಗಿ ಸಾಧಕರಾಗಿ ಯಶಸ್ಸನ್ನು ಪಡೆದು ತೃಪ್ತಿಕರ ಜೀವನ ನಡೆಸಬೇಕು ಎಂಬುದು ಅವರ ನಿಲುವಾಗಿತ್ತು. ಅಲ್ಲಮರ ವಚನ

ಸತ್ತುಹುಟ್ಟಿ ಕೆಟ್ಟವರೆಲ್ಲ ದೇವಲೋಕಕ್ಕೆ ಹೋದರೆಂಬ
ಬಾಲ ಬಾಷೆಯ ಕೇಳಲಾಗದು
ಸಾಯುವ ಮುನ್ನ ಸ್ವಯವನರಿದಡೆ
ದೇವನೊಲಿವ ನೋಡಾ ಗುಹೇಶ್ವರ.
—ಅಲ್ಲಮಪ್ರಭು

ಹೇಳುವಂತೆ ಪೂಜ್ಯಶ್ರೀಗಳು ಆತ್ಮಜ್ಞಾನಿಯಾಗಿ ಗುಹೇಶ್ವರ ಲಿಂಗವನ್ನು ಒಲಿಸಿಕೊಳ್ಳುವುದಷ್ಟೇ ಅಲ್ಲದೇ ತಾವೇ ಅವತಾರ ಪುರುಷರಾದರು ಎಂಬುದು ನನ್ನ ಭಾವನೆ. ಶ್ರೀಗಳು ಹುಟ್ಟುಹಾಕಿದ ಸಂಸ್ಥೆ ಅವರ ಕನಸಿನಂತೆಯೇ ಈಗಿನ ಜಗದ್ಗುರುಗಳ ದಾರ್ಶನಿಕ ಹಾಗೂ ನಾಯಕತ್ವದ ಸುಗುಣಗಳಿಂದ ಭಾರತ ರಾಷ್ಟ್ರದಲ್ಲಷ್ಟೇ ಅಲ್ಲದೇ ಹೊರ ರಾಷ್ಟ್ರಗಳಲ್ಲೂ ವ್ಯಾಪಿಸಿ ಶಿಕ್ಷಣ ಕ್ಷೇತ್ರದಲ್ಲಿ ತಮ್ಮದೇ ಛಾಪು ಮೂಡಿಸಿ ಜಗದ್ಗುರು ಪೂಜ್ಯ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಶ್ರೀಗಳ ಹೆಸರನ್ನು ವಿಶ್ವವ್ಯಾಪಿಯಾಗಿಸಿದೆ.





ಪಸರಿಸುವ ಬೆಂಕಿ, ಬೆಳೆಯುತ್ತಿರುವ ವನ।
ಅಂತ್ಯ ಕಾಣಲೇಬೇಕು ಕಡಲಂಚಿನಲಿ॥
ಗಾಳಿಗೆಲ್ಲಯದು ಅಂತ್ಯ, ಅದು ವಿಶ್ವವ್ಯಾಪಿ।
ನಿನ್ನೆಸರೇ ವಿಶ್ವ । ಗುರುಮಲ್ಲ॥

– ಡಿ. ಎಸ್. ಗುರು.

ಹೀಗೆ ಕಾಯಕ ಯೋಗಿ, ತಪಸ್ವಿ, ದಾರ್ಶನಿಕ, ಬಡವರ ಉದ್ಧಾರಕ, ತ್ರಿವಿಧ ದಾಸೋಹಿಯಾದ ಪೂಜ್ಯ ರಾಜೇಂದ್ರ ಶ್ರೀಗಳು ಜೀವನ ಪೂರ್ತಿ ಉತ್ಸಾಹಿಗಳಾಗಿದ್ದು, ೧೯೮೬ ರ ಡಿಸೆಂಬರ್ ಮಾಹೆಯ ೦೬ ರಂದು ದೇಹ ತ್ಯಜಿಸಿ ನಿಸರ್ಗದಲ್ಲಿ ಲೀನವಾದರೂ ನಮ್ಮೊಡನೆ ಇನ್ನು ಜೀವಂತವಾಗಿ ನಮ್ಮ ಹೃದಯದಲ್ಲಿ ಉತ್ಸವ ಮೂರ್ತಿಯಾಗಿ ಸದಾ ನೆಲೆಗೊಂಡಿರುವುದನ್ನು ಆಳವಾಗಿ ಗಮನಿಸಿದರೆ ಅವರೊಬ್ಬ ನಮ್ಮೊಡನಿದ್ದ ದೈವ ಎಂಬ ಭಕ್ತಿಪೂರ್ವ ಭಾವನೆ ಉಮ್ಮಳಿಸುತ್ತದೆ.

ಕರ್ಪೂರ ಬೆಳಗಿತು, ಹೊತ್ತಿ ಉಜ್ವಲವಾಗಿ ಉರಿಯಿತು ।
ನೋವಸಹಿಸಿ ಸುಗಂಧವ ಹರಡಿ, ಮತ್ತೊಬ್ಬರಿಗೆ ಬೆಳಕಾಗಿಯಿತು।।
ಕೊನೆಗೆ ಕರಗಿ ನಿಸರ್ಗದಲಿ ಲೀನವಾಯಿತು ।
ಅದುವೆ ಆಧ್ಯಾತ್ಮ ಜೀವನ । ಗುರುಮಲ್ಲ॥

–ಡಿ. ಎಸ್. ಗುರು.

**ಅವಲೋಕಿತ ಗ್ರಂಥಗಳು:**


- ತ.ಸು. ಶಾಮರಾವ್, (ಆಗಸ್ಟ್ 2024), ನಿತ್ಯಸ್ಮರಣೆ, ಮಹಾಮನೆ ಕನ್ನಡ ಮಾಸಿಕ ಪತ್ರಿಕೆ, 28,(8) ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಮೈಸೂರು.
- ದೇಜಗೌ, (ಆಗಸ್ಟ್ 2024), ಮಾತೃಹೃದಯದ ದಿವ್ಯಚೇತನ, ಮಹಾಮನೆ ಕನ್ನಡ ಮಾಸಿಕ ಪತ್ರಿಕೆ, 28(8) ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಮೈಸೂರು
- ನಂದೀಶ ಹಂಚೆ. ಎಂ.ಎಸ್., (ಜೂನ್ 2024), ಜಾತಿ ವಿಜಾತಿ ಎನ್ನದ ಶ್ರೀಗಳು, ಪ್ರಸಾದ ಮಾಸಿಕ ಪತ್ರಿಕೆ 39(6), ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು.
- ನಗರ್ಲೆ ಶಿವಕುಮಾರ್, (ಸೆಪ್ಟೆಂಬರ್ 2024), ಯುಗಪ್ರಜ್ಞರು ಪೂಜ್ಯ ರಾಜೇಂದ್ರ ಶ್ರೀಗಳು, ಮಹಾಮನೆ ಕನ್ನಡ ಮಾಸಿಕ ಪತ್ರಿಕೆ, 28(9), ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಮೈಸೂರು.
- ಪ್ರಸಾದ ಮಾಸಿಕ ವಿಶೇಷ ಸಂಚಿಕೆ, ಆಗಸ್ಟ್ 2024, 39(8), ಜೆಎಸ್‌ಎಸ್ ಮಾಹಾವಿದ್ಯಾಪೀಠ, ಮೈಸೂರು.
- ಡಾ. ಹೆಚ್.ಎಸ್. ತಿಪ್ಪೇರುದ್ರಸ್ವಾಮಿ, ಕಾಯಕ ತಪಸ್ವಿ: ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳು, ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ: ಕುಸುಮ 73
- Padma Ramachandra Sharma, An Ascetic of yeoman service, JSS Mahavidyapeeta, Mysore( Original: Kayaka tapaswi – kannada, Dr. H. Tipperudraswamy).





# ವಾರ್ತಾವಿಹಾರ

**ಕುಮಾರಸ್ವಾಮಿ ವಿರಕ್ತಮಠ**

**ಬುದ್ಧ, ಬಸವ, ಅಂಬೇಡ್ಕರ್ ಸಮಾಜಕ್ಕೆ ದಾರಿದೀಪವಾದವರು**

ಬುದ್ಧ, ಬಸವ, ಅಂಬೇಡ್ಕರ್ ಸಮಾಜಕ್ಕೆ ದಾರಿದೀಪವಾದವರು ಎಂದು ಪರಮಪೂಜ್ಯ ಜಗದ್ಗುರುಗಳವರು ಆಗಸ್ಟ್ 1ರಂದು ಮಳವಳ್ಳಿಯಲ್ಲಿ ಬುದ್ಧ, ಬಸವ ಮತ್ತು ಅಂಬೇಡ್ಕರ್‌ರವರುಗಳ ಪ್ರತಿಮೆಗಳ ಅನಾವರಣದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಮಹಿಳೆಯರಿಗೆ ಸಿಗದ ಅವಕಾಶ ತನಗೂ ಬೇಡ ಎಂದು ನಿರಾಕರಿಸಿ ಸ್ತ್ರೀಸಮಾನತೆ ಹಾಗೂ ಸ್ವಾತಂತ್ರ್ಯಕ್ಕೆ ಕ್ರಾಂತಿಯ ಮುನ್ನುಡಿ ಬರೆದವರು ಬಸವಣ್ಣನವರು. ಜ್ಞಾನದ ಪ್ರತಿರೂಪವಾದ ಬುದ್ಧ ಈ ಸಮಾಜಕ್ಕೆ ಬೆಳಕಾದವರು. ಸಮಾಜದಲ್ಲಿ ಬೇರೂರಿದ್ದ ಶೋಷಣೆ, ಅವಮಾನಗಳನ್ನೆಲ್ಲಾ ಮೆಟ್ಟಿನಿಂತು ಇಡೀ ವಿಶ್ವವೇ ನಿಬ್ಬೆರಗಾಗುವಂತಹ ಸಾಧನೆ ಮಾಡಿ ಜ್ಞಾನದ ಬೆಳಕು ನೀಡಿದವರು ಡಾ. ಬಿ.ಆರ್. ಅಂಬೇಡ್ಕರ್. ಅವರು ಸಂವಿಧಾನದ ಮೂಲಕ ಎಲ್ಲಾ ವರ್ಗದವರಿಗೆ ಸ್ವಾಭಿಮಾನದ ಸಮಾನ ಅವಕಾಶಗಳನ್ನು ಕಲ್ಪಿಸಿದ ಮಹಾನ್ ಪುರುಷ ಎಂದು ಹೇಳಿದರು.

ಶ್ರೀ ಆದಿಚುಂಚನಗಿರಿ ಮಠದ ಜಗದ್ಗುರು ಡಾ. ಶ್ರೀ ನಿರ್ಮಲಾನಂದನಾಥ ಮಹಾಸ್ವಾಮಿಗಳು ಕಡು ಬಡತನದಿಂದ ಬಂದು ಇಡೀ ವಿಶ್ವಕ್ಕೆ ಬೆಳಕಾದ ಡಾ. ಬಿ.ಆರ್. ಅಂಬೇಡ್ಕರ್, ಮಧ್ಯಮ ವರ್ಗದಿಂದ ಬಂದು ಇಡೀ ಸಮಾಜಕ್ಕೆ ಬದಲಾವಣೆಯ ಕ್ರಾಂತಿ ಮೊಳಗಿಸಿದ ಬಸವಣ್ಣನವರು, ಸಿರಿವಂತಿಕೆಯನ್ನು ತೊರೆದು ಸತ್ಯದ ಅನ್ವೇಷಣೆಯಲ್ಲಿ ತೊಡಗಿ ಇಡೀ ವಿಶ್ವಕ್ಕೆ ಜ್ಞಾನದ ಬೆಳಕು ತೋರಿದ ಬುದ್ಧ ಈ ಮೂವರು ಮಹನೀಯರು ಸದಾ ಜಗತ್ತಿನ ಜನರೆಲ್ಲರಿಗೂ ಆದರ್ಶಪ್ರಾಯರು ಎಂದು ಹೇಳಿದರು.

ಮೈಸೂರು ವಿಶ್ವಮೈತ್ರಿ ಬುದ್ಧ ವಿಹಾರದ ಡಾ. ಕಲ್ಯಾಣಸಿರಿ ಭಂತೇಜಿ, ಕನಕಪುರ ಶ್ರೀ ದೇಗುಲಮಠದ ಶ್ರೀ ಚನ್ನಬಸವ ಸ್ವಾಮಿಗಳು, ಮಾಜಿ ಸಚಿವರಾದ ಶ್ರೀ ಎನ್. ಮಹೇಶ್, ಡಾ. ಯಮದೂರು ಸಿದ್ಧರಾಜು, ವಿಶ್ರಾಂತ ಪ್ರಾಧ್ಯಾಪಕರಾದ ಡಾ. ಹೆಚ್.ಎಸ್. ಮುದ್ದೇಗೌಡ, ಬಿಜೆಪಿ ಜಿಲ್ಲಾಧ್ಯಕ್ಷರಾದ ಡಾ. ಎನ್. ಇಂದ್ರೇಶ್, ಮುಖಂಡರಾದ ಡಾ. ಸಿದ್ದರಾಮಯ್ಯ, ತಾಲ್ಲೂಕು ಕಸಾಪ ಅಧ್ಯಕ್ಷರಾದ ಡಾ. ಎಲ್. ಚೇತನ್‌ಕುಮಾರ್, ತಾಲ್ಲೂಕಿನ ಮಠಾಧೀಶರು ಮೊದಲಾದವರು ಉಪಸ್ಥಿತರಿದ್ದರು.





**ಸಾಲೂರು ಮಠದಿಂದ ಸ್ಥಳೀಯ ಜನರಿಗೆ ಸಾಕಷ್ಟು ಅನುಕೂಲ**

ಸಾಲೂರು ಮಠವು ಧಾರ್ಮಿಕ, ಶೈಕ್ಷಣಿಕ, ಆರೋಗ್ಯ ಕ್ಷೇತ್ರಗಳಲ್ಲಿ ಇಲ್ಲಿನ ಜನರಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದೆ ಎಂದು ಪರಮಪೂಜ್ಯ ಜಗದ್ಗುರುಗಳವರು ಆಗಸ್ಟ್ 2ರಂದು ಶ್ರೀ ಮಲೆ ಮಹದೇಶ್ವರ ಬೆಟ್ಟದ ಶ್ರೀ ಸಾಲೂರು ಬೃಹನ್ಮಠದಲ್ಲಿ ಲಿಂ. ಶ್ರೀ ಪಟ್ಟದ ಗುರುಸ್ವಾಮಿಗಳವರ ಸಂಸ್ಮರಣೋತ್ಸವ ಮತ್ತು ಗುರುಸ್ಮೃತಿ ಸಂಸ್ಮರಣ ಗ್ರಂಥ ಲೋಕಾರ್ಪಣೆ, ಗುರುಸನ್ನಿಧಿ ಯೋಗಧ್ಯಾನ ಮಂದಿರ ಉದ್ಘಾಟನೆ ಹಾಗೂ ವಿದ್ಯಾರ್ಥಿನಿಲಯ ಕಟ್ಟಡದ ಶಿಲಾನ್ಯಾಸ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಎಪ್ಪತ್ತೇಳು ಮಲೆಗಳಲ್ಲಿ ಒಂದಾದ ಮಲೆ ಮಹದೇಶ್ವರ ಬೆಟ್ಟವು ಪವಾಡ ಪುರುಷ ಶ್ರೀ ಮಹದೇಶ್ವರರು ನಡೆದಾಡಿದ ಪುಣ್ಯಸ್ಥಳ. ಕತ್ತಲ ರಾಜ್ಯವಾಗಿದ್ದ ಈ ಭಾಗವನ್ನು ಉಜ್ವಲ ಬೆಳಕಿನ ಕಡೆಗೆ ಕೊಂಡೊಯ್ದವರು ಶ್ರೀ ಮಲೆ ಮಹದೇಶ್ವರರು. ಈ ಪುಣ್ಯಸ್ಥಳಕ್ಕೂ ಸಾಲೂರು ಮಠಕ್ಕೂ ಅವಿನಾಭಾವ ಸಂಬಂಧ ಇದೆ. ಇಲ್ಲಿನ ಕಾಡಂಚಿನ ಬೇಡಗಂಪಣ ಸಮುದಾಯದ ಜನರಿಗೆ ಶಿಕ್ಷಣ ನೀಡಿದ ಶ್ರೇಯಸ್ಸು ಸಾಲೂರು ಮಠದ್ದಾಗಿದೆ. ಮಠದ ಸಂಪರ್ಕ ಇರುವಂತಹ ಎಲ್ಲ ಗ್ರಾಮಗಳಿಗೂ ಶ್ರೀ ಗುರು ಸ್ವಾಮಿಗಳು ಭೇಟಿನೀಡಿ ಅಲ್ಲಿನ ಜನರಿಂದ ದವಸ-ಧಾನ್ಯ ಸಂಗ್ರಹಣೆ ಮಾಡುತ್ತಿದ್ದರು ಎಂದು ಸ್ಮರಿಸಿದರು.

ತುಮಕೂರು ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ಭಾರತದಲ್ಲಿ ಮಠಗಳಿಗೆ ಪವಿತ್ರ ಸ್ಥಾನವಿದೆ. ಕರ್ನಾಟಕದಲ್ಲಿ ಮಠಗಳು ನಡೆಸುತ್ತಿರುವ ಶೈಕ್ಷಣಿಕ, ಧಾರ್ಮಿಕ, ಆರೋಗ್ಯ, ಸೇವಾ ಕಾರ್ಯಗಳು ರಾಜ್ಯಕ್ಕೆ ಮಾದರಿಯಾಗಿವೆ. ಇದಕ್ಕೆ ಮಠಾಧೀಶರ ಕೊಡುಗೆಯೂ ಇದೆ. ರಾಜ್ಯ ಸರ್ಕಾರದ ಜೊತೆ ಮಠಗಳೂ ಸಾಕ್ಷರತೆ ಪ್ರಮಾಣ ಹೆಚ್ಚಿಸಲು ಪ್ರಮುಖ ಆದ್ಯತೆ ನೀಡಿವೆ. ಸಾಲೂರು ಮಠದ ಶ್ರೀಗಳು ಶಿಕ್ಷಣದ ಜೊತೆಗೆ ಉತ್ತಮ ಸಂಸ್ಕಾರ ಕಲಿಸಿಕೊಟ್ಟ ಗುರುಗಳು. ಬೆಟ್ಟದ ಬೇಡಗಂಪಣ ಸಮುದಾಯದ ಜನರ ಬದುಕನ್ನು ಹಸನು ಮಾಡುವ ಮೂಲಕ ಅವರ ಬದುಕಿನಲ್ಲಿ ಬದಲಾವಣೆ ತಂದಿದ್ದಾರೆ ಎಂದರು.

ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಜಗದ್ಗುರು ಡಾ. ಶ್ರೀ ನಿರ್ಮಲಾನಂದನಾಥ ಮಹಾಸ್ವಾಮಿಗಳು ಪ್ರಪಂಚದ ಬೇರೆ ಬೇರೆ ದೇಶಗಳು ವಿಜ್ಞಾನ, ತಂತ್ರಜ್ಞಾನ, ರಾಜಕೀಯ ಕ್ಷೇತ್ರಗಳಲ್ಲಿ ಬಲಿಷ್ಠವಾಗಿದ್ದರೆ ಭಾರತ ದೇಶ ಅನೇಕ ಮಹಾತ್ಮರ ಜ್ಞಾನ ಸಂಪತ್ತಿನ ಮುಖೇನ ಮಹಾನ್ ಶಕ್ತಿ ಪಡೆದ ರಾಷ್ಟ್ರವಾಗಿದೆ. ಇಂತಹ ಮಹಾತ್ಮರನ್ನು ನೀಡಿ, ಜ್ಞಾನ ಪರಂಪರೆಯ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸಿರುವ ಮಠವೆಂದರೆ ಶ್ರೀ ಮಹದೇಶ್ವರ ಬೆಟ್ಟದ ಸಾಲೂರು ಬೃಹನ್ಮಠ ಎಂದು ಹೇಳಿದರು.





ಇದೇ ಸಂದರ್ಭದಲ್ಲಿ ಗುರುಸ್ಮೃತಿ ಸಂಸ್ಮರಣ ಗ್ರಂಥ, 'ಶ್ರೀಮಲೆ ಮಹದೇಶ್ವರ' ಕೃತಿ ಲೋಕಾರ್ಪಣೆ ಮಾಡಲಾಯಿತು.

ವಾಲ್ಮೀಕಿ ಗುರುಪೀಠದ ಶ್ರೀ ಪ್ರಸನ್ನಾನಂದಪುರಿ ಸ್ವಾಮಿಗಳು, ಹರಿಹರ ವೀರಶೈವ-ಲಿಂಗಾಯತ ಪಂಚಮಸಾಲಿ ಪೀಠದ ಶ್ರೀ ವಚನಾನಂದ ಸ್ವಾಮಿಗಳು, ಭಗೀರಥ ಪೀಠದ ಶ್ರೀ ಪುರುಷೋತ್ತಮಾನಂದ ಸ್ವಾಮಿಗಳು, ಕನಕಪುರದ ದೇಗುಲಮಠ ಮತ್ತು ಮರಳೇಗವಿಮಠದ ಶ್ರೀಗಳು, ಹೆಚ್‌ಎಎಲ್ ಅಧ್ಯಕ್ಷರಾದ ಡಾ. ಡಿ.ಕೆ. ಸುನೀಲ್, ಶಾಸಕರುಗಳಾದ ಶ್ರೀ ಎಂ.ಆರ್. ಮಂಜುನಾಥ್, ಶ್ರೀ ಹೆಚ್.ಎಂ. ಗಣೇಶ್‌ಪ್ರಸಾದ್, ಶ್ರೀ ಎ.ಆರ್. ಕೃಷ್ಣಮೂರ್ತಿ, ಅಂದಿಯೂರು ಶಾಸಕರಾದ ಶ್ರೀ ಎ.ಜಿ. ವೆಂಕಟಾಚಲಂ, ಮಾಜಿ ಶಾಸಕರುಗಳಾದ ಶ್ರೀ ಆರ್. ನರೇಂದ್ರ, ಶ್ರೀಮತಿ ಪರಿಮಳಾ ನಾಗಪ್ಪ, ಶ್ರೀ ಎಸ್. ಬಾಲರಾಜ್, ಶ್ರೀ ಎನ್. ಮಹೇಶ್, ಶ್ರೀ ಮಲೆ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿಗಳಾದ ಶ್ರೀ ಎ.ಇ. ರಘು, ಕಾಡಾ ಅಧ್ಯಕ್ಷರಾದ ಶ್ರೀ ಪಿ. ಮರಿಸ್ವಾಮಿ, ಚಾಮುಲ್ ಅಧ್ಯಕ್ಷರಾದ ಶ್ರೀ ನಂಜುಂಡಸ್ವಾಮಿ, ಮಾನಸ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿಗಳಾದ ಡಾ. ಎಸ್. ದತ್ತೇಶ್‌ಕುಮಾರ್‌ರವರುಗಳು ಉಪಸ್ಥಿತರಿದ್ದರು. ಡಾ. ಸುಗುಣ ಕುಲದೀಪ್ ಪ್ರಾರ್ಥಿಸಿದರು. ಡಾ. ಎಸ್. ಶಿವರಾಜಪ್ಪ ಸ್ವಾಗತಿಸಿದರು. ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರೊ. ಡಿ.ಎಸ್. ಗುರು ವಿದ್ಯಾರ್ಥಿನಿಲಯ ಯೋಜನೆಯ ಬಗ್ಗೆ ವಿವರಿಸಿದರು. ಶ್ರೀ ಪೊನ್ನಾಚಿ ಮಹದೇವಸ್ವಾಮಿ ವಂದಿಸಿದರು. ಶ್ರೀ ಜೆ. ಶಿವಸ್ವಾಮಿ ಕಾರ್ಯಕ್ರಮ ನಿರೂಪಿಸಿದರು.

**ಶ್ರೀ ವಿ. ಶ್ರೀನಿವಾಸ್ ಪ್ರಸಾದ್‌ರವರ ವ್ಯಕ್ತಿತ್ವ ಆದರ್ಶಪ್ರಾಯವಾದುದು**

ಶ್ರೀ ವಿ. ಶ್ರೀನಿವಾಸ್ ಪ್ರಸಾದ್‌ರವರ ವ್ಯಕ್ತಿತ್ವ ಆದರ್ಶಪ್ರಾಯವಾದುದು ಎಂದು ಪರಮಪೂಜ್ಯ ಜಗದ್ಗುರುಗಳವರು ಆಗಸ್ಟ್ 6ರಂದು ನಂಜನಗೂಡಿನ ಜೆಎಸ್‌ಎಸ್ ಮಂಗಳ ಮಂಟಪದಲ್ಲಿ ಆಯೋಜಿಸಿದ್ದ ಹಿರಿಯ ಮುತ್ಸದ್ಧಿಗಳಾದ ಶ್ರೀ ವಿ. ಶ್ರೀನಿವಾಸ್ ಪ್ರಸಾದ್‌ರವರ 78ನೇ ಜನ್ಮದಿನಾಚರಣೆಯ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಪ್ರಸಾದ್‌ರವರು ನೇರ-ನಿಷ್ಠುರವಾದಿಗಳಾಗಿದ್ದರು. ಅವರು ಎಂದೂ ರಾಜಕಾರಣವನ್ನು ಹುಡುಕಿ ಬಂದಿರಲಿಲ್ಲ ಆದರೆ ರಾಜಕಾರಣಿಗಳೇ ಅವರ ಹೋರಾಟದ ಗುಣವನ್ನು ಕಂಡು ಅವರನ್ನು ರಾಜಕೀಯಕ್ಕೆ ಕರೆತಂದರು. ಅಂಥ ಅಪರೂಪದ ವ್ಯಕ್ತಿತ್ವ ಅವರದ್ದಾಗಿತ್ತು. ಜನಪ್ರತಿನಿಧಿಯಾದ ಬಳಿಕ ಅವರಿಗೆ ದೊರೆತ ಅಧಿಕಾರ ಬಳಸಿಕೊಂಡು ಸಮಾಜಕ್ಕೆ ಸಾಕಷ್ಟು ಕೊಡುಗೆಗಳನ್ನು ನೀಡಿದ್ದಾರೆ. ಅವರ ಸ್ವಾಭಿಮಾನ, ಪ್ರಾಮಾಣಿಕ ರಾಜಕಾರಣದ ವಿವಿಧ ಮುಖಗಳ ಅನಾವರಣ ಈ ಕಾರ್ಯಕ್ರಮದಲ್ಲಾಗಿದೆ ಎಂದು ಹೇಳಿದರು.





ಮಾಜಿ ಸಚಿವರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾರವರು ವಿ. ಶ್ರೀನಿವಾಸ ಪ್ರಸಾದ್ ಸ್ವಾಭಿಮಾನದ ರಾಜಕಾರಣಕ್ಕೆ ಹೆಸರಾದವರು. ಎಂದಿಗೂ ಜಾತಿವಾದಿಯಾಗದೆ, ಅಂಬೇಡ್ಕರ್ ವಾದಕ್ಕೆ ಬದ್ಧರಾಗಿಯೇ ಪ್ರಾಮಾಣಿಕ ರಾಜಕಾರಣ ಮಾಡಿದವರು. ಅವರ ಸ್ವಾಭಿಮಾನಕ್ಕೆ ಧಕ್ಕೆ ಬಂದಾಗಲೆಲ್ಲಾ ಯಾರೇ ಆಗಲಿ ಮುಖ ನೋಡದೆ ಬೆವರಿಳಿಸುವ ತಾಕತ್ತು ಹೊಂದಿದ್ದರು. ಇಂತಹ ವ್ಯಕ್ತಿ ಇನ್ನಷ್ಟು ಕಾಲ ನಮ್ಮೊಂದಿಗೆ ಇರಬೇಕಿತ್ತು ಎಂದು ಸ್ಮರಿಸಿದರು.

ಮಾಜಿ ಸಚಿವರಾದ ಶ್ರೀ ಬಿ. ಶ್ರೀರಾಮುಲುವರು ಅಂಬೇಡ್ಕರ್, ಬುದ್ಧ, ಮಹಾವೀರ, ಬಸವಣ್ಣ, ವಾಲ್ಮೀಕಿ ಮುಂತಾದವರ ಆದರ್ಶಗಳಿಂದ ಪ್ರಭಾವಿತರಾದವರು ವಿ. ಶ್ರೀನಿವಾಸ ಪ್ರಸಾದ್‌ರವರು. ಮುಖ್ಯಮಂತ್ರಿಯಾಗುವ ಎಲ್ಲ ಅರ್ಹತೆ ಹೊಂದಿದ್ದರೂ ಪ್ರಸಾದ್ ಅವರಿಗೆ ಅದು ಸಾಧ್ಯವಾಗಲಿಲ್ಲ ಎಂದರು.

ಮಾಜಿ ಶಾಸಕರಾದ ಶ್ರೀ ಬಿ. ಹರ್ಷವರ್ಧನ್‌ರವರು ಪ್ರಸಾದ್ ಅವರ ಚಿಂತನೆ, ಹೋರಾಟ ಸ್ವಾಭಿಮಾನ ನಮಗೆಲ್ಲ ಆದರಣೀಯ. ನಾವೆಲ್ಲರೂ ಅದನ್ನು ಅಳವಡಿಸಿಕೊಳ್ಳಬೇಕು ಎಂದರು.

ಸಾಹಿತಿಗಳಾದ ಪ್ರೊ. ಕಾಳೇಗೌಡ ನಾಗವಾರ, ಶ್ರೀಮತಿ ಭಾಗ್ಯಲಕ್ಷ್ಮೀ ಶ್ರೀನಿವಾಸ ಪ್ರಸಾದ್ ಉಪಸ್ಥಿತರಿದ್ದರು. ಶ್ರೀ ಕೆಂಡಗಣ್ಣಪ್ಪ ಸ್ವಾಗತಿಸಿದರು. ಶ್ರೀ ಚಿಕ್ಕರಂಗನಾಯಕ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಶ್ರೀ ಬದನವಾಳು ರಾಮು ಕಾರ್ಯಕ್ರಮ ನಿರೂಪಿಸಿದರು.

**ಹನ್ನೆರಡನೇ ಶತಮಾನ ಮಹಿಳಾ ಸಮಾನತೆಯ ಯುಗ**

21ನೇ ಶತಮಾನದಲ್ಲಿಯೂ ಇಲ್ಲದ ಮಹಿಳಾ ಸಮಾನತೆಯನ್ನು ಬಸವಣ್ಣನವರು ಹನ್ನೆರಡನೇ ಶತಮಾನದಷ್ಟು ಹಿಂದೆಯೇ ಸಮರ್ಪಕವಾಗಿ ಜಾರಿಗೆ ತಂದಿದ್ದರು ಎಂದು ಪರಮಪೂಜ್ಯ ಜಗದ್ಗುರುಗಳವರು ಆಗಸ್ಟ್ 9ರಂದು ಬೆಂಗಳೂರು ಬಸವ ಪರಿಷತ್ ವತಿಯಿಂದ ಆಯೋಜಿಸಿದ್ದ ಬಸವ ಪುರಸ್ಕಾರ ಪ್ರಶಸ್ತಿ ಪ್ರದಾನ ಸಮರಂಭದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಜಗತ್ತು ಇಂದು ವೈಜ್ಞಾನಿಕವಾಗಿ, ತಾಂತ್ರಿಕವಾಗಿ ಎಷ್ಟೇ ಮುಂದುವರಿದಿದ್ದರೂ ಎಲ್ಲಾ ಧರ್ಮಗಳಲ್ಲೂ ಸ್ತ್ರೀಯರಿಗೆ ಸಮಾನವಾದ ಅವಕಾಶಗಳಿಲ್ಲ. ಬಸವಣ್ಣನವರು 12ನೇ ಶತಮಾನದಲ್ಲಿಯೇ ಸ್ತ್ರೀ ಸಮಾನತೆ ಜಾರಿಗೆ ತರುವುದರೊಂದಿಗೆ ಸಮಾಜದ ಕಟ್ಟಕಡೆಯ ವ್ಯಕ್ತಿಯೂ ಧಾರ್ಮಿಕ ಚಿಂತನೆ, ಆಧ್ಯಾತ್ಮಿಕ ಆಚರಣೆಗಳಲ್ಲಿ ತೊಡಗಿಸಿಕೊಳ್ಳುವಂತಹ ಸಹೋದರ ಸಮಾನತೆಯ ಭಾವನೆಯ ಸ್ವಾತಂತ್ರ್ಯ ಒದಗಿಸಿದರು. ಅವರ ಸಂದೇಶದ ಹೊಂಗಿರಣ ಇಂದು ದೇಶ, ವಿದೇಶದಾದ್ಯಂತ ಹರಡುತ್ತಿರುವುದು ಮಹತ್ವದ ಸಂಗತಿ ಎಂದರು.





ನಿವೃತ್ತ ಲೋಕಾಯುಕ್ತರಾದ ಗೌ.ನ್ಯಾ. ಶ್ರೀ ಎನ್. ಸಂತೋಷ್ ಹೆಗ್ಡೆಯವರು ಇಂದು ನಾವೆಲ್ಲರೂ ಶ್ರೀಮಂತಿಕೆ ಮತ್ತು ಅಧಿಕಾರವನ್ನು ಪೂಜಿಸುವ ಜಗತ್ತಿನಲ್ಲಿದ್ದೇವೆ. ಪ್ರಾಮಾಣಿಕತೆಗೆ ಇಲ್ಲಿ ಬೆಲೆಯಿಲ್ಲ. ಶ್ರೀಮಂತಿಕೆಯಿದ್ದರೆ ದೊಡ್ಡ ಹುದ್ದೆಯನ್ನು ಖರೀದಿಸಬಹುದು. ದೊಡ್ಡ ಹುದ್ದೆಯಿದ್ದರೆ ಶ್ರೀಮಂತಿಕೆ ತಾನಾಗಿಯೇ ಬರುತ್ತದೆ ಎಂಬ ಭಾವನೆ ಜನರಲ್ಲಿದ್ದು, ದುರಾಸೆ ಹೆಚ್ಚಾಗಿದೆ. ಇದನ್ನು ಮಟ್ಟ ಹಾಕಲು ಇರುವ ತೃಪ್ತಿಯ ಮಾರ್ಗವನ್ನು ಮಕ್ಕಳಲ್ಲಿ ಬಿತ್ತುವ ಮೂಲಕ ಮಾನವೀಯ ಅಂಶಗಳನ್ನು ಬೆಳೆಸಬೇಕು ಎಂದು ತಿಳಿಸಿದರು.

ನ್ಯಾಯವಾದಿಗಳಾದ ಪ್ರೊ. ರವಿವರ್ಮಕುಮಾರ್‌ರವರು ಇಂದು ಅನೇಕರ ಮಕ್ಕಳು ವಿದೇಶದಲ್ಲಿ ಉನ್ನತ ಹುದ್ದೆಯಲ್ಲಿದ್ದಾರೆ. ಅಂಬೇಡ್ಕರ್ ಹೊಂದಿದ್ದ ಪ್ರತಿಭೆಗೆ ಬೇಕಾದಷ್ಟು ಆಸ್ತಿ ಸಂಪಾದಿಸಿ, ಅವರಿಷ್ಟದ ದೇಶದಲ್ಲಿ ಬದುಕಬಹುದಿತ್ತು. ಆದರೆ, ಅವರು ಅದೆಲ್ಲವನ್ನೂ ತಿರಸ್ಕರಿಸಿದರು. ಇಲ್ಲವಾದಲ್ಲಿ ಭಾರತದ ಗತಿ ಏನಾಗುತ್ತಿತ್ತು? ಇದರಿಂದ ನಾವು ತಿಳಿಯಬೇಕಾದ ಸಂಗತಿ ಏನೆಂದರೆ ಸ್ವಾಭಿಮಾನಿಗಳಾಗಿ ಬದುಕಬೇಕಾದರೆ ಭಾರತೀಯರಾಗಬೇಕು. ವ್ಯಾಸಂಗಕ್ಕಾಗಿ ಯಾವ ದೇಶಕ್ಕಾದರೂ ಹೋಗಿ. ಆದರೆ, ಟ್ರಂಪ್‌ರವರಂತಹ ವ್ಯಕ್ತಿಗಳ ಸೇವೆ ಮಾಡುತ್ತಾ ಅಲ್ಲಿಯೇ ಬದುಕಬೇಡಿ ಎಂದರು

ಕಾರ್ಯಕ್ರಮದಲ್ಲಿ ಡಾ. ಎ.ಎಸ್. ಕಿರಣ್‌ಕುಮಾರ್, ಪ್ರೊ. ರವಿವರ್ಮಕುಮಾರ್, ಶ್ರೀಮತಿ ಅಲ್ಮಿತ್ರಾ ಪಟೇಲ್, ಶ್ರೀ ಎಸ್.ಆರ್. ಪಾಟೀಲ್, ಡಾ. ಎಂ.ಎನ್. ರಾಜೇಂದ್ರ ಕುಮಾರ್, ಶ್ರೀಮತಿ ಉಮಾಶ್ರೀ, ಶ್ರೀ ಮಾನಂದಿ ರಮೇಶ್, ಡಾ. ಎಸ್.ಪಿ. ದಯಾನಂದ್, ಡಾ. ವಿ.ಎಸ್.ವಿ. ಪ್ರಸಾದ್, ಶ್ರೀ ಬಸವರಾಜ ದನ್ನೂರ, ಶ್ರೀ ಶಾಮನೂರು ಎಸ್. ಗಣೇಶ್, ಶ್ರೀ ಬಸವರಾಜ ಎಸ್. ದೇಶಮುಖ, ಡಾ. ಎನ್. ನಾಗರಾಜಯ್ಯ, ಶ್ರೀ ರವಿಕುಮಾರಸ್ವಾಮಿ ಹಿರೇಮಠ, ಶ್ರೀ ಬಸವರಾಜ ಯಲಿಗಾರರವರುಗಳಿಗೆ 2025ನೇ ಸಾಲಿನ ಬಸವ ಪುರಸ್ಕಾರ ಪ್ರಶಸ್ತಿ ಪ್ರದಾನ ಮಾಡಲಾಯಿತು. ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ನೂತನ ಮೇಯರ್‌ರಾದ ಶ್ರೀಮತಿ ಜ್ಯೋತಿ ಪಾಟೀಲ್‌ರವರಿಗೆ ಅಭಿನಂದನೆ ಸಲ್ಲಿಸಲಾಯಿತು. ಆದಾಯ ತೆರಿಗೆ ಇಲಾಖೆಯ ಉಪ ಆಯುಕ್ತರಾದ ಶ್ರೀ ಪ್ರಕಾಶ್ ತಾಂವಶಿ, ಬಸವ ಪರಿಷತ್‌ನ ಗೌರವಾಧ್ಯಕ್ಷರಾದ ಶ್ರೀಮತಿ ಎಂ.ಪಿ. ಉಮಾದೇವಿ, ಅಧ್ಯಕ್ಷರಾದ ಶ್ರೀಮತಿ ರೇಖಾ ಮಹಾಂತೇಶ ಹಿರೇಮಠ, ಶ್ರೀ ಮಹಾಂತೇಶ ಹಿರೇಮಠ ಉಪಸ್ಥಿತರಿದ್ದರು.

**ಸಮಾಜ ಸುಧಾರಣೆಯಲ್ಲಿ ಮಠಗಳ ಪಾತ್ರ ಮಹತ್ವದ್ದು**

ಮಠಗಳು ನಿರಂತರವಾಗಿ ಸಾಮಾಜಿಕ ಸುಧಾರಣೆಯಲ್ಲಿ ತೊಡಗಿಸಿಕೊಂಡಿವೆ ಎಂದು ಪರಮಪೂಜ್ಯ ಜಗದ್ಗುರುಗಳವರು ಆಗಸ್ಟ್ 11ರಂದು ಗುಂಡ್ಲುಪೇಟೆ ತಾಲ್ಲೂಕು





ಹಂಗಳಪುರದ ಶ್ರೀ ಪಟ್ಟದ ಮಠದ ಪಟ್ಟಾಧಿಕಾರ ಮಹೋತ್ಸವ ಹಾಗೂ ಚನ್ನಬಸವ ಸ್ವಾಮಿಗಳ ಸಂಸ್ಮರಣೆ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಮಠಗಳು ಇರುವುದು ಸಮಾಜಕ್ಕಾಗಿ. ಸ್ವಾಮಿಗಳವರು ಇರುವುದು ಜನರಿಗಾಗಿ. ಮನುಷ್ಯ ಸನ್ಮಾರ್ಗದಲ್ಲಿ ನಡೆಯಬೇಕೆಂದರೆ ಗುರುಗಳು ಇರಬೇಕು, ಶಿಕ್ಷಣವಿರಬೇಕು. ಕರ್ನಾಟಕದಲ್ಲಿ ವೀರಶೈವ ಲಿಂಗಾಯತ ಮಠಗಳು ಧಾರ್ಮಿಕ, ಶೈಕ್ಷಣಿಕ, ಸಾಂಸ್ಕೃತಿಕ, ಸಾಮಾಜಿಕ ಸುಧಾರಣೆ ತರುವ ನಿಟ್ಟಿನಲ್ಲಿ ತೊಡಗಿಸಿಕೊಂಡಿವೆ. ಅದರಂತೆ ಹಂಗಳಪುರ ಮಠವು ಕೂಡ ಸಾಕಷ್ಟು ಸುಧೀರ್ಘ ಇತಿಹಾಸ ಹೊಂದಿದೆ. ಗ್ರಾಮಸ್ಥರ ಒತ್ತಾಸೆಯಂತೆ ಮಠವು ಅಭಿವೃದ್ಧಿ ಹೊಂದಲು ಮಠಾಧೀಶರ ಅವಶ್ಯಕತೆಯಿರುವುದರಿಂದ ಪಟ್ಟಾಧಿಕಾರವನ್ನು ಮಾಡಲಾಗಿದೆ ಎಂದು ಹೇಳಿದರು.

ಶ್ರೀ ಸಿದ್ದಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ಮಠಗಳು ಎಂದಿಗೂ ಸೇವಾಕೇಂದ್ರಗಳಾಗಿ ಸೇವೆ ಸಲ್ಲಿಸುತ್ತಿವೆ. ಸಾಮಾಜಿಕ ಬದಲಾವಣೆಯಲ್ಲಿ ಬಹುಮುಖ್ಯ ಪಾತ್ರ ವಹಿಸಿವೆ. ಹಿಂದಿನ ಕಾಲದಿಂದಲೂ ಮಠಗಳು ಪ್ರಸಾದ ವಿತರಣೆಯ ಜೊತೆಗೆ ಶಿಕ್ಷಣ ಸಂಸ್ಕಾರ ನೀಡುತ್ತಾ ಬಂದಿವೆ ಎಂದರು.

ಶಾಸಕರಾದ ಶ್ರೀ ಎಚ್.ಎಂ. ಗಣೇಶ್ ಪ್ರಸಾದ್‌ರವರು ದೇಶದಲ್ಲಿಯೇ ವೀರಶೈವ ಲಿಂಗಾಯತ ಸಮುದಾಯಕ್ಕೆ ಉತ್ತಮ ಹೆಸರಿದೆ. ಅದಕ್ಕೆ ಮಠಾಧೀಶರು ಕಾರಣ. ಸುತ್ತೂರು ಶ್ರೀಗಳು ಮತ್ತು ಸಿದ್ದಗಂಗಾ ಶ್ರೀಗಳು ಶಿಕ್ಷಣ ಕ್ಷೇತ್ರದಲ್ಲಿ ಅಸಂಖ್ಯಾತ ಜನರಿಗೆ ಮಾರ್ಗದರ್ಶನ ತೋರಿದ್ದಾರೆ. ಹಂಗಳಪುರದ ಮಠಾಧೀಶರು ಚಿಕ್ಕ ವಯಸ್ಸಿನವರಾಗಿದ್ದು ಹೆಚ್ಚಿನ ಸಹಕಾರ ನೀಡಿ ಮಠದ ಬೆಳವಣಿಗೆಗೆ ಶ್ರಮಿಸಬೇಕು. ಅವರಿಗೆ ನಮ್ಮೆಲ್ಲರ ಸಹಕಾರ ಇರಲಿದೆ ಎಂದರು.

ಹಂಗಳಪುರ ಗ್ರಾಮದ ದಂಪತಿಗಳಾದ ಎಚ್.ಎಸ್. ವಿನಯ್ ಮತ್ತು ಜಿ. ತೇಜಸ್ವಿನಿಯವರ ಪುತ್ರ ವಿಶ್ರುತ್ ಎಂಬ ವಟುವಿಗೆ ಹರಗುರುಚರಮೂರ್ತಿಗಳ ಸಮ್ಮುಖದಲ್ಲಿ ಶ್ರೀಮಠದ ಪಟ್ಟಾಧಿಕಾರವನ್ನು ಷಟ್‌ಸ್ಥಲ ಬ್ರಹ್ಮೋಪದೇಶಪೂರ್ವಕವಾಗಿ ಶ್ರೀ ಶಿವಾನಂದ ಸ್ವಾಮಿಗಳು ಎಂಬ ನಾಮಾಂಕಿತ ನೀಡಿ ನೆರವೇರಿಸಲಾಯಿತು.

ಸಾಲೂರು, ವಾಟಾಳು, ಪಡುಗೂರು, ಹಂಗಳ, ಹರವೆ, ಮಾದಾಪಟ್ಟಣ. ಚಿಕ್ಕತುಪ್ಪೂರು, ಕುರುಬೂರು, ಕರೋಹಟ್ಟಿ, ಶಿರಮಳ್ಳಿ, ಕಬ್ಬಹಳ್ಳಿ, ಮಾದಾಪುರ, ಕಸುವಿನಹಳ್ಳಿ, ನಂಜನಗೂಡು ಮೊದಲಾದ ಮಠಗಳ ಶ್ರೀಗಳು, ಮಾಜಿ ಶಾಸಕರಾದ ಶ್ರೀ ಸಿ.ಎಸ್. ನಿರಂಜನ್ ಕುಮಾರ್, ಶ್ರೀ ರವಿ ಕಮರಹಳ್ಳಿ, ಶ್ರೀ ಹೆಚ್.ಎಸ್. ನಂಜಪ್ಪ ಉಪಸ್ಥಿತರಿದ್ದರು. ಶ್ರೀಮತಿ ಮಹೇಶ್ವರಿ ಮತ್ತು ಶ್ರೀಮತಿ ವೇದಾ ಪ್ರಾರ್ಥಿಸಿದರು, ಶ್ರೀ ಶಿವಪ್ರಸಾದ್ ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು.





**ಪದವೀಧರರ ಯಶಸ್ಸಿನ ಹಿಂದೆ ದೇಶದ ಪ್ರಗತಿಯಿದೆ**

ಪದವೀಧರರ ಯಶಸ್ಸಿನ ಹಿಂದೆ ದೇಶದ ಪ್ರಗತಿಯಿದೆ ಬೆಂಗಳೂರಿನ ಟಿಐಎಫ್‌ಆರ್ – ರಾಷ್ಟ್ರೀಯ ಜೀವ ವಿಜ್ಞಾನ ಕೇಂದ್ರದ ನಿರ್ದೇಶಕರಾದ ಪ್ರೊ. ಎಲ್.ಎಸ್. ಶಶಿಧರವರು ಆಗಸ್ಟ್ 12ರಂದು ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ 17ನೇ ಪದವೀಧರರ ದಿನಾಚರಣೆಯಲ್ಲಿ ಮಾತನಾಡುತ್ತಾ ತಿಳಿಸಿದರು. ಇಂದಿನ ಆಧುನಿಕ ಯುಗದಲ್ಲಿ ಶಿಕ್ಷಣದ ಅಗತ್ಯಗಳು ವಿಭಿನ್ನವಾಗಿವೆ. ವಿದ್ಯಾರ್ಥಿಗಳು ಶಿಕ್ಷಣ ಪಡೆಯುವುದರ ಹಿಂದೆ ಕೇವಲ ಪದವಿ ಪ್ರಮಾಣ ಪತ್ರ ಪಡೆಯುವ ಉದ್ದೇಶವಿರಬಾರದು. ಶಿಕ್ಷಣದಿಂದ ಹೊಸ ಅನ್ವೇಷಣೆಗಳು ಸಾಧ್ಯವಾಗಬೇಕು. ಜ್ಞಾನ ಮತ್ತು ಯಶಸ್ಸಿನ ಹಿಂದೆ ದೇಶದ ಪ್ರಗತಿಯಿದೆ ಎಂಬುದನ್ನು ಸದಾ ಮನಸ್ಸಿನಲ್ಲಿಟ್ಟುಕೊಂಡು ಕಾರ್ಯಪ್ರವೃತ್ತರಾಗಬೇಕು. ಸ್ವಾತಂತ್ರ್ಯಪೂರ್ವ ಭಾರತದ ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿ ಬೇರೆಯಿತ್ತು. ಇವುಗಳಲ್ಲಿ ಇಂದು ಸಾಕಷ್ಟು ಬದಲಾವಣೆಯಾಗಿದೆ. ಸಾಕ್ಷರತೆಯ ಪ್ರಮಾಣ ಹೆಚ್ಚಿದೆ. ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗಳು ಸುಧಾರಿಸಿವೆ. ಕೈಗಾರಿಕೆ, ವಿಜ್ಞಾನ ಮತ್ತು ತಂತ್ರಜ್ಞಾನಗಳಲ್ಲಿ ಹೊಸ ಅನ್ವೇಷಣೆಗಳಿಂದ ಅಚ್ಚರಿಯಾಗುವಂತೆ ಬೆಳವಣಿಗೆಯನ್ನು ಸಾಧಿಸಿದೆ. ಇದೆಲ್ಲದರ ಹಿಂದೆ ಸಮಗ್ರ ರಾಷ್ಟ್ರನಿರ್ಮಾಣದ ಕನಸು ಇದೆ. ಶಿಕ್ಷಣ ಪಡೆದು ಪದವೀಧರರಾಗುವ ವಿದ್ಯಾರ್ಥಿಗಳಿಗೆ ಇದೆಲ್ಲದರ ಅರಿವು ಸದಾ ಇರಬೇಕು. ಆಯಾ ಕ್ಷೇತ್ರಗಳಲ್ಲಿ ಹೊಸ ಅನ್ವೇಷಣೆಯ ಸಾಧ್ಯತೆಗಳನ್ನು ಕಂಡುಕೊಳ್ಳುವುದಕ್ಕೆ ಆದ್ಯತೆ ನೀಡಬೇಕು. ಜೆಎಸ್‌ಎಸ್ ಸಂಸ್ಥೆ ಶೈಕ್ಷಣಿಕ ಕ್ಷೇತ್ರದಲ್ಲಿ ಕೌಶಲ್ಯ ಮತ್ತು ಮೌಲ್ಯಾಧಾರಿತ ಕಲಿಕೆಗೆ ಹೆಚ್ಚು ಒತ್ತು ನೀಡುತ್ತಾ ಬಂದಿದೆ. ಇಂದು ವಿಶ್ವವು ಕೃತಕ ಬುದ್ಧಿಮತ್ತೆಯ ಜೊತೆಯಲ್ಲಿಯೇ ಸಾಗುತ್ತಿದೆ. ವಿಜ್ಞಾನ ಮತ್ತು ಜ್ಞಾನ ಎರಡರ ಸಮತೋಲನವನ್ನು ಕಾಯ್ದುಕೊಂಡು ಸ್ವಸ್ಥ ಸಮಾಜವನ್ನು ನಿರ್ಮಿಸಬೇಕು. ಶಿಕ್ಷಕರು ಇವುಗಳ ಅರಿವನ್ನು ವಿದ್ಯಾರ್ಥಿಗಳಿಗೆ ತಿಳಿಸಿಕೊಡುತ್ತಾ ಔದ್ಯೋಗಿಕ ಕ್ಷೇತ್ರದಲ್ಲಿ ಮೌಲ್ಯಯುತವಾದ ನೆಲೆಯನ್ನು ಕಲ್ಪಿಸಲು ಶ್ರಮಿಸಬೇಕು ಎಂದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠ ಅವರು ನೂತನ ಪದವೀಧರರಿಗೆ ಪ್ರತಿಜ್ಞಾವಿಧಿ ಬೋಧಿಸಿದರು. ಸಮಾರಂಭದಲ್ಲಿ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ವಿಭಾಗಗಳಿಂದ ಒಟ್ಟು 903 ವಿದ್ಯಾರ್ಥಿಗಳು ಪದವೀಧರರಾದರು. ಇವರಲ್ಲಿ ಹೆಚ್ಚು ಅಂಕ ಪಡೆದ ಒಟ್ಟು 62 ವಿದ್ಯಾರ್ಥಿಗಳಿಗೆ ಬಹುಮಾನ ಮತ್ತು ಪ್ರಮಾಣ ಪತ್ರಗಳನ್ನು ನೀಡಿ ಪುರಸ್ಕರಿಸಲಾಯಿತು.





17 ಮಂದಿ ವಿದ್ಯಾರ್ಥಿಗಳು ವಿವಿಧ ದತ್ತಿ ಪುರಸ್ಕಾರಕ್ಕೆ ಪಾತ್ರರಾದರು. ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯನವರು ಸ್ವಾಗತಿಸಿದರು. ಕು. ಕ್ಷೀರಾ ಶಾನುಭೋಗ್ ಮತ್ತು ಕು. ಅದಿತಿ ಹೆಗ್ಡೆ ಪ್ರಾರ್ಥಿಸಿದರು. ಪ್ರಾಂಶುಪಾಲರಾದ ಡಾ. ಎಂ. ಪ್ರಭು ವಂದಿಸಿದರು. ವಿಶ್ರಾಂತ ಕುಲಪತಿಗಳಾದ ಡಾ. ಎಂ. ಮುನಿಯಮ್ಮ, ಪರೀಕ್ಷಾ ನಿಯಂತ್ರಣಾಧಿಕಾರಿಗಳಾದ ಡಾ. ಬಿ. ಪ್ರಭುಸ್ವಾಮಿ, ಉಪಸ್ಥಿತರಿದ್ದರು. ಡಾ. ಎನ್. ರಾಜೇಂದ್ರ ಪ್ರಸಾದ್‌ರವರು ಕಾರ್ಯಕ್ರಮ ನಿರೂಪಿಸಿದರು.

**ಬಾನುಲಿ ಕೇಂದ್ರಕ್ಕೆ ಆಕಾಶವಾಣಿ ಎಂದು ಹೆಸರಿಟ್ಟವರು ನಾ. ಕಸ್ತೂರಿ**

ಶ್ರೀ ಗೋಪಾಲಸ್ವಾಮಿಯವರು ಆರಂಭಿಸಿದ ಮೈಸೂರು ಬಾನುಲಿ ಕೇಂದ್ರಕ್ಕೆ **'ಆಕಾಶವಾಣಿ'** ಎಂದು ಹೆಸರಿಟ್ಟವರು ಶ್ರೀ ನಾ. ಕಸ್ತೂರಿಯವರು ಎಂದು ಪರಮಪೂಜ್ಯ ಜಗದ್ಗುರುಗಳವರು ಆಗಸ್ಟ್ 14ರಂದು ಮೈಸೂರು ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ನಾ. ಕಸ್ತೂರಿ ಹಾಸ್ಯ ರಸಿಕ ವೃಂದ ಹಾಗೂ ಮೈಸೂರು ಆಕಾಶವಾಣಿ ವತಿಯಿಂದ ಆಯೋಜಿಸಿದ್ದ ನಾ. ಕಸ್ತೂರಿ ಸ್ಮರಣೋತ್ಸವದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಕಸ್ತೂರಿಯವರು ನಾಲ್ಕಾರು ಸಾಲುಗಳಲ್ಲಿ ವಾಸ್ತವ ಸಂಗತಿಯನ್ನು ಹಾಸ್ಯದಿಂದ ತೆರೆದಿಡುವ ಪ್ರತಿಭೆಯನ್ನು ಹೊಂದಿದ್ದರು. ಮಲಯಾಳಂ ಮಾತೃಭಾಷಿಕರಾದ ಅವರು ಬನುಮಯ್ಯ ಪ್ರೌಢಶಾಲೆಯಲ್ಲಿ ಅಧ್ಯಾಪನಾ ವೃತ್ತಿ ಆರಂಭಿಸಿ 25ನೇ ವಯಸ್ಸಿಗೆ ಕನ್ನಡ ಕಲಿತು ನಾಟಕ, ಕಾದಂಬರಿ, ಅನುವಾದ ಸೇರಿದಂತೆ ಎಲ್ಲಾ ಪ್ರಕಾರಗಳಲ್ಲಿ ಅತ್ಯಮೂಲ್ಯ ಕೃತಿಗಳನ್ನು ರಚಿಸಿದರು. ನನ್ನ ಕವನಗಳ ಯೋಗ್ಯತೆ ಕಂಡುಹಿಡಿದು ಉತ್ತೇಜನ ಕೊಟ್ಟವರು ಕಸ್ತೂರಿಯವರು ಮತ್ತು ಸಿದ್ದೇಶ್ವರಾನಂದರು ಎಂದು ಕುವೆಂಪುರವರೇ ಬರೆದುಕೊಂಡಿದ್ದಾರೆ. ಮೈಸೂರಿನಲ್ಲಿ ರಾಮಕೃಷ್ಣ ಆಶ್ರಮದ ಸ್ಥಾಪನೆಗೆ ಶ್ರಮಿಸಿದರು. ಮಲಯಾಳಂ ಮಾತೃಭಾಷೆಯಾದರೂ ಕನ್ನಡ ಸಾಹಿತ್ಯಲೋಕಕ್ಕೆ ನಾ. ಕಸ್ತೂರಿಯವರ ಕೊಡುಗೆ ಅನನ್ಯವಾದುದು ಎಂದು ಹೇಳಿದರು.

ಮೈಸೂರು ಆಕಾಶವಾಣಿ ಉಪನಿರ್ದೇಶಕರಾದ ಶ್ರೀ ಎಸ್.ಎಸ್. ಉಮೇಶ್‌ರವರು ಆಕಾಶವಾಣಿ ಬೆಳವಣಿಗೆಯಲ್ಲಿ ಕಸ್ತೂರಿಯವರ ಕೊಡುಗೆ ದೊಡ್ಡದು. ಅವರು ಮೊದಲ ಸಹಾಯಕ ನಿರ್ದೇಶಕರಾಗಿ ಇಲ್ಲಿ ಕಾರ್ಯನಿರ್ವಹಿಸಿದ್ದರು. ನಿತ್ಯ ಒಂದು ಗಂಟೆಯ ಕಾರ್ಯಕ್ರಮ ಪ್ರಸಾರವಾಗುತ್ತಿತ್ತು. ಬಾನುಲಿಗೆ ಹೆಸರನ್ನಿಡುವ ಚರ್ಚೆಯು ನಡೆಯುತ್ತಿದ್ದಾಗ ಅವರ ತಾಯಿ ಆಕಾಶವಾಣಿ ಎಂದು ಹೇಳಿದ್ದರಂತೆ ಎಂದರು.





ಇದೇ ಸಂದರ್ಭದಲ್ಲಿ ಕೊರವಂಜಿ ಕಸ್ತೂರಿ ಹಾಗೂ ನಾ. ಕಸ್ತೂರಿ ಅವರ ಬದುಕು–ಬರಹ ಕೃತಿಗಳನ್ನು ಬಿಡುಗಡೆಗೊಳಿಸಲಾಯಿತು. ಶ್ರೀ ಬೇಲೂರು ರಾಮಮೂರ್ತಿ, ಶ್ರೀ ಕೆ.ಸಿ. ಶಿವಪ್ಪ, ಶ್ರೀ ಎನ್. ರಾಮಾನುಜ, ಶ್ರೀ ಎಂ. ಶಿವಕುಮಾರ್, ಶ್ರೀ ವೈ.ವಿ. ಗುಂಡೂರಾವ್, ಪ್ರೊ. ಎಂ. ಕೃಷ್ಣೇಗೌಡರವರುಗಳು ಮಾತನಾಡಿದರು. ಶ್ರೀ ನಿತಿನ್ ರಾಜಾರಾಮ್‌ಶಾಸ್ತ್ರೀ ಮತ್ತು ಸಂಗಡಿಗರು ನಾ. ಕಸ್ತೂರಿಯವರ ಆಯ್ದ ಕವನಗಳ ಗೀತಗಾಯನ ನಡೆಸಿಕೊಟ್ಟರು. ಶ್ರೀ ಟಿ.ವಿ. ವೆಂಕಟಾಚಲಶಾಸ್ತ್ರಿಯವರು ಉಪಸ್ಥಿತರಿದ್ದರು. ಶ್ರೀ ಬಿ.ಎಸ್. ರಾಜಾರಾಂ ಸ್ವಾಗತಿಸಿದರು. ಡಾ. ಎಸ್. ಹೇಮಂತಕುಮಾರ್ ಕೃತಿಗಳನ್ನು ಪರಿಚಯಿಸಿದರು. ಶ್ರೀ ಎನ್. ಕೇಶವಮೂರ್ತಿ ವಂದಿಸಿದರು.

**ಶ್ರೀ ಎಂ.ಸಿ. ಬಸಪ್ಪ ಧೀಮಂತ ವ್ಯಕ್ತಿತ್ವದ ರಾಜಕಾರಣಿ**

ಮಾಜಿ ಶಾಸಕರಾದ ಶ್ರೀ ಎಂ.ಸಿ. ಬಸಪ್ಪ ನೇರ ದಿಟ್ಟ ನುಡಿಯ ಧೀಮಂತ ವ್ಯಕ್ತಿತ್ವದ ರಾಜಕಾರಣಿಯಾಗಿದ್ದರು ಎಂದು ಪರಮಪೂಜ್ಯ ಜಗದ್ಗುರುಗಳವರು ಆಗಸ್ಟ್ 16ರಂದು ಚಾಮರಾಜನಗರದ ಡಾ. ರಾಜ್‌ಕುಮಾರ್ ಕಲಾಮಂದಿರದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಜಿಲ್ಲಾ ಘಟಕ ಹಾಗೂ ಕದಳಿ ಮಹಿಳಾ ವೇದಿಕೆ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ್ದ ಶ್ರೀ ಎಂ.ಸಿ. ಬಸಪ್ಪ ಜನ್ಮಶತಮಾನೋತ್ಸವ ಹಾಗೂ ದತ್ತಿ ಉಪನ್ಯಾಸ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು.

ಬಸಪ್ಪನವರು ಅಧಿಕಾರಕ್ಕಾಗಿ ಆಸೆಪಟ್ಟವರಲ್ಲ, ಸಚಿವರಾಗುವ ಅವಕಾಶವಿದ್ದರೂ ಅದನ್ನು ಬೆನ್ನತ್ತಿ ಹೋಗಲಿಲ್ಲ. ಕೊಟ್ಟರೆ ಕೊಡಿ, ಇಲ್ಲದಿದ್ದರೆ ಇಲ್ಲ ಎನ್ನುವುದು ಅವರ ನಿರ್ಭಿಡೆಯ ವ್ಯಕ್ತಿತ್ವ. ಎರಡು ಬಾರಿ ಶಾಸಕರಾಗಿ, ಒಂದು ಬಾರಿ ವಿಧಾನಪರಿಷತ್ ಸದಸ್ಯರಾಗಿ ಸದಾ ಜನಸೇವೆ ಬಗ್ಗೆ ಚಿಂತಿಸುತ್ತಿದ್ದ ವ್ಯಕ್ತಿತ್ವದವರು. ಸ್ವಾತಂತ್ರ್ಯ ಹೋರಾಟಗಾರರಾದ ಮಲೆಯೂರು ಚಿಕ್ಕಲಿಂಗಪ್ಪನವರ ಸುಸಂಸ್ಕೃತ ಕುಟುಂಬದಿಂದ ಬೆಳೆದು ಬಂದ ಎಂ.ಸಿ. ಬಸಪ್ಪನವರು ಜನರ ನಿರೀಕ್ಷೆಯನ್ನು ಹುಸಿ ಮಾಡದೇ ಪ್ರಾಮಾಣಿಕವಾಗಿ ಕೆಲಸ ಮಾಡಿದರು. ರಾಜೇಂದ್ರ ಮಹಾಸ್ವಾಮಿಗಳೊಂದಿಗೆ ಅವಿನಾಭಾವ ಸಂಬಂಧವಿಟ್ಟುಕೊಂಡಿದ್ದರು. ಬಸಪ್ಪನವರ ಆದರ್ಶ ಗುಣಗಳು ಇಂದಿನ ಯುವ ರಾಜಕಾರಣಿಗಳಿಗೆ ಸ್ಫೂರ್ತಿದಾಯಕವಾಗಬೇಕು ಎಂದು ತಿಳಿಸಿದರು.

ಮಾಜಿ ಸಚಿವರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾರವರು ಶ್ರೀ ಎಂ.ಸಿ. ಬಸಪ್ಪನವರು ಉತ್ತಮ ವಾಗ್ಮಿಗಳು ಹಾಗೂ ಮಾನವತಾವಾದಿಯಾಗಿದ್ದರು. ಗ್ರಾಮೀಣ ಬಡ ಜನತೆಯ ಬಗ್ಗೆ ಚಿಂತಿಸುತ್ತಿದ್ದ ಅವರು ಸದನದಲ್ಲಿ ಕೃಷಿಯ ಬಗ್ಗೆ ಅದರಲ್ಲೂ ರೇಷ್ಮೆ ಕೃಷಿಯ ಬಗ್ಗೆ ಏಳು ಗಂಟೆಗಳ ಕಾಲ ಸತತವಾಗಿ ಮಾತನಾಡಿದ್ದರು. ಇದು ಅವರು ಜನಪರ ಕಾಳಜಿಯ





ಬಗ್ಗೆ ಅವರಿಗಿದ್ದ ಪ್ರಾಮಾಣಿಕತೆಯನ್ನು ತೋರಿಸುತ್ತದೆ. ಜಾತ್ಯತೀತತೆ ಮತ್ತು ಪ್ರಜಾಪ್ರಭುತ್ವದಲ್ಲಿ ಪೂರ್ಣ ನಂಬಿಕೆ ಇದ್ದ ಅವರು ಕರ್ನಾಟಕ ಕಂಡ ಅತ್ಯುತ್ತಮ ವಿಧಾನಸಭಾ ಸದಸ್ಯರು. ಗೆದ್ದಾಗಲೂ, ಸೋತಾಗಲೂ ಪ್ರಭಾವಿ ರಾಜಕಾರಣಿಯಾಗಿ ಇದ್ದುದು ಇವರ ವ್ಯಕ್ತಿತ್ವದ ವೈಶಿಷ್ಟ್ಯ. ಸ್ನೇಹ ಜೀವಿಯಾಗಿದ್ದರು. ಇಂತಹ ಕುಟುಂಬದವರು ಸಾರ್ವಜನಿಕ ಜೀವನಕ್ಕೆ ಬರಬೇಕು ಎಂದರು.

ಪಡುಗೂರು ಶ್ರೀಗಳು, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಡಾ. ಸಿ. ಸೋಮಶೇಖರ, ನಿವೃತ್ತ ಮುಖ್ಯ ಅಭಿಯಂತರ ಶ್ರೀ ಶಂಕರ್ ದೇವನೂರು, ಸಾಹಿತಿಗಳಾದ ಶ್ರೀ ಕೆ. ವೆಂಕಟರಾಜು, ಪ್ರೊ. ಕೆ.ಆರ್. ಮಲ್ಲಿಕಾರ್ಜುನಪ್ಪನವರುಗಳು ಮಾತನಾಡಿದರು. ಮಾಜಿ ಶಾಸಕರಾದ ಶ್ರೀ ಸಿ.ಎಸ್. ನಿರಂಜನಕುಮಾರ್, ನಗರಸಭಾ ಅಧ್ಯಕ್ಷರಾದ ಶ್ರೀ ಸುರೇಶ್, ಶ್ರೀಮತಿ ಗಂಗಾಂಬಿಕೆ ಬಸಪ್ಪ ಉಪಸ್ಥಿತರಿದ್ದರು. ಕದಳಿ ಮಹಿಳಾ ವೇದಿಕೆಯವರು ಪ್ರಾರ್ಥಿಸಿದರು. ಶ್ರೀ ವಿ. ಮಲ್ಲಿಕಾರ್ಜುನಸ್ವಾಮಿ ಸ್ವಾಗತಿಸಿದರು. ಶ್ರೀ ಬಿ.ಎಸ್. ವಿನಯ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀ ಎಂ.ಬಿ. ಸೋಮಶೇಖರ್ ವಂದಿಸಿದರು. ಶ್ರೀ ಬಿ.ಕೆ. ರವಿಕುಮಾರ್ ಕಾರ್ಯಕ್ರಮ ನಿರೂಪಿಸಿದರು.

**ದಂಪತಿಗಳು ಪರಸ್ಪರರನ್ನು ಅರ್ಥಮಾಡಿಕೊಂಡು ಜೀವನ ನಡೆಸಬೇಕು**

ನವದಂಪತಿಗಳು ಪರಸ್ಪರರನ್ನು ಅರ್ಥಮಾಡಿಕೊಂಡು ಜೀವನ ನಡೆಸಬೇಕು ಎಂದು ಪರಮಪೂಜ್ಯ ಜಗದ್ಗುರುಗಳವರು ಆಗಸ್ಟ್ 18ರಂದು ಶ್ರೀ ಮಲೆ ಮಹದೇಶ್ವರ ಬೆಟ್ಟದ ಶ್ರೀ ಮಲೆ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದಿಂದ ಏರ್ಪಡಿಸಿದ್ದ ಉಚಿತ ಸಾಮೂಹಿಕ ವಿವಾಹ ಮಹೋತ್ಸವದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಮಲೆಮಹದೇಶ್ವರರು ಜನರಲ್ಲಿ ಜಾಗೃತಿ ಮೂಡಿಸಿದ ಪವಾಡಪುರುಷರು. ಇಂತಹ ಪುಣ್ಯಕ್ಷೇತ್ರದಲ್ಲಿ ವಿವಾಹ ಮಹೋತ್ಸವ ನಡೆಯುತ್ತಿರುವುದರಿಂದ ನೀವೆಲ್ಲರೂ ಪುಣ್ಯವಂತರು. ಇಂತಹ ಕ್ಷೇತ್ರದಲ್ಲಿ ದಾಂಪತ್ಯ ಜೀವನಕ್ಕೆ ಕಾಲಿಟ್ಟ ಮೇಲೆ ಒಳ್ಳೆಯ ಜೀವನವನ್ನು ನಡೆಸಬೇಕು. ದಂಪತಿಗಳು ಇಬ್ಬರಾದರೂ ಮಾನಸಿಕವಾಗಿ ಒಂದೇ ಆಗಿರಬೇಕು. ಪರಸ್ಪರ ಒಬ್ಬರನ್ನೊಬ್ಬರು ಅರ್ಥಮಾಡಿಕೊಂಡು ಜೀವನ ನಡೆಸಿದರೆ ಬದುಕು ಸುಂದರವಾಗಿರುತ್ತದೆ. ಧಾರ್ಮಿಕ ಕ್ಷೇತ್ರದಲ್ಲಿ ಇಂತಹ ಉತ್ತಮ ಕಾರ್ಯಕ್ರಮಗಳು ಇನ್ನೂ ಹೆಚ್ಚುಹೆಚ್ಚಾಗಿ ನಡೆಯಲಿ ಎಂದು ಹೇಳಿದರು.

ಶಾಸಕರಾದ ಶ್ರೀ ಎಂ.ಆರ್. ಮಂಜುನಾಥ್‌ರವರು ಮಲೆ ಮಹದೇಶ್ವರ ಬೆಟ್ಟದಲ್ಲಿ ಉಚಿತ ಸಾಮೂಹಿಕ ವಿವಾಹ ಆದರೆ ಪುಣ್ಯ ಗಳಿಸಿದಂತೆ. ದೇವರು ಸದಾ ನಿಮ್ಮ ಬಾಳನ್ನು ಹಸನು ಮಾಡುತ್ತಾನೆ. ಜೊತೆಗೆ ನಿಮಗೆ ಆರ್ಥಿಕವಾಗಿ ಒಂದಷ್ಟು ಸಹಾಯ ಆದಂತೆ





ಆಗುತ್ತದೆ. ಇದರಿಂದ ದುಂದುವೆಚ್ಚಕ್ಕೆ ಕಡಿವಾಣ ಹಾಕಿದಂತಾಗಿದೆ. ಹಾಗಾಗಿ ಸಾಮೂಹಿಕ ವಿವಾಹಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದರು.

ಉಚಿತ ಸಾಮೂಹಿಕ ವಿವಾಹದಲ್ಲಿ 93 ಜೋಡಿಗಳು ದಾಂಪತ್ಯ ಜೀವನಕ್ಕೆ ಕಾಲಿಟ್ಟರು. ಶ್ರೀ ಸಾಲೂರು ಬೃಹನ್ಮಠದ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿಗಳು, ಮೆಟ್ಟೂರು ಶಾಸಕರಾದ ಶ್ರೀ ಎ. ಸದಾಶಿವಂ ಮಾತನಾಡಿದರು. ಗ್ಯಾರಂಟಿ ಯೋಜನೆಗಳ ಅಧ್ಯಕ್ಷರಾದ ಶ್ರೀ ಚಂದ್ರು, ಜಿಲ್ಲಾ ಪಂಚಾಯಿತಿ ಸಿಇಓ ಮೋನಾರೋತ್ ಮೊದಲಾದವರು ಉಪಸ್ಥಿತರಿದ್ದರು. ಶ್ರೀ ಮಹೇಂದರ್ ಮತ್ತು ತಂಡದವರು ಪ್ರಾರ್ಥಿಸಿದರು. ಶ್ರೀ ಎ.ಇ. ರಘು ಸ್ವಾಗತಿಸಿದರು. ಡಾ. ಬಿ.ಟಿ. ಕವಿತಾ ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀ ಸಿ. ಮಹದೇವ ವಂದಿಸಿದರು. ಶ್ರೀಮತಿ ಸವಿತ ಶಿವಕುಮಾರ್ ಕಾರ್ಯಕ್ರಮ ನಿರೂಪಿಸಿದರು.

□

- ಧರ್ಮ ಮತ್ತು ಜೀವನ ಒಂದೇ ನಾಣ್ಯದ ಎರಡು ಮುಖಗಳು.
- ಧರ್ಮವೇ ದೇಶದ ಆತ್ಮ.
- ಧರ್ಮಜಾಗೃತಿಯೊಂದೇ ಸರ್ವರನ್ನೂ ಸಂರಕ್ಷಿಸುವ ಮಾರ್ಗ.
- ನಮ್ಮ ರಾಷ್ಟ್ರದ ಜೀವವೇ ಧರ್ಮ, ಧರ್ಮ ಉಳಿದರೆ ದೇಶ ಉಳಿಯುತ್ತದೆ.
- ರಾಜಕೀಯಕ್ಕೆ ಆಧ್ಯಾತ್ಮಿಕ ಸಂಸ್ಕಾರವನ್ನು ಕೊಡಬೇಕು. ಧರ್ಮದಲ್ಲಿ ರಾಜಕೀಯ ಇರಬಾರದು, ಆದರೆ ರಾಜಕೀಯಕ್ಕೆ ಧರ್ಮ ಬೇಕು.
- ಭಕ್ತಿ ಎಂಬುದು ಒಂದು ಸದ್ಭಾವನೆ. ಭಕ್ತಿಯು ಸುಜ್ಞಾನಕ್ಕೆ, ಸತ್ಕ್ರಿಯೆಗೆ ಹಾದಿ. ಭಕ್ತಿಯು ನಮ್ಮಲ್ಲಿ ಸಮರ್ಪಣೆಯ ಭಾವವನ್ನುಂಟುಮಾಡುತ್ತದೆ.
- ಪರಮಾತ್ಮನಿಗೆ ಬೇಕಾಗಿರುವುದು ಭಾಷೆಯಲ್ಲ, ಹೆಸರಲ್ಲ. ಅವನಿಗೆ ಬೇಕಾಗಿರುವುದು ಹೃದಯದ ಭಾಷೆ. ಅದುವೇ ಭಕ್ತಿ.
- ಮನಸ್ಸು, ಕಣ್ಣು, ಕಿವಿ, ನಾಲಗೆಗಳನ್ನು ಪರಿಶುದ್ಧವಾಗಿಟ್ಟುಕೊಳ್ಳಬೇಕು. ಸದಾ ಭಗವಂತನ ನಾಮಸ್ಮರಣೆ, ಧ್ಯಾನ ಮಾಡುತ್ತಿರಬೇಕು.

**– ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು**



ಶ್ರೀ ಮಲೆ ಮಹದೇಶ್ವರ ಬೆಟ್ಟದ ಶ್ರೀ ಸಾಲೂರು ಬೃಹನ್ಮಠದ ಶ್ರೀ ಪಟ್ಟದ ಗುರುಸ್ವಾಮಿಗಳವರ ಪುಣ್ಯ ಸಂಸ್ಮರಣೋತ್ಸವವನ್ನು ಸುತ್ತೂರು, ಸಿದ್ಧಗಂಗೆ ಮತ್ತು ಆದಿಚುಂಚನಗಿರಿ ಪೂಜ್ಯರುಗಳ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀ ಎ.ಜಿ. ವೆಂಕಟಾಚಲಂ, ಕುಂದೂರು ಶ್ರೀಗಳು, ಶ್ರೀ ವೆಂಕಟೇಶ್ವರ ಸ್ವಾಮಿಗಳು, ಡಾ. ಡಿ.ಕೆ. ಸುನೀಲ್, ವಾಲ್ಮೀಕಿ ಪೀಠದ ಶ್ರೀಗಳು, ಶ್ರೀ ಎಂ.ಆರ್. ಮಂಜುನಾಥ್, ವಚನಾನಂದ ಶ್ರೀಗಳು, ಕನಕಪುರ ಮತ್ತು ಸಾಲೂರು ಮಠದ ಶ್ರೀಗಳು, ಭಗೀರಥ ಉಪ್ಪಾರ ಪೀಠದ ಶ್ರೀಗಳು, ಶ್ರೀ ಭಗವತಿ ಸ್ವಾಮಿಗಳು, ಶ್ರೀ ಆರ್. ನರೇಂದ್ರ ಹಾಗೂ ಶ್ರೀ ಎ.ಇ. ರಘುರವರುಗಳಿದ್ದಾರೆ (2 ಆಗಸ್ಟ್ 2025)




ಬೆಂಗಳೂರಿನಲ್ಲಿ ರಾಷ್ಟ್ರೀಯ ಬಸವ ದಳ ಹಾಗೂ ಬಸವ ಧರ್ಮ ಪೀಠದ ವತಿಯಿಂದ ಆಯೋಜಸಿದ್ದ ಬಸವ ಮಂಟಪದ ಸುವರ್ಣ ಮಹೋತ್ಸವವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಡಾ. ಗೊ.ರು. ಚನ್ನಬಸಪ್ಪ, ಮುಂಡರಗಿ ತೋಂಟದಾರ್ಯ ಮಠದ ಶ್ರೀಗಳು, ಜಗದ್ಗುರು ಡಾ. ಮಾತೆ ಗಂಗಾದೇವಿಯವರು, ಶ್ರೀ ಶಿವಾನಂದ ಜಾಮದಾರ ಹಾಗೂ ಸಚಿವರಾದ ಶ್ರೀ ಎಂ.ಬಿ. ಪಾಟೀಲ್ ಮೊದಲಾದವರುಗಳಿದ್ದಾರೆ (3 ಆಗಸ್ಟ್ 2025)




ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ 17ನೇ ಪದವೀಧರರ ದಿನಾಚರಣೆ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನೆರವೇರಿತು. ಪ್ರೊ. ಬಿ.ವಿ. ಸಾಂಬಶಿವಯ್ಯ, ಡಾ. ಎಂ. ಮುನಿಯಮ್ಮ, ಪ್ರೊ. ಎಲ್.ಎಸ್. ಶಶಿಧರ, ಡಾ. ಸಿ.ಜಿ. ಬೆಟಸೂರಮಠ, ಡಾ. ಎಂ. ಪ್ರಭು ಹಾಗೂ ಡಾ. ಬಿ. ಪ್ರಭುಸ್ವಾಮಿಯವರುಗಳೊಂದಿಗೆ ವಿವಿಧ ದತ್ತಿ ಪುರಸ್ಕಾರ ಪಡೆದ ಪದವೀಧರರುಗಳಿದ್ದಾರೆ (12 ಆಗಸ್ಟ್ 2025)



ಮೈಸೂರು ಶ್ರೀ ಕೃಷ್ಣರಾಜೇಂದ್ರ ಸಹಕಾರ ಬ್ಯಾಂಕ್‌ನ ನವೀಕೃತ ಕಟ್ಟಡವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಉದ್ಘಾಟಿಸಿದರು. ಬ್ಯಾಂಕಿನ ಆಡಳಿತ ಮಂಡಳಿ ಸದಸ್ಯರುಗಳು ಮೊದಲಾದವರುಗಳಿದ್ದಾರೆ (9 ಆಗಸ್ಟ್ 2025)




ನಂಜನಗೂಡಿನ ಜೆಎಸ್‌ಎಸ್ ಮಂಗಳ ಮಂಟಪದಲ್ಲಿ ಆಯೋಜಿಸಿದ್ದ ಹಿರಿಯ ಮುತ್ಸದ್ದಿಗಳಾದ ಶ್ರೀ ವಿ. ಶ್ರೀನಿವಾಸ್ ಪ್ರಸಾದ್‌ರವರ 78ನೇ ಜನ್ಮದಿನಾಚರಣೆಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಪ್ರೊ. ಕಾಳೇಗೌಡ ನಾಗವಾರ, ಶ್ರೀಮತಿ ಭಾಗ್ಯಲಕ್ಷ್ಮೀ ಶ್ರೀನಿವಾಸ ಪ್ರಸಾದ್, ಶ್ರೀ ಪಿ.ಜಿ.ಆರ್. ಸಿಂಧ್ಯ, ಶ್ರೀ ಬಿ. ಹರ್ಷವರ್ಧನ್ ಮೊದಲಾದವರುಗಳಿದ್ದಾರೆ (6 ಆಗಸ್ಟ್ 2025)



ಬೆಂಗಳೂರು ಬಸವ ಪರಿಷತ್ ವತಿಯಿಂದ ಆಯೋಜಿಸಿದ್ದ 2025ನೇ ಸಾಲಿನ ಬಸವ ಪುರಸ್ಕಾರ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀಮತಿ ಎಂ.ಪಿ. ಉಮಾದೇವಿ, ಶ್ರೀಮತಿ ರೇಖಾ ಮಹಾಂತೇಶ ಹಿರೇಮಠ, ಶ್ರೀ ಪ್ರಕಾಶ್ ತಾಂವಶಿ, ಗೌ.ನ್ಯಾ. ಶ್ರೀ ಎನ್. ಸಂತೋಷ್ ಹೆಗ್ಡೆ, ಶ್ರೀ ಎಸ್.ಆರ್. ಪಾಟೀಲ್, ಪ್ರೊ. ರವಿವರ್ಮಕುಮಾರ್, ಡಾ. ಎ.ಎಸ್. ಕಿರಣ್‌ಕುಮಾರ್, ಡಾ. ಎಂ.ಎನ್. ರಾಜೇಂದ್ರಕುಮಾರ್ ಹಾಗೂ ಶ್ರೀ ಮಹಾಂತೇಶ್ ಹಿರೇಮಠರವರುಗಳಿದ್ದಾರೆ (9 ಆಗಸ್ಟ್ 2025)



ಸಾಲಿಗ್ರಾಮದಲ್ಲಿ ವೀರಶೈವ–ಲಿಂಗಾಯತ ಮಹಾಸಭೆ ಹಾಗೂ ಸಂಘಟನೆಗಳ ಒಕ್ಕೂಟದಿಂದ ಆಯೋಜಿಸಿದ್ದ ಬಸವ ಜಯಂತಿಯನ್ನು ಪರಮಪೂಜ್ಯ ಜಗದ್ಗುರುಗಳು ಹಾಗೂ ಸಿದ್ಧಗಂಗಾ ಶ್ರೀಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀ ಹೆಚ್.ಎಂ. ಗಣೇಶಪ್ರಸಾದ್, ಶ್ರೀ ಡಿ. ರವಿಶಂಕರ್. ಶ್ರೀ ಈಶ್ವರ್ ಬಿ. ಖಂಡ್ರೆ ಶ್ರೀ ಶಂಕರ ಮಹದೇವ ಬಿದರಿ, ಶ್ರೀ ಜೆ.ಸಿ. ಮಾಧುಸ್ವಾಮಿ, ಶ್ರೀ ತೋಂಟದಾರ್ಯ ಹಾಗೂ ಶ್ರೀ ಎ.ಹೆಚ್. ವಿಶ್ವನಾಥ್‌ರವರುಗಳಿದ್ದಾರೆ (10 ಆಗಸ್ಟ್ 2025)



ಮೈಸೂರು ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಆಯೋಜಿಸಿದ್ದ ನಾ. ಕಸ್ತೂರಿ ಸ್ಮರಣೋತ್ಸವವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀ ಬಿ.ಎಸ್. ರಾಜಾರಾಂ, ಶ್ರೀ ಬೇಲೂರು ರಾಮಮೂರ್ತಿ, ಶ್ರೀ ಎನ್. ರಾಮಾನುಜ, ಶ್ರೀ ಕೆ.ಸಿ. ಶಿವಪ್ಪ, ಪ್ರೊ. ಎಂ. ಕೃಷ್ಣೇಗೌಡ, ಶ್ರೀ ಎಸ್.ಎಸ್. ಉಮೇಶ್ ಹಾಗೂ ಶ್ರೀ ವೈ.ವಿ. ಗುಂಡುರಾವ್‌ರವರುಗಳಿದ್ದಾರೆ (14 ಆಗಸ್ಟ್ 2025)




ಚಾಮರಾಜನಗರದ ಡಾ. ರಾಜ್‌ಕುಮಾರ್ ಕಲಾಮಂದಿರದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಜಿಲ್ಲಾ ಘಟಕ ಹಾಗೂ ಕದಳಿ ಮಹಿಳಾ ವೇದಿಕೆ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಶ್ರೀ ಎಂ.ಸಿ. ಬಸಪ್ಪ ಜನ್ಮಶತಮಾನೋತ್ಸವ ಹಾಗೂ ದತ್ತಿ ಉಪನ್ಯಾಸ ಕಾರ್ಯಕ್ರಮವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀ ವಿ. ಮಲ್ಲಿಕಾರ್ಜುನಸ್ವಾಮಿ, ಶ್ರೀ ಬಿ.ಕೆ. ರವಿಕುಮಾರ್, ಶ್ರೀ ಎಂ.ಬಿ. ಸೋಮಶೇಖರ್, ಶ್ರೀ ಕೆ. ವೆಂಕಟರಾಜು, ಡಾ. ಸಿ. ಸೋಮಶೇಖರ್, ಪಡುಗೂರು ಶ್ರೀಗಳು, ಶ್ರೀ ಶಂಕರ ದೇವನೂರು, ಶ್ರೀಮತಿ ಗಂಗಾಬಿಕಾ, ಶ್ರೀ ಎಂ.ಆರ್. ಸುನೀಲ್, ಶ್ರೀ ಕೆ.ಆರ್. ಮಲ್ಲಿಕಾರ್ಜುನಪ್ಪನವರುಗಳಿದ್ದಾರೆ (16 ಆಗಸ್ಟ್ 2025)





Registered with the Registrar of Newspapers in India Under No. 50622 / 1986
'Prasada' Monthly, Vol. 40 Issue No. 8, August 2025



ISSN 2583-7648

ಬಿಡಿ ಪ್ರತಿ : ರೂ.10/–

e-mail: prasada@jssonline.org * www.jssonline.org